ಹುಬ್ಬಳ್ಳಿ
ಗುರುವಾರ, 7 ಮೇ 2026
ಸಂಪುಟ 16, ಸಂಚಿಕೆ 43, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ




ಹಿಂಸೆಯಲ್ಲಿ ಭಾಗಿ ಆದವರನ್ನು ಬಂಧಿಸಿ | ೦೭
ಬಂಗಾಳ ಸಿಎಂ ಪ್ರಮಾಣ ಮೇ ೯ಕ್ಕೆ | ೦೭
ಇಂದು ಮೈಸೂರಿಗೆ ಮೋಹನ್ ಭಾಗವತ್ | ೦೫

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಏನೇನು ಹೇಳುವುದು? ಭೂಮಿಯಲ್ಲಿ ಹಣವಿಲ್ಲದವನ ಶೀಲ, ಸಾಹಸ, ದೊಡ್ಡಸ್ತಿಕೆ, ಕುಲ, ಕೀರ್ತಿ ಇದೆಲ್ಲ ವ್ಯರ್ಥ.
▲ಕಾವ್ಯಾವಲೋಕನಂ



ಭಾರತದ ಶೌರ್ಯಗಾಥೆ
ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರಕ್ಕೆ ಒಂದು ವರ್ಷ
◆ಪುಟ ೭

ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?
ಗುರುತರ
◆ಸೋಮಶೇಖರ ಸಿ.ಜಿ.
◆ಪುಟ ೬

ರಾಜ್ಯ ರಾಜಕೀಯ, ಸರ್ಕಾರದ ಬಗ್ಗೆ ವರಿಷ್ಠರ ಜತೆ ಚರ್ಚೆ
ಮೇ 9ಕ್ಕೆ ಸಿಎಂ ದಿಲ್ಲಿಗೆ

◆**ಬೆಂಗಳೂರು:** ಪಂಚ ರಾಜ್ಯಗಳ ಚುನಾವಣೆ ಮುಕ್ತಾಯದ ನಂತರ ನಿರೀಕ್ಷೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಲ್ಲಿಗೆ ತೆರಳುವುದು ಖಾತ್ರಿಯಾಗಿದ್ದು, ಇದೇ ತಿಂಗಳ 9ರಂದು ದೆಹಲಿಗೆ ತೆರಳಲಿದ್ದಾರೆ ಎನ್ನುವ ಮಾಹಿತಿಯಿದೆ. ಮೇನಲ್ಲಿ ರಾಜ್ಯ ರಾಜಕಾರಣದಲ್ಲಿ ಮಹತ್ತರ ಬೆಳವಣಿಗೆಗಳಿಗೆ ಈ ಭೇಟಿ ನಾಂದಿ ಹಾಡಲಿದೆ ಎಂದು ಹೇಳಲಾಗುತ್ತಿದೆ.



ದಿಲ್ಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ, ಸಂಪುಟ ವಿಸ್ತರಣೆ ಕುರಿತು ಚರ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸಾಕಷ್ಟು ಬಾರಿ ಹೇಳಿದ್ದು, ಇದರ ಜತೆಗೆ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಹೇಳಿದ್ದಾರೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹುಟ್ಟುಹಬ್ಬಕ್ಕೆ ಹೈಕಮಾಂಡ್ ಶುಭ ಸಂದೇಶ ನೀಡಲಿದೆ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ದಿಲ್ಲಿಯಿಂದ ಉಭಯ ನಾಯಕರಿಗೆ ಬುಲಾವ್ ಬಂದಿರುವ ಬಗ್ಗೆ ಇನ್ನೂ ಸ್ಪಷ್ಟತೆ ಸಿಕ್ಕಿಲ್ಲ. ಒಂದು ವೇಳೆ ಇಬ್ಬರು ನಾಯಕರನ್ನು ಹೈಕಮಾಂಡ್ ಕರೆಸಿಕೊಂಡರೆ ಯಾವ ಸೂತ್ರದಲ್ಲಿ ಮಾತುಕತೆ ನಡೆಯಬಹುದು, ಯಾರಿಗೆ ಶುಭ ಸಂದೇಶ ಸಿಗಬಹುದು ಅಥವಾ ರಾಜ್ಯದಲ್ಲಿ ಬದಲಾವಣೆಯೋ, ಪುನರ್ ರಚನೆಯೋ ಎಂಬ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ. ಸಚಿವ ಸ್ಥಾನಕ್ಕಾಗಿ ಹಿರಿಯ ಶಾಸಕರು ಈಗಾಗಲೇ ದಿಲ್ಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ವರಿಷ್ಠರನ್ನು ಭೇಟಿಯಾಗಿ ಒತ್ತಡ ತಂದಿದ್ದಾರೆ. ಅಲ್ಲದೆ, ಕಳೆದ ವಾರ ಸಚಿವರಾದ ಎಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಕೆ.ಎಚ್. ಮುನಿಯಪ್ಪ ಅವರು ಸಹ ದಿಲ್ಲಿಗೆ ಭೇಟಿ ನೀಡಿ ನಾಯಕತ್ವ ಬದಲಾವಣೆ ಬಗ್ಗೆ ಇರುವ ಗೊಂದಲಗಳ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಮನವಿ ಮಾಡಿದ್ದಾರೆ. ➡ಪುಟ ೪



"ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಮುಖ್ಯಮಂತ್ರಿಯಾಗಿ ಐದು ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ.
■ ಸಿದ್ದರಾಮಯ್ಯ, ಸಿಎಂ

"ಹೈಕಮಾಂಡ್ ಕರೆದಾಗ ಸಿಎಂ ಸಿದ್ದರಾಮಯ್ಯ, ನಾವು ಹೋಗುತ್ತೇವೆ. ಕರೆಯದೆ ಹೋಗುವುದು ಸರಿಯಲ್ಲ. ಕರೆಯುತ್ತಾರೆ. ಕರೆದಾಗ ನಾವು ಹೋಗುತ್ತೇವೆ.
■ ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

◆**ಮೈಸೂರು:** ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಾ, ಬೇಡವಾ ಎಂಬುದನ್ನು ನಮ್ಮ ಪಕ್ಷದ ಹೈ ಕಮಾಂಡ್ ತೀರ್ಮಾನಿಸುತ್ತದೆ. ನಾನು ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಗುರುವಾರ ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಹಾಗೂ ಕಾರ್ಯಕ್ರಮಗಳನ್ನು ಜನರು ಮೆಚ್ಚಿದ್ದಾರೆ. ಹಾಗಾಗಿ ಎರಡು ಉಪಚುನಾವಣೆಯಲ್ಲಿ ಜನರು ನಮ್ಮ ಪಕ್ಷವನ್ನು ಗೆಲ್ಲಿಸಿದ್ದಾರೆ. ಜನರ ಪ್ರೀತಿ, ಅಭಿಮಾನ, ಆಶೀರ್ವಾದ ನಮ್ಮ ಮೇಲಿದೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 5 ವರ್ಷ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಸಿಎಂ ಆಗಿ 5 ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಹೈಕಮಾಂಡ್ ದೆಹಲಿಗೆ ಕರೆದರೆ ಹೋಗುತ್ತೇನೆ. ನಾನೇ ದೆಹಲಿಗೆ ಹೋಗಬೇಕಾದರೆ ರಾಹುಲ್ ಗಾಂಧಿಯವರ ಅಪಾಯಿಂಟ್‌ಮೆಂಟ್ ಬೇಕಾಗುತ್ತದೆ. ➡ಪುಟ ೪

ಶುಭ ಸುದ್ದಿಗೆ ಕಾಯುತ್ತಿರುವೆ: ಡಿ.ಕೆ.ಸುರೇಶ್

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಕೂಡ ಶುಭ ಸುದ್ದಿಗಾಗಿ ಕಾಯುತ್ತಿರುವುದಾಗಿ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ, ತಾಳ್ಮೆ ಮುಖ್ಯ ಎಂದು ಒತ್ತಿ ಹೇಳಿದ್ದು, ತಾಳಿದವನು ಬಾಳಿಯಾನು ಎಂಬ ನುಡಿ ಉಲ್ಲೇಖಿಸುತ್ತಾ, ಎಲ್ಲರಿಗೂ ಒಂದು ಕಾಲ ಬರುತ್ತದೆ ಎಂದು ಹೇಳಿರುವುದು ಕುತೂಹಲ ಕಾರಿಯಾಗಿದೆ.

ರಾಜ್ಯಪಾಲರ ಭೇಟಿಯಾದ ಮುಖಂಡರು
ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

◆**ಚೆನ್ನೈ:** ಟಿವಿಕೆ ಮುಖ್ಯಸ್ಥ ವಿಜಯ್ ಅವರು ಬುಧವಾರ ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಇತ್ತೀಚಿನ ವಿಧಾನಸಭೆ ಚುನಾವಣೆಯಲ್ಲಿ ಅವರ ಪಕ್ಷ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಸರಳ ಬಹುಮತಕ್ಕಿಂತ ಕಡಿಮೆ ಸ್ಥಾನಗಳನ್ನು ಪಡೆದಿದೆ.

ಟಿವಿಕೆ ಸ್ಥಾಪಕರಾದ ವಿಜಯ್ ಅವರು ಲೋಕಭವನದಿಂದ ಆಹ್ವಾನ ಬಂದ ಹಿನ್ನೆಲೆಯಲ್ಲಿ ಮಧ್ಯಾಹ್ನ 3.15ಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಿದರು. ಈ ವೇಳೆ ಪಕ್ಷದ ನಾಯಕರಾದ ಬಸ್ಸಿ ಎನ್. ಆನಂದ್, ಆಧವ್ ಅರ್ಜುನಾ, ಕೆ.ಎ. ಸೆಂಗೊಟ್ಟೈಯನ್, ಸಿ.ಟಿ. ನಿರ್ಮಲ್ ಕುಮಾರ್ ಸೇರಿದಂತೆ ಇತರರು ಜತೆಯಾಗಿದ್ದರು. ಕಾಂಗ್ರೆಸ್ ಬೆಂಬಲ ಘೋಷಿಸಿದ ಕೆಲವೇ ಗಂಟೆಗಳಲ್ಲಿ ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದರು. ಅದಕ್ಕೂ ಮೊದಲು ಚೆನ್ನೈನಲ್ಲಿ ಟಿವಿಕೆ ಮತ್ತು ಕಾಂಗ್ರೆಸ್ ನಾಯಕರ ನಡುವೆ ಸಭೆ ನಡೆದಿತ್ತು.

ಬೆಂಬಲ ನಿರಾಕರಿಸಿದ ಎಡಪಕ್ಷಗಳು, ಐಯುಎಂಎಲ್: ಟಿವಿಕೆ ಆಹ್ವಾನ ನೀಡಿದರೂ ಎಡಪಕ್ಷಗಳು ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಅಲ್ಲದೆ, ಸಿಪಿಐ(ಎಂ), ಸಿಪಿಐ ಮತ್ತು ಐಯುಎಂಎಲ್ ಶಾಸಕರು ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿ ಮಾಡಿ, ಡಿಎಂಕೆ ಬೆಂಬಲಿಸುವುದಾಗಿ ತಿಳಿಸಿದ್ದಾರೆ. ➡ಪುಟ ೪



ಟಿವಿಕೆಗೆ ಕೈ ಬೆಂಬಲ

ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಕಾಂಗ್ರೆಸ್ ಪಕ್ಷ ಬುಧವಾರ ತನ್ನ ಬೆಂಬಲ ಘೋಷಿಸಿದೆ ಮತ್ತು ಡಿಎಂಕೆ ಜತೆಗಿನ ಸುದೀರ್ಘ ಮೈತ್ರಿಯನ್ನು ಕೊನೆಗೊಳಿಸಿದೆ. ಟಿವಿಕೆ ಮುಖ್ಯಸ್ಥ ವಿಜಯ್ ಅವರ ಅಧಿಕೃತ ಮನವಿಯ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ, ಎಂದು ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಘೋಷಿಸಿದ್ದಾರೆ. ಈ ಮೈತ್ರಿ, ಕೇವಲ ಪ್ರಸ್ತುತ ಸರ್ಕಾರ ರಚನೆಗೆ ಮಾತ್ರವಲ್ಲದೆ, ಭವಿಷ್ಯದ ಸ್ಥಳೀಯ ಸಂಸ್ಥೆ ಚುನಾವಣೆಗಳು, ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಗಳಿಗೂ ಅನ್ವಯಿಸಲಿದೆ. ಕೋಮು ಶಕ್ತಿಗಳನ್ನು ಮೈತ್ರಿಯಿಂದ ಹೊರಗಿಡಬೇಕು ಎಂಬ ಷರತ್ತನ್ನು ಕಾಂಗ್ರೆಸ್ ವಿಧಿಸಿದೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

◆**ಚೆನ್ನೈ:** ಟಿವಿಕೆ ಸರ್ಕಾರ ರಚಿಸಲು ಬೆಂಬಲ ಪಡೆದುಕೊಳ್ಳುವ ಪ್ರಯತ್ನದಲ್ಲಿ ತೊಡಗಿರುವ ನಡುವೆಯೇ, ಡಿಎಂಕೆ ತನ್ನ ದೀರ್ಘಕಾಲದ ರಾಜಕೀಯ ಪ್ರತಿಸ್ಪರ್ಧಿಯಾದ ಎಐಎಡಿಎಂಕೆ ಜತೆ ಗುಪ್ತ ಮಾತುಕತೆಗಳನ್ನು ಆರಂಭಿಸಿದೆ ಎಂದು ವರದಿಯಾಗಿದೆ. ➡ಪುಟ ೪

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ ◆ಪುಟ ೪

ಕಿರುಸುದ್ದಿ

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

◆**ಚಂಡೀಗಢ:** ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ. ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ.
◆ಪುಟ ೭

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ
◆ಪುಟ ೭

ಚೊಚ್ಚಲ ಪ್ರವೇಶದಲ್ಲೇ ಟಿವಿಕೆ ಅಪೂರ್ವ ಸಾಧನೆ
◆ಪುಟ ೭


ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ
◆ಪುಟ ೭

ಜಗದೀಶ್ ಹಿರೇಮನಿ ನಿಧನ
◆ಪುಟ ೫

ವನ್ಯಜೀವಿ ದಾಳಿ ತಡೆಗೆ ಕ್ರಮ: ಖಂಡ್ರೆ
◆ಪುಟ ೫

ಸಾವಿರ ಮಠಾಧೀಶರು ಭಾಗಿ | ಭಾರೀ ಸ್ಪಂದನೆ: ವಿಜಯೇಂದ್ರ
ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

◆**ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದು ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬೇಕಾದ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.



ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲು ಉದ್ದೇಶಿಸಿ ರುವ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ➡ಪುಟ ೪



ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

◆**ಬೆಂಗಳೂರು:** ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ವಜನಿಕ ಜೀವನ ಪಯಣದ ನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರು ನಡೆದು ಬಂದ ಹಾದಿಯ ವಿವರಗಳನ್ನೊಳಗೊಂಡ ಎರಡು ಪುಸ್ತಕಗಳು ಲೋಕಾರ್ಪಣೆಯಾಗಲಿವೆ. ➡ಪುಟ ೪

ಶಾಸಕ ಜೀವರಾಜ್‌ಗೆ ಪ್ರಮಾಣವಚನ ಬೋಧಿಸಿದ ಸ್ಪೀಕರ್
ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

◆**ಬೆಂಗಳೂರು:** ಅಂಚೆ ಮತ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಶೃಂಗೇರಿ ಶಾರದಾಂಬೆ ಹೆಸರಿನಲ್ಲಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಮಾಣ ವಚನ ಬೋಧಿಸಿದರು. ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರ ಕುರಿತು ಗೊಂದಲ ಉಂಟಾದ್ದರಿಂದ ಮಂಗಳವಾರ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿತ್ತು. ಈ ನಡುವೆ ಬೆಂಗಳೂರಿಗೆ ಆಗಮಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನೂತನ ಶಾಸಕ ಡಿ.ಎನ್. ಜೀವರಾಜ್ ಅವರಿಗೆ ಪ್ರಮಾಣವಚನ ಬೋಧಿಸಿದರು. ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಎಸ್. ಮುನಿರಾಜು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು. ➡ಪುಟ ೪



ಕೋರ್ಟ್‌ಗೆ ಮೊರೆ: ಸಿಎಂ

◆**ಮೈಸೂರು:** ಶೃಂಗೇರಿ ಮರುಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಗೆಲುವಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಅಂಚೆ ಮತಗಳನ್ನು ಖುದ್ದು ಬಿಜೆಪಿ ಜೀವರಾಜ್, ಚುನಾವಣಾ ಸಿಬ್ಬಂದಿ ಸೇರಿ ತಿದ್ದಿದ್ದಾರೆ. ಈ ಬಗ್ಗೆ ನಾವು ಕೋರ್ಟ್‌ಗೆ ಹೋಗಲಿದ್ದೇವೆ ಎಂದರು. ➡ಪುಟ ೪

ಮೇ 10ಕ್ಕೆ ಬೆಂಗಳೂರಿಗೆ ಮೋದಿ

◆**ಹೊಸದಿಲ್ಲಿ/ಬೆಂಗಳೂರು:** ನಗರದಲ್ಲಿರುವ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಅದರ ಸಂಸ್ಥಾಪಕ ರವಿ ಶಂಕರ್ ಗುರೂಜಿ 70ನೇ ಜನ್ಮದಿನದ ಅಂಗವಾಗಿ ಮೇ 10ರಂದು ಆಯೋಜಿಸಲಾದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.



ದಿ ಆರ್ಟ್ ಅಫ್ ಲಿವಿಂಗ್ ಸಂಸ್ಥೆಯ ಪ್ರಕಟಣೆ ಈ ಮಾಹಿತಿ ನೀಡಿದೆ. ಸರ್ಕಾರದ ನಾಯಕರು ಮತ್ತು ನಾಗರಿಕ ಸೇವಾ ಅಧಿಕಾರಿಗಳು, ರೈತರು ಮತ್ತು ಇಂಜಿನಿಯರ್‌ಗಳು ಗೃಹಿಣಿಯರು ಮತ್ತು ಸಿಇಒಗಳು, ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಲ್ಲದೆ, ಸಾವಿರಾರು ಅಂತರರಾಷ್ಟ್ರೀಯ ಪ್ರತಿನಿಧಿಗಳನ್ನು ಒಳಗೊಂಡಿರುವ ಈ ಕಾರ್ಯಕ್ರಮವು ಒಂದು ವಿಶಿಷ್ಟ ಸಮಾವೇಶವಾಗಿದೆ ಎಂದು ತಿಳಿಸಿದೆ. ಈ ಕಾರ್ಯಕ್ರಮದಲ್ಲಿ ಮೋದಿಯವರು ಪ್ರಧಾನ ಭಾಷಣ ಮಾಡಲಿದ್ದಾರೆ. ➡ಪುಟ ೪

ಪ್ರತಿದಿನ 18 ಜನ ಕಾಣೆ | ಮಹಿಳೆಯರೇ ಹೆಚ್ಚು
ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

▸ಚಂದನ್ ಲಕ್ಕೂರು

ದಿಗಂತ ವಿಶೇಷ

◆**ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ನಾಪತ್ತೆ ಪ್ರಕರಣಗಳ ಸಂಖ್ಯೆ ಆತಂಕಕಾರಿ ರೀತಿಯಲ್ಲಿ ಏರಿಕೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಪುರುಷರಿಗಿಂತ ಮಹಿಳೆಯರು ಮತ್ತು ಯುವತಿಯರು ಕಾಣೆಯಾಗುತ್ತಿದ್ದಾರೆ. ಪ್ರತಿದಿನ ಸರಾಸರಿ 18 ಜನ ಕಣ್ಮರೆಯಾಗುತ್ತಿದ್ದಾರೆ. ನಾಪತ್ತೆಯಾದವರ ಪೈಕಿ ಮಹಿಳೆಯರ ಸಂಖ್ಯೆಯೇ ಅಗ್ರಸ್ಥಾನದಲ್ಲಿದೆ. 2024ರಲ್ಲಿ ಒಟ್ಟು 3,530 ಮಹಿಳೆಯರು ಕಾಣೆಯಾಗಿದ್ದರೆ, 2025ರ ವೇಳೆಗೆ ಈ ಸಂಖ್ಯೆ 3,661ಕ್ಕೆ ಏರಿಕೆಯಾಗಿದೆ. 2026ರ ಏಪ್ರಿಲ್ ಅಂತ್ಯದ ವೇಳೆಗೆ 1,239 ಮಹಿಳೆಯರು ನಾಪತ್ತೆಯಾಗಿದ್ದು, ಇದು ವರ್ಷಾಂತ್ಯಕ್ಕೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.



ಮಕ್ಕಳ ಸುರಕ್ಷತೆ ಎಲ್ಲಿದೆ?: ಕೇವಲ ಹಿರಿಯರಷ್ಟೇ ಅಲ್ಲದೆ, ಸಣ್ಣ ವಯಸ್ಸಿನ ಹುಡುಗ-ಹುಡುಗಿಯರು ನಾಪತ್ತೆಯಾಗುತ್ತಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ. ಕಳೆದ ಎರಡು ವರ್ಷಗಳಲ್ಲಿ ಸರಾಸರಿ 450ಕ್ಕೂ ಹೆಚ್ಚು ಮಕ್ಕಳು ನಾಪತ್ತೆಯಾಗಿದ್ದಾರೆ. 2026ರ ಕೇವಲ ನಾಲ್ಕು ತಿಂಗಳ ಅವಧಿಯಲ್ಲೇ 146ಕ್ಕೂ ಹೆಚ್ಚು ಮಕ್ಕಳು ಕಾಣೆಯಾಗಿದ್ದಾರೆ. ➡ಪುಟ ೪

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ? ◆ಪುಟ ೪

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ



◆**ಬೆಳಗಾವಿ:** ಇತ್ತೀಚಿನ ದಿನಗಳಲ್ಲಿ ಸಾಲ ಮಾಡುವುದು ಶೋಕಿಯಾಗಿದೆ. ಮೈತುಂಬ ಸಾಲವನ್ನು ಮಾಡಿಕೊಂಡ ಯುವಕನೊಬ್ಬ, ನನಗೆ ಸಾಲ ಬಹಳ ಆಗಿದೆ ಎಂದು ಮೂರು ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದ ಯುವಕನನ್ನು ಬೆಳಗಾವಿ ಪೊಲೀಸರು ನ್ಯಾಟ್ ಗ್ರೀಡ್ ತಂತ್ರಾಂಶದ ಮೂಲಕ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಸಾಲ ಮಾಡಿ ಮನೆ ಬಿಟ್ಟು ಹೋಗಿದ್ದ ಯುವಕ

ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ (22) ಕಾಣೆಯಾಗಿದ್ದ ಯುವಕ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರ ಪಟ್ಟಣದ ಶಿಂದೆ ಚಾಳ ಹಲಿಮಾ ಅಪ್ಪಾಸಾಹೇಬ ಜಮಾದಾರ ಅವರು ಮಗ ಕಾಣೆ ಆಗಿದ್ದಾನೆ ಎಂದು ದೂರು ದಾಖಲಿಸಿದ್ದರು. ➡ಪುಟ ೪

ಏನಿದು ನ್ಯಾಟ್ ಗ್ರೀಡ್ ತಂತ್ರಾಂಶ? ◆ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,65,000 (2,55,000) ಅಪರಂಜಿ ಚಿನ್ನ: 1,51,310 (1,49,180) ಆಭರಣ ಚಿನ್ನ: 1,38,700 (1,36,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 77,958 (940↑) ಎನ್‌ಎಸ್‌ಇ 24,330 (298↑)
$1 = ₹95.09	

ಕಿರುಸುದ್ದಿ

ಉಚಿತ ಪ್ರಾಯೋಗಿಕ ತರಬೇತಿ

ಹುಬ್ಬಳ್ಳಿ: ನಗರದ ಮಜೇಥಿಯಾ ಫೌಂಡೇಶನ್ ವತಿಯಿಂದ ರೋಗಿಗಳ ಆರೈಕೆಗಾಗಿ ಮನೆ ಮನೆಯಲ್ಲಿ ಆರೈಕೆದಾರರಿಗೆ ಉಚಿತ 60 ನಿಮಿಷಗಳ ಪ್ರಾಯೋಗಿಕ ತರಬೇತಿ ನೀಡಲಾಗುತ್ತಿದೆ ಎಂದು ಡಾ.ವಿ.ಬಿ.ನಿಟಾಲಿ ತಿಳಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ವಿವಿಧ ಬಡಾವಣೆಗಳಲ್ಲಿರುವ ಮನೆಯಲ್ಲಿ ಒಬ್ಬರಿಗೆ ತರಬೇತಿ ನೀಡಲಾಗುತ್ತಿದೆ. ಮನೆಯಲ್ಲಿ ಉಪಶಾಮಕ ಆರೈಕೆ ಅಗತ್ಯವಿರುವ ರೋಗಿಗಳಿಗೆ ಸೇವೆ ಸಲ್ಲಿಸಲು ಅಗತ್ಯವಾದ ಶುಶ್ರೂಷ ಕೌಶಲ್ಯ ತರಬೇತಿ ನೀಡಲಾಗುತ್ತಿದ್ದು, ಇದು ನಿರಂತರ ನಡೆಯಲಿದೆ ಎಂದರು.ರೋಗಿಗಳನ್ನು ಹೇಗೆ ನೋಡಿಕೊಳ್ಳಬೇಕು, ವೃದ್ಧಾಪ್ಯ ಆರೈಕೆ ಸೇವೆಗಳು, ಉಪಶಮನ ಆರೈಕೆ ಮೂಲಗಳು, ಸೂಕ್ಷ್ಮ ಕಾಳಜಿ, ಸಂವಹನ ಕೌಶಲ್ಯ ನೀಡಲಾಗುವುದು. ಸಮಾಜ, ಸಮುದಾಯ ಗುಂಪುಗಳು, ಯುವಕ ಹಾಗೂ ಯುವತಿಯರು, ಮಹಿಳಾ ಗುಂಪುಗಳು, ಕೆಲಸದ ಸ್ಥಳಗಳು ಕನಿಷ್ಠ 25 ಜನ ಸೇರಿ ಮುಂದೆ ಬಂದರೆ ಅವರಿಗೆ ತರಬೇತಿ ನೀಡಲಾಗುತ್ತದೆ ಎಂದರು.ಹೆಚ್ಚಿನ ಮಾಹಿತಿಗೆ ನವನಗರದ ಹಾಸ್ಪೈಸ್ ಕೇರ್ ಸೆಂಟರ್ ಸುನೀಲಕುಮಾರ ಕುಕನೂರ ದೂರ ನಂ: 9353865757ಗೆ ಸಂಪರ್ಕಿಸಲು ವಿನಂತಿಸಿದ್ದಾರೆ. ಡಾ.ರಮೇಶ ಬಾಬು, ಡಾ.ನಾಗರಾಜ ಸಾನೂ, ಕೆ.ಪ್ರಹ್ಲಾದ, ಸುನೀಲ ಕುಕನೂರ, ಅಪರೇಶ ಹಿಪ್ಪರಗಿ ಇದ್ದರು.

ಜಗದೀಶ ಅಕಾಲಿಕ ನಿಧನ: ಜೋಶಿ ಕಂಬನಿ

ಹುಬ್ಬಳ್ಳಿ: ಬಿಜೆಪಿ ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ ಹಿರೇಮನಿ ಅವರ ಅಕಾಲಿಕ ನಿಧನಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಜಗದೀಶ ಹಿರೇಮನಿ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಕ್ರಿಯರಾಗಿದ್ದರು. ಅವರ ನಿಧನವು ರಾಜ್ಯ ಬಿಜೆಪಿಗೆ ಮತ್ತು ಕಾರ್ಯಕರ್ತರ ವಲಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕಂಬನಿ ಮಿಡಿದಿದ್ದಾರೆ. ಅವರು ಪ್ರಸ್ತುತ ಸಿರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ವಿದ್ಯಾರ್ಥಿ ಪರಿಷತ್, ಸಂಘ ಪರಿವಾರದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತ, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಇಂದು ಮೌನವಾಗಿದೆ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಈ ನೋವನ್ನು ಭರಿಸುವ ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಕಲಬುರಗಿ-ದಾಂಡೇಲಿಗೆ ಸ್ಲೀಪರ್ ಬಸ್ ಕಾರ್ಯಾಚರಣೆ

ಹುಬ್ಬಳ್ಳಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-1 ಕಲಬುರಗಿ ಘಟಕ-1ರಿಂದ ಕಲಬುರಗಿಯಿಂದ ದಾಂಡೇಲಿಗೆ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗಾಗಿ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 1 ರಿಂದ ಕಲಬುರಗಿ-ದಾಂಡೇಲಿಗೆ ನಾನ್ ಎಸಿ ಸ್ಲೀಪರ್ ಬಸ್ ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸಾರಿಗೆ ಜೇವರ್ಗಿ, ಶಹಾಪುರ, ಲಿಂಗಸೂಗುರು, ಕುಷ್ಟಗಿ, ಗದಗ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಸಂಚರಿಸುತ್ತದೆ. ಕಲಬುರಗಿ ಬಸ್ ನಿಲ್ದಾಣದಿಂದ ರಾತ್ರಿ 10 ಗಂಟೆಗೆ ಹೊರಟು ಬೆಳಿಗ್ಗೆ 8.30 ಕ್ಕೆ ದಾಂಡೇಲಿ ತಲುಪಲಿದೆ.

ದಾಂಡೇಲಿ ಬಸ್ ನಿಲ್ದಾಣದಿಂದ ಸಂಜೆ 6.30 ಕ್ಕೆ ಹೊರಟು ಬೆಳಿಗ್ಗೆ 5 ಗಂಟೆಗೆ ಕಲಬುರಗಿ ತಲುಪುವುದು. ಸಾರ್ವಜನಿಕ ಪ್ರಯಾಣಿಕರು ಸಾರಿಗೆಯ ಸದುಪಯೋಗ ಪಡೆದುಕೊಳ್ಳುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗ 1 ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಧನ ಸುದ್ದಿ

ರಾಧಾಬಾಯಿ ಪೂಜಾರಿ



ಹುಬ್ಬಳ್ಳಿ: ದಾಜೀಬಾನಪೇಟೆಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಪೂಜಾರಿ ಮನೆತನದ ರಾಧಾಬಾಯಿ ಬಾಲಕೃಷ್ಣಸಾ ಪೂಜಾರಿ (70) ಬುಧವಾರ ನಿಧನರಾಗಿದ್ದಾರೆ. ಮೃತರಿಗೆ ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.

ಸಿದ್ಧಲಿಂಗಯ್ಯ ಗಣಾಚಾರ



ಧಾರವಾಡ: ಸ್ಥಳೀಯ ಕೇಶವ ನಗರದ ನಿವಾಸಿ ಸಿದ್ಧಲಿಂಗಯ್ಯ ಗಣಾಚಾರ(53) ನಿಧನ ಹೊಂದಿದರು. ಇವರಿಗೆ ತಾಯಿ, ಪತ್ನಿ, ಪುತ್ರ ಹಾಗೂ ಅಪಾರ ಬಳಗವಿದೆ.



ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಬಿಜೆಪಿ ವತಿಯಿಂದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಅಂಗವಾಗಿ ಕಾರಿನ ಸ್ಟಿಕರ್ ಹಾಗೂ ಕರಪತ್ರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಹಾಗೂ ಮೇಯರ್ ಜ್ಯೋತಿ ಪಾಟೀಲ ಬಿಡುಗಡೆ ಮಾಡಿದರು.

ಮೇ 8ರಂದು ಕುಂದಗೋಳಕ್ಕೆ ಶ್ರೀಗಳ ಆಗಮನ

ಕುಂದಗೋಳ: ಪಟ್ಟಣದ ಪಂಚಗ್ರಹ ಹಿರೇಮಠದ ಜಮೀನು ಎನ್.ಎಗೆ ಸಂಬಂಧಿಸಿದಂತೆ ಉದ್ಭವಿಸಿರುವ ವಿವಾದಗಳ ಕುರಿತು ಮೇ 8ರಂದು ಮಠಕ್ಕೆ ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯರು ಹಾಗೂ ರಂಭಾಪುರಿ ಶ್ರೀಗಳು ಕುಂದಗೋಳ ಮಠಕ್ಕೆ ಆಗಮಿಸಲಿದ್ದಾರೆಂದು ಮಾಜಿ ಶಾಸಕ ಎಂ.ಎಸ್.ಅಕ್ಕಿ ಹೇಳಿದರು.

ಅವರು ಪಟ್ಟಣದ ಪ್ರವಾದಿ ಮಂದಿರದಲ್ಲಿ ಮಠದ ಭಕ್ತರಿಂದ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಂಚಗ್ರಹ ಹಿರೇಮಠಕ್ಕೆ ದಾನವಾಗಿ ಬಂದ ಆಸ್ತಿ ಶ್ರೀಗಳು ಏಕಪಕ್ಷೀಯವಾಗಿ ಮಾರಾಟ ಮಾಡುತ್ತಿರುವುದು ಸಮಂಜಸವಲ್ಲ ಕಾಶಿಪೀಠದ ಹಾಗೂ ರಂಭಾಪುರಿ ಪೀಠದ ಶ್ರೀಗಳು ಆಗಮಿಸಿ ಸಮಾಲೋಚಿಸಿ ಭಕ್ತರಿಗೆ ಒಳಿತು ಮಾಡುವ ಭರವಸೆ ಇದೆ ಎಂದರು. ಮುಖಂಡ ಎ.ಬಿ.ಉಪ್ಪಿನ ಮಾತನಾಡಿ, ಮಠದ ಆಸ್ತಿ ಕುರಿತು ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಭಕ್ತರು, ಸ್ಥಳೀಯ ಮುಖಂಡರು ಹಾಗೂ ಹಿರಿಯ ಪೀಠಾಧೀಶ್ವರರೊಂದಿಗೆ ಸಮಾಲೋಚನೆ ನಡೆಸುವುದು ಅಗತ್ಯ ಎಂದರು.

ಶಿವಾನಂದ ಬೆಂತೂರ ಮಾತನಾಡಿ, ಮಠವು ಶಿಷ್ಯ ಪರಂಪರೆ ಕಾಶಿ ಪೀಠದ ಶಾಖಾ ಮಠವಾಗಿದ್ದು, ಇದರ ಆಸ್ತಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಹೊಣೆಯಾಗಿದ್ದು, ಜಗದ್ಗುರುಗಳಿಗೆ ಶ್ರೀಗಳು ಬಂದು ಸಮಾಲೊಚಿಸಿ ನಿರ್ಣಯಿಸುವುದಾಗಿ ಹೇಳಿದ್ದಾರೆ ಎಂದರು. ರೈತ ಮುಖಂಡ ಸೋಮರಾವ ದೇಸಾಯಿ, ನಾಗರಾಜ ದೇಶಪಾಂಡೆ, ರಮೇಶ ಕೊಪ್ಪದ, ಶಂಕರಗೌಡ ದೊಡ್ಡಮನಿ, ಸೇರಿದಂತೆ ಹಲವು ಭಕ್ತರು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಸುರೇಶ ಸವಣೂರ, ಫಕೀರೇಶ ನಾವಳ್ಳಿಮಠ, ಅಜ್ಜು ಬಂಡಿವಾಡ, ಸಿದ್ದಪ್ಪ ಇಂಗಳಳ್ಳಿ ಹಾಗೂ ಬಸನಗೌಡ ಉಮಚಗಿ ಮತ್ತಿತರಿದ್ದರು.



ಕುಂದಗೋಳ: ಪಟ್ಟಣದ ಪ್ರವಾದಿ ಮಂದಿರದಲ್ಲಿ ಮಠದ ಭಕ್ತರಿಂದ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಶಾಸಕ ಎಂ.ಎಸ್. ಅಕ್ಕಿ, ಮುಖಂಡ ಎ.ಬಿ.ಉಪ್ಪಿನ, ಶಿವಾನಂದ ಬೆಂತೂರ,ರೈತ ಮುಖಂಡ ಸೋಮರಾವ ದೇಸಾಯಿ, ನಾಗರಾಜ ದೇಶಪಾಂಡೆ, ರಮೇಶ ಕೊಪ್ಪದ, ಶಂಕರಗೌಡ ದೊಡ್ಡಮನಿ, ಸೇರಿದಂತೆ ಹಲವು ಭಕ್ತರು ಭಕ್ತರು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಸುರೇಶ ಸವಣೂರ, ಫಕೀರೇಶ ನಾವಳ್ಳಿಮಠ, ಅಜ್ಜು ಬಂಡಿವಾಡ, ಸಿದ್ದಪ್ಪ ಇಂಗಳಳ್ಳಿ ಹಾಗೂ ಬಸನಗೌಡ ಉಮಚಗಿ ಮತ್ತಿತರಿದ್ದರು.

ಡಾ.ಸಂಜೀವ್ ಕುಬಕಡ್ಡಿ ಅಭಿಪ್ರಾಯ
ಆಳವಾದ ಅಧ್ಯಯನ ಮನುಕುಲಕ್ಕೆ ಅನುಕೂಲ

ಧಾರವಾಡ: ಇತ್ತೀಚಿಗೆ ವೈದ್ಯಕೀಯ ಇಮೇಜ್ ಅಭೂತಪೂರ್ವ ವೇಗ ಪಡೆದಿದೆ. ಆಳವಾದ ಕಲಿಕೆ ಮನುಕುಲಕ್ಕೆ ಹೆಚ್ಚು ಆರಾಮ ದಾಯಕ ಎಂದು ಬೆಂಗಳೂರು ಐಟಿಟಿಇ ನಾಲೆಡ್ಜ್ ಸೆಲ್ಯೂಷನ್ ಸಂಸ್ಥಾಪಕ ಡಾ.ಸಂಜೀವ್ ಕುಬಕಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಎಸ್‌ಡಿಎಂ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ವೈದ್ಯಕೀಯ ಚಿತ್ರ ಸಂಸ್ಕರಣೆಗಾಗಿ ಎಪ್ಪಿಜಿಎ ಬಳಕೆಯಿಂದ ಆಳ ಕಲಿಕೆ ಕ್ರಮಾವಳಿ ವೇಗಗೊಳಿಸುವ ಬೋಧಕ ವೃತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಳವಾದ ಕಲಿಕೆ ವಿವಿಧ ರೋಗಗಳ ಮುನ್ಸೂಚನೆ ಮತ್ತು ವಿಶ್ಲೇಷಿಸುವಲ್ಲಿ ವೈದ್ಯರ ಕಾರ್ಯ ಸುಲಭಗೊಳಿಸಲಿದೆ ಎಂದರು.

ಧಾರವಾಡ ಐಐಟಿ ಪ್ರಾಧ್ಯಾಪಕ ಡಾ.ಎಂ.ಬಿ.ನವೀನ ಮಾತನಾಡಿ, ಸಂವಹನ ಕ್ಷೇತ್ರಕ್ಕೆ ಆಳವಾದ ಕಲಿಕೆಯೊಂದಿಗೆ ತಮ್ಮ ಪ್ರಾಯೋಗಿಕ ಅನುಭವ ವಿವರಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಎಐ ಬಳಸುತ್ತಿರುವುದಾಗಿ ತಿಳಿಸಿದರು.

ಡಾ.ಸತೀಶ ಬೈರಣ್ಣವರ ಮಾತನಾಡಿ, ಬೋಧಕ ಅಭಿವೃದ್ಧಿ ಕಾರ್ಯಕ್ರಮ ಮತ್ತು ಅಧಿವೇಶನದ ವಿಷಯ ಕುರಿತು ಪ್ರಸ್ತಾಪಿಸಿದ ಅವರು, ಶಿಕ್ಷಕರು ಈ ತರಬೇತಿ ಕಾರ್ಯಕ್ರಮ ಸದ್ಬಳಸಿಕೊಂಡು, ಉತ್ತಮ ಅಭಿಯಂತರರನ್ನು ತಯಾರಿಸಬೇಕಿದೆ ಎಂದರು.

ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಮಾತನಾಡಿ, ಎಫ್‌ಎಫ್‌ಜಿಎ ಟೆಕ್ ಉದ್ಯಮದಲ್ಲಿ ಉಂಟು ಮಾಡಿದ ಕ್ರಾಂತಿ ಕುರಿತು ವಿವರಿಸಿದ



ಎಸ್‌ಡಿಎಂ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ವೈದ್ಯಕೀಯ ಚಿತ್ರ ಸಂಸ್ಕರಣೆಗಾಗಿ ಎಪ್ಪಿಜಿಎ ಬಳಕೆಯಿಂದ ಆಳ ಕಲಿಕೆ ಕ್ರಮಾವಳಿ ವೇಗಗೊಳಿಸುವ ಬೋಧಕ ವೃತ್ತಿ ಕಾರ್ಯಕ್ರಮ ಉದ್ಘಾಟನೆ

ಅವರು, ತಂತ್ರಜ್ಞಾನವು ಪಿಎಲ್‌ಡಿ ದಿನಗಳಿಂದ ಸಿಪಿಎಲ್ಡಿಯಿಂದ ಎಫ್‌ಎಫ್‌ಜಿಎ ಗೆ ವಿಕಸನಗೊಂಡ ಕುರಿತಂತೆ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ. ಜೀವಂದರಕುಮಾರ್, ಆಧುನಿಕ ಯುವ ಅಭಿಯಂತರರು ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಲು ಹೇಳಿದ ಅವರು, ಮನುಕುಲದ ಒಳಿತಿಗೆ ನವೀನ ತಂತ್ರಜ್ಞಾನ ಬಳಕೆಯಾಗಬೇಕು ಎಂದರು.

ಆಳ ಕಲಿಕೆ ಮತ್ತು ವೈದ್ಯಕೀಯ ತಂತ್ರಜ್ಞಾನದ ವಿವಿಧ ಅಂಶಗಳ ಬಗ್ಗೆ ಐದು ದಿನಗಳ ಚರ್ಚೆ ಒಳಗೊಂಡಿದೆ. 9 ಉಪನ್ಯಾಸ, ಹ್ಯಾಂಡ್-ಆನ್ ಸೆಷನ್‌ಗಳಿಗಾಗಿ, ವಿವಿಧ ಪ್ರತಿಷ್ಠಿತ ಸಂಸ್ಥೆಗಳು, ಉದ್ಯಮ, ಶೈಕ್ಷಣಿಕ ಸಂಸ್ಥೆಗಳಿಂದ ಅನೇಕ ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡಿದ್ದು, ಎಫ್‌ಡಿಪಿ ಕೈಗಾರಿಕಾ ಭೇಟಿಯೂ ಒಳಗೊಂಡಿದೆ.

ಎಫ್‌ಡಿಪಿಯ ಸಹ ಸಂಯೋಜಕಿ ಪ್ರೊ.ರೇಷ್ಮಾ ನದಾಫ್, ಡಾ.ಸಂಧ್ಯಾ ಎಸ್.ವಿ, ಅಮೇಯಾ ಕುಲಕರ್ಣಿ, ಸಿಇಒ ಡಾ.ಶ್ರೀಧರ ಜೋಶಿ ಸೇರಿದಂತೆ ಸುಮಾರು 100ಕ್ಕೂ ಅಧಿಕ ತಜ್ಞರು ಪಾಲ್ಗೊಂಡಿದ್ದರು.

ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ಧರಣಿ

ಧಾರವಾಡ: ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಸರ್ಕಾರದ ಕಡತಕ್ಕೆ ಅಂಕಿತ ಹಾಕಲು ಆಗ್ರಹಿಸಿ ಹೋರಾಟಗಾರ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ಪಕ್ಷಾತೀತವಾಗಿ ನೂರಾರು ಜನರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಧರಣಿ ನಡೆಸಿದರು.

ಪ್ರತ್ಯೇಕ ಪಾಲಿಕೆ ರಚನೆ ಪಕ್ಷಾತೀತ ಚಿಂತನ-ಮಂಥನ ಸಭೆಯ ನಂತರ ನೇರ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದ ಪ್ರತಿಭಟನಾಕಾರರು, ಪ್ರತಿಭಟಿಸಿದ ಬಳಿಕ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಶಾಸಕ ಅರವಿಂದ ಬೆಲ್ಲದ ವಿರುದ್ಧ ಘೋಷಣೆ ಕೂಗಿದರು.

ಹೈಕೋರ್ಟ್ ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ಪ್ರತ್ಯೇಕ ಪಾಲಿಕೆ ರಚನೆ ಧಾರವಾಡ ನಾಗರಿಕರ ದಶಕಗಳ ಕೂಗು. 2025ರಲ್ಲಿ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿ, ಈ ಪ್ರಸ್ತಾವನೆ ರಾಜ್ಯಪಾಲರ ಅಂಕಿತಕ್ಕೆ ಬಾಕಿ ಇದೆ ಎಂದರು.

ಇತ್ತೀಚಿಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ ರಾಜ್ಯ ಸರ್ಕಾರ ಕಳುಹಿಸಿದ ಮಸೂದೆ ಮೇಲೆ ರಾಜ್ಯಪಾಲರು ಶೀಘ್ರದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸ್ಪಷ್ಟನೆ ನೀಡಿದೆ. ಮಸೂದೆ ತಡೆಹಿಡಿಯುವುದು ಕಾನೂನು ಬಾಹಿರ ಎಂದು ಎಚ್ಚರಿಸಿದ್ದಾಗಿ ತಿಳಿಸಿದರು.

ಧಾರವಾಡ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದು, ಪ್ರತ್ಯೇಕ ಪಾಲಿಕೆ ರಚನೆಯಿಂದ ಸ್ಥಳೀಯವಾಗಿ ಮೂಲಭೂತ ಸೌಕರ್ಯ ಸುಧಾರಣೆ ಜತೆ ಅನುದಾನ ಸಮರ್ಪಕ ಬಳಕೆ ಸಾಧ್ಯ. ಹೀಗಾಗಿ ಅನುಮೋದನೆ ನೀಡಲು ಒತ್ತಾಯ ಮಾಡಿದರು.

ಸಂಪುಟದಲ್ಲಿ ನಿರ್ಧಾರ ಕೈಗೊಂಡು ಸುಮಾರು 10 ತಿಂಗಳು ಗತಿಸಿದರೂ ರಾಜ್ಯಪಾಲರು ಅಂಕಿತ ಹಾಕಿಲ್ಲ. ವಿಳಂಬ ಧೋರಣೆ ಅಲ್ಲದೆ ಮತ್ತೇನು? ಧಾರವಾಡ ಜನರ ಸಹನೆ ಕಟ್ಟೆ ಒಡೆಯುವ ಮುನ್ನ ಅಂಕಿತ ಹಾಕಲು ಕೋರಿದರು. ಇಷ್ಟಾಗಿಯೂ ರಾಜಕೀಯ ಒತ್ತಡದಿಂದ ರಾಜ್ಯಪಾಲಕರು ಅಂಕಿತ ಹಾಕಲು ಮೀನಾಮೇಷ ಮಾಡಿದರೆ, ಈ ಕುರಿತಂತೆ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಶಕ್ತಿ ಅರ್ಜಿ ಸಲ್ಲಿಸುವುದಾಗಿಯೂ ಸಹ ಎಚ್ಚರಿಸಿ, ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ಗುರುರಾಜ ಹುಣಸಿಮರದ, ಈಶ್ವರ ಶಿವಳ್ಳಿ, ಕವಿತಾ ಕಬ್ಬೇರ, ಗೌರಮ್ಮ ಬಲೋಗಿ, ವಸಂತ ಅರ್ಕಾಚಾರ, ಶಂಕರ ಹಲಗತ್ತಿ, ಬಸವರಾಜ ಜಾದವ, ನೋಜ ಕರ್ಜಗಿ ಅನೇಕರು ಇದ್ದರು.



ಹೆಸ್ಕಾಂ ಸಾಧನೆ: 15 ಕೋಟಿ ರೂ. ಉಳಿತಾಯ

ಹುಬ್ಬಳ್ಳಿ: ಇಂಧನ ಸಚಿವ ಕೆ.ಜೆ ಜಾರ್ಜ್ ಮಾರ್ಗದರ್ಶನಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿರುವ ಹೆಸ್ಕಾಂ, 2024-25ರ ಸಾಲಿನಲ್ಲಿ 153.46 ಕೋಟಿ ರೂ. ಉಳಿತಾಯ ಮಾಡಿದ್ದು, ಈ ಹಣ ಗ್ರಾಹಕರಿಗೆ ಮರು ಪಾವತಿಸುತ್ತಿದ್ದೇವೆ ಎಂದು ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮ್‌ಪೀರ್ ಎಸ್. ಖಾದ್ರಿ ಹೇಳಿದರು.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿದ್ಯುತ್ ಖರೀದಿ, ಪೂರೈಕೆ ಉತ್ತಮವಾಗಿ ನಿರ್ವಹಿಸಿದ ಪರಿಣಾಮ 2024-2025ರಲ್ಲಿ ಹೆಸ್ಕಾಂ 153.46 ಕೋಟಿ ರೂ. ಉಳಿತಾಯ ಮಾಡಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಆದೇಶದ ಅನ್ವಯ 2024-25 ನೇ ಆರ್ಥಿಕ ವರ್ಷದ ಪ್ರತಿಯೊಬ್ಬ ಗ್ರಾಹಕರಿಗೆ ಮಾತ್ರ 2024-25ನೇ ಸಾಲಿನ ಅವಧಿಯಲ್ಲಿ ಅವರ ನಿಜವಾದ ಬಳಕೆ ಆಧರಿಸಿ ಪ್ರತಿ ಯೂನಿಟ್‌ಗೆ 10ಪೈಸೆಯಂತೆ 2026-2027ರಲ್ಲಿ ಪ್ರತಿ ತಿಂಗಳು ಸಮಾನ ಕಂತುಗಳಲ್ಲಿ (12 ಕಂತುಗಳು) ಮರು ಪಾವತಿಸಲಾಗುತ್ತದೆ. ಈ ಮೊತ್ತ ವಿದ್ಯುತ್ ಬಿಲ್‌ನಲ್ಲಿ ಆರ್ಥಿಕ ವರ್ಷ (ಈಜ) 25 ಟ್ರೂ ಅಪ್ ಶುಲ್ಕ ಎಂದು ಪ್ರತ್ಯೇಕವಾಗಿ ನಮೂದಿಸಲಾಗುತ್ತದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ನೇತೃತ್ವದ ರಾಜ್ಯ ಸರ್ಕಾರ ಸದಾ ರೈತರ ಪರ ಕೆಲಸ ಮಾಡುತ್ತಿದೆ. ರೈತರಿಗೆ ಹಗಲು ಹೊತ್ತಿನಲ್ಲಿ 7ಗಂಟೆಗಳ ಕಾಲ ವಿದ್ಯುತ್ ನೀಡುವ ನಿಟ್ಟಿನಲ್ಲಿ ಕುಸುಮ್ ಬಿ ಹಾಗೂ ಕುಸುಮ್ ಸಿ ಯೋಜನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಗ್ರಾಹಕರಿಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆ ಯಶಸ್ವಿಯಾಗಿದೆ. ಮುಖ್ಯಮಂತ್ರಿಗಳ ಹಾಗೂ ಇಂಧನ ಸಚಿವರ ಸಹಕಾರದೊಂದಿಗೆ ಹೆಸ್ಕಾಂ ಜನಪರವಾಗಿ ಕೆಲಸ ಮಾಡುತ್ತಿದೆ. ರೈತರ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲು ನವೀಕೃತ ಶೀಘ್ರ ಸಂಪರ್ಕ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಜಗದೀಶ ಹಿರೇಮನಿ ನಿಧನ: ಶೆಟ್ಟರ ಸಂತಾಪ

ಹುಬ್ಬಳ್ಳಿ: ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಯುವ ನಾಯಕ ಜಗದೀಶ ಹಿರೇಮನಿ ಅಕಾಲಿಕ ನಿಧನದ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು ಎಂದು ಸಂಸದ ಜಗದೀಶ ಶೆಟ್ಟರ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನಮ್ಮ ಬಿಜೆಪಿ ಪಕ್ಷದಲ್ಲಿ ಹಲವು ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತ, ಪಕ್ಷವನ್ನು ಸಂಘಟಿಸುತ್ತ, ಪಕ್ಷದ ರಾಜ್ಯ ಕಾರ್ಯದರ್ಶಿಗಳಾಗಿ, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿ, ಎಬಿವಿಪಿ ಪೂರ್ವಾವಧಿ ಕಾರ್ಯಕರ್ತರಾಗಿ, ವಿಶೇಷ ತೀವ್ರ ಪರಿಷ್ಕರಣೆ ಜಾಗೃತಿ ಅಭಿಯಾನದ ರಾಜ್ಯ ಸಂಚಾಲಕರಾಗಿ ಅಪಾರವಾಗಿ ಸೇವೆ ಸಲ್ಲಿಸಿದ್ದಾರೆ.

ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ, ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ.

ಸಮಸ್ಯೆ ಎದುರಾಗದಂತೆ ಕ್ರಮ ವಹಿಸಿ

ಹುಬ್ಬಳ್ಳಿ: ಮಳೆಗಾಲದಲ್ಲಿ ಕೆಲವು ವಾರ್ಡ್‌ಗಳಲ್ಲಿ ಸಮಸ್ಯೆ ಎದುರಾಗುವ ಸಾಧ್ಯತೆ ಇದ್ದು, ಯಾವುದೇ ಅನಾಹುತ ಆಗದಂತೆ ಕ್ರಮವಹಿಸಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿಯ ಹು-ಧಾ ಮಹಾನಗರ ಪಾಲಿಕೆಗೆ ವಾರ್ಡ್ ನಂ.52ರ ಜಗದೀಶ ನಗರದಲ್ಲಿ ಸಾರ್ವಜನಿಕರು, ಮಹಾನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಾರ್ವಜನಿಕ ಸಂಪರ್ಕ ಸಭೆ ನಡೆಸಿ ಮಾತನಾಡಿದರು.

ಕೆಲವು ವಾರ್ಡ್‌ಗಳಲ್ಲಿ ತಗ್ಗು ಪ್ರದೇಶಗಳು ಇವೆ. ಅಂತಹ ಸ್ಥಳಗಳಲ್ಲಿ ಅನಾಹುತ ಆಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಮುಂಜಾಗ್ರತ ಕ್ರಮವಾಗಿ ಕೆರೆ ಕಟ್ಟೆಗಳು, ನಾಲಾ ಹಾಗೂ ಗಟಾರುಗಳ ಹೂಳೆತ್ತುವ ಕ್ರಮವಾಗಬೇಕು ಎಂದರು. ಮಳೆಗಾಳಿಯಿಂದ ಮರ ಗಿಡಗಳು ಬಿಳುವ ಸಾಧ್ಯತೆ ಇದ್ದು, ಅವುಗಳನ್ನು ತೆರವುಗೊಳಿಸಲು ಮುಂದಾಗಬೇಕು. ಸ್ಥಳೀಯ ವಿದ್ಯುತ್ ಸಂಪರ್ಕ ಕಂಬಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



ಪಾಲಿಗೆ ಸದಸ್ಯ ಚೇತನ್ ಹಿರೇಕೆರೂರು, ವಲಯ ಅಧಿಕಾರಿ ಆನಂದ ಕಾಸರಗೋಡ, ಎಲ್‌ಆ್ಯಂಡ್ ಟಿ ಅಧಿಕಾರಿ ಅಜಯ್ ಕಿರಣ್, ಪ್ರವೀಣ ನಾಗನೂರ, ಹರೀಶ ಜಂಗಲಿ ನಾಗೇಶ್ ಕಟ್ಟಿಮನಿ, ಕಿಶನ್ ಬಿಲಾನ, ನಾಗೇಶ್ ಕಟ್ಟಿಮನಿ, ಮಂಜು ಬ್ಯಾಡಗಿ ಇದ್ದರು.

ಶಾಸಕ ಮಹೇಶ ಟೆಂಗಿನಕಾಯಿ ನೇಮಕ

ಹುಬ್ಬಳ್ಳಿ: ಕರ್ನಾಟಕ ಲೋಕ ಸೇವಾ ಆಯೋಗ ಸುಧಾರಣಾ ಸಮಿತಿಯ ಸದನ ಸಮಿತಿ ಸದಸ್ಯರಾಗಿ ರಾಜ್ಯ ಸರ್ಕಾರದಿಂದ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರ ಶಾಸಕ ಮಹೇಶ ಟೆಂಗಿನಕಾಯಿ ನೇಮಕಗೊಂಡಿದ್ದಾರೆ.



ಲೋಕ ಸೇವಾ ಆಯೋಗದಲ್ಲಿ ಇತ್ತೀಚಿಗೆ ನಡೆಯುತ್ತಿರುವ ಭ್ರಷ್ಟಾಚಾರ ಹಗರಣ, ವಿವಿಧ ಹಂತಗಳಲ್ಲಿ ಬರೆದ ನಿರುದ್ಯೋಗಿ ವಿದ್ಯಾವಂತ ಯುವಕರಿಗೆ ನ್ಯಾಯ ಕೊಡಿಸುವುದು ನನ್ನ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ತಿಳಿಸಿದರು.ಈ ನೇಮಕಕ್ಕೆ ಕಾರಣಿಭೂತರಾದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರವರನ್ನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಗಮನಾರ್ಹ ಸಾಧನೆ

ಹುಬ್ಬಳ್ಳಿ: ನಗರದ ಪ್ರತಿಷ್ಠಿತ ಕೆಎಲ್‌ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಕಾಲೇಜು ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಗೈದು ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.





ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವ ದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡಿದ್ದು, ಸಮಾಜಶಾಸ್ತ್ರ ವಿಷಯದಲ್ಲಿ ಸ್ವಾತಿ ಸಿರಗೇರಿ ಮತ್ತು ಮನೋವಿಜ್ಞಾನ ವಿಷಯದಲ್ಲಿ ಸಾಕ್ಷಿ ಕೋಟಲಗಿ ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಜೊತೆಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ 7ನೇ ರ್‍ಯಾಂಕ್ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಇನ್ನೂ ದಿವ್ಯಾ ಭಜಂತ್ರಿ 3ನೇ ಸ್ಥಾನ, ಸಾಕ್ಷಿ ಕೋಟಲಗಿ 7ನೇ ಸ್ಥಾನ ಹಾಗೂ ಅನುವಾ ಜಿತುರಿ 10ನೇ ಸ್ಥಾನ ಪಡೆದು ವಿಶೇಷ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭೊಗೋಳಶಾಸ್ತ್ರ ವಿಷಯದಲ್ಲಿ ಅತ್ಯುನ್ನತ ಅಂಕಗಳನ್ನು ಪಡೆದ ವಿದ್ಯಾರ್ಥಿನಿ ಐಶ್ವರ್ಯ ಎಚ್ ಅವರಿಗೆ ಪ್ರತಿಷ್ಠಿತ ಡಿ.ಸಿ ಪಾವಟೆ ವಿದ್ಯಾರ್ಥಿವೇತನ ಪ್ರದಾನ ಮಾಡಲಾಗಿದ್ದು, ಈ ಸಾಧನೆಗೆ ಆಡಳಿತ ಮಂಡಳಿ ಅಭಿನಂದನೆ ತಿಳಿಸಿದೆ.

'ಎ+' ಮಾನ್ಯತೆ ಪಡೆದಿರುವ ಈ ಕಾಲೇಜು ತನ್ನ ಶೈಕ್ಷಣಿಕ ಗುಣಮಟ್ಟವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದು, ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಸಂಸ್ಥೆಯ ಉತ್ತಮ ಶೈಕ್ಷಣಿಕ ವಾತಾವರಣವೇ ಈ ಸಾಧನೆಗೆ ಪ್ರಮುಖ ಕಾರಣವಾಗಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು ಮತ್ತು ಪಾಲಕರು ಅಭಿನಂದನೆ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಾಧನೆ ಮುಂದುವರಿಯಲಿ ಎಂದು ಹಾರೈಸಿದ್ದಾರೆ. ದ್ವಿತೀಯ ಪಿಯುಸಿಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುವ ಸಂಗೀತಾ ಪೊಲೀಸ್ ಪಾಟೀಲ ಅವರು ನಮ್ಮ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ಹಾಗೂ ಖುಷಿಯ ವಿಷಯವಾಗಿದೆ.

ಪಾಲಿಕೆ ಪ್ರತ್ಯೇಕಕ್ಕೆ ರಾಜಭವನ ಚಲೋ-ಬಂದ್

ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಆಡಳಿತಾತ್ಮಕ ಸಂಕಷ್ಟದಿಂದ ಮುಕ್ತಿ ಹೊಂದಿ, ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಹೋರಾಟಕ್ಕೆ ಇದೀಗ ಹೊಸ ಆಯಾಮ ಲಭಿಸಿದೆ.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬುಧವಾರ ನಡೆದ ಸ್ವಾಭಿಮಾನಿ ಹೋರಾಟಗಾರರ ಪಕ್ಷಾತೀತ ಸಭೆಯಲ್ಲಿ ರಾಜ್ಯಪಾಲರು ಮತ್ತು ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮೂರು ನಿರ್ಣಯ ಕೈಗೊಂಡಿದೆ.

ಸಭೆಯ ಪ್ರಮುಖ ನಿರ್ಣಯಗಳು

ಮೊದಲು ರಾಜ್ಯಪಾಲರ ಭೇಟಿ: ಪ್ರತ್ಯೇಕ ಪಾಲಿಕೆ ರಚನೆಯ ಕಡತಕ್ಕೆ ಅಂಕಿತ ಕೋರಲು ಅಥವಾ ರಾಜ್ಯಪಾಲರ ಭೇಟಿಗೆ ಅವಕಾಶ ಪಡೆಯಲು ಹೋರಾಟಗಾರರು ಸರ್ಕಾರಕ್ಕೆ ಮೂರು ದಿನಗಳ ಕಾಲಮಿತಿ ನಿಗದಿಪಡಿಸಿದ ನಿರ್ಣಯ ಕೈಗೊಂಡಿದೆ.

ರಾಜಭವನ ಚಲೋ: ಒಂದು ವೇಳೆ ನಿಗದಿತ ಸಮಯದಲ್ಲಿ ಸೂಕ್ತ ಸ್ಪಂದನೆ ಸಿಗದಿದ್ದರೆ, ಧಾರವಾಡದ ನೂರಾರು ಹೋರಾಟಗಾರರು ಬೆಂಗಳೂರಿಗೆ ತೆರಳಿ ಸತ್ಯಪ್ರತಿಪಾದನೆ 'ರಾಜಭವನ ಚಲೋ' ಚಳವಳಿ ನಡೆಸಲು ನಿರ್ಧರಿಸಿದ್ದಾರೆ.



ಧಾರವಾಡ ಬಂದ್‌ಗೆ ಕರೆ: ಈ ಹೋರಾಟ ಜನಸಾಮಾನ್ಯರ ಹೋರಾಟವನ್ನಾಗಿ ಪರಿವರ್ತಿಸಲು, ಸರ್ಕಾರದ ಗಮನ ಸೆಳೆಯಲು ಶೀಘ್ರದಲ್ಲೇ 'ಧಾರವಾಡ ಬಂದ್' ಕರೆ ನೀಡಲು ಸಭೆಯಲ್ಲಿ ಸರ್ವಾನುಮತದ ತೀರ್ಮಾನ ತೆಗೆದುಕೊಂಡಿದೆ.

ಹೋರಾಟಗಾರರ ಆಕ್ರೋಶ ವೇನು?: ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು, ದಶಕಗಳಿಂದ ಧಾರವಾಡಕ್ಕೆ ಅನ್ಯಾಯವಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳು ಮತ್ತು ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗುತ್ತಿದೆ. ಆಡಳಿತಾತ್ಮಕ ವಿಕೇಂದ್ರೀಕರಣಕ್ಕೆ ಪ್ರತ್ಯೇಕ ಪಾಲಿಕೆ ಬೇಕು ಎಂದು ಪ್ರತಿಪಾದಿಸಿದರು.

ಇದು ಯಾವುದೇ ಒಂದು ಪಕ್ಷದ ಹೋರಾಟವಲ್ಲ, ಇದು ಧಾರವಾಡದ ಜನರ ಆತ್ಮಗೌರವದ ಪ್ರಶ್ನೆ. ಸರ್ಕಾರ ನಮ್ಮ ಗಡುವನ್ನು ನಿರ್ಲಕ್ಷಿದರೆ, ಹೋರಾಟದ ಹಾದಿ ಮತ್ತಷ್ಟು ಕಠಿಣವಾಗಲಿದೆ ಎಂದು ಸಭೆಯಲ್ಲಿದ್ದ ಎಲ್ಲ ಹೋರಾಟಗಾರರು ಎಚ್ಚರಿಸಿದರು.

ಪಕ್ಷಾತೀತ ಸಭೆಯಲ್ಲಿ ಸಾಹಿತಿಗಳು, ವಕೀಲರು ಮತ್ತು ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ಗಣ್ಯರು ಪಾಲ್ಗೊಂಡು ಧಾರವಾಡದ ಹಿತಕ್ಕೆ ಕೈಜೋಡಿಸಲು ಸಂಕಲ್ಪ ಮಾಡಿದರು. ಮುಂದೆ ಈ ಹೋರಾಟ ತೀವ್ರಗೊಳ್ಳುವ ಎಲ್ಲ ಲಕ್ಷಣಗಳು ದಟ್ಟವಾಗಿವೆ.

ಮಲ್ಲಿಕಾರ್ಜುನ ಸ್ವಾಮೀಜಿ, ಮಾಜಿ ಸಭಾಪತಿ ಡಾ.ವೀರಣ್ಣ ಮತ್ತಿಕಟ್ಟಿ, ಗುರುರಾಜ ಹುಣಸಿಮರದ, ಶಿವಶಂಕರ ಹಂಪಣ್ಣವರ, ಹೈಕೋರ್ಟ್ ಹೋರಾಟಗಾರ ಬಿ.ಡಿ.ಹಿರೇಮಠ, ಪ್ರತ್ಯೇಕ ಪಾಲಿಕೆ ಹೋರಾಟ ಸಮಿತಿ ಅಧ್ಯಕ್ಷ ಮನೋಜ ಪಾಟೀಲ, ಪಾಲಿಕೆ ಸದಸ್ಯ ರಾಜು ಕಮತಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಶಂಕರ ಹಲಗತ್ತಿ, ಡಾ. ಎಂಎಂ.ಕಲಬುರ್ಗಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ, ತಾಲೂಕು ಬ್ರಾಹ್ಮಣ ಸಭಾ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಇದ್ದರು.

ಪರಮೇಶ ಕಾಳೆ, ಎಂ.ಎನ್.ಮೋರೆ, ಶಿವಾಜಿ ಸೂರ್ಯವಂಶಿ, ವಿಠ್ಠಲ ಕಮ್ಮಾರ, ಲಕ್ಷ್ಮೀ ಹಿಂಡಸಗೇರಿ, ಕವಿತಾ ಕಬ್ಬೇರ ಇದ್ದರು.

ವಿವಿಧ ಕಾಮಗಾರಿಗೆ ಶಾಸಕ ಕೋನರಡ್ಡಿ ಭೂಮಿಪೂಜೆ

ನವಲಗುಂದ: ತುಪ್ಪರಿಹಳ್ಳದ ಮೊದಲೇ ಹಂತದ ಕಾಮಗಾರಿ ಮುಗಿದ ನಂತರ ಬಾಕಿ ಉಳಿದ 2ನೇ ಹಂತದ 162 ಕೋಟಿ ಅನುದಾನದ ಟೆಂಡರ್ ಕರೆಯಲಾಗಿದೆ. ಬಹುದಿನ ಬೇಡಿಕೆ ಕಲ್ಮೇಶ್ವರ ದೇವಸ್ಥಾನಕ್ಕೆ 50 ಲಕ್ಷ ವೆಚ್ಚದಲ್ಲಿ ಸಮುದಾಯ ಭವನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ್ದು, ಕಲ್ಮೇಶ್ವರನ ಆಶೀರ್ವಾದ ಎಲ್ಲರಿಗೂ ಆಗಲಿ ಎಂದು ಶಾಸಕ ಎನ್. ಹೆಚ್. ಕೋನರಡ್ಡಿ ಹೇಳಿದರು.

ತಾಲೂಕಿನ ಶಿರಕೋಳ ಗ್ರಾಮದ ವಿವಿಧ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಶಿರಕೋಳ ಗ್ರಾಮದ ಕಲ್ಮೇಶ್ವರ ದೇವಸ್ಥಾನದ ಆವರಣದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ 50 ಲಕ್ಷ, ಗ್ರಾಮದ ಗ್ರಾಮದ ಮೊರಬ ರಸ್ತೆಯಿಂದ ಪಿಕೆಪಿಎಸ್ ಮೂಲಕ ನಾಯ್ಕರ ಮನೆಯಿಂದ ಹಡಪದ ಮನೆಯವರೆಗೆ ಸಿಸಿ ಗಟಾರ ಹಾಗೂ ಪೇವರ್ಸ್ ಅಳವಡಿಸುವ ರೂ. 50 ಲಕ್ಷ ಕಾಮಗಾರಿ ಹಾಗೂ ಶಿರಕೋಳ ಗ್ರಾಪಂ



ಹತ್ತಿರ ಬಸಿಡೋಣಿ ಮನೆಯಿಂದ ಮೈಲಾರದೇವರ ಸಿಬಾರಗಟ್ಟಿ ವರೆಗೆ 50 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಒಟ್ಟು 1 ಕೋಟಿ ರೂ., ಹನುಮಂತ ದೇವರ ಗುಡಿ ಹತ್ತಿರವಿರುವ 25 ಲಕ್ಷ ರೂ. ವೆಚ್ಚದಲ್ಲಿ ಗರಡಿ ಮನೆ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಬೆಳಗಾವಿ ಜಿಲ್ಲೆ ಕಿತ್ತೂರದಿಂದ ಪ್ರಾರಂಭವಾಗಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರ ಹಾಗೂ ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಹರಿದು ಹೋಗುವ ತುಪ್ಪರಿಹಳ್ಳ 2ನೇ ಹಂತದ 162 ಕೋಟಿ ರೂ. ವೆಚ್ಚದ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಶಿರಕೋಳ-ಹಣಸಿ ನಡುವೆ ಇರುವ ತುಪ್ಪಿಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿ ಪ್ರಾರಂಭಿಸಲು ಅಧಿಕಾರಿಗಳಿಗೆ ಸೂಚಿಸಿದ್ದು, ಶಿರಕೋಳ ಗ್ರಾಮದ ಅಭಿವೃದ್ಧಿ ಮಾಡಲು ಸಂಕಲ್ಪ ಮಾಡಿದ್ದೇನೆ ಎಂದು ಕೋನರಡ್ಡಿ ಹೇಳಿದರು.

ಶಿರಕೋಳ ಹಿರೇಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿದರು.

ಈ ವೇಳೆ ಹುಬ್ಬಳ್ಳಿ ಕಿಮ್ಸ್ ನಾಮನಿರ್ದೇಶಿತ ಸದಸ್ಯ ಎಂ.ಎಸ್. ರೋಣದ, ನವಲಗುಂದ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಸೋಮಪ್ಪ ವಿ.ಬಳಿಗೇರ, ಮಾಜಿ ಗ್ರಾಪಂ ಅಧ್ಯಕ್ಷ ಸಂತೋಷ ಗುಜ್ಜಳ, ಕಲ್ಮೇಶ್ವರ ಟ್ರಸ್ಟ್ ಕಮಿಟಿ ಅಧ್ಯಕ್ಷ ಸುರೇಶ ಯಕ್ಕುಂಡಿ, ಗ್ರಾಪಂ ಉಪಾಧ್ಯಕ್ಷ ನಿತೀನ ಗಾಣಿಗೇರ, ಆರ್‌ಡಬ್ಲ್ಯುಎಸ್. ಎಇಇ ಎಸ್.ಎನ್. ಲಂಗೋಟಿ, ಗ್ಯಾರಂಟಿ ಸಮಿತಿ ಸದಸ್ಯ ಕಲ್ಲಪ್ಪತಲಬಾಯಿ,ಮುಖಂಡರುಗಳಾದ ಶಿವಲೀಲಾ ಬೋರಶೇಟ್ಟರ, ಪಮೇಶ ಹೊಸವಾಳ, ಅಡಿವೆಪ್ಪ ಗಾಣಿಗೇರ, ನಾಗಯ್ಯ ಹಿರೇಮಠ, ಸಿದ್ದಪ್ಪ ಬಾರಕೇರ, ಸೋಮಣ್ಣ ನಾಯ್ಕರ, ಸಿದ್ದಪ್ಪ ತಳವಾರ, ಈರಣ್ಣ ಗುಡಗುಡಿ, ಡಾ.ಆರ್. ಎಂ.ಹಿರೇಮಠ, ಕಲ್ಲಪ್ಪ ಬಿಸಿಡೋಣಿ, ಕಲ್ಲಪ್ಪ ಸಂಗಳದ, ಬಸವರಾಜ ಗಾಣಿಗೇರ, ಕಲ್ಲಪ್ಪ ಬಸಿಡೋಣಿ, ಬಸವರಾಜ ಗಾಣಿಗೇರ, ಕಲ್ಲಪ್ಪ ತಲವಾಯಿ, ಲಿಂಬಣ್ಣ ಗಾಣಿಗೇರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ವಂಗಭಂಗದಿಂದ ಭ್ರಮಾಭಂಗದವರೆಗೆ ನಾಗರಿಕತೆಯ ಹೋರಾಟ

ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ 2026ರಲ್ಲಿ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.

▸ ಅರುಣ್ ಬಿನ್ನಡಿ



ಪಶ್ಚಿಮ ಬಂಗಾಳದ ಚುನಾವಣೆಯನ್ನು ಹಿಮ್ಮುಖ ಚಲನೆಯಾಧಾರದಲ್ಲಿ (reverse order), ಅಂದರೆ ಫಲಿತಾಂಶಕ್ಕೆ ಮುಂಚಿನಿಂದ ಶತಮಾನಗಳ ಹಿಂದಿನ ನಾಗರಿಕತೆಯ ಸಂಘರ್ಷದ ಕಾಲದಿಂದ ವಿಶ್ಲೇಷಿಸಬೇಕಾಗಿದೆ. ಎಲ್ಲವನ್ನೂ ಭೂತಕಾಲದಿಂದ ವಿಶ್ಲೇಷಿಸುವ ಒಂದು ಕ್ರಮ ತಜ್ಞರಲ್ಲಿ ಮತ್ತು ಸಮಾಜದ ಚಿಂತಕವರ್ಗದಲ್ಲಿದೆ. ಆದರೆ ಇದು ಹಾಗೂ ಅಲ್ಲ! ಅದನ್ನು ಓರ್ವ ಸಾಮಾನ್ಯ ಬಂಗಾಳಿ ವ್ಯಕ್ತಿಯ ದೃಷ್ಟಿಕೋನದಿಂದ ಕೂಡ ವಿಶ್ಲೇಷಣೆ ಮಾಡಬೇಕಾಗಿದೆ. ಆ ದೃಷ್ಟಿಗೆ ಹೊರತಾಗಿ ಪ.ಬಂಗಾಳದ ಚುನಾವಣೆಯನ್ನು ವಿಶ್ಲೇಷಣೆ ಮಾಡತೊಡಗಿದರೆ ಅದು ಬಂಗಾಳಿ ಜನರಿಗೆ ಮಾಡುವ ಅವಮಾನವೂ ಆದೀತು ಮತ್ತು ವಿಶ್ಲೇಷಣೆಯ ದಾರಿಯೂ ಕೂಡ ತಪ್ಪುತ್ತದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಘೋಷಣೆಯಾದ ನಂತರ ಬಹುತೇಕರು ನಡೆಸಿದ ಚರ್ಚೆಗಳೆಲ್ಲವೂ ಅದಕ್ಕೆ ಹೊರತಾಗಿಯೇ ನಡೆಯಿತು. ವಿಶೇಷವಾಗಿ ಸೋಕಾಲ್ಡ್ ರಾಜಕೀಯ ಪಂಡಿತರು, ನರೇಟಿವ್‌ಗಾಗಿ ಕೆಲಸ ಮಾಡುವವರು, ನಾಗರಿಕತೆಯ ವ್ಯಾಖ್ಯಾನದಲ್ಲೇ ಎಡವಿದ ಅನನುಭವಿಗಳೆಲ್ಲರೂ ಈ ಚುನಾವಣೆಯನ್ನು ತಮ್ಮದೇ ಆದ ರೀತಿಯಲ್ಲಿ ಮಂಡಿಸುತ್ತಾ ಸಾಗಿದರು. ಆದರೆ ಫಲಿತಾಂಶ ಬಂದಾಗ ಅವರೆಲ್ಲರ ಗ್ರಹಿಕೆಗಳು ಸುಳ್ಳಾದವು. ಮಾಧ್ಯಮಗಳು ಮತ್ತು ಸರ್ವೇಕ್ಷಣಾ ತಂಡಗಳ ಗ್ರಹಿಕೆ ಮತ್ತು ಲೆಕ್ಕಾಚಾರಗಳು ತಪ್ಪಿದವು. ಪೂರ್ವಗ್ರಹ ಅಥವಾ ಚುನಾವಣೆಗಳೆಲ್ಲವೂ ಒಂದೇ ಎನ್ನುವ ಧೋರಣೆಯೇ ಇದಕ್ಕೆ ಕಾರಣವಾಗಿದ್ದವು. ವಿಶ್ಲೇಷಕರೆಲ್ಲರೂ ಬಿಜೆಪಿಯು ಪ.ಬಂಗಾಳದ ಚುನಾವಣೆಯನ್ನು ಹೇಗೆ ಎದುರಿಸುತ್ತದೆ ಎನ್ನುವುದನ್ನು ಚರ್ಚಿಸುವುದರಲ್ಲೇ ಹೆಚ್ಚು ಆಸಕ್ತರಾಗಿದ್ದಂತಿದ್ದರು. ಆದರೆ ಬಂಗಾಳದಲ್ಲಿ ಚುನಾವಣೆ ಬಿಜೆಪಿಯದ್ದು ಅಥವಾ ಯಾವುದೋ ಒಂದು ಪಕ್ಷಕ್ಕೆ ಮಾತ್ರ ಸಂಬಂಧಪಟ್ಟ ಸಂಗತಿಯಾಗಿರಲಿಲ್ಲ. ಈ ಚುನಾವಣೆಯನ್ನು ಮತ್ತು ಫಲಿತಾಂಶದ ಮೂಲಕ ಒಂದು ರಾಜಕೀಯ ಪಕ್ಷದ ವೃತ್ತಿಪರತೆ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಅಳೆಯಬೇಕಾಗಿರಲಿಲ್ಲ. ಏಕೆಂದರೆ ಆ ಸ್ಥಿತಿಯಿಂದ ಪ.ಬಂಗಾಳ ಯಾವತ್ತೋ ಮುಂದೆ ಸಾಗಿ ಬಂದುಬಿಟ್ಟಿತ್ತು. ಸಾಮಾನ್ಯವಾಗಿ ದೇಶದ ಇತರೆಡೆಗಳ ಚುನಾವಣೆಗಳಲ್ಲಿ ನಡೆಯುವುವಂತೆ ಅಲ್ಲಿ ಯಾವುದೂ ಇರಲಿಲ್ಲ. ಸಿದ್ಧ ಮಾದರಿಯ ಯಾವ ಸಂಗತಿಗಳೂ ಇರಲಿಲ್ಲ. ಏಕೆಂದರೆ ಅದು ಸಾಮಾನ್ಯ ಜನರು ತಮಗಾಗಿ, ತಮ್ಮ ಉಳಿವಿಗಾಗಿ ನಡೆಸಿದ ಚುನಾವಣೆಯಾಗಿತ್ತು. ದುರದೃಷ್ಟವೆಂದರೆ ಅದನ್ನು ಯಾರೂ ಅರಿಯಲಾರದೆ ಹೋದರು. ಹಾಗಾಗಿ ಎಲ್ಲರೂ ಸಹಜವಾಗಿ ತಪ್ಪು ಲೆಕ್ಕಾಚಾರದಲ್ಲಿ ತೊಡಗಿದರು.



ಹಾಗಾದರೆ ಅಲ್ಲಿ ಬಿಜೆಪಿಯ ಪಾತ್ರವೇನು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಪ.ಬಂಗಾಳದಲ್ಲಿ ಬಿಜೆಪಿಯು ಬಂಗಾಳಿಗಳ ಧ್ವನಿಯಾಗಿತ್ತೇ ಹೊರತು ಇನ್ನೇನೂ ಆಗಿರಲಿಲ್ಲ ಎಂಬ ಸತ್ಯ ಮಾತ್ರ ಚುನಾವಣೆ ಮತ್ತು ಇಂದಿನ ಫಲಿತಾಂಶದ ಅಂತಿಮ ವ್ಯಾಖ್ಯಾನ! ಬಂಗಾಳಿಗಳ ಹಿಂದಿನ ಶಕ್ತಿಯಾಗಿ, ಬೆನ್ನೆಲುಬಾಗಿ ನಿಲ್ಲುವ ಕೆಲಸವನ್ನು ಮಾಡುವುದಷ್ಟೇ ಅಲ್ಲಿ ಮಾಡಬೇಕಾದ ಕೆಲಸವಾಗಿತ್ತು. ಬಿಜೆಪಿ ಅದನ್ನು ಮಾಡಿತು. ಪರಿಣಾಮ, ಐದು ದಶಕಗಳ ಭಯದ ಸಂಕೋಲೆ ಮುರಿದುಬಿತ್ತು. ಅದರ ಜೊತೆಗೆ ಕಪಟ-ಛದ್ಮವೇಷದ ರಾಜಕಾರಣದ ಕೊನೆಯೂ ಆಯಿತು.

ಬಂಗಾಳ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು, ‘ಬಂಗಾಳ ಗೆಲ್ಲಬೇಕಾಗಿರುವುದು ಅಧಿಕಾರಕ್ಕಾಗಿ ಅಲ್ಲ, ನಮ್ಮ ನಾಗರಿಕತೆಯ ರಕ್ಷಣೆಗಾಗಿ’ ಎಂದಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರೂ ‘ನೀವು ನಮಗೆ ಮತ ನೀಡಿ, ನಾವು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇವೆ’ ಎಂದಿದ್ದರು. ಗೃಹ ಸಚಿವ ಅಮಿತ್ ಶಾ ಅವರು, ‘ಬಂಗಾಳ ಗೆದ್ದೇ ಸಿದ್ಧ’ ಎಂದು ಶಪಥವಿತ್ತರು. ಈ ಪ್ರತಿಜ್ಞೆಗಳು ಈಗ ಈಡೇರಿವೆ. ಅಂದರೆ ಬಂಗಾಳಿಗಳು ಬಂಗಾಳಕ್ಕಾಗಿ ಮತ ನೀಡುವ ಮೂಲಕ ಅವರ ಸ್ವಾತಂತ್ರ್ಯವನ್ನು ಮರಳಿ ಗಳಿಸಿಕೊಂಡಿದ್ದಾರೆ. ಬಂಗಾಳಿ ನಾಗರಿಕತೆಯ ರಕ್ಷಣೆಯಾಗಿದೆ. ಬಂಗಾಳದ ನಾಗರಿಕತೆಯನ್ನು ಬಂಗಾಳಿಗಳೇ ರಕ್ಷಿಸಿಕೊಂಡಿದ್ದಾರೆ. ಹಾಗಾಗಿ ಇದು ನಾಗರಿಕತೆಯ ಗೆಲುವು ಕೂಡ! ಕಳೆದ ಎಂಟು ದಶಕಗಳ ನಿರಂತರ ಹೋರಾಟಕ್ಕೆ ಸಿಕ್ಕ ಗೆಲುವು. ಹಾಗಾಗಿ ಇದು ಸಾಮಾನ್ಯವಾದ ಗೆಲುವಲ್ಲ. ಬಂಗಾಳದ ಇತಿಹಾಸವನ್ನು ಬಲ್ಲವರಿಗೆ ಮಾತ್ರ ಈ ಚುನಾವಣಾ ಫಲಿತಾಂಶವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಹೇಗೆ ವಂಗಭಂಗವಾದಾಗ ಬಂಗಾಳದ ಮನೆಮನೆಗಳಲ್ಲಿ ಕ್ರಾಂತಿಯ ಕಿಡಿ ನಾನಾ ಸ್ವರೂಪಗಳ ಮೂಲಕ ಆರಸೊತ್ತಿಗೆಗೆ ಬಿಸಿ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿತ್ತೋ ಇದೂ ಅಂಥದ್ದೇ ಕೆಚ್ಚಿನ ಗೆಲುವು. ಅಂದು ಹೇಗೆ ಪ್ರತಿಯೊಬ್ಬ ಬಂಗಾಳಿಗೆ ತನ್ನ ಬಂಗಾಳ ಒಡೆದರೆ ತಾವು ಉಳಿಯುವುದಿಲ್ಲ ಎಂಬುದು ಅರಿವಾಗಿ ಸ್ವಾತಂತ್ರ್ಯ ಜ್ವಾಲೆಯಾಗಿ ಉರಿಯಿತೋ ಈಗ ಉರಿದಿದ್ದೂ ಕೂಡ ಅಂಥದ್ದೇ ಜ್ವಾಲೆ. ಅಂದು ಹೇಗೆ ವಿಭಜನೆಗೊಂಡ ಬಂಗಾಳಕ್ಕಾಗಿ ರಾಜಕೀಯ ನಡೆಯಲಿಲ್ಲವೋ ಇಂದೂ ಬಂಗಾಳಿಗಳು ಬಂಗಾಳಕ್ಕಾಗಿ ರಾಜಕೀಯ ಮಾಡಲಿಲ್ಲ. ರಾಜಕೀಯವಾಗಿ ಒಡೆದುಹೋಗಲಿಲ್ಲ. ಅಂದು ದೇಶವಿಭಜನೆಯ ದಳ್ಳುರಿಗೆ ಬಂಗಾಳ ಹೇಗೆ ಬೆಂದಿತ್ತೋ ಇಂದು ಸ್ವತಂತ್ರ ಭಾರತದಲ್ಲೂ ಬಂಗಾಳ ಬೇಯುತ್ತಿತ್ತು. ಆ ಬೇಗೆಯಿಂದ ಹೊರಬರಲು ಬಂಗಾಳ ಹೇಗೆ ಏಕತ್ರವಾಯಿತೋ, ಇಂದು ಕೂಡ ಬಂಗಾಳ ಏಕತ್ರವಾಗಿದ್ದು ಹಾಗೆಯೇ! ರಾಜಕೀಯದಿಂದ ದೂರವಿದ್ದು, ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರಂಥ ನಾಯಕರು ಅಂದು ಬೀದಿಗಿಳಿಯಲು ಕಾರಣವಾಗಿದ್ದು ಒಂದು ನಾಗರಿಕತೆ ಉಳಿಯಬೇಕು ಎಂಬ ಒಂದೇ ಕಾರಣಕ್ಕಾಗಿ. ಆಗಲೂ ಮುಖರ್ಜಿಯವರಿಗೆ ಹಿಂದು ಮಹಾಸಭಾ, ಪ್ರಜಾ ಪರಿಷತ್ ಮುಂತಾದ ಸಂಘಟನೆಗಳು ವೇದಿಕೆಯಾಗಿದ್ದಂತೆ 2026ರಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.



2026ರ ಹೆದ್ದೆರೆ


ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾರ್ಯಕರ್ತ ಎಲ್ಲಾ ಅಡೆತಡೆಗಳನ್ನು ಮೀರಿ ನಿಂತ. ಮಾಡು ಇಲ್ಲವೇ ಮಡಿ ಎನ್ನುವಂತೆ ಕೆಲಸ ಮಾಡಿದ. ಸಂಘಟನೆ ಹಿಂದೆಂದಿಗಿಂತಲೂ ಗಟ್ಟಿಗೊಂಡಿತು. 80 ಸಾವಿರ ಬೂತ್‌ಗಳಲ್ಲಿ 70 ಸಾವಿರ ಬೂತ್ ಕಮಿಟಿಗಳನ್ನು ರಚನೆ ಮಾಡಲಾಯಿತು. ಮೊದಲ ಬಾರಿಗೆ ಬಂಗಾಳದಲ್ಲಿ ಮೂರುಮೂರು ಬಾರಿ ಮನೆಮನೆ ಪ್ರಚಾರ ನಡೆಯಿತು. ರಾಜ್ಯದಲ್ಲಿ ಒಟ್ಟು 80 ಸಾವಿರಕ್ಕೂ ಹೆಚ್ಚಿನ ಸಣ್ಣ ಸಭೆಗಳು ನಡೆದವು. ಕ್ಷೇತ್ರ ಮಟ್ಟದಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಸಾವಿರಾರು ಜನರು ಸೇರತೊಡಗಿದರು. ಅದರಲ್ಲೂ ಕಳೆದ ರಾಮನವಮಿಯ ದಿನವಂತೂ ಮಾಲ್ಡಾ, ಸಿಲಿಗುರಿ ಅಯೋಧ್ಯೆಯಂತೆ ಸಿಂಗಾರಗೊಂಡು ಉತ್ಸವವನ್ನು ಆಚರಿಸಿತು.

ಟಿಎಂಸಿ ಸೋಲಿಗೆ ಇವೂ ಕಾರಣ

- ಟಿ.ಎಂಸಿ ಕಚೇರಿಯ ಮೇಲೆ ಇಡಿ ದಾಳಿಯಾದಾಗ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಫೈಲುಗಳನ್ನು ಎತ್ತಿ ಓಡುವ ದೃಶ್ಯ ಮತ್ತು ಕೋಪಾವಿಷ್ಟರಾಗಿ ಪತ್ರಿಕಾಗೋಷ್ಠಿ ನಡೆಸಿದ್ದನ್ನು ಪ್ರಬುದ್ಧ ಬಂಗಾಳಿ ನೋಡಿ ಅಹಸ್ಯಪಟ್ಟುಕೊಂಡ.
- ಬಾಂಗ್ಲಾದೇಶದಲ್ಲಿ ಹಿಂದು ಯುವಕ ದೀಪುಚಂದ್ರನ ಭೀಕರ ಹತ್ಯೆಯನ್ನು ಪಶ್ಚಿಮ ಬಂಗಾಳದ ಹಿಂದು ಗಂಭೀರವಾಗಿ ತೆಗೆದುಕೊಂಡ. ದೀಪುಚಂದ್ರನನ್ನು ಕೊಂದವರ ಬಂಧುಗಳ ಜೊತೆಯಲ್ಲಿ ತಾವು ಕೂಡ ಬದುಕುತ್ತಿದ್ದೇವೆ ಎಂಬ ಆತಂಕ ಅವರನ್ನು ಕಾಡಿತು.
- ಚುನಾವಣಾ ಆಯೋಗ ಈ ಬಾರಿ ಕೇಂದ್ರೀಯ ಮೀಸಲು ಪಡೆಯ ಬೃಹತ್ ಸಂಖ್ಯೆಯ ಯೋಧರನ್ನು ಕರೆಸಿ ರಾಜ್ಯದಲ್ಲಿ ಕಟ್ಟುನಿಟ್ಟಿನ ಭದ್ರತೆಯನ್ನು ಒದಗಿಸಿದ್ದು ಜನರಲ್ಲಿ ಧೈರ್ಯ ತುಂಬಿತು. ತಾವಿನ್ನು ನಿರ್ಭಯವಾಗಿ ಮತಗಟ್ಟೆಗೆ ಹೋಗಬಹುದು ಎಂಬ ವಿಶ್ವಾಸ ಅವರಿಗೆ ಬಂತು.
- ಈಶಾನ್ಯದ ಸಿಲಿಗುರಿ ಗಡಿಯಲ್ಲಿ ಚೀನಾವು ಬಾಂಗ್ಲಾದೇಶಕ್ಕಾಗಿ 16 ಕಿ.ಮೀ ಉದ್ದದ ಏರ್ ಬೇಸನ್ನು ನಿರ್ಮಿಸಿಕೊಡುತ್ತಿದೆ. ಅದರ ಜೊತೆಗೆ ತೀಸ್ತಾನದಿ ಯೋಜನೆಯನ್ನು ನಿರ್ಮಿಸುವ ಉದ್ದೇಶವನ್ನೂ ಚೀನಾ ಇಟ್ಟುಕೊಂಡಿದೆ. ಇದು ಕೂಡ ಪ.ಬಂಗಾಳ ಚುನಾವಣೆಯ ಮೇಲೆ ಪರಿಣಾಮ ಬೀರಿದೆ.
- ಬಾಂಗ್ಲಾದೇಶ ಗಡಿ ಭಾಗಗಳಲ್ಲಿ ವಲಸಿಗರಿಗೆ ನೆಲೆ ನೀಡುವ ಯೋಜನೆಯನ್ನು ಮಮತಾ ಸರ್ಕಾರ ಮಾಡುತ್ತಲೇ ಬಂತು. ಇದು ಚಿಕನ್ ನೆಕ್ ಸೂಕ್ಷ್ಮ ಪ್ರದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಜನರಿಗೆ ಮನವರಿಕೆಯಾಯಿತು.

2014ರ ನಂತರ ಬಿಜೆಪಿ

2004ರವರೆಗೂ ಮಮತಾ ಬ್ಯಾನರ್ಜಿಯ ಆಟಾಟೋಪಗಳನ್ನು ಸಹಿಸಿದ ಬಿಜೆಪಿ ಸ್ವತಃ ತಾನೇ ಬಂಗಾಳದ ರಕ್ಷಣೆಗಿಳಿಯಿತು. ಯೋಜನಾಬದ್ಧವಾಗಿ ಸಾಂಘಟನಾ ಕಾರ್ಯವನ್ನು ಆರಂಭಿಸಿತು. ಆದರೆ ಬಿಜೆಪಿ ಎಲ್ಲವನ್ನೂ ಸೊನ್ನೆಯಿಂದ ಆರಂಭಿಸಬೇಕಿತ್ತು. ಏಕೆಂದರೆ ಬಿಜೆಪಿ ಎಲ್ಲವನ್ನೂ ಟಿಎಂಸಿಗೆ ಕೊಟ್ಟಾಗಿತ್ತು. ಅದರ ಪರಿಣಾಮವಾಗಿ 2006ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸೀಟುಗಳನ್ನು ಗೆದ್ದಿತು. ಅದರ ನಂತರ ಕೆಲವೇ ವರ್ಷಗಳಲ್ಲಿ ಬಂದ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಪ್ರಬಲ ಪೈಪೋಟಿಗಿಳಿಯಿತು. ಮೊಟ್ಟಮೊದಲ ಬಾರಿಗೆ ಬಂಗಾಳದ ಹಳ್ಳಿಗಳಲ್ಲಿ ಬಿಜೆಪಿ ಕಾರ್ಯಕರ್ತ ಪಕ್ಷದ ಬಾವುಟವನ್ನು ಹಿಡಿದು ನಿಂತ. ಆದರೆ ಅದರ ಪರಿಣಾಮವನ್ನು ಆ ಕಾರ್ಯಕರ್ತ ಅನುಭವಿಸಿದ್ದು ಮಾತ್ರ ಅತ್ಯಂತ ಭೀಕರ. ಚುನಾವಣೆಯ ನಂತರ ಸುಮಾರು 300 ಕಾರ್ಯಕರ್ತರ ಹತ್ಯೆಯಾಯಿತು. ಮನೆಗಳ ಧ್ವಂಸ ನಡೆಯಿತು. ಆತನ ಬೆಳೆಗಳನ್ನು ನಾಶಪಡಿಸಲಾಯಿತು. ಗ್ರಾಮಗ್ರಾಮಗಳನ್ನೇ ಟಿಎಂಸಿ ಕಾರ್ಯಕರ್ತರು ಸುಟ್ಟು ಹಾಕಿದರು. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ನಡೆಯಿತು. ಈ ಸಂಘರ್ಷದ ಚುನಾವಣೆಯ ನಂತರ ಪ್ರತಿ ರಾಷ್ಟ್ರೀಯವಾದಿಯೂ ಬಿಜೆಪಿಯತ್ತ ನೋಡಲಾರಂಭಿಸಿದ. ಸುಮಾರು 2017ರ ಹೊತ್ತಿಗೆ ಬಂಗಾಳದ ಪ್ರಬುದ್ಧ ವರ್ಗ ಬಿಜೆಪಿಯನ್ನು ಒಪ್ಪುವ ಹಂತಕ್ಕೆ ಬಂತು. ದೊಡ್ಡ ಕೇಡರ್ ಬಿಜೆಪಿಯತ್ತ ಹರಿದುಬರತೊಡಗಿತು. 2021ರ ಚುನಾವಣೆಯ ಹೊತ್ತಿಗೆ ಬೇರೆಬೇರೆ ಸಿದ್ಧಾಂತಗಳ ಜನರೂ ಬಿಜೆಪಿಯೊಂದೇ ಪರಿಹಾರ ಎನ್ನುವ ಪರಿಸ್ಥಿತಿಗೆ ಬಂದರು. ಆದರೆ 2021ರ ಚುನಾವಣೆ ಸಂದರ್ಭದಲ್ಲಿ ಕೂಡ ಪಕ್ಷದ ಸಂಘಟನೆಗೊಂದು ನಿಶ್ಚಿತ ಆಕಾರವಿರಲಿಲ್ಲ. ಮೋದಿ ಮತ್ತು ರಾಷ್ಟ್ರೀಯತೆಗಳೆಂಬ ಘೋಷಣೆಗಳೇ ಬಿಜೆಪಿಗೆ 77 ಸೀಟುಗಳನ್ನು ದೊರಕಿಸಿಕೊಟ್ಟಿತು. ಶೇ. 38ರಷ್ಟು ಪ್ರಮಾಣದ ವೋಟುಗಳು ಬಿಜೆಪಿಗೆ ಬಂದು. ಎಂದಿನಂತೆ ಆ ಚುನಾವಣೆಯ ನಂತರ ಕೂಡ ರಾಜ್ಯದಲ್ಲಿ ಭೀಕರ ಗಲಭೆ ನಡೆಯಿತು. ಸರ್ಕಾರಿ ಪ್ರಾಯೋಜಿತ ಕೊಲೆಗಳು ನಡೆದು ಸುಮಾರು 300ಕ್ಕೂ ಹೆಚ್ಚಿನ ಕಾರ್ಯಕರ್ತರ ಹತ್ಯೆ ನಡೆಯಿತು. ಇಡೀ ಬಂಗಾಳ ಹೊತ್ತಿ ಉರಿಯಿತು. ರಾಜ್ಯದ ಪೊಲೀಸ್ ವ್ಯವಸ್ಥೆ ಟಿಎಂಸಿಯ ಅಂಗಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿತ್ತು. ಸಾವಿರಾರು ಕಾರ್ಯಕರ್ತರನ್ನು ಪಕ್ಷ ವರ್ಷಗಟ್ಟಲೆ ಅಸ್ಸಾಮಿನಲ್ಲಿಟ್ಟು ರಕ್ಷಣೆ ಮಾಡುವ ಹಂತಕ್ಕೆ ಪರಿಸ್ಥಿತಿ ಮುಟ್ಟಿತ್ತೆಂದರೆ ಬಂಗಾಳದ ಪರಿಸ್ಥಿತಿ ಹೇಗಿದ್ದಿರಬಹುದೆಂಬುದನ್ನು ಯೋಚಿಸಬಹುದು. ಇಂಥ ರಾಜಕೀಯ ಹತ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಸಿಬಿಐ 600ಕ್ಕೂ ಹೆಚ್ಚಿನ ಪ್ರಕರಣಗಳನ್ನು ತನಿಖೆಗೊಳಪಡಿಸಿ 6000ಕ್ಕೂ ಹೆಚ್ಚು ಟಿಎಂಸಿ ಗೂಂಡಾಗಳನ್ನು ಬಂಧಿಸಿತು. ಇದು ಶಾಂತಿ ಸ್ಥಾಪನೆಯ ಬದಲು ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರನ್ನು ಮತ್ತಷ್ಟು ಸಿಟ್ಟಿಗೇಳಿಸಿತು. ಇದರ ಪರಿಣಾಮವಾಗಿ 24ರ ಲೋಕಸಭಾ ಚುನಾವಣೆಯಲ್ಲಿ ಎಷ್ಟೋ ಬೂತ್‌ಗಳಲ್ಲಿ ಹಿಂದುಗಳು ವೋಟ್ ಹಾಕಲು ಬರದ ಪರಿಸ್ಥಿತಿ ನಿರ್ಮಾಣವಾಯಿತು. ಬೂತ್ ಏಜೆಂಟರ ಕೊರತೆಯಾಯಿತು. ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಯಿತು. ಇವೆಲ್ಲದರ ತರುವಾಯ ಕೂಡ ಬಿಜೆಪಿ 12 ಸೀಟುಗಳನ್ನು ಗೆದ್ದಿತು. ಈ ಬದಲಾವಣೆ ಕೂಡ ಬಿಜೆಪಿಯ ಮುಂದಿನ ಹೋರಾಟಕ್ಕೆ ಪ್ರೇರಣೆ ನೀಡಿದವು. ಇಂದು ಶ್ಯಾಮಪ್ರಸಾದ್ ಮುಖರ್ಜಿಯವರ ಕನಸು ನನಸಾಗಿದೆ. ಪ್ಲಾಸಿ ಕದನಕ್ಕೂ ಮುಂಚಿನಿಂದಲೂ ಬಂಗಾಳ ಪಡುತ್ತಿದ್ದ ಬವಣೆ ನೀಗಿದೆ. ಚುನಾವಣೆಯ ಸಮಯದಲ್ಲಿ ಬಂಗಾಳಿಗಳು ಬಿಜೆಪಿಯ ಮೇಲೆ ಯಾವ ಭರವಸೆಯನ್ನು ಇಟ್ಟಿದ್ದರೋ ಅದನ್ನು ಈಡೇರಿಸುವುದು ಮಾತ್ರ ಇನ್ನುಳಿದಿರುವ ಕೆಲಸ. ಆದುದರಿಂದ ಈ ಫಲಿತಾಂಶ ಕೇವಲ ರಾಜಕೀಯ ಅಂಕೆಸಂಖ್ಯೆಯ ಆಟವಾಗಿಲ್ಲ. ಅದೊಂದು ಮಹಾತಪಸ್ಸು, ಮಹಾಸಂಕಲ್ಪ. ಶತಮಾನಗಳ ಕಾಲದ ಸಂಘರ್ಷದ ಅಂತಿಮ ಹಂತ. ಈ ಎಲ್ಲಾ ಕಾರಣಗಳಿಂದ ಮೊನ್ನೆ ಬಂಗಾಳದ ಚುನಾವಣೆ ಎಲ್ಲಾ ಚುನಾವಣೆಗಳಂತೆ ಅಲ್ಲ. ಕೇವಲ ರಾಜಕೀಯ ವಿಶ್ಲೇಷಣೆಗಳಿಂದ ಅದನ್ನು ಅಳೆಯಲಾಗದು.





ಕಮ್ಯುನಿಸ್ಟರಿಗಿಂತ ಕುಲಗೆಡಿಸಿದ ಮಮತಾ

ಆ ದಿನಗಳಲ್ಲಿ ಬಾಂಗ್ಲಾ ವಲಸಿಗರ ವಿರುದ್ಧ ಧ್ವನಿ ಎತ್ತಿದ ಮಮತಾ ಬ್ಯಾನರ್ಜಿಯವರಿಗೆ ತನ್ನೆಲ್ಲಾ ಶಕ್ತಿಯನ್ನು ಧಾರೆ ಎರೆದು ಭಾರತೀಯ ಜನತಾ ಪಕ್ಷ. ಕಾಂಗ್ರೆಸನ್ನು ಬಿಟ್ಟ ಮಮತಾ ತೃಣಮೂಲ ಕಾಂಗ್ರೆಸ್ ರಚನೆ ಮಾಡುವಾಗಲೂ ಆಕೆಯ ಹಿಂದಿಂದ ಶಕ್ತಿ ಬಿಜೆಪಿ. ಎನ್‌ಡಿಎ ಮೈತ್ರಿಕೂಟದ ಭಾಗವಾಗಿ ಕೇಂದ್ರ ಸಚಿವೆಯೂ ಆದ ಮಮತಾ ರಾಜ್ಯದಲ್ಲಿ ಅಧಿಕಾರಕ್ಕೇರುವವರೆಗೂ ಬಿಜೆಪಿ ಆಕೆಯ ಇಂಧನಶಕ್ತಿಯಾಗಿತ್ತು. ಇವೆಲ್ಲವನ್ನೂ ಮಾಡಲು ಬಿಜೆಪಿಗಿದ್ದ ಏಕೈಕ ಕಾರಣ ಕಮ್ಯುನಿಸ್ಟರು ತೊಲಗಬೇಕು ಮತ್ತು ಬಂಗಾಳ ಮರಳಿ ಭಾರತದ ಶಕ್ತಿಯಾಗಬೇಕೆಂಬುದು ಮಾತ್ರ. ವಿಪರ್ಯಾಸವೆಂದರೆ ಕಮ್ಯುನಿಸ್ಟರ ವಿರುದ್ಧ ಹೋರಾಡುತ್ತಾ ಬಂದ ಮಮತಾ ಬ್ಯಾನರ್ಜಿ ತಾನು ಕಮ್ಯುನಿಸ್ಟರಿಗಿಂತ ಬಂಗಾಳವನ್ನು ಕುಲಗೆಡಿಸಿದರು. ವಲಸಿಗರ ವಿರುದ್ಧ ಸಿಡಿದೇಳುತ್ತಿದ್ದ ಮಮತಾ ಅದೇ ಬಾಂಗ್ಲಾ ವಲಸಿಗರಿಗೆ ಮಣೆ ಹಾಕತೊಡಗಿದರು.

ಬಾಂಗ್ಲಾ ವಲಸಿಗರೇ ಬಾಡಿಗೆ ಗೂಂಡಾಗಳು

ಮತದಾರರ ಪಟ್ಟಿ ಪರಿಷ್ಕರಣೆಯಿಂದ ಪ.ಬಂಗಾಳದಲ್ಲಿ ನೆಲೆಸಿದ್ದ ಸುಮಾರು 92 ಲಕ್ಷ ಅಕ್ರಮ ಮತದಾರರನ್ನು ಕಿತ್ತೊಗೆಯಲಾಯಿತು. ಇದು ಓಲೈಕೆಯ ತೃಣಮೂಲ ಸರ್ಕಾರಕ್ಕೆ ಹಿನ್ನಡೆಯಾಗಿ ಪರಿಣಮಿಸಿತು. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಅಕ್ರಮ ಮತದಾರರ ಪ್ರಮಾಣ ಹೆಚ್ಚಾಗುತ್ತಲೇ ಇತ್ತು. ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶಿ ವಲಸಿಗರಿಗೆ ಸಕಲ ಸವಲತ್ತುಗಳನ್ನು ನೀಡುತ್ತಿದ್ದ ಮಮತಾ ಸರ್ಕಾರ ಚುನಾವಣಾ ಸಮಯದಲ್ಲಿ ಅವರನ್ನು ಬಾಡಿಗೆ ಗೂಂಡಾಗಳಾಗಿ ಬಳಸಿಕೊಳ್ಳುತ್ತಿತ್ತು.

ವಲಸಿಗರ ಹೆಬ್ಬಾಗಿಲಾದ ಬಂಗಾಳ

1948ರಲ್ಲಿ ಹೇಗೆ ಮುಸ್ಲಿಂ ಲೀಗಿನ ಡೈರೆಕ್ಟ್ ಆಕ್ಷನ್ ಡೇ ಹಿಂಸಾಚಾರಕ್ಕೆ ಬಂಗಾಳ ನಡುಗಿತ್ತೋ ಇಂದಿನ ಬಂಗಾಳವೂ ಹಾಗೆ ನಡುಗಿದ ಕಾರಣಕ್ಕೆ ಆತ ಬಿಜೆಪಿಯನ್ನು ಈ ಪರಿಯಲ್ಲಿ ಗೆಲ್ಲಿಸಿದ. ಹೀಗೆ ಪ.ಬಂಗಾಳದ ಚುನಾವಣಾ ಫಲಿತಾಂಶವನ್ನು ವಿಶ್ಲೇಷಣೆ ಮಾಡುತ್ತಾ ಹೋದರೆ ಭಾರತೀಯ ಇತಿಹಾಸದ ಪ್ರಮುಖ ಪುಟಗಳು ತೆರೆಯುತ್ತಾ ಹೋಗುತ್ತದೆ. ಇವುಗಳ ನಡುವೆ ಅಲ್ಲಲ್ಲಿ ಪ್ರಶ್ನೆಗಳು ಕೂಡ ಏಳುತ್ತಲೂ ಹೋಗುತ್ತವೆ. ಉದಾಹರಣೆಗೆ ಸದಾ ಸಂಘರ್ಷವನ್ನು ಎದುರಿಸುತ್ತಾ ಬಂದ ಬಂಗಾಳದ ನಾಗರಿಕತೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್-ಕಮ್ಯುನಿಸ್ಟ್ ಮತ್ತು ತೃಣಮೂಲ ಕಾಂಗ್ರೆಸ್ ಕಾಲಘಟ್ಟದಲ್ಲಿ ತನ್ನ ವೈಭವವನ್ನು ಕಂಡಿರಬೇಕಲ್ಲವೇ, ಕೇವಲ ಬಿಜೆಪಿ ಜಯಗಳಿಸಿದಾಗ ಮಾತ್ರ ಅದನ್ನು ನಾಗರಿಕತೆಯ ವಿಜಯ ಎಂದು ಬಣ್ಣಿಸಬೇಕೆ ಎಂಬ ಪ್ರಶ್ನೆಗಳೂ ಹುಟ್ಟಬಹುದು. ಆದರೆ ಕಳೆದ ಏಳು ದಶಕಗಳಲ್ಲಿ, ಈ ಮೂರು ಪಕ್ಷಗಳ ಆಡಳಿತಾವಧಿಯಲ್ಲಿ ಬಂಗಾಳದ ಪರಿಸ್ಥಿತಿಯನ್ನು ಪೂರ್ವಗ್ರಹಗಳಿಲ್ಲದೆ ಅವಲೋಕಿಸಬೇಕು. ಹಿಂದಿನ ಸಂದರ್ಭಗಳಲ್ಲಿ ಬಂಗಾಳಿ ಅಸ್ಮಿತೆಗೆ ಅಪಾಯ ಬಂದಾಗಲೆಲ್ಲಾ ಒಗ್ಗೂಡುತ್ತಿದ್ದ ಬಂಗಾಳಕ್ಕೆ ಸ್ವಾತಂತ್ರ್ಯಾನಂತರ ಮಹಾಮರೆವು ಆವರಿಸಿತು. ಅದು ಕೇವಲ ಬಂಗಾಳಕ್ಕೆ ಸೀಮಿತವಾಗಿರಲಿಲ್ಲವೆಂಬುದು ಸತ್ಯವಾದರೂ ಬಂಗಾಳದ ಪ್ರಜ್ಞೆಗೆ ಕತ್ತಲಾವರಿಸಿದರೆ ಪರಿಣಾಮ ಘೋರವಾಗಿರುತ್ತದೆ. ಸ್ವಾತಂತ್ರ್ಯಪೂರ್ವದ ಬಂಗಾಳದ ಪ್ರಜ್ಞೆಗೆ ಭಾರತ ನಮ್ಮದು ಎಂಬುದು ಮುಖ್ಯವಾಗಿದ್ದರೆ, ನಂತರದ ಬಂಗಾಳಕ್ಕೆ ಬಂಗಾಳ ಮಾತ್ರ ನಮ್ಮದು ಎಂಬ ಪೊರೆ ಆವರಿಸಿತು. ಶ್ರೇಷ್ಠವಾದ ಬಂಗಾಳದ ಸಾಮಾಜಿಕ ಲೋಕಕ್ಕೆ ಒಗ್ಗದ ವಿದೇಶಿ ಸಿದ್ಧಾಂತದ ಹುಚ್ಚು ಹಿಡಿಯಿತು. ಬಂಗಾಳದ ಸಾಂಸ್ಕೃತಿಕ ಚೈತನ್ಯ ಪತನವಾಗತೊಡಗಿತು. ಸಾಂಸ್ಕೃತಿಕ ಮತ್ತು ಧಾರ್ಮಿಕ ನೆಲೆಗಟ್ಟಿನ ರಾಜಕಾರಣದ ಜಾಗದಲ್ಲಿ ವಿದೇಶಿ ಚಿಂತನೆಗಳ ರಾಜಕಾರಣ ನೆಲೆಯಾಯಿತು. ಕಮ್ಯುನಿಸಮ್ಮಿನ ಬೀಜಗಳು ಬಿತ್ತನೆಯಾಗಿ ಅದು ರಾಜಕಾರಣವನ್ನು ಕ್ರಿಮಿನಲ್ ಸ್ವರೂಪಕ್ಕಿಳಿಸಿತು. ಸಿದ್ಧಾಂತದ ಹೆಸರಿನಲ್ಲಿ ಕೊಲೆ ಬಂಗಾಳದಲ್ಲಿ ಸಹಜವೆಂಬಂತೆ ನಡೆಯತೊಡಗಿತು. ಬಣ್ಣಬಣ್ಣದ ಮಾತುಗಳಿಗೆ ಬಂಗಾಳ ಬಲಿಯಾಯಿತು. ಕಾಂಗ್ರೆಸಿನಿಂದ ಅಧಿಕಾರವನ್ನು ಪಡೆದ ಕಮ್ಯುನಿಸ್ಟ್ ಆಡಳಿತದ ಅವಧಿ ಭಾರತದ ಇತಿಹಾಸದ ಅತ್ಯಂತ ಕರಾಳ ಅಧ್ಯಾಯ. ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ಬಂಗಾಳ ಅಭಿವೃದ್ಧಿ ಕಾಣಲಿಲ್ಲ. ಅಧಿಕಾರದಲ್ಲಿದ್ದ ಮುಖ್ಯಮಂತ್ರಿಗಳೇನೋ ಮುತ್ಸದ್ದಿಗಳೆನಿಸಿಕೊಂಡರು. ಆದರೆ ಬಂಗಾಳ ಬಡವಾಗುತ್ತಾಹೋಗುತ್ತಿತ್ತು. ಚುನಾವಣಾ ಅಕ್ರಮಗಳ ಮೂಲಕ, ಮತಪೆಟ್ಟಿಗೆ ಅಪಹರಣಗಳ, ಅತಿಯಾದ ಮುಸಲ್ಮಾನ ಓಲೈಕೆಯ ಕಾರಣದಿಂದ ಬಾಂಗ್ಲಾ ವಲಸಿಗರ ಹೆಬ್ಬಾಗಿಲಾಗಿ ಬಂಗಾಳ ಬದಲಾಯಿತು.



ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

ಪುಟ ೧➜ ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಗಳಿಂದ ಯಡಿಯೂರಪ್ಪನವರ ಸುಮಾರು 10 ಲಕ್ಷ ಸಂಖ್ಯೆಯ ಅಭಿಮಾನಿಗಳು ಆಗಮಿಸಲಿದ್ದಾರೆ. ರಾಜ್ಯದ ವಿವಿಧ 1000 ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮಕ್ಕೆ ಕೇಂದ್ರ ಗೃಹಸಚಿವರಾದ ಅಮಿತ್ ಶಾ ಆಗಮಿಸಲಿದ್ದಾರೆ. ಮೇ 9ರಂದು ಬೆಳಗ್ಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಸಮಾರಂಭ ನಡೆಯಲಿದೆ. ಹಾಗಾಗಿ ಅಮಿತ್ ಶಾ ಅವರು ಮಧ್ಯಾಹ್ನದ ನಂತರ ಇಲ್ಲಿಗೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಮೊದಲು ನಿಗದಿಪಡಿಸಿದ್ದ ಸಮಯ ಬದಲಾಯಿಸಿ ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ಕಾರ್ಯಕ್ರಮ ನಡೆಸಲಾಗುವುದು. ಮಧ್ಯಾಹ್ನ 3.45ರ ವೇಳೆಗೆ ಕೇಂದ್ರ ಗೃಹಸಚಿವ ಅಮಿತ್ ಶಾ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಎಲ್ಲಾ ಮಠಾಧೀಶರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕೆಂಬ ಅಭಿಲಾಷೆ ಇತ್ತು. ಆದರೆ ಸಮಯದ ಕೊರತೆ, ಕೆಲಸದ ಒತ್ತಡದಿಂದ ಆಗುತ್ತಿಲ್ಲ, ಹಾಗಾಗಿ ಎಲ್ಲಾ ಮಠಾಧೀಶರು ಕಾರ್ಯಕ್ರಮಕ್ಕೆ ಆಗಮಿಸಿ ಯಡಿಯೂರಪ್ಪ ಅವರಿಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದ ಅವರು, ರಾಜ್ಯದ ವಿವಿಧೆಡೆಗಳಿಂದ ಸುಮಾರು 10 ಸಾವಿರ ಬಸ್‌ಗಳು ಹಾಗೂ 40 ರಿಂದ 60 ಸಾವಿರ ಕಾರು ಮತ್ತಿತರ ಲಘುವಾಹನಗಳು ಆಗಮಿಸಲಿವೆ. ನಮ್ಮ ನಿರೀಕ್ಷೆಗೂ ಮೀರಿ ಜನರಿಂದ ಸ್ಪಂದನೆ ಸಿಗುತ್ತಿದ್ದು, ಕಾರ್ಯಕ್ರಮ ಯಶಸ್ವಿಯಾಗಲಿದೆ ಎಂದು ಹೇಳಿದರು.

ಶಾಸಕರಾದ ಹರೀಶ್ ಪೂಂಜ, ರಘು ಕೌಟಿಲ್ಯ, ಭಾಸ್ಕರ್‌ರಾವ್, ಮಾಜಿ ಶಾಸಕರಾದ ಜಿ.ಎಚ್. ತಿಪ್ಪಾರೆಡ್ಡಿ, ಎಸ್.ಕೆ. ಬಸವರಾಜನ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಲಿಂಗಮೂರ್ತಿ, ಮಲ್ಲಿಕಾರ್ಜುನ್, ಸಂಪತ್ ಕುಮಾರ್, ಸೌಭಾಗ್ಯ ಬಸವರಾಜನ್, ನಗರಾಧ್ಯಕ್ಷ ಲೋಕೇಶ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ಸೋಮೇಂದ್ರ, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ಯಶವಂತ ಸೇರಿದಂತೆ ಮತ್ತಿತರರಿದ್ದರು.

ಸಾಂಸ್ಕೃತಿಕ ಹಬ್ಬದಂತೆ ಆಚರಣೆ: ಸಂಸದ ಗೋವಿಂದ ಕಾರಜೋಳ

ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಮಾತನಾಡಿ, ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ಸಮಾಜ ಸೇವೆ, ಜೀವನ ಚರಿತ್ರೆಯ ಕಾರ್ಯಕ್ರಮವನ್ನು ಒಂದು ಸಾಂಸ್ಕೃತಿಕ ಹಬ್ಬದ ರೀತಿ ಆಚರಿಸಲು ನಿರ್ಧರಿಸಿದ್ದೇವೆ. ಮೇ 8ರಂದು ಸಂಜೆ ಯಡಿಯೂರಪ್ಪನವರ ಪುರ ಪ್ರವೇಶ ನಡೆಯಲಿದೆ. 24 ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ ಎಂದು ಹೇಳಿದರು.

ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

ಪುಟ ೧➜ ಯಡಿಯೂರಪ್ಪ ಅವರ ಜೀವನ ಚರಿತ್ರೆಯ ಕೆಂದಾವರೆ-ಕಮಲ ಅರಳಿದ ಕಥೆ ಹಾಗೂ ಯಡಿಯೂರಪ್ಪ ಅವರ ಸುದೀರ್ಘ ಶಾಸಕತ್ವದ ಅವಧಿಯಲ್ಲಿ ವಿಧಾನ ಮಂಡಲದ ಉಭಯ ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹಗಳುಳ್ಳ ಸದನ ಶಿಕಾರಿ-ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಎಂಬ ಎರಡೂ ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಅವರು ಲೋಕಾರ್ಪಣೆಗೊಳಿಸಲಿದ್ದಾರೆ. ಕೆಂದಾವರೆ-ಕಮಲ ಅರಳಿದ ಕಥೆ ಪುಸ್ತಕದಲ್ಲಿ ಯಡಿಯೂರಪ್ಪ ಅವರು ಹೇಳಿಕೊಂಡಿರುವ ವಿವರವನ್ನು ಬರಹಗಾರ ಆರ್. ರಘು (ಕೌಟಿಲ್ಯ) ನಿರೂಪಿಸಿದ್ದಾರೆ. ಅವರ ಬಾಲ್ಯದಿಂದ ಈವರೆಗಿನ ಪ್ರಮುಖ ಘಟ್ಟಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಸದನ ಶಿಕಾರಿ-ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕ ಹೋರಾಟದ ಹಿನ್ನೆಲೆಯಿಂದ ಬಂದ ಯಡಿಯೂರಪ್ಪ ಅವರು ತಮ್ಮ ಶಾಸಕತ್ವದ ಅವಧಿಯಲ್ಲಿ ವಿರೋಧ ಪಕ್ಷದಲ್ಲಿರಲಿ ಆಡಳಿತ ಪಕ್ಷದಲ್ಲಿರಲಿ ಜನಪರ ವಿಚಾರಗಳು, ರೈತರ ಸಂಕಷ್ಟಗಳು, ನಾಡಿನ ಹಿತಾಸಕ್ತಿಯ ವಿಚಾರ ಬಂದಾಗ ಸದನದಲ್ಲೂ ಹೋರಾಟಕ್ಕಿಳಿದು ಗುಡುಗಿ ಮಾತನಾಡಿದ್ದಾರೆ. ಅಂಕಿ-ಸಂಖ್ಯೆಗಳ ಸಹಿತ ಆಧಾರಗಳನ್ನು ಇಟ್ಟುಕೊಂಡು ಮಾತನಾಡಿರುವುದೇ ಹೆಚ್ಚು. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎಂಬ ಮಾತು ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಅವರ ಐದು ದಶಕಗಳ ಸುದೀರ್ಘ ಅವಧಿಯಲ್ಲಿ ವಿಧಾನ ಮಂಡಲದಲ್ಲಿ ಮಾತನಾಡಿರುವ ದಾಖಲೆಗಳು 15,000 ಪುಟಗಳನ್ನು ಮೀರುತ್ತವೆ ಇದನ್ನು ಪರಿಷ್ಕರಿಸಿ ಹತ್ತು ಸಂಪುಟಗಳಲ್ಲಿ ತರುವ ಯೋಚನೆಯಿದ್ದು, ಮೊದಲ ಸಂಪುಟವನ್ನು ಶನಿವಾರ ಬಿಡುಗಡೆಗೊಳಿಸಲಾಗುತ್ತಿದೆ. ಬರಹಗಾರ ಆರ್. ರಘು (ಕೌಟಿಲ್ಯ) ಅವರ ಪರಿಕಲ್ಪನೆಯಲ್ಲಿ ಮೂಡಿಬಂದಿರುವ ಈ ಪುಸ್ತಕವನ್ನು ಡಾ. ರೇವಯ್ಯ ಒಡೆಯರ್ ಸಂಪಾದಿಸಿದ್ದಾರೆ.

ರಾಮಚಂದ್ರ ರಾವ್ ಅಮಾನತು ರದ್ದು

ಬೆಂಗಳೂರು: ಶಿಸ್ತು ಕ್ರಮದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಹಿರಿಯ ಐಪಿಎಸ್ ಅಧಿಕಾರಿ ಡಾ. ಕೆ.ರಾಮಚಂದ್ರ ರಾವ್ ಅಮಾನತನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಸರ್ಕಾರ ಆದೇಶಿಸಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮಹಾನಿರ್ದೇಶಕರಾಗಿದ್ದ ರಾಮಚಂದ್ರರಾವ್ ಅವರ ವಿರುದ್ಧ ಶಿಸ್ತು ಕ್ರಮದ ವಿಚಾರಣೆ ಬಾಕಿ ಇದ್ದ ಕಾರಣ, ಅಖಿಲ ಭಾರತ ಸೇವೆಗಳ (ಶಿಸ್ತು ಮತ್ತು ಅಪೀಲು) ನಿಯಮಗಳ ಅಡಿಯಲ್ಲಿ 2026ರ ಜ.19 ರಂದು ಅಮಾನತುಗೊಳಿಸಲಾಗಿತ್ತು. ತದನಂತರ ಮಾ.18 ರಂದು ಅವರ ವಿರುದ್ಧ ಅಧಿಕೃತವಾಗಿ ಶಿಸ್ತು ಕ್ರಮದ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿತ್ತು.

ಇದೀಗ ಅವರ ಅಮಾನತನ್ನು ರದ್ದುಗೊಳಿಸಿ ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸಂಜಯ್ ಬಿ.ಎಸ್. ಅವರು ಆದೇಶ ಹೊರಡಿಸಿದ್ದಾರೆ.

ಮರು ನೇಮಕ ಮತ್ತು ಹೊಸ ಜವಾಬ್ದಾರಿ: ಪ್ರಸ್ತುತ ಸರ್ಕಾರವು ಅಧಿಕಾರಿಯ ಅಮಾನತನ್ನು ರದ್ದುಗೊಳಿಸಿದ್ದು, ಅವರನ್ನು ಮತ್ತೆ ಸೇವೆಗೆ ಸೇರಿಸಿಕೊಂಡಿದೆ. ಮರು ನೇಮಕಗೊಂಡ ಡಾ. ಕೆ. ರಾಮಚಂದ್ರರಾವ್ ಅವರನ್ನು ಮುಂದಿನ ಆದೇಶದವರೆಗೆ ಪೊಲೀಸ್ ಮ್ಯಾನ್ಯುವಲ್ ವಿಭಾಗದ ಮಹಾನಿರ್ದೇಶಕರನ್ನಾಗಿ (ಡಿಜಿಪಿ) ನೇಮಕ ಮಾಡಲಾಗಿದೆ.

ಈ ಪೊಲೀಸ್ ಮ್ಯಾನ್ಯುವಲ್ ಡಿಜಿಪಿ ಹುದ್ದೆಯು ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಡಿಜಿಪಿ ಹುದ್ದೆಗೆ ಸಮಾನವಾದ ಸ್ಥಾನಮಾನ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಕಳೆದ ಕೆಲವು ದಿನಗಳಿಂದ ಡಿಜಿಪಿ ರಾಮಚಂದ್ರ ರಾವ್ ಅವರು ತಮ್ಮ ಅಧಿಕೃತ ಕಚೇರಿಯಲ್ಲಿಯೇ ಮಹಿಳೆಯೊಬ್ಬರ ಜತೆ ಇರುವ ದೃಶ್ಯಗಳು ಹರಿದಾಡುತ್ತಿದ್ದವು. ಇದು ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿತ್ತು. ಒಬ್ಬ ಜವಾಬ್ದಾರಿಯುತ ಉನ್ನತ ಹುದ್ದೆಯಲ್ಲಿದ್ದುಕೊಂಡು ಇಂತಹ ಕೃತ್ಯ ಎಸಗಿರುವುದು ಸೇವಾ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿದ ಸರ್ಕಾರ, ಶಿಸ್ತು ಕ್ರಮವಾಗಿ ಅಮಾನತು ಆದೇಶ ನೀಡಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಆಡಿಯೋ ಮತ್ತು ವಿಡಿಯೋಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಮತ್ತು ಕಾನೂನು ಕ್ರಮಕ್ಕಾಗಿ ಇಲಾಖಾ ತನಿಖೆಗೆ ಸೂಚಿಸಲಾಗಿತ್ತು.

ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

◈ ಅಮೇರಿಕಾದ ಅಧ್ಯಕ್ಷ ಟ್ರಂಪ್ ಅವರನ್ನು ಕಂಡರೆ ಭಾರತದಲ್ಲಿ ಕೆಲವರಿಗೆ ಭಯ
– ಪ್ರಧಾನಿ ಮೋದಿಗೆ ಸಂತೋಷ್ ಲಾಡ್ ವ್ಯಂಗ್ಯ

-ಹಾಗೆಯೇ ಭಾರತದ ಸಕಲ ಸವಲತ್ತುಗಳನ್ನು ಅನುಭವಿಸಿ ಮೆರೆಯುತ್ತಿರುವ ಇನ್ನು ಕೆಲವು ಮಹಾನ್ ನಾಯಕರಿಗೆ ಪಾಕಿಸ್ತಾನದ ಅಧ್ಯಕ್ಷರನ್ನು ಕಂಡರೆ ಪ್ರೀತಿ ಸಹಿತ ಭೀತಿ!

ದಿನ ಭವಿಷ್ಯ

ಮೇಷ ನಿಮ್ಮ ಬದುಕಲ್ಲಿ ಹೊಸ ಬೆಳವಣಿಗೆ ಉಂಟಾದೀತು. ನಿರ್ಧಾರ ಫಲ ನೀಡಲಿದೆ. ಮುಖ್ಯ ಗುರಿ ಸಾಧಿಸಲ್ಪಡಲಿದೆ. ಕೌಟುಂಬಿಕ ಸಾಮರಸ್ಯ.

ವೃಷಭ ಸರಿಯಾದ ದಿಕ್ಕಿನಲ್ಲಿ ನಿಮ್ಮ ಶ್ರಮ ವ್ಯಯಿಸಿ. ಉತ್ತಮ ಫಲ ಪಡೆಯುವಿರಿ. ವ್ಯರ್ಥ ಕಾರ್ಯ ಎಸಗಬೇಡಿ. ವಾಗ್ವಾದ ನಡೆಸಬೇಡಿ.

ಮಿಥುನ ನಿಮ್ಮ ಉದ್ದೇಶ ಈಡೇರಿಸಲು ಸೂಕ್ತ ದಿನ. ಅಡ್ಡಿ ಎದುರಾಗದು. ಹೆಚ್ಚು ಹೊಣೆಗಾರಿಕೆ ನಿಮ್ಮನ್ನು ಬಸವಳಿಸಬಹುದು. ಅನಿರೀಕ್ಷಿತ ಧನಪ್ರಾಪ್ತಿ.

ಕಟಕ ನೀರಸವಾಗಿ ದಿನ ಆರಂಭವಾದರೂ ಬಳಿಕ ಆಪ್ತರ ಭೇಟಿಯಿಂದ ಉತ್ಸಾಹ ತುಂಬಿಕೊಳ್ಳುವಿರಿ. ಕಾರ್ಯದಲ್ಲಿ ಯಶಸ್ಸು, ಧನಾಗಮ.

ಸಿಂಹ ಚಿಂತೆಯಿಲ್ಲದ ಸ್ಥಿರ ದಿನ. ಕೆಲವು ವಿಚಾರ ನಿಮಗೆ ಪೂರಕವಾಗಿ ಸಾಗುವುದು ನೆಮ್ಮದಿ ತರಲಿದೆ. ವಿರೋಧಿಗಳ ತಂತ್ರ ಫಲಿಸದು.

ಕನ್ಯಾ ವೃತ್ತಿಯಲ್ಲಿ ಕಷ್ಟ ಎದುರಿಸುವಿರಿ. ಆದರಿದು ನಿಮ್ಮ ಕೌಟುಂಬಿಕ ಬದುಕಿನ ಮೇಲೆ ಪರಿಣಾಮ ಬೀರದು. ಆತ್ಮೀಯರ ಒಡನಾಟ ಮುದ ತರಲಿದೆ.

ತುಲಾ ನೆಗೆಟಿವ್ ಚಿಂತನೆ ಮನಸ್ಸನ್ನು ಆವರಿಸಲಿದೆ. ಈ ಸ್ಥಿತಿಯಲ್ಲಿ ಯಶಸ್ಸು ಸಿಗಲಾರದು. ಮೊದಲಿಗೆ ನಿಶ್ಚಿಂತ ಮನೋಭಾವ ರೂಪಿಸಿಕೊಳ್ಳಿ.

ವೃಶ್ಚಿಕ ಕಠಿಣ ದಿನ. ದಿನವಿಡೀ ಅಶಾಂತ ಮನಸ್ಸು. ಸಂಗಾತಿ ಜತೆ ವಾಗ್ವಾದಕ್ಕೆ ಹೋಗದಿರಿ. ದೇವರ ಪ್ರಾರ್ಥನೆ ನೆಮ್ಮದಿ ತರಬಹುದು.

ಧನು ಕೆಲವಾರು ಒಳ್ಳೆಯ ಬೆಳವಣಿಗೆ ಸಂಭವಿಸಲಿದೆ. ಕೌಟುಂಬಿಕ ವಿಚಾರ ಮಾತ್ರ ಭಾವನಾತ್ಮಕ ಏರುಪೇರಿಗೆ ಕಾರಣವಾಗುವುದು. ಆರ್ಥಿಕ ಸ್ಥಿರತೆ.

ಮಕರ ಸಣ್ಣ ವಿಷಯವೊಂದು ಮನಸ್ಸಿನ ನೆಮ್ಮದಿ ಕಲಕಬಹುದು. ಅದನ್ನು ಸರಿಯಾಗಿ ನಿಭಾಯಿಸಿ. ಆತ್ಮೀಯರ ಜತೆ ಸಹನೆಯಿಂದ ವರ್ತಿಸಿ.

ಕುಂಭ ಈ ದಿನ ಅಡ್ಡಿಗಳನ್ನು ಎದುರಿಸುವಿರಿ. ಪ್ರಮುಖ ಕಾರ್ಯ ಮುಂದೂಡಿ. ಆಪ್ತರ ಜತೆ ನಿಮ್ಮ ಚಿಂತೆ ಹಂಚಿಕೊಳ್ಳಿ. ಹೆಚ್ಚುತ್ತಿರುವ ವೆಚ್ಚ ಚಿಂತೆ ತರಲಿದೆ.

ಮೀನ ವೃತ್ತಿಯಲ್ಲೂ ಖಾಸಗಿ ಬದುಕಲ್ಲೂ ಏಳಿಗೆ. ದೀರ್ಘ ಕಾಲದ ಸಮಸ್ಯೆ ಪರಿಹಾರ. ಖಾಸಗಿ ಬದುಕಲ್ಲಿ ಹೊಸ ವ್ಯಕ್ತಿ ಪ್ರವೇಶಿಸಬಹುದು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 5,3,8,2

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕರೆ

ನಿರಂತರ ಕಲಿಕೆ ಅಗತ್ಯ

ಶಿವಮೊಗ್ಗ : ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಕಲಿಕೆ ಮತ್ತು ಸಾಮಾಜಿಕ ಜವಾಬ್ದಾರಿ ಬಹಳ ಮುಖ್ಯವಾಗಿದ್ದು, ಜ್ಞಾನ ಮತ್ತು ಕೌಶಲ್ಯಗಳನ್ನು ಕಾಲಕ್ಕೆ ತಕ್ಕಂತೆ ನವೀಕರಿಸಿಕೊಂಡು ಪ್ರಗತಿ ಸಾಧಿಸುತ್ತದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ 35ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೋಲುಗಳು ಜೀವನದ ಭಾಗ, ಆದರೆ ಅವುಗಳಿಂದ ಕಲಿತು ಮುಂದೆ ಸಾಗುವುದೇ ನಿಜವಾದ ಯಶಸ್ಸು ಎಂದರು.

ಇಲ್ಲಿ ಪಡೆದ ಶಿಕ್ಷಣವು ನಿಮ್ಮ ವೃತ್ತಿಜೀವನವನ್ನು ಯಶಸ್ವಿಗೊಳಿಸುವುದಲ್ಲದೆ, ಜೀವನವನ್ನು ಸಾರ್ಥಕಗೊಳಿಸಲು ಸಹಕಾರಿಯಾಗಲಿದೆ. ಜಗತ್ತು ಇಂದು ಕ್ಷಿಪ್ರ ಬದಲಾವಣೆಯ ಹಂತದಲ್ಲಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ (ಪ್ಲಟ ಡಟರಿಜಿಟ್ಲ) ಜೀವನದ ಪ್ರತಿಯೊಂದು ಕ್ಷೇತ್ರವನ್ನು ಪ್ರಭಾವಿಸಿದೆ. ಕೃತಕ ಬುದ್ಧಿಮತ್ತೆ (ಎಐ), ಡೇಟಾ ಸೈನ್ಸ್ ಮತ್ತು ಡಿಜಿಟಲ್ ಕ್ರಾಂತಿಯು ಹೊಸ ಅವಕಾಶಗಳ ಜೊತೆಗೆ ಹೊಸ ಸವಾಲುಗಳನ್ನೂ ತಂದೊಡ್ಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಇಂದು ವಿಕಸಿತ ಭಾರತ 2047ರ ಸಂಕಲ್ಪದೊಂದಿಗೆ ಹೊಸ ಯುಗದತ್ತ ಸಾಗುತ್ತಿದೆ. ಈ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ. ಹೊಸ ಶಿಕ್ಷಣ ನೀತಿ (ಫೇಉಕ 2020) ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಹೆಚ್ಚು ಕೌಶಲ್ಯ ಆಧಾರಿತ ಮತ್ತು ಸಮಗ್ರವಾಗಿಸಿದೆ. ಶಿಕ್ಷಣವು ಕೇವಲ ಪದವಿ ಪಡೆಯುವ ಸಾಧನವಲ್ಲ, ಅದು ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ಅಡಿಪಾಯವಾಗಿದೆ.

ಜಾಗತಿಕ ತಾಪಮಾನ ಏರಿಕೆ ಮತ್ತು ಪರಿಸರ ಮಾಲಿನ್ಯದಂತಹ ಸವಾಲುಗಳ ಬಗ್ಗೆಯೂ ನೀವು ಗಮನಹರಿಸಬೇಕು. ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಪದವೀಧರರು ಕೇವಲ ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಕರ್ತರಾಗಬೇಕು. ಸ್ಟಾರ್ಟಪ್ ಸಂಸ್ಕೃತಿ ಮತ್ತು ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವಂತೆ ಕರೆ ನೀಡಿದರು.ಸಿವಿಲ್, ಮೆಕ್ಯಾನಿಕಲ್ ಮೊದಲಾದ ಸಂಪ್ರದಾಯಿಕ ಇಂಜಿನಿಯರಿಂಗ್ ಕೋರ್ಸ್‌ಗಳ ನಿರ್ಲಕ್ಷ್ಯ ಮಾಡಲಾಗಿದೆ. ಹೀಗಾಗಿ ಈ ಕೋರ್ಸ್‌ಗಳನ್ನು ಮಾಡಿದವರಿಗೆ ಉತ್ತೇಜನ ನೀಡಲು ಸರ್ಕಾರ ಚಿಂತನೆ ನಡೆಸಿದ್ದು, ಪಠ್ಯ ಬದಲಾವಣೆಯಂತಹ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಬಿಎ ಪದವಿ ದಾಖಲಾಗುವ ಸಂಖ್ಯೆ ಕಡಿಮೆಯಾಗುತ್ತಿದೆ. 70 ಸಾವಿರ ಸೀಟು ಮುಚ್ಚುವ ಸ್ಥಿತಿ ಬಂದಿದೆ. 19 ಸಾವಿರ ಸೀಟುಗಳು ಹೊಸದಾಗಿ ಆರಂಭಿಸಲಾಗುತ್ತಿದ್ದು ರಿಟೈಲ್, ಇ ಕಾಮರ್ಸ್ ಸೇರಿದಂತೆ ನಾಲ್ಕು ವಿಭಾಗಗಳಲ್ಲಿ 3840 ಹೊಸ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತಿದೆ. ಹಲವಾರು ಹೊಸ ಪ್ರಯೋಗ ಮಾಡುತ್ತಿದ್ದು, ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ಸಹಯೋಗದಲ್ಲಿ ಕೌಶಲ್ಯಕ್ಕೆ ಒತ್ತು ನೀಡಲಾಗುತ್ತಿದೆ. 40 ಪದವಿ ಕಾಲೇಜುಗಳನ್ನು ಮಾದರಿ ಕಾಲೇಜಾಗಿಸಲು ಲ್ಯಾಬ್ ಸ್ಥಾಪನೆ ಮತ್ತು ತರಬೇತಿ ನೀಡಲಾಗುತ್ತದೆ ಎಂದರು. ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ, ಕುಲಸಚಿವರಾದ ಹೇಮಂತ್ ಎನ್, ಪ್ರೊ. ತಿಮ್ಮರಾಯಪ್ಪ ಹಾಗೂ ಸಿಂಡಿಕೇಟ್ ಸದಸ್ಯರು ಇದ್ದರು.



ಸಂಶೋಧನೆಗೆ ಒತ್ತು ನೀಡಿ

ಕುವೆಂಪು ವಿವಿ ಶೈಕ್ಷಣಿಕವಾಗಿ ಸಾಕಷ್ಟು ಸಾಧನೆ ಮಾಡಿದ್ದರೂ ಹಲವು ಸಮಸ್ಯೆಗಳಿಂದ ಬಳಲುತ್ತಿದೆ. ಗುಣಮಟ್ಟದ ಶಿಕ್ಷಣದೊಂದಿಗೆ ಸಂಶೋಧನೆಗೆ ಒತ್ತು ನೀಡಬೇಕು. ಅಭಿವೃದ್ಧಿ ಹೊಂದವಲ್ಲಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಬೇಕಿದೆ ಎಂದರು. ಎಂಜಿನಿಯರಿಂಗ್ ಪದವಿ ಪಡೆಯುತ್ತಿರುವವರಲ್ಲಿ ಕೇವಲ ಶೇ.17ರಷ್ಟು ಮಾತ್ರ ಉದ್ಯೋಗ ಲಭಿಸುತ್ತಿದೆ. ದೂರದೃಷ್ಟಿ ಕೊರತೆ ಮತ್ತು ಕೇವಲ ಕಂಪ್ಯೂಟರ್ ಸಂಬಂಧಿ ಕೋರ್ಸ್ ಬೇಕೆಂಬ ಆಸೆಯಿಂದಾಗಿ ಸೀಟ್‌ಗಳನ್ನು ಹೆಚ್ಚಿಸಿಕೊಳ್ಳಲಾಗಿದೆ. ಹೀಗಾಗಿ ಕಂಪ್ಯೂಟರ್ ಸೀಟ್‌ಗಳ ನಿಯಂತ್ರಣಕ್ಕೆ ಕ್ರಮಕ್ಕೈಗೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ

ಪುಟ ೧➜ ನನಗೆ ಸಾಲ ಬಹಳ ಆಗಿದ್ದರಿಂದ ನಾನು ಮನೆ ಬಿಟ್ಟು ಬೇರೆ ಕಡೆಗೆ ದುಡಿಯಲು ಹೋಗುತ್ತಿದ್ದೇನೆ. 2 ವರ್ಷ ಬಿಟ್ಟು ಬರುತ್ತೇನೆ. ನನ್ನನ್ನು ಹುಡುಕಾಡಬೇಡಿ ಎಂದು ಪತ್ರ ಬರೆದು ಮುಸ್ತಫಾ ಅಪ್ಪಾಸಾಬ ಮನೆ ಬಿಟ್ಟು ಹೋಗಿದ್ದ.

ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 109/2023 ಕಲಂ: ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು. ಕಾಣೆಯಾದ ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ ಪತ್ತೆ ಮಾಡಲು ನಾನಾ ರೀತಿಯ ಪ್ರಯತ್ನ ಮಾಡಿದಾಗ ಕೊನೆಗೆ ಕಾಣೆಯಾದ ವ್ಯಕ್ತಿಯ ಭಾವಚಿತ್ರವನ್ನು ನ್ಯಾಟ್ ಗ್ರೀಡ್ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಕಾಣೆಯಾದ ವ್ಯಕ್ತಿಯ ಮೊಬೈಲ್ ನಂಬರ್ ಪತ್ತೆ ಮಾಡಿ ಟವರ್ ಲೊಕೇಶನ್ ಸಹಾಯದಿಂದ ವ್ಯಕ್ತಿಯು ಗೋವಾದ ಮಾಂದ್ರಮನಲ್ಲಿ ಪತ್ತೆಯಾಗಿದ್ದಾನೆ.ಪತ್ತೆಯಾದ ವ್ಯಕ್ತಿ ವಿವರಗಳನ್ನು ವಿಚಾರಿಸಿದ ಪೊಲೀಸರು ತಾಯಿಯ ಜತೆ ಯುವಕನನ್ನು ಕಳುಹಿಸಿದ್ದಾರೆ.

ನ್ಯಾಟ್ ಗ್ರೀಡ್ ತಂತ್ರಾಂಶ ಎಂದರೇನು? : ನ್ಯಾಟ್ ಗ್ರೀಡ್ ಎಂಬುದು ಭಾರತದ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ನಿರ್ಮಿಸಲಾದ ಅತ್ಯಾಧುನಿಕ ಗುಪ್ತಚರ ಮಾಹಿತಿ ಜಾಲವಾಗಿದೆ. ಇದು ತಂತ್ರಾಂಶಕ್ಕಿಂತ ಹೆಚ್ಚಾಗಿ, ವಿವಿಧ ಸರ್ಕಾರಿ ಏಜೆನ್ಸಿಗಳ ದತ್ತಾಂಶಗಳನ್ನು ಒಂದೆಡೆ ಸೇರಿಸುವ ಒಂದು ಬೃಹತ್ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಆಗಿದೆ ಇದರ ಅಡಿಯಲ್ಲಿ ಅಲವು ತಂತ್ರಶಾಂಶಗಳು ಕೆಲಸ ಮಾಡುತ್ತವೆ.

ನ್ಯಾಟ್ ಗ್ರೀಡ್ ಎಂದರೆ ಭಯೋತ್ಪಾದನೆ ವಿರೋಧಿ ಚಟುವಟಿಕೆಗಳನ್ನು ತಡೆಯಲು ಮತ್ತು ದೇಶದ ಭದ್ರತೆಯನ್ನು ಹೆಚ್ಚಿಸಲು ವಿವಿಧ ದತ್ತಾಂಶ ಮೂಲಗಳನ್ನು ಸಂಪರ್ಕಿಸಲಾಗುತ್ತದೆ.

ಇದು ಬ್ಯಾಂಕಿಂಗ್, ರೈಲ್ವೆ, ವಿಮಾನಯಾನ, ಟೆಲಿಕಾಂ, ವಲಸೆ, ಮತ್ತು ಕ್ರೆಡಿಟ್ ಕಾರ್ಡ್ ವಹಿವಾಟುಗಳಂತಹ ಸುಮಾರು 10ಕ್ಕೂ ಹೆಚ್ಚು ವಿವಿಧ ವಲಯಗಳ ಮಾಹಿತಿಯನ್ನು ಏಕೀಕರಿಸು ಒಂದು ವ್ಯವಸ್ಥೆಯಾಗಿದೆ. ನ್ಯಾಟ್ ಗ್ರೀಡ್ ಒಂದು ಸಂಕೀರ್ಣ ಜಾಲವಾಗಿದ್ದು, ಇದು ವಿವಿಧ ಏಜೆನ್ಸಿಗಳ ದತ್ತಾಂಶಗಳನ್ನು (ಉದಾಹರಣೆಗೆ: ಪಾಸ್ಪೋರ್ಟ್ ಕಚೇರಿ, ಬ್ಯಾಂಕ್‌ಗಳು, ತೆರಿಗೆ ಇಲಾಖೆ) ಒಂದೇ ಸುರಕ್ಷಿತ ವೇದಿಕೆಗೆ ತರುತ್ತದೆ.

ಕಾನೂನಿನ ಚೌಕಟ್ಟಿನಲ್ಲೇ ಕರ್ತವ್ಯ: ಸ್ಪೀಕರ್

ಮಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕನಾಗಿ ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರಕ್ಕೆ ತನ್ನಿಂದ ಯಾವುದೇ ವಿಳಂಬವಾಗಿಲ್ಲ, ಸಂವಿಧಾನ ಮತ್ತು ಕಾನೂನಿನ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸಬೇಕಾದ ಜವಾಬ್ದಾರಿ ನನ್ನ ಮೇಲಿದ್ದು, ಅದರಂತೆ ನಡೆದುಕೊಂಡಿದ್ದೇನೆ ಎಂದು ವಿಧಾನಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯು ವಿಶ್ವಾಸದ ಮೇಲೆ ನಡೆಯಬೇಕು. ವಿಶ್ವಾಸವಿಲ್ಲದಿದ್ದರೆ ವ್ಯವಸ್ಥೆ ಬಲಿಷ್ಠವಾಗಲು ಸಾಧ್ಯವಿಲ್ಲ ಎಂದರು.ಜೀವರಾಜ್ ಅವರು ಮಂಗಳವಾರ ಪೂರ್ವಾಹ್ನ 11 ಗಂಟೆಗೆ ಅರ್ಜಿ ನೀಡಿದ್ದಾರೆ. ನಿಯಮಾವಳಿ ಪ್ರಕಾರ ಅಭಿಪ್ರಾಯ ಪಡೆದು ಸಮಯ ನೀಡಲಾಗುತ್ತದೆ. ಅಷ್ಟರಲ್ಲೇ ವಿಳಂಬವಾಗಿದೆ ಎನ್ನುವುದು ಸರಿಯಲ್ಲ, ಸಂವಿಧಾನ ಮತ್ತು ಕಾನೂನಿನಡಿ ಅವಕಾಶ ಕೊಡಲೇಬೇಕು. ಇದೊಂದು ವಿಶಿಷ್ಟ ಸನ್ನಿವೇಶ. ವಿಳಂಬ ಮಾಡುವ ಉದ್ದೇಶವೇ ಇಲ್ಲ, ಆದರೆ ಸಂವಿಧಾನ ಪೀಠದ ಬಗ್ಗೆ ಸಂಶಯ, ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಚರ್ಚಿಸುವುದು, ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

ಪುಟ ೧➜ ಇವರ ಪತ್ತೆ ಕಾರ್ಯ ಸವಾಲಾಗಿ ಪರಿಣಮಿಸಿದೆ.

ಪತ್ತೆ ಹಚ್ಚುವಿಕೆಯಲ್ಲಿ ಪೊಲೀಸರ ಕಾರ್ಯವೈಖರಿ: ನಾಪತ್ತೆ ಪ್ರಕರಣಗಳನ್ನು ತಂತ್ರಜ್ಞಾನ ಸಹಾಯದಿಂದ ಪತ್ತೆ ಹಚ್ಚುವಲ್ಲಿ ಪೊಲೀಸ್ ಇಲಾಖೆ ಚುರುಕಾಗಿ ಕಾರ್ಯನಿರ್ವಹಿಸುತ್ತಿದೆ. 2024ರಲ್ಲಿ ನಾಪತ್ತೆಯಾದ 6,672 ಪ್ರಕರಣಗಳ ಪೈಕಿ 6,275 ಜನರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಪ್ರತಿ ವರ್ಷವೂ ಪತ್ತೆಯಾಗದವರ ಸಂಖ್ಯೆ ಕೂಡ ಏರುತ್ತಿರುವುದು ಆತಂಕ ಮೂಡಿಸಿದೆ. 2024ರಲ್ಲಿ 397 ಜನ ಪತ್ತೆಯಾಗದೆ ಉಳಿದಿದ್ದರೆ, 2025ರಲ್ಲಿ ಈ ಸಂಖ್ಯೆ 432ಕ್ಕೆ ಏರಿದೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ ಇನ್ನೂ 590 ಜನರ ಸುಳಿವು ಸಿಗಬೇಕಿದೆ.

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ?

ಚಿಕ್ಕ ಮಕ್ಕಳ ನಾಪತ್ತೆಯ ಹಿಂದೆ ವ್ಯವಸ್ಥಿತ ಭಿಕ್ಷಾಟನೆ ಮಾಫಿಯಾ ಮತ್ತು ಬಾಲಕಾರ್ಮಿಕ ಪದ್ಧತಿಯ ಕರಾಳ ಹಸ್ತವಿರುವ ಸಂಶಯವಿದ್ದು, ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಅವರನ್ನು ವೇಶ್ಯಾವಾಟಿಕೆ ಜಾಲಕ್ಕೆ ತಳ್ಳುವ ದಂಧೆಕೋರರು ಸಕ್ರಿಯರಾಗಿದ್ದಾರೆ. ಪ್ರೀತಿ-ಪ್ರೇಮದ ಹೆಸರಿನಲ್ಲಿ ದಾರಿ ತಪ್ಪಿಸಿ ಅನ್ಯ ರಾಜ್ಯಗಳಿಗೆ ಸಾಗಿಸುವ ಕಳ್ಳಸಾಗಾಣಿಕೆ ಜಾಲ ಭೇದಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

2024	ಪ್ರಕರಣಗಳು	ಪತ್ತೆಯಾದವು	ಪತ್ತೆಯಾಗಿಲ್ಲ
ಬಾಲಕ	216	211	05
ಬಾಲಕಿ	245	238	07
ಪುರುಷ	2681	2382	299
ಮಹಿಳೆ	3530	3444	86
ಒಟ್ಟು	6672	6275	397
2025	**ಪ್ರಕರಣಗಳು**	**ಪತ್ತೆಯಾದವು**	**ಪತ್ತೆಯಾಗಿಲ್ಲ**
ಬಾಲಕ	205	195	10
ಬಾಲಕಿ	248	237	11
ಪುರುಷ	2344	2069	275
ಮಹಿಳೆ	3661	3525	136
ಒಟ್ಟು	6458	6026	432
2026 (ಏ. ಅಂತ್ಯಕ್ಕೆ)	**ಪ್ರಕರಣಗಳು**	**ಪತ್ತೆಯಾದವು**	**ಪತ್ತೆಯಾಗಿಲ್ಲ**
ಬಾಲಕ	74	48	26
ಬಾಲಕಿ	72	46	26
ಪುರುಷ	776	537	239
ಮಹಿಳೆ	1239	940	299
ಒಟ್ಟು	2161	1571	590




ಪ್ರೀತಿ-ಪ್ರೇಮದ ಹೆಸರಿನಲ್ಲಿ ಮನೆ ಬಿಟ್ಟು ಹೋದವರು ನಂತರದ ದಿನಗಳಲ್ಲಿ ಮರಳಿ ಬಂದಾಗ ಪೊಲೀಸರಿಗೆ ಅಥವಾ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದಿಲ್ಲ. ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ನಾಪತ್ತೆ ಪ್ರಕರಣಗಳನ್ನು ಪತ್ತೆಹಚ್ಚಲು ವಿಶೇಷ ತಂಡ ರಚಿಸಲಾಗಿದೆ. ಈ ತಂಡದ ಜತೆಗೆ ಪ್ರತಿ ವಾರ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದೆ.
■ ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಆಯುಕ್ತ

ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

ಪುಟ ೧➜ **ಕೋರ್ಟ್ ತಡೆ ನೀಡಿದರೆ ಸ್ಥಾನ ರದ್ದು-ಖಾದರ್:** ಸುದ್ದಿಗಾರರೊಂದಿಗೆ ಮಾತನಾಡಿದ ಯು.ಟಿ. ಖಾದರ್, ಚುನಾವಣಾ ಆಯೋಗ ಪ್ರಮಾಣಪತ್ರ ಕೊಟ್ಟ ಬಳಿಕ ಅವರಿಗೆ ಪ್ರಮಾಣವಚನ ಬೋಧಿಸಬೇಕು. ಹಾಗಾಗಿ, ಪ್ರಮಾಣವಚನ ಬೋಧಿಸಿದ್ದೇನೆ. ಒಂದು ವೇಳೆ ನ್ಯಾಯಾಲಯ ಫಲಿತಾಂಶಕ್ಕೆ ತಡೆಯಾಜ್ಞೆ ನೀಡಿದರೆ, ಜೀವರಾಜ್ ಅವರ ಶಾಸಕ ಸ್ಥಾನ ರದ್ದಾಗಲಿದೆ. ಆಗ ರಾಜೇಗೌಡ ಅವರಿಗೆ ಪ್ರಮಾಣವಚನ ಬೋಧಿಸಬಹುದು. ಕಾನೂನು ಇರುವುದೇ ಹೀಗೆ; ಕಾನೂನು ತಜ್ಞರೊಂದಿಗೆ ನಾನು ಮಾತಾಡಿದ್ದೇನೆ ಎಂದು ವಿವರಿಸಿದರು. ಪ್ರಮಾಣವಚನ ವಿಳಂಬದ ಕುರಿತಾಗಿ ಪ್ರತಿಕ್ರಿಯೆ ನೀಡಿ, ಎಲ್ಲಿಯೂ ತಡವಾಗಿಲ್ಲ, ಸೋಮವಾರ ಬೆಳಗ್ಗೆ ಚುನಾವಣಾ ಆಯೋಗ ಆದೇಶಿಸಿದೆ. ಮಂಗಳವಾರ ಬೆಳಗ್ಗೆ ನಮ್ಮ ಕಚೇರಿಗೆ ಅರ್ಜಿ ಕೊಟ್ಟಿದ್ದಾರೆ. ಆದರೆ, ನಾನು ಊರಲ್ಲಿದ್ದೆ, ಬೇರೆ ಬೇರೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ನಮ್ಮ ಕಚೇರಿಗೆ ಅರ್ಜಿ ಕೊಟ್ಟು ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ನಾನು ಬೇರೆ ಬೇರೆ ಕೆಲಸದಲ್ಲಿದ್ದೆ, ಸಂವಿಧಾನಬದ್ಧವಾಗಿ ನಾನು ನನ್ನ ಕೆಲಸ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಕೋರ್ಟ್‌ಗೆ ಮೊರೆ: ಸಿಎಂ

ಪುಟ ೧➜ ಅಂದು ಫಲಿತಾಂಶ ಬರುವಾಗ ಬಿಜೆಪಿ ಸರ್ಕಾರ ಇತ್ತು. ಅಂಚೆ ಮತ ಪತ್ರಗಳನ್ನು ಎಲ್ಲಾ 12 ಮಂದಿ ಏಜೆಂಟರಿಗೆ ತೋರಿಸಿ,



ಅವುಗಳನ್ನು ಸಿಂಧುಗೊಳಿಸಲಾಗಿತ್ತು. ಆದರೆ ಈಗ ಆ ಮತಪತ್ರಗಳು ಹೇಗೆ ಅಸಿಂಧು ಆಗುತ್ತವೆ ಎಂದು ಕಿಡಿಕಾರಿದರು. ಚುನಾವಣಾ ಸಿಬ್ಬಂದಿ ಅಭ್ಯರ್ಥಿ ಜೀವರಾಜ್ ಜತೆ ಸೇರಿ ಅಂಚೆ ಮತ ತಿದ್ದಿದ್ದಾರೆ.

ಫಲಿತಾಂಶದ ದಿನ ಮತಪತ್ರದಲ್ಲಿ ಇಲ್ಲದ ಗೆರೆ ಈಗ ಹೇಗೆ ಬಂತು ಎಂದು ಪ್ರಶ್ನಿಸಿದರು. ಈ ವಿಚಾರದಲ್ಲಿ ನಾವು ಕೋರ್ಟ್ ಮೊರೆ ಹೋಗುತ್ತೇವೆ ಎಂದು ಹೇಳಿದರು. ಎರಡು ಕ್ಷೇತ್ರಗಳ ಚುನಾವಣೆ ಮುಗಿದಿರುವ ಕಾರಣ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣವೇ ಚುನಾವಣೆ ನಡೆಸುತ್ತೇವೆ ಎಂದು ತಿಳಿಸಿದರು.

ಪ್ರಮಾಣವಚನಕ್ಕೆ ಅವಕಾಶ ನೀಡುತ್ತೇವೆ. ಎರಡು ದಿನ ಬಿಟ್ಟು ಭೇಟಿ ಮಾಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನಮಗೆ ತಿಳಿಸಿದ್ದಿದ್ದರೆ ನಾವು ರಾಜ್ಯಪಾಲರ ಬಳಿಗೆ ಹೋಗುತ್ತಿರಲಿಲ್ಲ. ವಿಧಾನಸಭಾಧ್ಯಕ್ಷರು ಬೆಂಗಳೂರಿನಲ್ಲಿ ಲಭ್ಯವಿಲ್ಲದ ಕಾರಣ ಭೇಟಿ ಮಾಡಲು ಆಗಲಿಲ್ಲ.
■ ಡಿ.ಎನ್. ಜೀವರಾಜ್, ಶೃಂಗೇರಿ ಶಾಸಕ

ಒಂದು ಬಾರಿ ರಾಜ್ಯಪತ್ರದಲ್ಲಿ ಹೆಸರು ಪ್ರಕಟವಾದ ನಂತರ ಹಾಗೂ ಚುನಾವಣಾ ಆಯೋಗ ಪ್ರಮಾಣಪತ್ರ ನೀಡಿದ ಬಳಿಕ ಪ್ರಮಾಣವಚನ ಬೋಧಿಸಲೇಬೇಕು. ರಾಜ್ಯಪಾಲರು ಅಥವಾ ಅವರು ಸೂಚಿಸಿದ ವ್ಯಕ್ತಿ ಪ್ರಮಾಣವಚನ ಬೋಧಿಸಬಹುದು. ಕೊನೆ ಹಂತದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರೇ ಫಲಿತಾಂಶವನ್ನು ಒಪ್ಪಿಕೊಂಡು ಪ್ರಮಾಣವಚನ ಬೋಧಿಸಿದ್ದು ಸಂತಸ ತಂದಿದೆ.
■ ಆರ್. ಅಶೋಕ, ವಿಧಾನಸಭಾ ಪ್ರತಿಪಕ್ಷ ನಾಯಕ

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

ಪುಟ ೧➜ **ಬೆಂಬಲ ನಿರಾಕರಿಸಿದ ವಿಸಿಕೆ:** ಡಿಎಂಕೆ ಮೈತ್ರಿ ಭಾಗವಾದ ವಿಸಿಕೆ ಪಕ್ಷವು ಟಿವಿಕೆಗೆ ಬೆಂಬಲ ನೀಡಬೇಕೇ ಎಂಬುದರ ಕುರಿತು ಬುಧವಾರವಿಡೀ ಚರ್ಚಿಸಿ ಸಂಜೆ ವೇಳೆಗೆ ಟಿವಿಕೆಗೆ ಬೆಂಬಲ ನೀಡುವುದಿಲ್ಲ ಎಂದು ಘೋಷಿಸಿದೆ. ಇದಕ್ಕು ಮುನ್ನ ವಿಸಿಕೆ ಮುಖ್ಯಸ್ಥ ತೋಲ್ ತಿರುಮಾವಳವನ್ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಸಿ ತೀರ್ಮಾನಿಸಲಾಗುವುದು ಎನ್ನಲಾಗಿತ್ತು. ವಿಜಯ್ ನಮ್ಮ ಬೆಂಬಲ ಕೇಳಿದ್ದಾರೆ. ಪಕ್ಷದ ಹಿರಿಯ ನಾಯಕರ ಅಭಿಪ್ರಾಯ ಪಡೆದು ನಿರ್ಧಾರ ಕೈಗೊಳ್ಳುತ್ತೇವೆ ಎಂದು ಅವರು ಹೇಳಿದ್ದರು.

234 ಸದಸ್ಯರ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದಿದೆ. ಸರ್ಕಾರ ರಚನೆಗೆ 118 ಸ್ಥಾನಗಳ ಬಹುಮತ ಅಗತ್ಯವಿದೆ. ಪಕ್ಷ ಮೂಲಗಳ ಪ್ರಕಾರ, ವಿಜಯ್ ಅವರು ಮೇ 7ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಇತ್ತೀಚಿನ ಚುನಾವಣೆಯಲ್ಲಿ ಡಿಎಂಕೆ 59, ಎಐಎಡಿಎಂಕೆ 47, ಕಾಂಗ್ರೆಸ್ 5, ಪಿಎಂಕೆ 4, ಐಯುಎಂಎಲ್ 2, ಸಿಪಿಐ 2, ವಿಎಸಿಕೆ 2, ಸಿಪಿಐ(ಎಂ) 2 ಸ್ಥಾನಗಳನ್ನು ಪಡೆದಿವೆ. ಬಿಜೆಪಿ, ಡಿಎಂಡಿಕೆ ಮತ್ತು ಎಎಂಎಂಕೆ ತಲಾ ಒಂದು ಸ್ಥಾನ ಗೆದ್ದಿವೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

ಪುಟ ೧➜ ದಶಕಗಳಿಂದಲೂ ಪ್ರತಿಸ್ಪರ್ಧಿಗಳಾಗಿರುವ ಉಭಯ ಪಕ್ಷಗಳ ನಡುವೆ ಇಂತಹ ಚರ್ಚೆಗಳು ನಡೆಯುತ್ತಿರುವುದು ಅಪರೂಪದ ಬೆಳವಣಿಗೆಯಾಗಿದೆ.ಎಐಎಡಿಎಂಕೆ ಮೂಲಗಳು ಮಾತುಕತೆ ನಡೆದಿರುವುದನ್ನು ದೃಢಪಡಿಸಿದ್ದರೂ, ಯಾವುದೇ ಅಧಿಕೃತ ಒಪ್ಪಂದದ ಬಗ್ಗೆ ಇನ್ನೂ ಸ್ಪಷ್ಟನೆ ನೀಡಲಾಗಿಲ್ಲ, ಆದರೆ, ತಮಿಳುನಾಡಿನ ರಾಜಕೀಯದಲ್ಲಿ ಅಚ್ಚರಿಯ ತಿರುವಾಗಬಹುದಾದ ಈ ಒಕ್ಕೂಟದಲ್ಲಿ ಡಿಎಂಕೆ ಸೇರಲು ಸಿದ್ಧವಿದೆಯೇ ಎಂಬುದು ಅಸ್ಪಷ್ಟವಾಗಿದೆ.

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ

ಕಾಂಗ್ರೆಸ್ ಪಕ್ಷದ ಈ ನಿರ್ಧಾರವನ್ನು ಡಿಎಂಕೆ 'ಬೆನ್ನಿಗೆ ಇರಿದ ಕೆಲಸ' ಎಂದು ಬಣ್ಣಿಸಿದೆ. ಕಾಂಗ್ರೆಸ್ ಮತ್ತು ಡಿಎಂಕೆ ಪಾಲುದಾರಿಕೆ, 1971ರಿಂದ ಆರಂಭವಾಗಿತ್ತು. 2004 ರಿಂದ 2013 ರವರೆಗೆ ಯುಪಿಎ ಸರ್ಕಾರದ ಅವಧಿಯಲ್ಲೂ ಮುಂದುವರಿದಿತ್ತು. ಇತ್ತೀಚೆಗೆ 2016ರಲ್ಲಿ ಕಾಂಗ್ರೆಸ್ ಮತ್ತೆ ಡಿಎಂಕೆ ಜತೆ ಮೈತ್ರಿ ಮಾಡಿಕೊಂಡಿತ್ತು.

ಮೇ 9ಕ್ಕೆ ಸಿಎಂ ದಿಲ್ಲಿಗೆ

ಪುಟ ೧➜ ರಾಜ್ಯದ ವಿದ್ಯಮಾನಗಳನ್ನು ಗಮನಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್ ಕೂಡ ಸೂಕ್ತ ನಿರ್ಧಾರ ಬಂದಿದೆ ಎಂದು ಹೇಳಲಾಗುತ್ತಿದೆ.

ಯಾವಾಗ ಭೇಟಿ?: ಪಂಚ ರಾಜ್ಯಗಳ ಚುನಾವಣೆ ಪೈಕಿ ಕಾಂಗ್ರೆಸ್‌ಗೆ ಕೇರಳದಲ್ಲಿ ಗೆಲುವು ಬಿಟ್ಟರೆ, ಉಳಿದ ರಾಜ್ಯಗಳಲ್ಲಿ ಪಕ್ಷದ ಯಶಸ್ಸು ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ, ತಮಿಳುನಾಡಿನಲ್ಲಿ ಅಚ್ಚರಿಯ ಫಲಿತಾಂಶ ಬಂದಿರುವುದು ಮತ್ತು ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವ ಬಗ್ಗೆ ದಿಲ್ಲಿ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಕೇರಳದಲ್ಲಿ ಸಿಎಂ ಆಯ್ಕೆ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆಯುತ್ತಿರುವುದರಿಂದ ರಾಹುಲ್ ಗಾಂಧಿ ಸಮಯ ನೀಡಿದ ನಂತರವೇ ದಿಲ್ಲಿ ಭೇಟಿ ದಿನಾಂಕ ಅಂತಿಮಗೊಳ್ಳಲಿದೆ.

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

ಪುಟ ೧➜ ಕೊಟ್ಟರೆ ಹೋಗಿ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು. ರಾಹುಲ್ ಗಾಂಧಿಯರ ಅಪಾಯಿಂಟ್ ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನಾರಚನೆಯಾ? ಸಂಪುಟ ವಿಸ್ತರಣೆಯಾ ಯಾವ ವಿಷಯದ ಚರ್ಚೆ ಎಂಬುದು ಆಗ ಗೊತ್ತಾಗಲಿದೆ. ಅವರು ನನ್ನನ್ನು ಕರೆದೇ ಇಲ್ಲ ಎಂದಮೇಲೆ ಸಭೆಯ ಅಜೆಂಡಾ ಹೇಗೆ ಫಿಕ್ಸ್ ಆಗುತ್ತದೆ ಎಂದರು. ಸಚಿವ ಸತೀಶ್ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಎದ್ದಿರುವ ಗೊಂದಲಗಳನ್ನೆಲ್ಲ ಹೈಕಮಾಂಡ್ ಬೇಗ ಬಗೆಹರಿಸಬೇಕು ಎಂದು ಹೇಳಿರುವುದು ಅದು ಅವರ ಅಭಿಪ್ರಾಯ ಎಂದರು. ಬೇರೆ ಯಾರೋ ಏನೇನೊ ಮಾತನಾಡಿದರೆ ಅದು ಅವರ ವೈಯಕ್ತಿಕ, ನಮಗೆ ಹೈಕಮಾಂಡ್ ಮಾತೇ ಅಂತಿಮ ಎಂದು ಹೇಳಿದರು.

ಮೇ 10ಕ್ಕೆ ಬೆಂಗಳೂರಿಗೆ ಮೋದಿ

ಪುಟ ೧➜ ಇದೇ ಸಂದರ್ಭದಲ್ಲಿ ಅವರು ನೂತನವಾಗಿ ನಿರ್ಮಿಸಲಾದ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಅಲ್ಲದೆ, ವರ್ಷಪೂರ್ತಿ ನಡೆಯುವ ಪ್ರಮುಖ ದೇಶವ್ಯಾಪಿ ಸೇವಾ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಒಂದು ತಿಂಗಳ ಕಾಲ ನಡೆಯಲಿರುವ ಈ ಸಂಭ್ರಮಾಚರಣೆಯ ಅಂಗವಾಗಿ ಜಾಗತಿಕ ನಾಯಕತ್ವ ಸಂವಾದ ಮತ್ತು ಶೃಂಗಸಭೆಗಳಂತಹ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದೆ.

ಪ್ರತಿಯೊಬ್ಬರ ಮುಖದಲ್ಲೂ ಮುಗುಳ್ನಗೆಯನ್ನು ಕಾಣುವುದೇ ಆರೋಗ್ಯವಂತ ಸಮಾಜದ ಲಕ್ಷಣವಾಗಿದೆ. ಕಳೆದ 45 ವರ್ಷಗಳಿಂದ ನಾವು ಇದೇ ಗುರಿ ತಲುಪುವತ್ತ ಕಾರ್ಯಪ್ರವೃತ್ತರಾಗಿದ್ದೇವೆ.
■ ಶ್ರೀ ಶ್ರೀ ರವಿಶಂಕರ್ ಗುರೂಜಿ, ದಿ ಆರ್ಟ್ ಆಫ್ ಲಿವಿಂಗ್

ಕಿರುಸುದ್ದಿ

ಮೈಸೂರಿಗಿಂದು ಮೋಹನ್ ಭಾಗವತ್

ಮೈಸೂರು: ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಗುರುವಾರ ಮೈಸೂರಿಗೆ ಆಗಮಿಸಲಿದ್ದು, ನಗರದ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಸುತ್ತೂರು ಮಠದಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿದಲ್ಲಿ ರಾಷ್ಟ್ರೀಯ ಅಭಿವೃದ್ಧಿಗೆ



ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಮೋಹನ್ ಭಾಗವತ್ ಅವರು ಮಾತನಾಡಲಿದ್ದಾರೆ. ಬಳಿಕ ಪ್ರಶೋತ್ತರಕ್ಕೆ ಅವಕಾಶವಿದೆ. ಇದೇ ಸಂದರ್ಭದಲ್ಲಿ ಮುದ್ದೇನಹಳ್ಳಿ ಸತ್ಯಸಾಯಿ ಆಶ್ರಮದ ಸದ್ಗುರು ಶ್ರೀಮಧುಸೂದನ ಸಾಯಿ ಅವರು ನೀಡಿದ್ದ 14ನೇ ವಿಶೇಷ ಉಪನ್ಯಾಸದ ಆತ್ಮಾನೋ ಮೋಕ್ಷಾರ್ಥಂ ಜಗತ್ ಹಿತಾಯ ಚ ಕೃತಿಯನ್ನು ಬಿಡುಗಡೆ ಮಾಡುವರು. ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಬೆಳಗ್ಗೆ 9.15ರ ನಂತರ ಆಗಮಿಸುವವರು ಪಿಂಜರಾಪೋಲ್ ರಸ್ತೆ, ಅರಮನೆ ಪಂಚಗವಿಮಠದ ರಸ್ತೆಯ ಮೂಲಕ ಶ್ರೀಮಠವನ್ನು ತಲುಪಬಹುದಾಗಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನನ್ನ ಗೆಲುವಿಗಿಂತ ರಾಜ್ಯದ ಅಭಿವೃದ್ಧಿಗೆ ಒತ್ತು: ಕಿಮ್ಮನೆ

ಮಂಡ್ಯ: ರಾಜಕಾರಣಿಗಳು ತಮ್ಮ ಭವಿಷ್ಯಕ್ಕಿಂತ ಸಮಾಜದ ಹಾಗೂ ಜನರ ಭವಿಷ್ಯ ಮುಖ್ಯವೆಂಬುವಂತೆ ಕಾಣಬೇಕು ಅಥವಾ ನೋಡಬೇಕು. ನನ್ನ ಗೆಲುವು ಮುಖ್ಯವಾಗುವುದಿಲ್ಲ ಬದಲಿಗೆ ಕರ್ನಾಟಕದ ಅಭಿವೃದ್ಧಿಗೆ ನಿಲ್ಲುತ್ತೇನೆಂಬ ನಿಟ್ಟಿನಲ್ಲಿ ರಾಜಕಾರಣಿಗಳು ನಡೆದುಕೊಳ್ಳಬೇಕಿದೆ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅಭಿಪ್ರಾಯಪಟ್ಟರು. ನಗರದ ಕೆವಿಎಸ್ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ನಡೆದ ಎಸ್.ಎಂ.ಕೃಷ್ಣ ಪ್ರಶಸ್ತಿ–2026 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಸಾರ್ವಜನಿಕ ಬದುಕು ಅನುಭವಿಸಿದವರಿಗಷ್ಟೇ ಗೊತ್ತು. ಅದು ರಾಜಕಾರಣಿಗಳಿಗೆ ಹೆಚ್ಚು ಗೊತ್ತಿರುತ್ತದೆ. ಇದೆಲ್ಲವನ್ನೂ ಎಸ್.ಎಂ.ಕೃಷ್ಣ ಅವರು ಹೇಗೆ ನಿರ್ವಹಿಸಿದರು ಎಂಬ ಪ್ರಶ್ನೆ ಕಾಡುತ್ತಿದೆ. ಯುವ ಸಮೂಹವು ದೇಶದ ರಾಜಕಾರಣವನ್ನು ಹೇಗೆ, ಯಾವ ಕಡೆ ಕೊಂಡೊಯ್ಯಬೇಕೆಂದು ಆಲೋಚನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ಕೊಟ್ಟಿರುವ ಈ ಪ್ರಶಸ್ತಿಯನ್ನು ತೆಗೆದುಕೊಂಡಿದ್ದೇನೆ. ನನಗೆ ಯಾವ ವಿಷಯದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೀರೋ ಅದರ ನೆಲೆಗಟ್ಟಿನಲ್ಲಿ ನಂಬಿಕೆ ಉಳಿಸಿಕೊಳ್ಳುವೆ. ರಾಜಕಾರಣವನ್ನು ಹೋರಾಟದಿಂದಲೇ ಬದಲಾವಣೆ ಮಾಡುತ್ತೇವೆ ಎನ್ನುವುದನ್ನು ಬಿಡಬೇಕು. ಉದಾಹರಣೆಗೆ ಪ್ರಸ್ತುತ ತಮಿಳುನಾಡಿನ ರಾಜಕಾರಣ ನೋಡಿದರೆ ಬದಲಾವಣೆ ಬಯಸಿದ ಹಾಗೆ ಕಾಣಿಸುತ್ತಿದೆ. ಜಾತಿ ವ್ಯವಸ್ಥೆ, ಧಾರ್ಮಿಕ ಅಸಮಾನತೆಯನ್ನು ಶೇ.100 ರಷ್ಟು ವಿದ್ಯಾವಂತರೆ ಮಾಡುತ್ತಾರೆ. ಅದನ್ನು ಬಿಡಬೇಕು ಎಂದು ಅಭಿಪ್ರಾಯಪಟ್ಟರು.

ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ: ಸಚಿವ ಖಂಡ್ರೆ

ವನ್ಯಜೀವಿ ದಾಳಿ ತಡೆಗೆ ಕ್ರಮ

ದುಬಾರೆ (ಕೊಡಗು): ವನ್ಯಜೀವಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಜನರ ಅಮೂಲ್ಯ ಜೀವ, ಬೆಳೆ ಹಾನಿ ತಪ್ಪಿಸಲು ಆಯ್ದ ಪ್ರದೇಶದಲ್ಲಿ, ಆಯ್ದ ವನ್ಯಜೀವಿಗಳ ಸಂತಾನ ನಿಯಂತ್ರಣದ ಸಲಹೆಗಳು ಬಂದಿದೆ. ಈ ಬಗ್ಗೆ ಸಾರ್ವಜನಿಕವಾಗಿ ತಜ್ಞರ ಮಟ್ಟದಲ್ಲಿ ಚರ್ಚೆಯಾಗುವ ಅಗತ್ಯವಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.

ದುಬಾರೆಯಲ್ಲಿ ನೂತನ ತೂಗುಸೇತುವೆ ಮತ್ತು ಅಧಿಕಾರಿಗಳ ವಸತಿಗೃಹಕ್ಕೆ ಶಂಕುಸ್ಥಾಪನೆ ನೆರವೇರಿಸಿ, ನೂತನ ವಾಹನಗಳಿಗೆ ಹಸಿರು ನಿಶಾನೆ ತೋರಿ ಮಾತನಾಡಿದ ಅವರು, ಆನೆ–ಮಾನವ ಸಂಘರ್ಷ ನಿಯಂತ್ರಿಸಲು ತಜ್ಞರ ಸಮಿತಿ ರಚಿಸಲಾಗಿದ್ದು, ವರದಿಯೂ ಲಭ್ಯವಾಗಿದೆ. ಕಾಡಿನಂಚಿನ ಜನರು ಕೂಡಾ ಈ ಬಗ್ಗೆ ಸಲಹೆ ನೀಡಬೇಕು ಎಂದರು.

ರೈಲ್ವೆ ಬ್ಯಾರಿಕೇಡ್, ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ, ಅನುದಾನದ ಕೊರತೆಯೂ ಇಲ್ಲ, ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಆದಷ್ಟು ಶೀಘ್ರ ಹೆಚ್ಚಿನ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದರು.

ಪ್ರಥಮ ಆದ್ಯತೆ ನೀಡಿ: ಅರಣ್ಯವಾಸಿಗಳು ಮತ್ತು ಅರಣ್ಯದಂಚಿನ ಜನರು ದೀರ್ಘ ಕಾಲದಿಂದ ಅರಣ್ಯವನ್ನು ಸಂರಕ್ಷಿಸಿದ್ದಾರೆ. ಆದರೆ ಇಂದು ಮಾನವ–ವನ್ಯಜೀವಿ ಸಂಘರ್ಷದಿಂದ ಅಮೂಲ್ಯ ಜೀವಹಾನಿ ಆಗುತ್ತಿದ್ದು, ಅಧಿಕಾರಿ ಮತ್ತು ಸಿಬ್ಬಂದಿಗಳು ಜನರ ಜೀವ ಉಳಿಸಲು ಪ್ರಥಮ ಆದ್ಯತೆ ನೀಡಬೇಕು ಎಂದರು. ಪ್ರವಾಸಿಗರ ಅನುಕೂಲಕ್ಕಾಗಿ ಮತ್ತು ದುಬಾರೆ ಹಾಡಿಯಲ್ಲಿರುವ 150 ಮನೆಗಳ ನಿವಾಸಿಗಳಿಗೆ ತುರ್ತು ಸಂದರ್ಭದಲ್ಲಿ ನಗರಕ್ಕೆ ಬರಲು ಅನುಕೂಲವಾಗುವಂತೆ 7 ಕೋಟಿ 30 ಲಕ್ಷ ರೂ. ವೆಚ್ಚದಲ್ಲಿ ಗುಣಮಟ್ಟದ ತೂಗು ಸೇತುವೆ ನಿರ್ಮಿಸಲಾಗುತ್ತಿದೆ. ಈ ಮೂಲಕ ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸಲಾಗುತ್ತಿದೆ ಎಂದು ಸಚಿವರು ನುಡಿದರು.

ಕೊಡಗು ಜಿಲ್ಲೆ ಜಗತ್ತಿನ ಜೀವವೈವಿಧ್ಯತೆಯ ತಾಣ ಹಾಗೂ ಹಲವು ನದಿಗಳ ಮೂಲವಾದ ಪಶ್ಚಿಮಘಟ್ಟವನ್ನು ಒಳಗೊಂಡ ಸುಂದರ ಪ್ರದೇಶ. ಇಲ್ಲಿ ನೂರಾರು ಪ್ರಭೇದದ ಸಸ್ಯಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ, ಕೀಟ ಸಂಕುಲವಿರುವ ಸುಂದರ ಪರಿಸರದಲ್ಲಿರುವ ಇಲ್ಲಿನ ಜನರು ನಿಜಕ್ಕೂ ಅದೃಷ್ಟವಂತರು ಎಂದು ಈಶ್ವರ ಖಂಡ್ರೆ ಬಣ್ಣಿಸಿದರು.

ಇಂದಿರಾಗಾಂಧಿಪ್ರಧಾನಮಂತ್ರಿಗಳಾಗಿವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ತಂದ ಪರಿಣಾಮವಾಗಿ ಕಾಡು, ವನ್ಯಜೀವಿ ಉಳಿದಿದೆ. ಪರಿಸರ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದಾಗಿದ್ದು, ಕಾಡಿನಂಚಿನ ಜನರು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸಬೇಕು ಎಂದು ತಿಳಿಸಿದರು.

ಅರಣ್ಯ ಇಲಾಖೆ ಆನೆಗಳ ಚಲನವಲನದ ಬಗ್ಗೆ ನಿಗಾ ಇಡಲು ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುತ್ತಿದೆ. ನವೆಂಬರ್, ಡಿಸೆಂಬರ್ ಜನವರಿಯಲ್ಲಿ ಆನೆಗಳು ಕಾಡಿನಿಂದ ಹೊರಬರುತ್ತವೆ. ಆಗ ಸಂಘರ್ಷ ಹೆಚ್ಚಾಗುತ್ತದೆ, ಕಾರಣ ಆನೆಗಳು ತೆನೆ ತಿನ್ನಲು ಬರುತ್ತವೆ. ತೋಟದ ಮಾಲಕರು, ಜಮೀನು ಮಾಲಕರು ಕೂಡಾ ಆನೆಗಳ ವಿಚಾರದಲ್ಲಿ ಸೌಹಾರ್ದತೆಯಿಂದ ನಡೆದುಕೊಳ್ಳಬೇಕು ಎಂದರು.

ದುಬಾರೆ ಆನೆ ಶಿಬಿರಕ್ಕೆ 100 ವರ್ಷಗಳ ಇತಿಹಾಸವಿದೆ. ಇಲ್ಲಿ 15 ಕುಮ್ಕಿ ಆನೆಗಳಿದ್ದು, ದಸರಾ ಮಹೋತ್ಸವದಲ್ಲಿ, ವಿವಿಧ ಕಾರ್ಯಾಚರಣೆಗಳಲ್ಲಿ ಭಾಗಿಯಾಗುತ್ತಿವೆ. ಆನೆಗಳಿಗೆ ಪೂಜ್ಯ ಸ್ಥಾನ ಇದೆ. ಹೀಗಾಗಿ ನಾವು ವನ್ಯಜೀವಿಗಳ ಸಂರಕ್ಷಣೆಗೂ ಮುಂದಾಗಬೇಕು ಎಂದರು.

ಜನರನ್ನು ಹೆದರಿಸದಿರಿ: ಕಾಡಿನಂಚಿನ ಜನರೊಂದಿಗೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ಕಾನೂನು ಪಾಲಿಸಿ, ಜನರಿಗೆ ಅರಿವು ಮೂಡಿಸಿ, ಆದರೆ ಹೆದರಿಸಬೇಡಿ ಎಂದು ಕಿವಿ ಮಾತು ಹೇಳಿದರು. ಸೆಕ್ಷನ್ 4, ಡೀಮ್ಡ್ ಅರಣ್ಯ ಮೊದಲಾದ ವಿಚಾರಗಳ ಬಗ್ಗೆ ಶಾಸಕರು ಪ್ರಸ್ತಾಪಿಸಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದ ಅವರು, ಇಂದು ಯಸಳೂರಿನಲ್ಲಿ ಅರ್ಜುನ ಆನೆಯ ಸ್ಮಾರಕ ಉದ್ಘಾಟನೆ ಮಾಡಲಿರುವುದಾಗಿ ಸಚಿವರು ತಿಳಿಸಿದರು.

ಶಾಸಕ ಡಾ. ಮಂಥರ್ ಗೌಡ ಮಾತನಾಡಿ, ಅರಣ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ಈಶ್ವರ ಖಂಡ್ರೆ ತಂದಿದ್ದಾರೆ. ಕೊಡಗಿನಲ್ಲಿ ಆನೆ–ಮಾನವ ಸಂಘರ್ಷ ಹೆಚ್ಚಾಗಿದ್ದು, ತೋಟದ ಆನೆಗಳನ್ನು ಸ್ಥಳಾಂತರಿಸಲು ಕ್ರಮ ವಹಿಸಬೇಕು. ಬೆಳೆ ಹಾನಿಗೆ ಶೀಘ್ರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ, ಕಲ್ಲಹಳ್ಳಿ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮತ್ತಿತರರು ಪಾಲ್ಗೊಂಡಿದ್ದರು.




ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ

ಇಂದು ನಾವು ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಯ ಪರಿಣಾಮ ಎದುರಿಸುತ್ತಿದ್ದೇವೆ. ಬೆಂಗಳೂರು ನಿವೃತ್ತರ ಸ್ವರ್ಗವಾಗಿತ್ತು. ಆದರೆ ಇಂದು ತಾಪಮಾನ ಏರಿಕೆ ಆಗುತ್ತಿದೆ. ರಾಜ್ಯದಲ್ಲಿ ಬಿಸಿಲ ಝಳ ಹೆಚ್ಚಳವಾಗುತ್ತಿದೆ. ಇದೆಲ್ಲ ಕಾಡು ನಾಶದ ಪರಿಣಾಮವಾಗಿದೆ. ಹೀಗಾಗಿ ಅರಣ್ಯ, ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದು ಸಚಿವರು ನುಡಿದರು.

ಜಲ ಸೋರಿಕೆಯಾಗದಂತೆ ಎಚ್ಚರವಹಿಸಿ: ಬೋಸರಾಜು

ಬೆಂಗಳೂರು: ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಎಲ್ ನಿನೊ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ನಾವು ಇಂದಿನಿಂದಲೇ ಸಜ್ಜಾಗಬೇಕಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳು, ಪಿಕ–ಅಪ್ ಡ್ಯಾಂಗಳು ಹಾಗೂ ಕಿಂಡಿ ಅಣೆಕಟ್ಟುಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಸೋರಿಕೆಯಾಗದಂತೆ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ಸಚಿವ ಎನ್.ಎಸ್. ಬೋಸರಾಜು ನಿರ್ದೇಶನ ನೀಡಿದರು.



ಎಲ್ ನಿನೊ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಎದುರಾಗಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಜಲ ಭದ್ರತೆಯನ್ನು ಖಚಿತಪಡಿಸಲು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಸಚಿವರ ನೇತೃತ್ವದಲ್ಲಿ ಮಹತ್ವದ ತಾಂತ್ರಿಕ ಸಮಾಲೋಚನಾ ಹಾಗೂ ಪರಿಶೀಲನಾ ಸಭೆ ನಡೆಸಲಾಯಿತು. ತಜ್ಞರ ಸಲಹೆಗಳಿಗೆ ಸ್ಪಂದಿಸಿದ ಸಚಿವರು, ಇಲಾಖೆಯ ಅಧೀನದಲ್ಲಿರುವ ಎಲ್ಲಾ 18 ವಲಯಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಖಡಕ್ ಸೂಚನೆ ನೀಡಿದರು. ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳು, ಅಣೆಕಟ್ಟುಗಳು, ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಉಸ್ತುವಾರಿಯನ್ನು ಕಾರ್ಯಪಾಲಕ ಇಂಜಿನಿಯರ್‌ಗಳು ವಹಿಸಿಕೊಳ್ಳಬೇಕು. ಸಣ್ಣ ಪ್ರಮಾಣದ ನೀರಿನ ಸೋರಿಕೆಯೂ ಆಗದಂತೆ ತಕ್ಷಣವೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೇ ಈಗಾಗಲೇ ಇಲಾಖೆಯ ವತಿಯಿಂದ ಪ್ರಾರಂಭಿಸಲಾಗಿರುವ ನೀರಿದ್ದರೆ ನಾಳೆ ಯೋಜನೆಯನ್ನು ಜನರ ಬಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಇದರ ಜೊತೆಗೆ, ಸಾರ್ವಜನಿಕರಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ಅಗತ್ಯವನ್ನು ತಜ್ಞರು ಒತ್ತಿ ಹೇಳಿದರು.

ಕೇಂದ್ರ ಸಚಿವರ ಹೆಸರಿನಲ್ಲಿ ವಂಚನೆ

ಬೆಳಗಾವಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಕಲಿ ವಿಡಿಯೋ ಸೃಷ್ಟಿಸಿ ಬೆಳಗಾವಿ ನಗರದ ವಂಟ ಮೂರಿ ಕಾಲೋನಿಯ ಪ್ರಕಾಶ ಗುಬ್ಬಿ (76) ಅವರನ್ನು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಕೊಲ್ಹಾಪುರ ಮೂಲದ ಆದರ್ಶ ಆನಂದ ಹಾಗೂ ಮಹಾರಾಷ್ಟ್ರದ ಬುಲ್ಡಾಣಾ ಮೂಲದ ದಾಮೋದರ ಆರೋಪಿಗಳ ವಿರುದ್ಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಭಾರೀ ಲಾಭ ಪಡೆಯಿರಿ ಎಂದು ಮಾತನಾಡಿರುವ ಜಾಹೀರಾತು ವಿಡಿಯೋ ನೋಡಿ ಮರುಳಾಗಿ, ಹಣ ಹೂಡಿಕೆ ಮಾಡಿ ಸುಮಾರು 7.9 ಲಕ್ಷ ರೂ. ಕಳೆದುಕೊಂಡಿದ್ದಾರೆ.ಆಯುಕ್ತ ಭೂಷಣ ಬೊರಸೆ ಮಾಧ್ಯಮಗಳೊಂದಿಗೆ ಮಾತನಾಡಿ, ಹಿಂದಿನ ವರ್ಷ ನವೆಂಬರ್ ತಿಂಗಳಲ್ಲಿ ಪ್ರಕಾಶ ಗುಬ್ಬಿ ಅವರು ಯೂಟ್ಯೂಬ್‌ನಲ್ಲಿ ಒಂದು ವಿಡಿಯೋ ನೋಡಿದ್ದಾರೆ. ಅದರಲ್ಲಿ ನಿರ್ಮಲಾ ಸೀತಾರಾಮನ್ ಅವರನ್ನು ತೋರಿಸಿದ್ದಾರೆ.

ಕೈ ನಂಬಿಕೆಗೆ ಅರ್ಹವಲ್ಲ: ಅಶೋಕ

ಬೆಂಗಳೂರು: ಕಾಂಗ್ರೆಸ್ ಪಕ್ಷ ನಂಬಿಕೆಗೆ ಅರ್ಹವಲ್ಲ ಎಂಬುದು ಸ್ಪಷ್ಟವಾಗಿದೆ. ತಮಿಳುನಾಡಲ್ಲಿ ಡಿಎಂಕೆ ಜೊತೆ ಚುನಾವಣೆ ಎದುರಿಸಿದ ಕಾಂಗ್ರೆಸ್, ಈಗ ಅದೇ ಪಕ್ಷಕ್ಕೆ ಕೈ ಕೊಟ್ಟಿದೆ. ಇಂಡಿ ಒಕ್ಕೂಟದ ಮಿತ್ರಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಬೇಕಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಲ್ಲಿ ಕಾಂಗ್ರೆಸ್‌ನ ಬಣ್ಣ ಬಯಲಾಗಿದೆ. ಕಾಂಗ್ರೆಸ್‌ನ ಸ್ನೇಹ ಮಾಡಿದ ಡಿಎಂಕೆ ಪಕ್ಷದ ನಾಯಕರು ಈಗ ಸಪ್ಪೆ ಮೋರೆ ಹಾಕಿಕೊಂಡಿದ್ದಾರೆ. ಚುನಾವಣೆ ಬಳಿಕ ಒಂದಾಗಿ ಸರ್ಕಾರ ರಚಿಸಬೇಕೆಂದು ತೀರ್ಮಾನವಾಗಿತ್ತು. ಫಲಿತಾಂಶ ಬಂದ ನಂತರ ಕಾಂಗ್ರೆಸ್ ಗೆದ್ದೆತ್ತಿನ ಬಾಲ ಹಿಡಿದಿದೆ ಎಂದರು.

ಯಾವುದೇ ಸಿದ್ಧಾಂತವನ್ನು ಕಾಂಗ್ರೆಸ್ ಪಕ್ಷ ಅನುಸರಿಸುತ್ತಿಲ್ಲ, ಇವರನ್ನು ನಂಬಿದ ಡಿಎಂಕೆ ಬೆನ್ನಿಗೆ ಚೂರಿ ಹಾಕಿದ್ದು, ಕಾಂಗ್ರೆಸ್ ಕೈ ಕೊಡುವ ಪಕ್ಷ ಎಂದು ಜನರಿಗೆ ಗೊತ್ತಾಗಿದೆ. ಇಂಡಿ ಒಕ್ಕೂಟದಲ್ಲಿರುವ ಬೇರೆ ಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ ಹೇಗೆ ಕೈ ಕೊಡುತ್ತದೆ ಎಂದು ಗಮನಿಸಬೇಕಾಗುತ್ತದೆ. ಇಲ್ಲವಾದರೆ ಮಿತ್ರಪಕ್ಷಗಳಿಗೂ ಡಿಎಂಕೆ ಸ್ಥಿತಿಯೇ ಬರಲಿದೆ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಪ್ರವೇಶದ ಬಳಿಕ ಮುಖ್ಯಮಂತ್ರಿ ಕುರ್ಚಿ ಬಗ್ಗೆ ಯಾರೂ ಮಾತಾಡುತ್ತಿಲ್ಲ, ಡಿ.ಕೆ.ಶಿವಕುಮಾರ್ ಅವರ ಕನಸು ಭಗ್ನವಾಗಿದೆ ಎಂದರು.

ಜಗದೀಶ್ ಹಿರೇಮನಿ ನಿಧನ

ಬೆಂಗಳೂರು: ರಾಜ್ಯ ಬಿಜೆಪಿಯ ನಿಕಟಪೂರ್ವ ಕಾರ್ಯದರ್ಶಿಗಳಾಗಿದ್ದ ಜಗದೀಶ್ ಹಿರೇಮನಿ (52) ಅವರು ಬುಧವಾರ ಬೆಳಗ್ಗೆ 10.30ಕ್ಕೆ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಮೂಲತಃ ಬಾಗಲಕೋಟೆಯವರಾದ ಜಗದೀಶ್ ಹಿರೇಮನಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ವಿದ್ಯಾರ್ಥಿ ದಿಸೆಯಲ್ಲಿ ಸಾರ್ವಜನಿಕ ಜೀವನ ಪ್ರವೇಶಿಸಿದರು. ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಬಿಜೆಪಿಯ ಪ್ರಶಿಕ್ಷಣ ವಿಭಾಗದ ಸಂಚಾಲನಾ ತಂಡದಲ್ಲಿದ್ದರು.

ಹುಟ್ಟೂರಲ್ಲಿ ಇಂದು ಅಂತ್ಯಸಂಸ್ಕಾರ: ಮೃತರ ಪಾರ್ಥಿವ ಶರೀರವನ್ನು ಬುಧವಾರ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ನಂತರ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ಬಾಗಲಕೋಟೆಗೆ ಸಕಲ ಗೌರವದೊಂದಿಗೆ ಒಯ್ಯಲಾಯಿತು. ಗುರುವಾರ ಬಾಗಲಕೋಟೆಯಲ್ಲಿ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ಪೂರೈಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣ್ಯರಿಂದ ಅಂತಿಮ ದರ್ಶನ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಅವರು ಜಗದೀಶ್ ಹಿರೇಮನಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು.

ವಿಜಯೇಂದ್ರ ಸಂತಾಪ

ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ ಅವರ ನಿಧನವು ತೀವ್ರ ದುಃಖ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂತಾಪ ಸೂಚಿಸಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪೂರ್ಣಾವಧಿ ಕಾರ್ಯಕರ್ತರು, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯರೂ ಆದ ಅವರು ಎಸ್.ಐ.ಆರ್. ರಾಜ್ಯ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದರು. ಪಕ್ಷಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಸದಾ ಕ್ರಿಯಾಶೀಲವಾಗಿ ಇರುತ್ತಿದ್ದರು ಎಂದು ವಿವರಿಸಿದ್ದಾರೆ.

ಬಿಎಸ್‌ವೈರವರ ದೇವ ದುರ್ಲಭ ಕಾರ್ಯಕರ್ತ

ಬಿದರೆಪ್ರಕಾಶ್, ಸಂಪಾದಕರು, ಕಮಲ ಪಥ ಮತ್ತು ರಾಜ್ಯ ಸಂಚಾಲಕರು, ಪ್ರಕಾಶನ ಪ್ರಕೋಷ್ಠ



1997ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಸ್ಥಾನದ ಉಪಚುನಾವಣೆ. ಬಿಜೆಪಿಗೆ ಅಷ್ಟೇನೂ ಪೂರಕವಾದ ವಾತಾವರಣವಿಲ್ಲದಿದ್ದರೂ ಬಿಜೆಪಿಯ ಎಲ್ಲಾ ರಾಜ್ಯ ನಾಯಕರು ಚುನಾವಣೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದರು. ಅರವಿಂದ ಲಿಂಬಾವಳಿಯವರು ಚಿಕ್ಕನಾಯಕನಹಳ್ಳಿಯಲ್ಲಿಯೇ ಬೀಡು ಬಿಟ್ಟು ಚುನಾವಣೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಸಾಮಾನ್ಯ ಕಾರ್ಯಕರ್ತನಾಗಿದ್ದ ಹಿಂದುಳಿದ ವರ್ಗಕ್ಕೆ ಸೇರಿದ್ದ ಶಂಕರಪ್ಪನವರನ್ನು ಪಕ್ಷದ ಅಭ್ಯರ್ಥಿಯನ್ನಾಗಿಸಲಾಗಿತ್ತು. ಬಿ.ಎಸ್‌ಯಡಿಯೂರಪ್ಪ ಹಾಗೂ ಅನಂತಕುಮಾರ್ ಪ್ರಚಾರದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಯಡಿಯೂರಪ್ಪನವರಿಗೆ ಕಾರ್ಯಕರ್ತರ ಬಗ್ಗೆ ಇದ್ದ ಕಾಳಜಿಯ ದ್ಯೋತಕ ಎನ್ನಬಹುದಾದ ಘಟನೆಯಿದು. ಬಿಎಸ್‌ವೈರವರು ಕಾರ್ಯಕರ್ತರ ನಾಯಕ ಎನ್ನುವುದಕ್ಕೆ ಇದಕ್ಕಿಂತ ಮತ್ತೊಂದು ಉದಾಹರಣೆ ಇಲ್ಲ ಎನ್ನಬಹುದು.

ಸಣ್ಣ ಸಣ್ಣ ಊರಿಗೂ ಬಂದು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಿದ್ದ ಬಿಎಸ್‌ವೈರವರು ಅಂದು ತಾಲೂಕಿನ ಕರಡಾಳು ಗ್ರಾಮದ ಸಂತೆ ಮೈದಾನದಲ್ಲಿ ಭಾಷಣ ಮಾಡಬೇಕಿತ್ತು. ಭಾಷಣ ಮಾಡಲು ತಿಪಟೂರಿನ ನಾಯಕರಾಗಿದ್ದ ನಂಜಾಮರಿಯವರ ಟಾಟಾಮೊಬೈಲ್ ವಾಹನವನ್ನು ನಿಗದಿ ಪಡಿಸಿ ಅದಕ್ಕೆ ಧ್ವನಿವರ್ಧಕ ಹಾಗೂ ಹಿಂಬದಿಯಲ್ಲಿ ಕಮಲದ ಚಿನ್ಹೆಯನ್ನು ಅಳವಡಿಸಲಾಗಿತ್ತು. ನಿಗದಿಯಾದ ಸಮಯವಾದರೂ ಆ ವಾಹನ ಸಭೆ ನಡೆಯುವ ಸ್ಥಳಕ್ಕೆ ಬರಲೇ ಇಲ್ಲ. ಮೊಬೈಲ್ ಇಲ್ಲದಿದ್ದ ಆ ಕಾಲದಲ್ಲಿ ಸ್ಥಿರ ದೂರವಾಣಿ ಮೂಲಕ ಮಾತನಾಡಿದರೆ ಆಗಲೇ ತಿಪಟೂರಿನಿಂದ ವಾಹನ ಬಿಟ್ಟಿದೆ ಎಂಬ ಸಂದೇಶ ಬರುತ್ತಿತ್ತು. ಆದರೆ ವಾಹನ ಕರಡಾಳು ಗ್ರಾಮಕ್ಕೆ ಬಂದಿರಲಿಲ್ಲ, ಸಮಯವಾಯಿತು. ಬಿಎಸ್‌ವೈರವರು ಬಂದೇ ಬಿಟ್ಟರು. ಅವರು ಅಂದಿನ ಸಭೆಯನ್ನು ಮುಗಿಸಿ ಮತ್ತೊಂದು ಕಡೆಗೆ ಪ್ರಯಾಣಿಸಬೇಕಿತ್ತು. ಬಂದವರೇ ಅಲ್ಲಿನ ಕಾರ್ಯಕರ್ತರನ್ನು ಧ್ವನಿವರ್ಧಕ ಮತ್ತು ವಾಹನದ ಬಗ್ಗೆ ಪ್ರಸ್ತಾಪಿಸಿದರು. ಯಡಿಯೂರಪ್ಪನವರ ಸಿಟ್ಟನ್ನು ಅರಿತ ಎಲ್ಲರೂ ವಾಹನ ಬಂದಿಲ್ಲವೆಂಬ ವಿಷಯವನ್ನು ಹೇಳಲು ಹಿಂಜರಿಯುತ್ತಿದ್ದರು. ಕಾರ್ಯಕರ್ತರೊಬ್ಬರು ಧೈರ್ಯ ಮಾಡಿ ಇನ್ನೂ ವಾಹನ ಬಂದಿಲ್ಲವೆಂದು ಮೆಲುದನಿಯಲ್ಲಿ ಹೇಳಿದರು. ತರಾತುರಿಯಲ್ಲಿದ್ದ ಯಡಿಯೂರಪ್ಪನವರಿಗೆ ಸಿಟ್ಟು ನೆತ್ತಿಗೇರಿತು. 'ಸರಿಯಾಗಿ ಗಮನಿಸಬೇಕಲ್ಲವೇ, ಯಾರು ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವವರು?' ಎಂಬ ಆಕ್ರೋಶ ಅವರಿಂದ ಹೊರಬಂತು. ಆದರೆ ಯಾರಿಗೂ ಹೇಳಲು ಧೈರ್ಯವಿಲ್ಲ. ಮೆಲ್ಲಗೆ ಅಲ್ಲಿದ್ದ ಕಾರ್ಯಕರ್ತನೊಬ್ಬನ ಕಡೆಗೆ ಎಲ್ಲರೂ ತಿರುಗಿದರು. ಆ ಕಾರ್ಯಕರ್ತ ಬೆವತು ಹೋದ. 'ಸರಿಯಾಗಿ ಯೋಜನೆ ಮಾಡಬೇಕಲ್ಲವೆ?' ಎಂದು ಅವನನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಜವಾಬ್ದಾರಿ ಹೊತ್ತ ಆ ಕಾರ್ಯಕರ್ತ ಯಡಿಯೂರಪ್ಪನವರ ಆಕ್ರೋಶ ಕಂಡು ಬೆವತು ಹೋದ. ಅವರಾಡಿದ ನುಡಿಗಳು ಅವನ ಕಣ್ಣನ್ನು ತೇವವಾಗಿಸಿತು. ಇಷ್ಟೆಲ್ಲಾ ಆಗುವ ವೇಳೆಗೆ ವಾಹನ ಬಂತು. ಯಡಿಯೂರಪ್ಪನವರು ಭಾಷಣ ಮಾಡಿ ನಂತರ ತೆರಳಿದರು.





ರಾತ್ರಿ ಅವಲೋಕನ ಬೈಠಕ್. ಬಿಎಸ್‌ವೈರವರೂ ಉಪಸ್ಥಿತರಿದ್ದರು. ಬೆಳಿಗ್ಗೆ ಯಡಿಯೂರಪ್ಪನವರ ಕಾರ್ಯಕ್ರಮಕ್ಕೆ ಧ್ವನಿವರ್ಧಕದ ವಾಹನ ತಡವಾದ ಕಾರಣ ಪ್ರಸ್ತಾಪವಾಯಿತು. ಮಾರ್ಗ ಮಧ್ಯದಲ್ಲಿ ಆ ವಾಹನದ ಮುಂದಿನ ಚಕ್ರ ಪಂಚರ್ ಆಗಿ ಅದನ್ನು ಬದಲಾಯಿಸಿಕೊಂಡು ಬರಬೇಕಾಗಿದ್ದರಿಂದ ಆ ವಾಹನ ತಡವಾಯಿತು ಎಂಬ ವಿಷಯ ಯಡಿಯೂರಪ್ಪನವರಿಗೆ ಗೊತ್ತಾಯಿತು. ಬೆಳಿಗ್ಗೆ ಅವರಿಂದ ಬೈಯಿಸಿಕೊಂಡ ಕಾರ್ಯಕರ್ತನೂ ಅಲ್ಲಿಯೇ ಇದ್ದ. ಆದರೆ ಬೆಳಿಗ್ಗೆ ಯಡಿಯೂರಪ್ಪನವರ ಸಿಟ್ಟನ್ನು ನೋಡಿದ್ದ ಅವನಿಗೆ ಅವರೆದುರು ಬರಲು ಅಳುಕು ಕಾಡುತ್ತಿತ್ತು. ಬೈಠಕ್ ಮುಗಿಯಿತು. ಯಡಿಯೂರಪ್ಪನವರು ತಮ್ಮ ಮುಂದೆ ಕಾಣಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದ ಆ ಕಾರ್ಯಕರ್ತನನ್ನು ಗಮನಿಸಿದರು. ಅವನ ಬಳಿಗೇ ಬಂದರು. ಕಾರ್ಯಕರ್ತನ ಹೆಗಲ ಮೇಲೆ ಕೈಹಾಕಿದರು. ಬೆಳಿಗ್ಗೆ ನಡೆದ ಘಟನೆಯ ಬಗ್ಗೆ ನಿನ್ನದೇನೂ ತಪ್ಪಿಲ್ಲ, ಬೇಜಾರು ಮಾಡಿಕೊಳ್ಳಬೇಡ ಎಂದರು. ಮತ್ತೆರಡು ಸಾಂತ್ವನದ ಮಾತುಗಳು ಅವರ ಬಾಯಿಯಿಂದ ಬಂತು. ಕಾರ್ಯಕರ್ತರ ಬಗ್ಗೆ ಯಡಿಯೂರಪ್ಪನವರ ಬಗ್ಗೆ ಇದ್ದ ಕಳಕಳಿಗೆ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಿಲ್ಲ ಎನಿಸುತ್ತದೆ. ಅಷ್ಟೊಂದು ದೊಡ್ಡ ನಾಯಕರು ನಡೆದ ಸಣ್ಣ ಘಟನೆಯನ್ನೂ ಮತ್ತು ಆ ಕಾರ್ಯಕರ್ತನನ್ನೂ ನೆನಪಿನಲ್ಲಿಟ್ಟುಕೊಂಡು ರಾತ್ರಿ ಕಾರ್ಯಕರ್ತನಿಗೆ ಸಾಂತ್ವನ ಹೇಳಬೇಕಿರಲಿಲ್ಲ, ಆದರೆ ಯಡಿಯೂರಪ್ಪನವರು ಕಾರ್ಯಕರ್ತರ ನಾಯಕ. ಅದಕ್ಕಾಗಿಯೇ ಬೆಳಿಗ್ಗೆ ಅವನದಲ್ಲದ ಕಾರಣಕ್ಕೆ ಬೈಸಿಕೊಂಡ ಕಾರ್ಯಕರ್ತನ ಬಗ್ಗೆ ಕಾಳಜಿಯಿತ್ತು. ಇದೇ ಅವರ ದೊಡ್ಡಗುಣ. ನೋವನ್ನು ಅನುಭವಿಸಿದ, ನಂತರ ಯಡಿಯೂರಪ್ಪನವರ ಸಾಂತ್ವನದಿಂದ ಸಂತುಷ್ಟಗೊಂಡ ತಿಪಟೂರು ತಾಲೂಕು ಬಿಳಿಗೆರೆ ಗ್ರಾಮದ ಕಾರ್ಯಕರ್ತ ಪ್ರತಾಪ್ ಸಿಂಗ್ ಈ ಘಟನೆಯನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ.ಬಿಜೆಪಿಯಲ್ಲಿ ಕಾರ್ಯಕರ್ತ ಎಂಬ ಪದಕ್ಕೆ ಅರ್ಥ, ಮಹತ್ವ ತಂದು ಕೊಟ್ಟ ಅನೇಕರಿದ್ದಾರೆ. ಆದರೆ ಕಾರ್ಯಕರ್ತನಿಗೆ ದೇವದುರ್ಲಭ ಎಂದು ಗುಣವಾಚನವನ್ನಿಟ್ಟವರು ಯಡಿಯೂರಪ್ಪನವರೇ. ಅವರು ಮಾಡಿದ ಯಾವುದೇ ಸಾರ್ವಜನಿಕ ಭಾಷಣಗಳಲ್ಲಿ ಈ ಗುಣವಾಚಕದಿಂದ ಕಾರ್ಯಕರ್ತನನ್ನು ಸಂಭೋಧಿಸದೆ ಇರುತ್ತಿರಲಿಲ್ಲ. ಕಾರ್ಯಕರ್ತರೆಲ್ಲರೂ ಯಡಿಯೂರಪ್ಪನವರನ್ನು ದೇವದುರ್ಲಭ ನಾಯಕನೆಂದರೆ, ಸ್ವತಃ ಯಡಿಯೂರಪ್ಪನವರು ಬಿಜೆಪಿ ಕಾರ್ಯಕರ್ತರನ್ನೇ ದೇವದುರ್ಲಭ ಕಾರ್ಯಕರ್ತರು ಎನ್ನುತ್ತಿದ್ದರು.

ರಾಜಕೀಯದ ಮೆಟ್ಟಿಲು ಏರುವುದು ಅನೇಕರಿಗೆ ಸಾಧ್ಯ. ಆದರೆ ಆ ಮೆಟ್ಟಿಲ ಕೆಳಗೆ ನಿಂತಿರುವ ಅಸಂಖ್ಯಾತ ಕಾರ್ಯಕರ್ತರ ಬೆವರನ್ನು, ನೋವನ್ನು, ತ್ಯಾಗವನ್ನು ಅರ್ಥ ಮಾಡಿಕೊಳ್ಳುವ ನಾಯಕರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಬಿ.ಎಸ್. ಯಡಿಯೂರಪ್ಪನವರು ಅಂಥ ಅಪರೂಪದ ನಾಯಕ. ಅವರಿಗೆ ಕಾರ್ಯಕರ್ತರು ಕೇವಲ ಮತ ಕ್ರೋಢೀಕರಿಸುವ ಸಾಧನಗಳು ಮಾತ್ರವಲ್ಲ, ಕಾರ್ಯಕತರು ಅವರ ಕುಟುಂಬ, ಅವರ ಶಕ್ತಿ, ಅವರ ಸ್ಫೂರ್ತಿ. ಇದು ಅವರ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡ ಕಾರ್ಯಪದ್ಧತಿ. ಏಕೆಂದರೆ ಯಡಿಯೂಯುಪ್ಪನವರು ಕಾರ್ಯಕರ್ತರಾಗಿ ನಾಯಕರಾದವರೇ. ಅವರ ರಾಜಕೀಯ ಜೀವನ ಆರಂಭಗೊಂಡಿದ್ದು ಸಭೆ–ಸಮಾರಂಭಗಳಲ್ಲಿ ಭಾಷಣ ಮಾಡುವ ಮೂಲಕ ಅಲ್ಲ, ಬದಲಾಗಿ ಬೀದಿ ಬೀದಿ ತಿರುಗಿ ಕಾರ್ಯಕರ್ತರೊಂದಿಗೆ ಕಷ್ಟ–ಸುಖ ಹಂಚಿಕೊಳ್ಳುವ ಮೂಲಕ. ಅವರು ಸ್ವತಃ ತಳಮಟ್ಟದಿಂದ ಬಂದ ಕಾರಣ, ಆ ಮಟ್ಟದ ಕಾರ್ಯಕರ್ತರ ಸಂಕಟ ಅವರಿಗೆ ಚೆನ್ನಾಗಿ ಅರ್ಥವಾಗುತ್ತಿತ್ತು.

ಯಡಿಯೂರಪ್ಪನವರ ಅದ್ಭುತ ಗುಣ ಎಂದರೆ ಅವರ ಸ್ಮರಣಶಕ್ತಿ. ಒಮ್ಮೆ ಭೇಟಿಯಾದ ಕಾರ್ಯಕರ್ತನ ಹೆಸರು, ಅವನ ಊರು, ಅವನ ಕುಟುಂಬದ ವಿಷಯ – ಇವೆಲ್ಲ ಅವರ ಮನಸ್ಸಿನ ಮೂಲೆಯಲ್ಲಿ ಭದ್ರವಾಗಿ ಕುಳಿತಿರುತ್ತಿದ್ದವು. ವರ್ಷಗಳ ನಂತರ ಭೇಟಿಯಾದಾಗಲೂ ಅವರ ಹೆಸರು ಹೇಳಿ ಮಾತನಾಡಿಸುತ್ತಿದ್ದರು. ಈ ಒಂದು ಗುಣ ಕಾರ್ಯಕರ್ತರ ಹೃದಯದಲ್ಲಿ ಅಪಾರ ವಿಶ್ವಾಸ ಬಿತ್ತುತ್ತಿತ್ತು. 'ನಾಯಕ ನಮ್ಮನ್ನು ಮರೆತಿಲ್ಲ' ಎಂಬ ಭಾವನೆ ಒಬ್ಬ ಕಾರ್ಯಕರ್ತನಿಗೆ ಎಷ್ಟು ಶಕ್ತಿ ಕೊಡುತ್ತದೆ ಎಂಬುದನ್ನು ಯಡಿಯೂರಪ್ಪ ಅರ್ಥ ಮಾಡಿಕೊಂಡಿದ್ದರು. ಅದಕ್ಕಾಗಿ ಅವರು ಉದ್ದೇಶಪೂರ್ವಕವಾಗಿಯೇ ಈ ವೈಯಕ್ತಿಕ ಸಂಪರ್ಕ ಕಾಪಾಡಿಕೊಳ್ಳುತ್ತಿದ್ದರು.

ಯಡಿಯೂರಪ್ಪ ಕಾರ್ಯಕರ್ತರ ಬೆಳವಣಿಗೆಗೆ ಕೊಟ್ಟ ಮಹತ್ವ ಅಪ್ರತಿಮ. ಅವರು ನಂಬಿದ್ದು – ಒಬ್ಬ ಸಮರ್ಥ ಕಾರ್ಯಕರ್ತ ಇಂದಿನ ಕಾರ್ಯದರ್ಶಿಯಾದರೆ, ನಾಳೆ ಅವನು ಮಂಡಲ ಅಧ್ಯಕ್ಷ, ನಂತರ ಜಿಲ್ಲಾ ಪದಾಧಿಕಾರಿ, ಒಂದಿನ ಶಾಸಕ ಕೂಡ ಆಗಬಲ್ಲ ಎಂದು. ಯುವ ಕಾರ್ಯಕರ್ತರನ್ನು ಗುರುತಿಸಿ, ಅವರಿಗೆ ಜವಾಬ್ದಾರಿ ನೀಡಿ, ವೇದಿಕೆ ಕೊಡುತ್ತಿದ್ದರು. ಸಭೆಗಳಲ್ಲಿ ಹಿರಿಯ ನಾಯಕರ ಜೊತೆ ಕೂರಿಸಿ ಅನುಭವ ಕೊಡಿಸುತ್ತಿದ್ದರು. 'ನೀನು ಮಾಡಬಲ್ಲೆ' ಎಂದು ಧೈರ್ಯ ಹೇಳುತ್ತಿದ್ದರು. ಈ ಪ್ರೋತ್ಸಾಹ ಅನೇಕ ಕಾರ್ಯಕರ್ತರನ್ನು ದೊಡ್ಡ ನಾಯಕರನ್ನಾಗಿ ರೂಪಿಸಿತು.

ಯಡಿಯೂರಪ್ಪ ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಬಾರಿ ಕಷ್ಟದ ಸಮಯ ಎದುರಿಸಿದ್ದಾರೆ – ಚುನಾವಣೆ ಸೋಲು, ಪಕ್ಷದ ಒಳ ಜಗಳ, ಸರ್ಕಾರ ಉರುಳಿಸುವ ಪ್ರಯತ್ನ, ನ್ಯಾಯಾಲಯದ ಮೆಟ್ಟಿಲೇರಬೇಕಾದ ಪ್ರಸಂಗ. ಇಂಥ ಕ್ಷಣಗಳಲ್ಲಿ ಕಾರ್ಯಕರ್ತರು ಮಾತ್ರ ಅವರ ಜೊತೆ ದೃಢವಾಗಿ ನಿಂತರು. ಅದೇ ರೀತಿ ಯಡಿಯೂರಪ್ಪ ಕೂಡ ಕಾರ್ಯಕರ್ತರ ಕಷ್ಟ ಕಾಲದಲ್ಲಿ ಕೈ ಬಿಡಲಿಲ್ಲ. ಇದು ಒಂದು ಭಾವನಾತ್ಮಕ ಬಂಧವನ್ನು ನಿರ್ಮಿಸಿತು – ಇದು ಕೇವಲ ರಾಜಕೀಯ ಸಂಬಂಧ ಮಾತ್ರವಲ್ಲ, ಮಾನವೀಯ ಸಂಬಂಧ.

ಯಡಿಯೂರಪ್ಪನವರು ಸ್ವತಃ ಭಾವುಕ ಮನಸ್ಸಿನ ವ್ಯಕ್ತಿ. ಅವರ ಭಾಷಣದಲ್ಲಿ ಅದು ವ್ಯಕ್ತವಾಗುತ್ತಿತ್ತು. ಈ ಭಾವನಾತ್ಮಕ ಸಂಪರ್ಕ ಕಾರ್ಯಕರ್ತರ ಮನಸ್ಸಿನಲ್ಲಿ ಶಾಶ್ವತ ನಿಷ್ಠೆ ಬಿತ್ತಿತು. ರಾಜಕಾರಣದಲ್ಲಿ ಭಾವನೆಗಳೆಂದೂ ದೌರ್ಬಲ್ಯವಲ್ಲ ಎಂದು ಭಾವಿಸಿ ಅದನ್ನು ಶಕ್ತಿಯಾಗಿಸಿಕೊಂಡವರು ಯಡಿಯೂರಪ್ಪನವರು. ನಾಯಕ ಕಾರ್ಯಕರ್ತನಿಗಾಗಿ ಮಿಡಿದಾಗ ಕಾರ್ಯಕರ್ತ ಜೀವ ಕೊಡಲು ಸಿದ್ಧನಾಗುತ್ತಾನೆ. ಇದು ಯಡಿಯೂರಪ್ಪನವರ ರಾಜಕೀಯ ಜೀವನದಲ್ಲಿ ಜೊತೆಯಾಗಿಸಿಕೊಂಡ ಸತ್ಯದ ಸಂಗತಿ. ಅವರ ಮತ್ತು ಕಾರ್ಯಕರ್ತರ ನಂಟು ಕೇವಲ ರಾಜಕೀಯ ಸಂಬಂಧ ಅಲ್ಲ – ಅದೊಂದು ಭಾವನಾತ್ಮಕ ಕುಟುಂಬ ಸಂಬಂಧ. ಒಂದು ಕಡೆ ನಾಯಕ ತನ್ನ ಕಾರ್ಯಕರ್ತನನ್ನು ಮಗನಂತೆ ನೋಡಿಕೊಂಡರೆ, ಇನ್ನೊಂದು ಕಡೆ ಕಾರ್ಯಕರ್ತ ನಾಯಕನನ್ನು ತಂದೆಯಂತೆ ಗೌರವಿಸಿದ ರಾಜಕಾರಣದ ಅಪರೂಪದ ಮಾದರಿ. ಇದು ಪ್ರತಿಯೊಬ್ಬ ರಾಜಕೀಯ ನಾಯಕನಿಗೂ ಅನುಕರಣೀಯ.

ವರ್ಷ ಪೂರ್ತಿ ಕಾರ್ಯಕರ್ತರ ಜೊತೆ

ಒಬ್ಬ ಸಾಮಾನ್ಯ ಕಾರ್ಯಕರ್ತ ರಾತ್ರಿ ಊರು ಸುತ್ತಿ, ಪೋಸ್ಟರ್ ಹಚ್ಚಿ, ಮೀಟಿಂಗ್ ಜೋಡಿಸಿ ಆಯಾಸಗೊಂಡಾಗ – ಅವನ ಮನೆಯ ಸ್ಥಿತಿ ಏನಿರಬಹುದು ಎಂದು ಯಡಿಯೂರಪ್ಪ ಯೋಚಿಸುತ್ತಿದ್ದರು. ಅದಕ್ಕೇ ಅವರು ಚುನಾವಣಾ ಕಾಲದಲ್ಲಿ ಮಾತ್ರವಲ್ಲ, ವರ್ಷ ಪೂರ್ತಿ ಕಾರ್ಯಕರ್ತರ ಜೊತೆ ಇರುತ್ತಿದ್ದರು. ಕಾರ್ಯಕರ್ತರ ಸಮಸ್ಯೆಗಳನ್ನು ಕೇಳಿ ತಮ್ಮ ಸಹಾಯಕರಿಗೆ ನೋಟ್ ಮಾಡಿಸಿ ಮರೆತುಬಿಡುವ ನಾಯಕರುಗಳ ಮಧ್ಯೆ, ಅವನ ಸಮಸ್ಯೆಗಳಿಗೆ ಸ್ಪಂದಿಸಿ ಮಾಡಬೇಕಾದ ಸಹಾಯವನ್ನು ತಕ್ಷಣ ಮಾಡಿಸುತ್ತಿದ್ದರು. ಬಿಜೆಪಿಯ ಬಹುತೇಕ ಕಾರ್ಯಕರ್ತರಿಗೆ ಬಿಎಸ್‌ವೈರವರಿಂದ ತಮ್ಮ ಮನೆಯ ಶುಭದಲ್ಲಿ ಶುಭಾಶಯ, ಸಂಕಷ್ಟದಲ್ಲಿ ಸಾಂತ್ವನ ಯಾವಾಗಲೂ ಇರುತ್ತಿತ್ತು. ಕಾರ್ಯಕರ್ತ ಬೆಳೆದರೆ ಪಕ್ಷ ಬೆಳೆಯುತ್ತದೆ. ಪಕ್ಷ ಬೆಳೆದರೆ ನಾವು ಬೆಳೆಯುತ್ತೇವೆ. ಅದಕ್ಕಾಗಿ ನನ್ನ ಕಾರ್ಯಕರ್ತ ಯಾವತ್ತೂ ನನಗೆ ಮೊದಲು. ಇದು ಅವರು ಸಂಘಟನೆಯ ವೈಚಾರಿಕ ಸಿದ್ಧಾಂತದೊಂದಿಗೆ ಅಳವಡಿಸಿಕೊಂಡಿದ್ದ ಮತ್ತೊಂದು ಸಿದ್ಧಾಂತ.

ಸಂಪಾದಕೀಯ

ಪಥದರ್ಶಿ ಕಾರ್ಯಾಚರಣೆ

ಕೆಲವು ಸೈನಿಕ ಕಾರ್ಯಾಚರಣೆಗಳು ಭಾರತದ ಇತಿಹಾಸದಲ್ಲಿ ಅಚ್ಚಳಿಯದ ನೆನಪಾಗಿ ಉಳಿದುದಿದೆ. ದೇಶದ ಗತಿಯನ್ನೆ ಬದಲಿಸಿದ್ದಿದೆ. ಭವಿಷ್ಯದ ಕಾರ್ಯಾಚರಣೆಗಳಿಗೆ ಮಾದರಿಯಾಗಿ ನಿಂತುದಿದೆ. 'ಆಪರೇಷನ್ ಸಿಂದೂರ್' ಕೂಡಾ ನಿಶ್ಚಿತವಾಗಿ ಅದರಲ್ಲೊಂದು. ಒಂದು ವರ್ಷದ ಹಿಂದೆ ಇದೇ ದಿನ ಆರಂಭಿಸಿದ ಆಪರೇಷನ್ ಸಿಂದೂರ್ ಕಾರ್ಯಾಚರಣೆಯು ನೆರೆಯ ಪಾಕಿಸ್ತಾನಕ್ಕೆ ಮತ್ತು ಪಾಕ್ ಪ್ರೇರಿತ ಭಯೋತ್ಪಾದಕರಿಗೆ ಎಂದೂ ಮರೆಯಲಾರದ ಪಾಠವೊಂದನ್ನು



ಕಲಿಸಿದ್ದಷ್ಟೇ ಅಲ್ಲದೆ, ಜಗತ್ತಿಗೂ ಭಾರತದ ಸೈನಿಕ ಶಕ್ತಿ ಸಾಮರ್ಥ್ಯದ ಅರಿವು ಮಾಡಿಕೊಟ್ಟಿತು. ಭಾರತದ ವಿದೇಶಾಂಗ ನೀತಿಯಲ್ಲಿ ಹಾಗೂ ಭಯೋತ್ಪಾದನಾ ವಿರೋಧಿ ನೀತಿಯಲ್ಲಿ ಕೂಡಾ ಮಹತ್ತರ ಬದಲಾವಣೆಯನ್ನು ಸಂಕೇತಿಸಿತು. ಪಾಕಿಸ್ತಾನದ 'ಪರಮಾಣು ಬ್ಲಾಕ್ ಮೇಲ್'ನ್ನು ತಾನು ಲೆಕ್ಕಿಸುವುದೇ ಇಲ್ಲವೆಂಬ ಸ್ಪಷ್ಟ ಸಂದೇಶ ಸಾರಿತು. ದೇಶದ ಹಿತಾಸಕ್ತಿಯ ವಿಷಯ ಬಂದಾಗ ಯಾವುದೇ ಜಾಗತಿಕ ಒತ್ತಡಕ್ಕೂ ಮಣಿಯುವುದಿಲ್ಲವೆಂಬ ಗಟ್ಟಿ ನಿಲುವನ್ನು ಪ್ರದರ್ಶಿಸಿತು.

ಪಹಲ್ಗಾಂನಲ್ಲಿ ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು 26 ಮಂದಿ ಅಮಾಯಕ ಪ್ರವಾಸಿಗರನ್ನು ಕ್ರೂರವಾಗಿ ಹತ್ಯೆಗೈದಾಗ ಭಾರತದ ತಾಳ್ಮೆಯ ಕಟ್ಟೆಯೊಡೆದುದು ಸಹಜವೇ ಆಗಿತ್ತು. ಹಾಗಾಗಿ ಭಾರತದ ಪ್ರತಿಕ್ರಿಯೆ ಕೂಡಾ ಅಷ್ಟೇ ಕಠೋರವಾಗಿತ್ತು. 2025ರ ಮೇ 7ರಂದು ಪಾಕಿಸ್ತಾನದ 9 ಭಯೋತ್ಪಾದಕರ ನೆಲೆಗಳ ಮೇಲೆ ಕ್ಷಿಪಣಿ ದಾಳಿ ಮತ್ತು ಡ್ರೋನ್ ದಾಳಿ ನಡೆಸಲಾಯಿತು. ಅದುವರೆಗೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಾತ್ರ ಸರ್ಜಿಕಲ್ ದಾಳಿ ನಡೆಸಿದ್ದ ಭಾರತ ಈ ಬಾರಿ ಪಾಕಿಸ್ತಾನದ ಪಂಜಾಬ್ ಪ್ರಾಂತಕ್ಕೂ ನುಗ್ಗಿ ದಾಳಿ ನಡೆಸಿತು. ಆರಂಭದಲ್ಲಿ ಪಾಕಿಸ್ತಾನದ ಮಿಲಿಟರಿ ಗುರಿಗಳ ಮೇಲೆ ದಾಳಿ ನಡೆಸಲಿಲ್ಲವಾದರೂ, ಪಾಕಿಸ್ತಾನವು ಭಾರತದ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಲಾರಂಭಿದ ಬಳಿಕ ಭಾರತವು ಪಾಕಿಸ್ತಾನದ ಮಿಲಿಟರಿ ಕೇಂದ್ರಗಳ ಮೇಲೂ ದಾಳಿ ನಡೆಸಿತು. ಪಾಕಿಸ್ತಾನದ ಪರಮಾಣು ಕಾರ್ಯಕ್ರಮದ ಕೇಂದ್ರವಾದ ನೂರ್ ಖಾನ್ ನೆಲೆಯ ಮೇಲೂ ಕ್ಷಿಪಣಿ ದಾಳಿ ನಡೆಸಲಾಯಿತು. ಭಾರತದ 88 ಗಂಟೆಗಳ ಕಾರ್ಯಾಚರಣೆ ಅದೆಷ್ಟು ಅತ್ಯುಗ್ರವಾಗಿತ್ತೆಂದರೆ ಪಾಕಿಸ್ತಾನವು ಮೊಣಕಾಲೂರಿ ಸಮರ ನಿಲ್ಲಿಸಲು ಕೋರಿಕೊಂಡಿತು. ಕದನವಿರಾಮ ಘೋಷಿಸುವಂತೆ ಮಾಡಲು ಅಮೆರಿಕ ಮೊದಲಾದ ರಾಷ್ಟ್ರಗಳ ಕೈಕಾಲು ಹಿಡಿಯಿತು.

ಭಾರತವು ಪಾಕಿಸ್ತಾನದ ಶಕ್ತಿ ಉಡುಗಿಸಿದ ಬಳಿಕ ಸಮರ ವಿರಾಮ ಘೋಷಿಸಿದ್ದು, ಆ ಕಾಲದಲ್ಲಿ ಕೆಲವರಿಂದ ಟೀಕೆಗೆ ಗುರಿಯಾಯಿತಾದರೂ ಅದು ಪ್ರಬುದ್ಧ ನಿಲುವಾಗಿತ್ತು ಎನ್ನುವುದು ಈಗ ಸ್ಪಷ್ಟವಾಗುತ್ತಿದೆ. ರಷ್ಯಾ, ಉಕ್ರೇನ್, ಇರಾನ್, ಅಮೆರಿಕಗಳು ತಾವು ಆರಂಭಿಸಿದ ಯುದ್ಧವನ್ನು ನಿಲ್ಲಿಸಲು ಹೆಣಗುತ್ತಿರುವಾಗ ಭಾರತವು ತನ್ನ 'ನಿಶ್ಚಿತ ಗುರಿ' ಸಾಧಿಸಿದೊಡನೆ ಸಮರ ನಿಲ್ಲಿಸಿ ವಿವೇಕ ಪ್ರದರ್ಶಿಸಿತು. ಒಟ್ಟಿನಲ್ಲಿ 'ಆಪರೇಶನ್ ಸಿಂದೂರ್' ಭಾರತದ ಕ್ಷಿಪ್ರ ಮತ್ತು ನಿರ್ಣಾಯಕ ಮಿಲಿಟರಿ ಕಾರ್ಯಾಚರಣೆಗೆ ಸಂಕೇತವಾಗಿದೆ.

ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ಬಹಳಷ್ಟು ಬಾರಿ ಕೆಲಸವಿಲ್ಲದ ವೇಳೆಯಲ್ಲಿ ಕುಳಿತು ಕೆಲವೊಂದು ಹಗಲುಗನಸು ಕಾಣುತ್ತಿರುತ್ತೇವೆ. ಎಂಥಾ ವಿಚಿತ್ರ ಕನಸುಗಳು ಎಂದರೆ, ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಕೋಟಿ ಕೋಟಿ ಗಳಿಸಿದ್ದು, ದೇಶದ ಪ್ರಧಾನಮಂತ್ರಿಯೇ ಆಗಿದ್ದು, ಯಾರೋ ಒಬ್ಬರು ಬಂದು ಈ ಎಲ್ಲವನ್ನು ಮಾಡಿಸಿದ್ದು... ಹೀಗೆ ಕನಸುಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿರುತ್ತದೆ. ಆದರೆ, ಪ್ರಧಾನಿಯಾಗದಿದ್ದರೂ, ಹಣ ದುಡಿಯಲು ಅವಕಾಶಗಳಿವೆ. ದಾರಿ ಹುಡುಕಿಕೊಂಡು ಹೋಗಿ, ಉದ್ಯಮವೋ, ಸ್ಟಾರ್ಟ್‌ಅಪ್ ರೀತಿಯ ಯಾವುದಾದರೂ ವ್ಯಾಪಾರ ನಡೆಸಿದರೆ, ನಾಳೆ ಬೆಳಗ್ಗೆಯೇ ಆಗದಿದ್ದರೂ ಒಂದಷ್ಟು ವರ್ಷಗಳಲ್ಲಾದರೂ ಸಿರಿವಂತರಾಗಬಹುದು, ಕೋಟಿ ಕೋಟಿ ಗಳಿಸಬಹುದು. ಆದರೆ, ಇದಕ್ಕೆ ಶ್ರಮವನ್ನೇ ಹಾಕದೇ, ದಿನವಿಡೀ ಯಾರೋ ಬರ್ತಾರೆ, ಅವರು ಕೋಟಿ ಕೊಡ್ತಾರೆ ಅಂತ ಕುಳಿತುಕೊಂಡರೆ, ಏನೂ ಆಗದು. ಕೋಟಿ ಸಿಗದೇ ಇದ್ದಾಗ ಮಾತ್ರ, ಜಗತ್ತಿನ ಎಲ್ಲರಿಗೂ ಬೈದುಕೊಂಡು, ನನಗೇಕೆ ಕೋಟಿ ಕೋಟಿ ಸಿಗಲಿಲ್ಲ, ಇಲ್ಲಿ ಯಾರೋ ಮೋಸ ಮಾಡ್ತಿದ್ದಾರೆ ಅಂದುಕೊಂಡ್ರೆ ಅಷ್ಟೇ.

ಈಗಲೂ ನೋಡಿ, ಪಂಚ ರಾಜ್ಯ ಚುನಾವಣಾ ಫಲಿತಾಂಶ ಹೊರಬಿದ್ದು, ಎರಡು ದಿನಗಳಾಗಿದ್ದರೂ, ಕೆಲವರು ತಾವು ಸೋತದ್ದು ಏಕೆ ಎಂಬ ಆತ್ಮಾವಲೋಕನ ಮಾಡದೇ, ಬೇರೊಬ್ಬರ ಮೇಲೆ ಸೋಲಿನ ಹೊಣೆ ಹೊರಿಸಿಕೊಂಡು ಕುಳಿತಿದ್ದಾರೆ. ಚುನಾವಣೆಗಳಿಗಾಗಿ ಹಗಲು ರಾತ್ರಿ ಪರಿಶ್ರಮ ಹಾಕಿರುವಂಥವರಿಗೆ ಕಳ್ಳತನದ ಪಟ್ಟ ಹೊರಿಸುವುದು ಅಲ್ಲದೇ, ಈ ಚುನಾವಣೆಗಳನ್ನು ಗೆಲ್ಲಲು ತಾವೇನು ಮಾಡಿದ್ದೇವೆ ಎಂಬುದನ್ನೇ ಮರೆಯುತ್ತಾರೆ. ಇದೊಂದು ರೀತಿಯಲ್ಲಿ ಸಂವಿಧಾನ ರಕ್ಷಣೆ ಮಾಡುತ್ತೇವೆ ಎಂಬವರ ವಿರೋಧಾಭಾಸ ನಡೆಗಳಲ್ಲವೇ? ಈಗ ಫಲಿತಾಂಶ ಮತ್ತದರ ಸುತ್ತಲಿನ ಬೆಳವಣಿಗೆಗಳಿಗೆ ಬರೋಣ, ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳು ಕೇವಲ ಐದು ರಾಜ್ಯಗಳ ರಾಜಕೀಯ ಬದಲಾವಣೆಗಳಲ್ಲ, ಅವು ವಿಪಕ್ಷಗಳ ರಾಜಕೀಯ ಸಂಸ್ಕೃತಿಯನ್ನೂ ಬೆತ್ತಲಾಗಿಸಿವೆ. ಈ ತೀರ್ಪುಗಳಲ್ಲಿ ಒಂದೇ ಸಾಮಾನ್ಯ ಸಂದೇಶ ಇದೆ. ಮತದಾರರು ಯಾರಿಗೂ ಶಾಶ್ವತ ಹಕ್ಕುಪತ್ರ ಕೊಡುವುದಿಲ್ಲ. ಆಡಳಿತ ಸರಿಯಾಗಿಲ್ಲವೇ, ಪಕ್ಷ ಜನರಿಂದ ದೂರವಾಗಿದ್ದೇವೆಯೇ, ನಾಯಕತ್ವ ವಿಶ್ವಾಸ ಕಳೆದುಕೊಂಡಿದೆಯೇ? ಈ ಎಲ್ಲವನ್ನೂ ಮತದಾರರು ಮೌನವಾಗಿ ಗಮನಿಸುತ್ತಾರೆ ಮತ್ತು ಮತಗಟ್ಟೆಯಲ್ಲಿ ಉತ್ತರ ಕೊಡುತ್ತಾರೆ. ಆದರೆ ಸೋತವರು ಆ ಉತ್ತರವನ್ನು ಓದಲು ಸಿದ್ಧರಿಲ್ಲದಾಗ, ಪ್ರಜಾಪ್ರಭುತ್ವದ ನಿಜವಾದ ಸಂಕಟ ಆರಂಭವಾಗುತ್ತದೆ.

ವಿಪಕ್ಷಗಳ ಈ ಬಾರಿಯ ಪ್ರತಿಕ್ರಿಯೆ ರಾಜಕೀಯ ಸೋಲಿಗಿಂತಲೂ ಗಂಭೀರವಾದ ನೈತಿಕ ಸೋಲನ್ನು ತೋರಿಸಿದೆ. ಪಶ್ಚಿಮ ಬಂಗಾಳದಲ್ಲಿ ಸೋಲಿನ ನಂತರ ಮಮತಾ ಬ್ಯಾನರ್ಜಿ ಅವರು ಇವಿಎಂ ಅಕ್ರಮ, ಎಸ್‌ಐಆರ್, ಸಂಸ್ಥೆಗಳ ದುರುಪಯೋಗ ಮತ್ತು ಚುನಾವಣಾ ಆಯೋಗದ ವಿರುದ್ಧ ತೀವ್ರ ಆರೋಪಗಳನ್ನು ಮಾಡುತ್ತಲೇ ಇದ್ದಾರೆ. ಜತೆಗೆ ಸಿಎಂ ಸ್ಥಾನಕ್ಕೂ ರಾಜೀನಾಮೆ ಕೊಡಲ್ಲ ಎಂದಿದ್ದಾರೆ. ಅವರು ಮುಖ್ಯ ಚುನಾವಣಾ ಆಯುಕ್ತರನ್ನು ಈ ಚುನಾವಣೆಯ ವಿಲನ್ ಎಂದು ಕರೆದಿದ್ದಾರೆ.

ಇದು ಸಾಮಾನ್ಯ ಅಸಮಾಧಾನವಲ್ಲ, ಇದು ಜನತೆಯ ತೀರ್ಪನ್ನು ತಿರಸ್ಕರಿಸುವ ಧೋರಣೆ. ತಾವು ಗೆದ್ದಾಗ ಮತಯಂತ್ರ ಪವಿತ್ರ, ಸೋತಾಗ ಮತಯಂತ್ರ ಸಂಶಯಾಸ್ಪದ, ಈ ಎರಡುಮುಖದ ರಾಜಕೀಯಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ಚುನಾವಣಾ ಪ್ರಕ್ರಿಯೆಯಲ್ಲಿ ದೋಷವಿದ್ದರೆ ನ್ಯಾಯಾಲಯವಿದೆ, ಚುನಾವಣಾ ಆಯೋಗದ ನಿಯಮಗಳಿವೆ, ಸಾಕ್ಷ್ಯಾಧಾರಗಳೊಂದಿಗೆ ಹೋರಾಡುವ ಮಾರ್ಗವಿದೆ. ಆದರೆ ಫಲಿತಾಂಶ ಬಂದ ತಕ್ಷಣವೇ ನಾವು ಸೋತಿಲ್ಲ, ನೈತಿಕವಾಗಿ ನಾವು ಗೆದ್ದಿದ್ದೇವೆ, ಚುನಾವಣೆ ಕದಿಯಲಾಗಿದೆ ಎಂಬ ಮಾತುಗಳು ಜನರ ಮತದಾನ ಬುದ್ಧಿವಂತಿಕೆಗೆ ನೇರ ಅವಮಾನ ಮಾಡಿದಂತೆ. ಇದು ರಾಜಕೀಯ ಜಾಗರೂಕತೆ ಅಲ್ಲ, ಇದು ಸೋಲಿನ ಮುನ್ನವೇ ಸೋಲಿಗೆ ನೆಪ ಕಟ್ಟುವ ತಂತ್ರ. ಚುನಾವಣಾ ಫಲಿತಾಂಶ ಬರುವುದಕ್ಕೂ ಮುಂಚೆ ಅಕ್ರಮ, ಫಲಿತಾಂಶ ಬಂದ ನಂತರ ಕಳ್ಳತನ, ಸೋಲಿನ ನಂತರ ಸಂಚು ಎಂಬ ಈ ಸರಣಿ ಈಗ ವಿಪಕ್ಷಗಳ ಸಿದ್ಧ ಮಾದರಿಯಂತಾಗಿದೆ. ಜನತೆ ತಮ್ಮ ಪರವಾಗಿ ಮತ ಹಾಕಿದಾಗ ಜನಶಕ್ತಿ, ವಿರುದ್ಧವಾಗಿ ಮತ ಹಾಕಿದಾಗ ಮತಚೌರಿ ಎಂಬ ವ್ಯಾಖ್ಯಾನವೇ ಪ್ರಜಾಪ್ರಭುತ್ವದ ಅವಮಾನ.

ಇದಕ್ಕಿಂತ ಗಂಭೀರವಾದದ್ದು ರಾಹುಲ್ ಗಾಂಧಿಯವರ ಪ್ರತಿಕ್ರಿಯೆ. ಅವರು ಅಸ್ಸಾಂ ಮತ್ತು ಬಂಗಾಳ ಚುನಾವಣೆಗಳು ಬಿಜೆಪಿ ಮತ್ತು ಚುನಾವಣಾ ಆಯೋಗದ ಬೆಂಬಲದಿಂದ ಕದ್ದುಕೊಳ್ಳಲ್ಪಟ್ಟಿವೆ ಎಂದು ಆರೋಪಿಸಿ, ಬಂಗಾಳದಲ್ಲಿ 100ಕ್ಕೂ ಹೆಚ್ಚು ಸ್ಥಾನಗಳು ಕದ್ದುಕೊಳ್ಳಲ್ಪಟ್ಟಿವೆ ಎಂಬ ಮಮತಾ ಬ್ಯಾನರ್ಜಿ ಅವರ ಆರೋಪಕ್ಕೆ ಬೆಂಬಲ ನೀಡಿದ್ದಾರೆ. ಈಗಲೂ ಲೋಕಸಭೆ ಚುನಾವಣೆಯಲ್ಲೂ ಮತಚೋರಿಯಾಗಿತ್ತು ಎಂಬ ಆರೋಪವನ್ನೂ ನಡೆಸಿ, ಪ್ರತಿ ಆರರಲ್ಲಿ ಒಬ್ಬ ಬಿಜೆಪಿ ಸಂಸದ ಮತಚೋರಿಯಿಂದ ಗೆದ್ದಿದ್ದಾರೆ ಎಂದು ಬಿಟ್ಟಿದ್ದಾರೆ.

ಇಂತಹ ಹೇಳಿಕೆಗಳು ಸಾಮಾನ್ಯ ರಾಜಕೀಯ ಟೀಕೆಗಳಲ್ಲ, ದೇಶದ ಚುನಾವಣಾ ವ್ಯವಸ್ಥೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಂದಿಸುವ ಗಂಭೀರ ಆರೋಪಗಳು. ಇಷ್ಟು ದೊಡ್ಡ ಆರೋಪಗಳನ್ನು ಮಾಡುವಾಗ ಸಾಕ್ಷ್ಯವೂ ಅಷ್ಟೇ ದೊಡ್ಡದಾಗಿರಬೇಕು. ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವದ ರಕ್ಷಣೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಅಡಿಪಾಯವನ್ನೇ ದುರ್ಬಲಗೊಳಿಸುವ ಕೆಲಸವಾಗುತ್ತದೆ. ಸೋತ ಪಕ್ಷಗಳು ತಮ್ಮ ಸೋಲಿನ ಕಾರಣಗಳನ್ನು ಪರಿಶೀಲಿಸುವ ಬದಲು ಚುನಾವಣಾ ಆಯೋಗ, ಇವಿಎಂ, ಕೇಂದ್ರ ಸಂಸ್ಥೆಗಳು, ಮಾಧ್ಯಮ, ಆಡಳಿತ ಸೇರಿ ಎಲ್ಲರ ಮೇಲೂ ಹೊಣೆ ಹಾಕಿದರೆ, ಅಂತಿಮವಾಗಿ ಹೊಣೆಗಾರಿಕೆ ಎಂಬ ರಾಜಕೀಯ ಗುಣವೇ ನಾಶವಾಗುತ್ತದೆ. ಇಲ್ಲಿ ವಿಚಿತ್ರ ವಿರೋಧಾಭಾಸ ಇದೆ. ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿಲ್ಲ, ಟಿವಿಕೆ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೇರಲು ಸಿದ್ಧವಾಗಿದೆ. ಆದರೂ ಈ ಚುನಾವಣೆಗಳಲ್ಲಿ ವೋಟ್ ಚೋರಿಯಾಗಿದೆ ಅಂತ ಕಾಂಗ್ರೆಸ್ ಆಗಲಿ, ಮಮತಾ ಬ್ಯಾನರ್ಜಿಯಾಗಲಿ ಹೇಳುತ್ತಲೇ ಇಲ್ಲ. ಇದರಿಂದ ಸ್ಪಷ್ಟವಾಗುವುದು ಏನೆಂದರೆ, ಕೆಲವು ವಿಪಕ್ಷಗಳಿಗೆ ಸಮಸ್ಯೆ ಫಲಿತಾಂಶದ ಸ್ವರೂಪದಲ್ಲಿಲ್ಲ, ಸಮಸ್ಯೆ ತಮ್ಮ ನಿರೀಕ್ಷೆಗೆ ವಿರುದ್ಧವಾದ ಜನಮತದಲ್ಲಿದೆ.

ವಿಪಕ್ಷಗಳ ಈ ಮೊಂಡಾಟದ ಮೂಲದಲ್ಲಿ ಒಂದು ಅಪಾಯಕಾರಿ ಅಹಂಕಾರ ಅಡಗಿದೆ. ನಾವು ಸೋಲಲು ಸಾಧ್ಯವೇ ಇಲ್ಲ; ಸೋತಿದ್ದರೆ ವ್ಯವಸ್ಥೆಯೇ ತಪ್ಪು ಎಂಬ. ಮನೋಭಾವವು ಅವರನ್ನು ಜನರಿಂದ ದೂರ ಮಾಡುತ್ತಿದೆ. ಜನರು ಬೆಲೆ ಏರಿಕೆ, ಉದ್ಯೋಗ, ಭದ್ರತೆ, ಪ್ರಾದೇಶಿಕ ಅಸ್ಮಿತೆ, ಭ್ರಷ್ಟಾಚಾರ, ಆಡಳಿತದ ದಕ್ಷತೆ, ನಾಯಕತ್ವದ ವಿಶ್ವಾಸಾರ್ಹತೆ ಇವುಗಳ ಆಧಾರದ ಮೇಲೆ ಮತ ಹಾಕುತ್ತಾರೆ. ಆದರೆ ಸೋತ ಪಕ್ಷಗಳು ಈ ಸಂದೇಶವನ್ನು ಕೇಳಲು ಸಿದ್ಧವಿಲ್ಲ. ಅವುಗಳಿಗೆ ಜನರ ಧ್ವನಿಗಿಂತ ತಮ್ಮದೇ ಆರೋಪಗಳ ಪ್ರತಿಧ್ವನಿ ಹೆಚ್ಚು ಸಿಹಿಯಾಗಿ ಕೇಳಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ತಮ್ಮ ಭದ್ರತೆಯ ಕ್ಷೇತ್ರ ಭವಾನಿಪುರದಲ್ಲೇ ಸೋತಿದ್ದಾರೆ. ಬಿಜೆಪಿ ರಾಜ್ಯದಲ್ಲಿ ಮೊದಲ ಬಾರಿಗೆ ಆಡಳಿತ ಹಿಡಿಯಲು ಸಜ್ಜಾಗಿದೆ. ಇಂತಹ ತೀರ್ಪನ್ನು ಕೇವಲ ಇವಿಎಂ, ಸಂಚು, ಮತಚೌರಿ ಎಂದು ತಳ್ಳಿ ಹಾಕುವುದು ರಾಜಕೀಯ ವಾಸ್ತವದಿಂದ ಓಡಿಹೋಗುವುದು. ಒಬ್ಬ ನಾಯಕ ಅಥವಾ ಪಕ್ಷ ಅಜೇಯವಲ್ಲ, ಜನರು ಅಧಿಕಾರ ಕೊಡುತ್ತಾರೆ, ಜನರೇ ಅದನ್ನು ಹಿಂಪಡೆಯುತ್ತಾರೆ. ಇದೇ ಪ್ರಜಾಪ್ರಭುತ್ವದ ಸೌಂದರ್ಯ. ಅದನ್ನೇ ಒಪ್ಪದವರು ಪ್ರಜಾಪ್ರಭುತ್ವದ ಹೆಸರು ಜಪಿಸಿದರೂ ಅದರ ಆತ್ಮವನ್ನು ಗೌರವಿಸುವುದಿಲ್ಲ. ವಿಪಕ್ಷಗಳ ಕರ್ತವ್ಯ ಕೇವಲ ಆರೋಪ ಮಾಡುವುದು ಅಲ್ಲ, ಜನರಿಗೆ ವಿಶ್ವಾಸಾರ್ಹ ಪರ್ಯಾಯ ಒದಗಿಸುವುದು. ಸೋಲಿನ ನಂತರ ಸಂಯಮ ತೋರಿಸುವುದು, ಕಾರ್ಯಕರ್ತರನ್ನು ಶಾಂತವಾಗಿಡುವುದು, ಮತದಾರರಿಗೆ ಧನ್ಯವಾದ ಹೇಳುವುದು, ತಪ್ಪುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ರಾಜಕೀಯ ಪ್ರೌಢಿಮೆಯ ಲಕ್ಷಣಗಳು. ಆದರೆ ಸೋಲಿನ ತಕ್ಷಣವೇ ಚುನಾವಣಾ ಆಯೋಗವನ್ನು ಶತ್ರುವಿನಂತೆ ಚಿತ್ರಿಸುವುದು, ಜನರ ತೀರ್ಪನ್ನು ಅಕ್ರಮ ಎಂದು ಕರೆಯುವುದು, ಮತದಾರರ ನಿರ್ಧಾರವನ್ನು ಅನುಮಾನದಲ್ಲಿ ಮುಚ್ಚಿಡುವುದು ಇವು ಜವಾಬ್ದಾರಿಯುತ ವಿರೋಧ ಪಕ್ಷದ ಲಕ್ಷಣಗಳಲ್ಲ. ಈ ಮೊಂಡಾಟದಿಂದ ಗೆದ್ದವರಿಗೆ ಲಾಭವಾಗಬಹುದು, ಆದರೆ ಪ್ರಜಾಪ್ರಭುತ್ವಕ್ಕೆ ಹಾನಿ. ಏಕೆಂದರೆ ಜನರು ಒಂದು ಹಂತದ ನಂತರ ಪ್ರಶ್ನಿಸುತ್ತಾರೆ. ಪ್ರತಿ ಸೋಲಿಗೂ ಕಳ್ಳತನವೇ ಕಾರಣವೇ? ಹಾಗಾದರೆ ನಿಮ್ಮ ರಾಜಕೀಯ ವೈಫಲ್ಯಕ್ಕೆ ನೀವು ಯಾವಾಗ ಹೊಣೆ ಹೊರುತ್ತೀರಿ? ಈ ಪ್ರಶ್ನೆಗೆ ವಿಪಕ್ಷಗಳು ಉತ್ತರ ಕೊಡದಿದ್ದರೆ, ಜನರು ಮುಂದಿನ ಚುನಾವಣೆಯಲ್ಲೂ ಇನ್ನಷ್ಟು ಕಠಿಣ ಉತ್ತರ ನೀಡುತ್ತಾರೆ.

ಈ ಚುನಾವಣಾ ಫಲಿತಾಂಶಗಳು ಸೋತ ಪಕ್ಷಗಳಿಗೆ ಕೊಟ್ಟಿರುವ ಸಂದೇಶ ಸ್ಪಷ್ಟವಾಗಿದೆ. ಮತದಾರರನ್ನು ದೂಷಿಸಬೇಡಿ, ಮತಯಂತ್ರವನ್ನು ಶಪಿಸಬೇಡಿ, ಆಯೋಗವನ್ನು ನಿರಂತರವಾಗಿ ಅಪಮಾನಿಸಬೇಡಿ. ಮೊದಲು ಕನ್ನಡಿಯಲ್ಲಿ ನಿಮ್ಮ ಮುಖ ನೋಡಿ. ಸಂಘಟನೆ ದುರ್ಬಲವಾಗಿದೆಯೇ? ನಾಯಕತ್ವ ಸರಿ ಇಲ್ಲವೇ? ಜನರ ನೋವುಗಳಿಂದ ಪಕ್ಷ ದೂರವಾಗಿದೆಯೇ? ಅಭ್ಯರ್ಥಿ ಆಯ್ಕೆ ತಪ್ಪಿದೆಯೇ? ಮೈತ್ರಿಗಳು ಕೇವಲ ಹೆಸರಿಗಷ್ಟೇ ಇದ್ದವೇ, ಜನಮನ ಗೆಲ್ಲುವ ನೀತಿ ಇರಲಿಲ್ಲವೇ? ಇವೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡದೆ ವೋಟ್ ಚೋರಿ ಎಂಬ ಒಂದೇ ಘೋಷಣೆಯ ಹಿಂದೆ ಅಡಗಿಕೊಳ್ಳುವುದು ರಾಜಕೀಯ ಪಲಾಯನ. ಪ್ರಜಾಪ್ರಭುತ್ವದಲ್ಲಿ ಸೋಲು ಅಪಮಾನವಲ್ಲ, ಆದರೆ ಸೋಲನ್ನು ಒಪ್ಪದ ಅಹಂಕಾರವೇ ಅಪಮಾನ. ಜನರು ತೀರ್ಪು ನೀಡಿದ್ದಾರೆ. ಆ ತೀರ್ಪು ಕೆಲವರಿಗೆ ಕಹಿಯಾಗಿರಬಹುದು, ಆದರೆ ಕಹಿ ಔಷಧಿಯೇ ರೋಗಕ್ಕೆ ಚಿಕಿತ್ಸೆ. ವಿಪಕ್ಷಗಳು ಈ ತೀರ್ಪನ್ನು ಮೊಂಡಾಟದಿಂದ ತಳ್ಳಿಹಾಕಿದರೆ, ಅವು ಜನತೆಯಿಂದ ಇನ್ನೂ ದೂರ ಸರಿಯುತ್ತವೆ. ಆದರೆ ಅದನ್ನು ಆತ್ಮಪರಿಶೀಲನೆಯ ಅವಕಾಶವನ್ನಾಗಿ ಮಾಡಿಕೊಂಡರೆ ಮಾತ್ರ ಮತ್ತೆ ಜನರ ವಿಶ್ವಾಸ ಗಳಿಸಬಹುದು. ಇದೀಗ ವಿಪಕ್ಷಗಳಿಗೆ ಆಯ್ಕೆ ಒಂದೇ. ಜನರ ತೀರ್ಪಿನ ಮುಂದೆ ತಲೆಬಾಗುವುದೇ ಅಥವಾ ಮೊಂಡಾಟದ ಗೋಡೆಯ ಹಿಂದೆ ಇನ್ನಷ್ಟು ಕುಸಿಯುವುದೇ. ಪ್ರಜಾಪ್ರಭುತ್ವದಲ್ಲಿ ಜನರೇ ಅಂತಿಮ ನ್ಯಾಯಾಧೀಶರು. ಆ ನ್ಯಾಯಾಧೀಶರ ತೀರ್ಪನ್ನು ಅವಮಾನಿಸುವ ರಾಜಕೀಯ, ಎಷ್ಟೇ ದೊಡ್ಡ ಘೋಷಣೆಗಳ ಹಿಂದೆ ಅಡಗಿದರೂ, ಕೊನೆಯಲ್ಲಿ ಜನರ ನ್ಯಾಯಾಲಯದಲ್ಲೇ ಸೋಲುತ್ತದೆ.

'ಆಪರೇಷನ್ ಸಿಂದೂರ್' ವಿಜಯಕ್ಕೆ 1 ವರ್ಷ

▸ ಮೇಜರ್ ಜನರಲ್ ರವಿ ಮುರುಗನ್ (ನಿವೃತ್ತ)



ಒಂದು ವರ್ಷದ ಹಿಂದೆ, 2025ರ ಮೇ 07ರಂದು, ಭಾರತವು 'ಆಪರೇಷನ್ ಸಿಂದೂರ್' ಪ್ರಾರಂಭಿಸಿತು. ಆ ಮೂಲಕ ತನ್ನ ಘೋಷಿತ ನೀತಿಯನ್ನು ದೃಢವಾದ ಮಿಲಿಟರಿ ಕ್ರಮವನ್ನಾಗಿ ಪರಿವರ್ತಿಸಿತು. ದಶಕಗಳಿಂದ ಭಾರತದ ಮಣ್ಣಿನಲ್ಲಿ ಪಾಕಿಸ್ತಾನ ನಡೆಸುತ್ತಿರುವ ಭಯೋತ್ಪಾದನಾ ಕೃತ್ಯಗಳಿಗೆ ಕೇವಲ ಮೌಖಿಕ ಎಚ್ಚರಿಕೆ ನೀಡುವ ಬದಲು, ಪ್ರತ್ಯಕ್ಷವಾಗಿ ತಿರುಗೇಟು ನೀಡುವ ಭಾರತದ ಸಂಕಲ್ಪವನ್ನು ಈ ಕಾರ್ಯಾಚರಣೆ ಸಾಬೀತುಪಡಿಸಿತು. ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳನ್ನು ತನ್ನ ಪರೋಕ್ಷ ಯುದ್ಧದ ದಾಳಗಳಾಗಿ ಬಳಸಿಕೊಳ್ಳುತ್ತಿರುವುದನ್ನು ಎದುರಿಸುವಲ್ಲಿ, 'ಆಪರೇಷನ್ ಸಿಂದೂರ್' ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಕಾರ್ಯಾಚರಣೆಯ ಹಿಂದಿದ್ದ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟ ಮತ್ತು ಅಚಲವಾಗಿತ್ತು. 2025ರ ಏ. 22ರಂದು ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರು ನಡೆಸಿದ ಭೀಕರ ದಾಳಿಯಲ್ಲಿ 26 ಅಮಾಯಕರು ಬಲಿಯಾದ ನಂತರ, ಭಾರತದ ಪ್ರತಿಕ್ರಿಯೆಯು ಕೇವಲ ಸಾಂಕೇತಿಕವಾಗಿರಲಿಲ್ಲ. ಅದು ಅತ್ಯಂತ ಯೋಜಿತ, ಸಮಯೋಚಿತ ಮತ್ತು ಗುರಿಕೇಂದ್ರಿತವಾಗಿತ್ತು. ಒಟ್ಟು 88 ಗಂಟೆಗಳ ಕಾಲ ನಡೆದ ಈ ಮಿಲಿಟರಿ ಅಭಿಯಾನವು, ಸ್ಪಷ್ಟ ಗುರಿಗಳನ್ನು ಹೊಂದಿದ್ದ ಸುಸಂಘಟಿತ 'ಶಿಕ್ಷಾರ್ಹ ಕಾರ್ಯತಂತ್ರ'ವಾಗಿತ್ತು. ಭಾರತವು ತಾನು ಅಂದುಕೊಂಡ ಗುರಿಗಳನ್ನು ಸಾಧಿಸಿದ ನಂತರ, ತನ್ನದೇ ಆದ ಷರತ್ತುಗಳ ಮೇಲೆ ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿತು.

ರಾಜಕೀಯ ಮತ್ತು ಕಾರ್ಯತಂತ್ರದ ದೃಷ್ಟಿಕೋನದಿಂದ, ಇಲ್ಲಿ ಎರಡು ಪ್ರಮುಖ ಅಂಶಗಳು ವಿಶೇಷವಾಗಿ ಗಮನ ಸೆಳೆಯುತ್ತವೆ: ಮೊದಲನೆಯದಾಗಿ, ಈ ದಾಳಿಯ ಭೌಗೋಳಿಕ ವ್ಯಾಪ್ತಿಯು ಈವರೆಗಿನ ಎಲ್ಲಾ ಪೂರ್ವನಿದರ್ಶನಗಳನ್ನು ಬದಿಗೊತ್ತಿ ಹೊಸ ದಾಖಲೆ ಬರೆಯಿತು. ಭಾರತದ ಗುರಿಗಳು ಕೇವಲ ನಿಯಂತ್ರಣ ರೇಖೆಯಾಚೆಗಿನ ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರಕ್ಕೆ ಸೀಮಿತವಾಗಿರಲಿಲ್ಲ; ಬದಲಾಗಿ ಅವು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದವು. ಇದು ಕೇವಲ ಮಿಲಿಟರಿ ದಾಳಿಯಲ್ಲ, ಬದಲಾಗಿ ಪಾಕಿಸ್ತಾನದ ಪರಮಾಣು ಮಿತಿಯನ್ನು ಪರೀಕ್ಷಿಸುವ ಮತ್ತು ಅದರ ಪ್ರತಿರೋಧದ ಸಾಮರ್ಥ್ಯದ ಮಿತಿಗಳನ್ನು ಬಹಿರಂಗಪಡಿಸುವ ಒಂದು ಲೆಕ್ಕಾಚಾರದ ಹೆಜ್ಜೆಯಾಗಿತ್ತು.

ಎರಡನೆಯದಾಗಿ, ಈ ಕಾರ್ಯಾಚರಣೆಯು ಮಾಹಿತಿ ಯುಗದ ಇಂದಿನ ಯುದ್ಧಗಳಲ್ಲಿ ತಂತ್ರಜ್ಞಾನದ ನಿರ್ಣಾಯಕ ಪಾತ್ರವನ್ನು ತಿಳಿಸಿತು. ಕ್ರೂಸ್ ಕ್ಷಿಪಣಿಗಳು, 'ಲೋಯಿಟರಿಂಗ್ ಮ್ಯೂನಿಷನ್' (ಸ್ವಯಂ- ಚಾಲಿತ ವಿಧ್ವಂಸಕ ಡ್ರೋನ್‌ಗಳು), ನೆಟ್ವರ್ಕ್–ಕೇಂದ್ರಿತ ವ್ಯವಸ್ಥೆಗಳು ಮತ್ತು ಹಂತ–ಹಂತದ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳ ಬಳಕೆ ಮಾಡಿದ್ದು, ಯುದ್ಧತಂತ್ರವು ಈಗ 'ನಿಖರತೆ, ವೇಗ ಮತ್ತು ಸಮನ್ವಯದ ಯುದ್ಧಭೂಮಿ ಜಾಗೃತಿ'ಯತ್ತ ನಿರ್ಣಾಯಕವಾಗಿ ಬದಲಾಗಿರುವುದನ್ನು ತೋರಿಸಿಕೊಟ್ಟಿತು. ಆಪರೇಷನ್ ಸಿಂದೂರ್ ಕೇವಲ ಒಂದು ಶಿಕ್ಷಾರ್ಹ ಕ್ರಮವಾಗಿರಲಿಲ್ಲ; ಬದಲಾಗಿ ದೂರಗಾಮಿ ದಾಳಿ ಸಾಮರ್ಥ್ಯ, ಕ್ಷಿಪ್ರ ನಿರ್ಧಾರಗಳು ಮತ್ತು ಭೂ–ಜಲ–ಆಕಾಶ ಮಾರ್ಗಗಳ ಸಮನ್ವಯದ ಈ ಆಧುನಿಕ ಯುಗದಲ್ಲಿ ಭಾರತವು ಯುದ್ಧವನ್ನು ಹೇಗೆ ನಡೆಸಲಿದೆ ಎಂಬುದಕ್ಕೆ ಒಂದು ಶಕ್ತಿಶಾಲಿ ನಿದರ್ಶನವಾಗಿತ್ತು.

2025ರ ಮೇ 7ರಂದು ಆರಂಭವಾದ ಈ ಕಾರ್ಯಾಚರಣೆಯು, ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳ ವಿರುದ್ಧ ನಡೆದ ತೀವ್ರಗತಿಯ ಮತ್ತು ನಿಖರ ಅಭಿಯಾನವಾಗಿತ್ತು. ಇದು ಸಂಘರ್ಷವು ಮಿತಿಮೀರದಂತೆ ಎಚ್ಚರವಹಿಸಿ ಶತ್ರುವಿಗೆ ಗರಿಷ್ಠ ಹಾನಿ ಉಂಟುಮಾಡುವಂತೆ ವಿನ್ಯಾಸಗೊಳಿಸಲಾದ ಭಾರತದ ಸುಸಂಘಟಿತ ಮಿಲಿಟರಿ ಸಾಮರ್ಥ್ಯದ ಪ್ರದರ್ಶನವಾಗಿತ್ತು. ಒಂದು ವರ್ಷದ ನಂತರ, ಇದು ಭಾರತದ ಬೆಳೆಯುತ್ತಿರುವ 'ಕಾರ್ಯತಂತ್ರದ ಪ್ರಬುದ್ಧತೆ'ಗೆ ಸಾಕ್ಷಿಯಾಗಿ ನಿಂತಿದೆ. ಪರಮಾಣು ಶಸ್ತ್ರ ಹೊಂದಿರುವ ಎದುರಾಳಿಯನ್ನು ಹೊಣೆಗಾರರನ್ನಾಗಿ ಮಾಡುವುದು ಮತ್ತು ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡೇ ಅಚಲ ಸಂಕಲ್ಪ ಹಾಗೂ ದೃಢ ಉದ್ದೇಶದೊಂದಿಗೆ ತಿರುಗೇಟು ನೀಡುವ ಸಾಮರ್ಥ್ಯವನ್ನು ಇದು ಸಾಬೀತುಪಡಿಸಿದೆ.

ಅನಿರ್ದಿಷ್ಟವಾಗಿ ಎಳೆಯಲ್ಪಡುವ ಮತ್ತು ಅನಿಶ್ಚಿತ ಫಲಿತಾಂಶದ ಸಮಕಾಲೀನ ಯುದ್ಧಗಳಿಗೆ ವ್ಯತಿರಿಕ್ತವಾಗಿ, 'ಆಪರೇಷನ್ ಸಿಂದೂರ್' ಸ್ಪಷ್ಟತೆ ಮತ್ತು ದೃಢವಾದ ಕ್ರಮಗಳಿಂದ ಕೂಡಿತ್ತು. ಭಯೋತ್ಪಾದನಾ ಜಾಲ ಹಾಗೂ ಅದರ ಪೋಷಕರಿಗೆ ಭೌತಿಕವಾಗಿ ನಷ್ಟವನ್ನು ಉಂಟುಮಾಡುವ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟವಾಗಿತ್ತು ಮತ್ತು ಆ ಗುರಿ ತಲುಪಿದ ತಕ್ಷಣ ಸೈನ್ಯದ ಹಿಂತೆಗೆಯುವಿಕೆ ನಡೆಯಿತು. ಗುರಿಗಳ ಆಯ್ಕೆಯು ಸಂಯಮ ಮತ್ತು ಸಂಕಲ್ಪದ ನಡುವಿನ ಸಮತೋಲನವನ್ನು ಪ್ರತಿಬಿಂಬಿಸಿತ್ತು. ಲಷ್ಕರ್–ಎ–ತೈಬಾ, ಜೈಶ್–ಎ–ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದೀನ್‌ನಂತಹ ಗುಂಪುಗಳ ಪ್ರಮುಖ ಕೇಂದ್ರಗಳ ಮೇಲಿನ ದಾಳಿಗೆ ಆದ್ಯತೆ ನೀಡಲಾಯಿತು. ನಾಗರಿಕರಿಗೆ ಹಾನಿಯಾಗದಂತೆ ಕೇವಲ ಭಯೋತ್ಪಾದಕರ ಕಾರ್ಯಾಚರಣಾ ಸಾಮರ್ಥ್ಯವನ್ನು ಕುಂದಿಸುವುದರ ಮೇಲೆ ಸಂಪೂರ್ಣ ಗಮನ ಹರಿಸಲಾಗಿತ್ತು.

ಕಾರ್ಯಾಚರಣೆಯ ದೃಷ್ಟಿಯಿಂದ, ಈ ಅಭಿಯಾನವು ಭಾರತದ ಪ್ರೌಢಿಮೆ ಹೊಂದುತ್ತಿರುವ 'ದೂರಗಾಮಿ ನಿಖರ ಯುದ್ಧತಂತ್ರ'ದ ಸಿದ್ಧಾಂತವನ್ನು ಪ್ರದರ್ಶಿಸಿತು. ದೀರ್ಘ ವ್ಯಾಪ್ತಿಯ ಕ್ರೂಸ್ ಕ್ಷಿಪಣಿಗಳು ಮತ್ತು ನಿಖರ ಮಾರ್ಗದರ್ಶಿತ ಅಸ್ತ್ರಗಳನ್ನು ಹೊತ್ತ ರಫೇಲ್ ಯುದ್ಧ ವಿಮಾನಗಳು ಹಾಗೂ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯೊಂದಿಗೆ ಸಂಯೋಜಿತಗೊಂಡ ಸುಖೋಯ್ ವಿಮಾನಗಳು ವಿಸ್ತೃತ ಯುದ್ಧಭೂಮಿಯಾದ್ಯಂತ ಆಳವಾದ ಮತ್ತು ಸುಸಂಘಟಿತ ದಾಳಿಗಳನ್ನು ನಡೆಸಲು ಸಾಧ್ಯವಾಗಿಸಿದವು. ಈ ಕಾರ್ಯಾಚರಣೆಯು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ಮೀರಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದು ಒಂದು ಉದ್ದೇಶಪೂರ್ವಕ ಬದಲಾವಣೆ ಸೂಚಿಸಿತು: ಭಾರತವು ಹಳೆಯ ಭೌಗೋಳಿಕ ಮಿತಿಗಳನ್ನು ಕಿತ್ತೆಸೆಯಿತು ಮತ್ತು ಶತ್ರುಗಳಿಗೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಿತು.



ಈ ಅಭಿಯಾನದ ಬೆನ್ನೆಲುಬಾಗಿದ್ದ ರಕ್ಷಣಾತ್ಮಕ ರಚನೆಯೂ ಅಷ್ಟೇ ಮಹತ್ವದ್ದಾಗಿತ್ತು. ಸಮಗ್ರ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಶತ್ರುಗಳ ಡ್ರೋನ್ ಅಥವಾ ಕ್ಷಿಪಣಿ ದಾಳಿಯ ಪ್ರತಿರೋಧಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಿದವು. ಆಕ್ರಮಣಕಾರಿ ದಾಳಿಯ ಸಾಮರ್ಥ್ಯ ಮತ್ತು ವಿಶ್ವಾಸಾರ್ಹ ರಕ್ಷಣಾತ್ಮಕ ಸ್ಥಿತಿಸ್ಥಾಪಕತ್ವದ ಈ ಸಮ್ಮಿಲನವು, ಆಧುನಿಕ ಸಂಘರ್ಷಗಳಲ್ಲಿ 'ನೆಟ್ವರ್ಕ್–ಕೇಂದ್ರಿತ ಯುದ್ಧತಂತ್ರ' ಮತ್ತು ಹಂತ–ಹಂತದ ರಕ್ಷಣಾ ಕವಚದ ಪ್ರಾಮುಖ್ಯತೆಯನ್ನು ತಿಳಿಸಿತು.

ಸೈದ್ಧಾಂತಿಕ ಮಟ್ಟದಲ್ಲಿ, 'ಆಪರೇಷನ್ ಸಿಂದೂರ್' ಏಕಕಾಲದಲ್ಲಿ ಮೂರು ನಿರ್ಣಾಯಕ ಮಿತಿಗಳನ್ನು ದಾಟಿತು: ಜವಾಬ್ದಾರಿಯುತ ಗುರಿ ಆಯ್ಕೆ, ಅಳತೆಗೋಲಿನಂತಿರುವ ಬಲ ಪ್ರಯೋಗ ಮತ್ತು ಶತ್ರುವಿಗೆ ಕಠಿಣ ಎಚ್ಚರಿಕೆ. ರಾಜಕೀಯ ಉದ್ದೇಶ, ನಿಖರ ಮಿಲಿಟರಿ ಗುರಿಗಳು ಮತ್ತು ಅತ್ಯಾಧುನಿಕ ರಕ್ಷಣಾ ಸಾಮರ್ಥ್ಯದ ಮಾರ್ಗದರ್ಶನವಿದ್ದರೆ, ಇಂತಹ ಶಿಕ್ಷಾರ್ಹ ಕ್ರಮಗಳು ಅನಿಯಂತ್ರಿತವಾಗಿ ಯುದ್ಧಕ್ಕೆ ತಿರುಗಬೇಕಿಲ್ಲ ಎಂಬುದನ್ನು ಇದು ಸಾಬೀತುಪಡಿಸಿತು. ಭಾರತವು ಸಮರ ವ್ಯಾಪ್ತಿಯನ್ನು 'ಲಂಬವಾಗಿ' (ಪೂರ್ಣ ಪ್ರಮಾಣದ ಯುದ್ಧ) ಹೆಚ್ಚಿಸುವ ಬದಲು 'ಸಮತಲವಾಗಿ' (ಹೊಸ ಪ್ರದೇಶಗಳಿಗೆ) ವಿಸ್ತರಿಸಿತು; ಆ ಮೂಲಕ ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಿಯೂ ಶತ್ರುವಿಗೆ ಭಾರಿ ನಷ್ಟವನ್ನು ಉಂಟುಮಾಡಿತು.

ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ನಡುವಿನ ಅದ್ಭುತ ಸಮನ್ವಯ. ಅದರಲ್ಲೂ ವಿಶೇಷವಾಗಿ 'ಚೀಫ್ ಆಫ್ ಡಿಫೆನ್ಸ್ ಸ್ಟಾಫ್' (ಸಿಡಿಎಸ್) ಹುದ್ದೆಯ ಸೃಷ್ಟಿಯ ನಂತರ ಉನ್ನತ ರಕ್ಷಣಾ ನಿರ್ವಹಣೆಯಲ್ಲಿ ಆದ ಪ್ರಗತಿಯು, ಈ ತ್ರಿ–ಸೇವಾ ಸಂಘಟಿತ ಕಾರ್ಯಾಚರಣೆಯಲ್ಲಿ ಪ್ರತಿಫಲಿಸಿತು. ನೌಕಾಪಡೆಯ ರಣತಂತ್ರ, ವಾಯುಪಡೆಯ ಪ್ರಾಬಲ್ಯ ಮತ್ತು ಭೂಸೇನೆಯ ಗುರಿ ಕೇಂದ್ರಿತ ದಾಳಿಗಳು ಪ್ರತ್ಯೇಕ ಕ್ರಮಗಳಾಗಿರದೆ, ಒಂದು 'ಏಕೀಕೃತ ಕಾರ್ಯಾಚರಣಾ ವಿನ್ಯಾಸ'ದ ಅಂಗಗಳಾಗಿದ್ದವು.

ರಕ್ಷಣಾ ಕ್ಷೇತ್ರದಲ್ಲಿನ ದೇಶೀಯ ಸಾಮರ್ಥ್ಯದ ಬೆಳವಣಿಗೆ ಅಥವಾ 'ಆತ್ಮನಿರ್ಭರತೆ' ಈ ಯಶಸ್ಸನ್ನು ಮತ್ತಷ್ಟು ಬಲಪಡಿಸಿತು. ಸ್ವದೇಶಿ ನಿರ್ಮಿತ ಯುದ್ಧೋಪಕರಣಗಳು, ನಿಖರ ಅಸ್ತ್ರ ವ್ಯವಸ್ಥೆಗಳು, ಡ್ರೋನ್ ವಿರೋಧಿ ತಂತ್ರಜ್ಞಾನಗಳು ಮತ್ತು ಸುಧಾರಿತ ಗುಪ್ತಚರ ಹಾಗೂ ಕಣ್ಗಾವಲು ಬೆಂಬಲವು, ಭಾರತವು ಸ್ವಾವಲಂಬನೆಯತ್ತ ಸಾಧಿಸಿರುವ ಪ್ರಗತಿಯನ್ನು ಬಿಂಬಿಸಿದವು. ಹೀಗಾಗಿ, 'ಆಪರೇಷನ್ ಸಿಂದೂರ್' ಕೇವಲ ಮಿಲಿಟರಿ ಸಂಕಲ್ಪದ ಪ್ರದರ್ಶನವಾಗಿರದೆ, ಭಾರತದ ಕೈಗಾರಿಕಾ ಮತ್ತು ತಾಂತ್ರಿಕ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿತು. ಇಂದು ರಾಷ್ಟ್ರದ ರಕ್ಷಣಾ ಸನ್ನದ್ಧತೆಯು ಕೈಗಾರಿಕಾ ಸಾಮರ್ಥ್ಯದಿಂದ ಬೇರ್ಪಡಿಸಲಾಗದಂತಿದೆ.

ರಾಜತಾಂತ್ರಿಕವಾಗಿ, ಈ ಕಾರ್ಯಾಚರಣೆಯನ್ನು ಅತ್ಯಂತ ವ್ಯವಸ್ಥಿತವಾದ 'ನಿರೂಪಣಾ ನಿರ್ವಹಣೆ'ಯೊಂದಿಗೆ ಸಮನ್ವಯಗೊಳಿಸಲಾಗಿತ್ತು. ತನ್ನ ಕ್ರಮಗಳನ್ನು ಭಯೋತ್ಪಾದನಾ ವಿರೋಧಿ ಮತ್ತು ಆತ್ಮರಕ್ಷಣೆಯ ಕಾರ್ಯವಾಗಿ ಬಿಂಬಿಸುವ ಮೂಲಕ, ಆಪರೇಷನ್ ಸಿಂದೂರ್‌ಗೆ ಅಂತಾರಾಷ್ಟ್ರೀಯ ಕಾನೂನುಬದ್ಧ ಸಮರ್ಥನೆಯನ್ನು (Jus ad bellum) ನೀಡಲಾಯಿತು. ಮಿಲಿಟರಿ ಕ್ರಮ ಮತ್ತು ರಾಜತಾಂತ್ರಿಕ ಸಂದೇಶಗಳ ನಡುವಿನ ಈ ಅದ್ಭುತ ಹೊಂದಾಣಿಕೆಯು, ಜಾಗತಿಕ ಒತ್ತಡಗಳ ನಡುವೆಯೂ ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಅಂತಿಮವಾಗಿ, 'ಆಪರೇಷನ್ ಸಿಂದೂರ್'ನ ಅತ್ಯಂತ ವಿಶಿಷ್ಟ ಲಕ್ಷಣವೆಂದರೆ ಅದರ ಮುಕ್ತಾಯ. ತನ್ನ ಗುರಿಗಳನ್ನು ಸಾಧಿಸಿದ ನಂತರ, ಭಾರತವು ಒಂದು ನಿಗದಿತ ಕಾಲಮಿತಿಯೊಳಗೆ ಕಾರ್ಯಾಚರಣೆಯನ್ನು ಕೊನೆಗೊಳಿಸಿತು. ಆ ಮೂಲಕ ಅನೇಕ ಇಂದಿನ ಸಂಘರ್ಷಗಳಲ್ಲಿ ಕಂಡುಬರುವ 'ಕಾರ್ಯತಂತ್ರದ ದಿಕ್ಕುತಪ್ಪುವಿಕೆ'ಯನ್ನು ಯಶಸ್ವಿಯಾಗಿ ತಪ್ಪಿಸಿತು. ಕಾರ್ಯಾಚರಣೆಯ ಪ್ರಾರಂಭ, ಅನುಷ್ಠಾನ ಮತ್ತು ಅಂತ್ಯದ ನಿರ್ವಹಣೆಯಲ್ಲಿದ್ದ ಸ್ಪಷ್ಟತೆ ಹಾಗೂ ನಿಖರತೆಯೇ ಈ ಕಾರ್ಯಾಚರಣೆಯ ಶ್ರೇಷ್ಠ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.


ಒಂದು ವರ್ಷದ ನಂತರ, ಆಪರೇಷನ್ ಸಿಂದೂರ್‌ನ ಪರಂಪರೆಯು ಕೇವಲ ಶತ್ರುಗಳಿಗೆ ಮಾಡಿದ ಹಾನಿಯ ಪ್ರಮಾಣದಲ್ಲಿಲ್ಲ; ಬದಲಾಗಿ ಅದು ಸ್ಥಾಪಿಸಿದ ಹೊಸ ಮಾದರಿಯಲ್ಲಿದೆ. ನಿಖರವಾದ, ತಂತ್ರಜ್ಞಾನ ಆಧಾರಿತ ಮತ್ತು ರಾಜಕೀಯವಾಗಿ ನಿರ್ದೇಶಿಸಲ್ಪಟ್ಟ ಮಿಲಿಟರಿ ಕ್ರಮವು ಶತ್ರುಗಳಿಗೆ ಭಾರಿ ನಷ್ಟ ಉಂಟುಮಾಡಬಲ್ಲದು, ಅವರ ಪ್ರತಿರೋಧದ ತಂತ್ರವನ್ನು ಬದಲಿಸಬಲ್ಲದು ಮತ್ತು ಅದೇ ಸಮಯದಲ್ಲಿ ಸಂಘರ್ಷವು ಮಿತಿಮೀರದಂತೆ ನೋಡಿಕೊಳ್ಳಬಲ್ಲದು ಎಂಬುದನ್ನು ಇದು ತೋರಿಸಿಕೊಟ್ಟಿದೆ. ಇದು ಅಣ್ವಸ್ತ್ರದ ಅಡಿಯಲ್ಲೂ 'ಸೀಮಿತ ಯುದ್ಧ'ಕ್ಕಾಗಿ ಭಾರತವು ರೂಪಿಸಿಕೊಂಡಿರುವ ಉದ್ದೇಶದಲ್ಲಿ ದೃಢತೆ, ಅನುಷ್ಠಾನದಲ್ಲಿ ನಿಖರತೆ ಮತ್ತು ಸಂಯಮದಲ್ಲಿ ಶಿಸ್ತು ಇವುಗಳ ಹೊಸ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ.

(ಲೇಖಕರು ಪರಮ ವಿಶಿಷ್ಟ ಸೇವಾ ಪದಕ ಮತ್ತು ಅತಿ ವಿಶಿಷ್ಟ ಸೇವಾ ಪದಕ ಪುರಸ್ಕೃತರು. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಪಡೆಯ ಕಮಾಂಡರ್ ಆಗಿದ್ದರು. ಇವರು ಭಾರತೀಯ ಸೇನೆಯ ಸಾಮರ್ಥ್ಯ ವರ್ಧನೆಯ ಜವಾಬ್ದಾರಿ ಹೊಂದಿದ್ದ ಮಿಲಿಟರಿ ಕಾರ್ಯಾಚರಣೆಗಳ ಹೆಚ್ಚುವರಿ ಮಹಾನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.)

ಟಾಗೋರ್ ಜಯಂತಿಯಂದೇ ಬಂಗಾಳದಲ್ಲಿ ನೂತನ ಯುಗಾರಂಭ

▸ ಗುರುಪ್ರಸಾದ ಭಟ್ ಉಡುಪಿ

ಇಂದು ಗುರುದೇವ ರವೀಂದ್ರನಾಥ ಟಾಗೋರರ 165 ನೆಯ ಜಯಂತಿಯನ್ನು ಆಚರಿಸಲಾಗುತ್ತಿದ್ದು ಅದಕ್ಕೊಂದು ಮಹತ್ತರ ಐತಿಹಾಸಿಕ ಮೆರಗು ಲಭಿಸಿದೆ! ಏಕೆಂದರೆ ಬಂಗಾಳದಲ್ಲಿ ಹೊಸ ಸೂರ್ಯೋದಯವಾಗಿದೆ. ದೇಶದ ಸಂಸ್ಕೃತಿ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡ ಬಂಗಾಳಿಗಳಿಗಂತೂ ಇದು ನವೀನ ಯುಗಾರಂಭವೆಂದೇ ಹೇಳಬೇಕು. ಕಳೆದ ಐದು ದಶಕಗಳ ಕಾಲ ಅಲ್ಲಿಯ ರಾಜಕೀಯ ಪರಿಸ್ಥಿತಿ ಅಕ್ಷರ ಮಟ್ಟಿಗೆ ಹಳಸಿಹೋಗಿತ್ತು. ಸುಮಾರು ಮೂರುವರೆ ದಶಕಗಳ ಕಾಲ ಬಂಗಾಳವನ್ನಾಳಿದ ಕೆಂಪು ಕಮ್ಯುನಿಸ್ಟರನ್ನು ಉಚ್ಚಾಟಿಸಿ ಗದ್ದುಗೆಗೇರಿದ್ದ ಮಮತಾ ಬ್ಯಾನರ್ಜಿ ವೋಟ್‌ಬ್ಯಾಂಕ್ ಲಾಲಸೆಯಿಂದ ಕ್ರಮೇಣ ಹಿಂದೂದ್ವೇಷಿ ಧೋರಣೆಯನ್ನು ತೋರ್ಪಡಿಸಿ, ಬಹಿರಂಗವಾಗಿ ಬಾಂಗ್ಲಾ ನುಸುಳುಕೋರ ಮುಸ್ಲಿಮರ ಪರವಾಗಿಯೇ ಆಳಲು ಪ್ರಾರಂಭಿಸಿದ್ದಳು.



ಸ್ಥಳೀಯ ಹಿಂದುಗಳ ಧಾರ್ಮಿಕ ಅಸ್ತಿತ್ವವನ್ನು ಕೊನೆಗಾಣಿಸಿ, ಅವರೆಲ್ಲರ ಮೇಲೆ ದೌರ್ಜನ್ಯಗಳನ್ನು ಕಂಡರೂ ಕಡೆಗಣಿಸಿ, ಸ್ಥಳೀಯರನ್ನು ಹೀನಾಯವಾಗಿ ಹಿಂಸಿಸಲು ಶುರುಮಾಡಿದ್ದಳು. ಕೊನೆಗೂ ಆಕೆಯ ಸರ್ಕಾರ ಜನರ ಆಕ್ರೋಶಕ್ಕೆ ಬಲಿಯಾಗಿ ನುಚ್ಚುನೂರಾಯಿತು. ಬಂಗಾಳಿಗಳು ತಮ್ಮ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಈ ಬಾರಿ ಕಟ್ಟಕಡೆಯ ರೈಲನ್ನು ಸುಮ್ಮನೆ ಹೋಗಲು ಬಿಡಲಿಲ್ಲ. ಅವಕಾಶವನ್ನು ಸದುಪಯೋಗ ಪಡೆಸಿಕೊಂಡರು. ಸಕಾಲದಲ್ಲಿ ಅದನ್ನೇರಿ, ಹಳಿತಪ್ಪಿದ್ದ ತಮ್ಮ ರಾಜ್ಯವನ್ನು ಸರಿದಾರಿಯಲ್ಲಿ ತಂದು ರಕ್ಷಿಸಿದ್ದಾರೆ. ಆದ್ದರಿಂದ ಇದು ಬಂಗಾಳಿ ಅಸ್ಮಿತೆಯನ್ನು ಪುನರ್ ಸ್ಥಾಪಿಸಲು ಹಿಂದುಗಳಿಗೆ ಸಿಕ್ಕಿದ ಪುನರ್ಜನ್ಮವೇ ಸರಿ. ಬಂಗಾಳದಲ್ಲಿ ಇದೊಂದು ಹೊಸ ಯುಗಾರಂಭ. ಅಂದೇ ಗುರುದೇವ ರವೀಂದ್ರನಾಥ ಟಾಗೋರ್ ಅವರ 165 ನೆಯ ಜಯಂತಿಯೂ ಆಗಿರುವುದು 'ಸೋನೆ ಪೆ ಸುಹಾಗ್' ಎನ್ನುವಷ್ಟರ ಮಟ್ಟಿಗೆ ವಿಶೇಷ.

ಅಪ್ರತಿಮ ರಾಷ್ಟ್ರವಾದಿಗಳಾಗಿದ್ದ ಬಂಗಾಳಿಗಳಲ್ಲಿ 1920ರ ನಂತರ ಅದೇಕೆ ಕ್ರಮೇಣ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿ ಸಡಿಲಗೊಂಡಿತು? ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಬಂಗಾಳದ ಭೂಮಿಯಿಂದ ನೂರಾರು, ಸಾವಿರಾರು ಪ್ರಖಂಡ ದೇಶಭಕ್ತರು, ಕ್ರಾಂತಿಕಾರಿಗಳು, ಯೋಧರು ಜನ್ಮತಾಳಿದ್ದರು. ನಿಸ್ವಾರ್ಥತೆಯಿಂದ ದೇಶಕ್ಕಾಗಿ ಬಲಿದಾನಗೈದಿದ್ದರು. 1920ರವರೆಗೆ ಸಾಹಿತ್ಯಕೃಷಿಯಲ್ಲಿ ತೊಡಗಿದ್ದ ಬಹುತೇಕ ಎಲ್ಲ ಕವಿಗಳು ಪ್ರಖರ ರಾಷ್ಟ್ರವಾದಿಗಳಾದ್ದರು. ತದನಂತರ ಕೆಲವೊಂದು ಇತಿಹಾಸಕಾರರು ನಿಜೇತಿಹಾಸವನ್ನು ತಿರುಚಿ, ಕಲ್ಪಿತಕತೆಗಳನ್ನು ಸೃಷ್ಟಿಸಿ ಬಂಗಾಳದಲ್ಲಿ ಗೊಂದಲ ಹುಟ್ಟುಹಾಕಿದರು. ಮುಸ್ಲಿಂ ನವಾಬರಿಂದ ತಮ್ಮನ್ನು ರಕ್ಷಿಸಿದ್ದವರನ್ನೇ 'ಮರಾಠಾ ಬೋರ್ಗಿ' ಲೂಟಿಗಾರರೆಂದು ತಪ್ಪಾಗಿ ಬರೆದು ಬಂಗಾಳದ ಇತಿಹಾಸದ ಮೇಲೆ ಅನಾಚಾರವನ್ನೆಸಗಿದರು.

ಉದಾಹರಣೆಗೆ, ದೇಶದಲ್ಲಿ ಪ್ರಥಮ ಬಾರಿಗೆ ಶಿವಾಜಿ ಉತ್ಸವವನ್ನು ಆಚರಿಸಿದ್ದು (ಏಪ್ರಿಲ್ 1896) ಬಂಗಾಳದಲ್ಲಿಯೇ. ಅದರ ಮುಂಚೂಣಿಯಲ್ಲಿದ್ದವರು ಬಾಲಗಂಗಾಧರ ತಿಲಕರು ಮತ್ತು ಗುರುದೇವ ರವೀಂದ್ರನಾಥ ಟಾಗೋರ್. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದಿಂದಲೂ, ಸ್ವಾಮಿ ದಯಾನಂದ ಸರಸ್ವತಿ ಅವರಿಂದಲೂ ಪ್ರೇರಿತರಾಗಿ ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ಪಡೆಯುತ್ತೇನೆ ಎಂದು ಹೂಂಕರಿಸಿದ್ದರು. ಸ್ವರಾಜ್ಯ ಸ್ಥಾಪನೆಗಾಗಿ ಇಡೀ ದೇಶವನ್ನೇ ಜಾಗೃತಗೊಳಿಸಿದ್ದರು. ಆಗ ಅವರಿಗೆ ಸಾಥ್ ನೀಡಿದ್ದು ಗುರುದೇವ ರವೀಂದ್ರರು. ಅವರಂತೂ 'ಶಿಬಾಜಿ ಉತ್ಸಬ್' ಎಂಬ ಬಂಗಾಳಿ ಕವಿತಾ ಪುಸ್ತಕವನ್ನು ಪ್ರಕಟಿಸಿ ಸುಮಾರು 20,000 ಪ್ರತಿಗಳನ್ನು ಹಂಚಿದ್ದರು. ಇದರಲ್ಲಿ ಅವರು ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿದ್ದರು.

ಶಿಬಾಜಿ ಉತ್ಸಬ್ ಪುಸ್ತಕದಲ್ಲಿ ನೀಡಿದ ಕರೆಯ ಭಾವಾರ್ಥ ಹೀಗಿದೆ:

"ಓ ಬೆಂಗಾಳಿಗಳೇ, ನಿಮ್ಮ ಧ್ವನಿಯನ್ನು ಮರಾಠರ ಧ್ವನಿಯೊಡನೆ ಒಂದಾಗಿಸಿ, ಎಲ್ಲರೂ ಒಂದೇ ಕಂಠದಿಂದ 'ಶಿವಾಜಿ ಮಹಾರಾಜರಿಗೆ ಜೈ' ಎಂದು ಘೋಷಣೆ ಕೂಗಿ. ಶಿವಾಜಿ ಮಹೋತ್ಸವದ ಈ ಮಹಾನ್ ಆಚರಣೆಗೆ ಮರಾಠರೂ ಮತ್ತು ಬೆಂಗಾಳಿಗಳೂ ಕೈಜೋಡಿಸಿ ಜೊತೆಜೊತೆಗೆ ಮುಂದೆ ಸಾಗೋಣ. ಭಾರತದ ಪೂರ್ವವೂ ಪಶ್ಚಿಮವೂ, ಬಲವೂ ಎಡವೂ, ಎಲ್ಲರೂ ಒಂದಾಗಿ ಶಿವಾಜಿ ಎಂಬ ಪವಿತ್ರ ನಾಮದ ಮಹಿಮೆಯ ಗುಣಗಾನದಲ್ಲಿ ಒಮ್ಮನಸ್ಸಿನಿಂದ ಹಾಡೋಣ''

ಈ ಕವನದಿಂದ ಗುರುದೇವ ಟಾಗೋರರಿಗೆ ಶಿವಾಜಿ ಮಹಾರಾಜರು ಮತ್ತು ಮರಾಠರೆಂದರೆ ಎಷ್ಟರ ಮಟ್ಟಿನ ಉತ್ಕಟ ಆರಾಧನಾ ಭಾವವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಶಿವಾಜಿ ಉತ್ಸವದಿಂದ ಪ್ರೇರಿತರಾದ ಟಾಗೋರ್ ಅವರ ತಂಗಿಯ ಪುತ್ರಿ ಸರಳಾ ದೇವಿ ಅವರು ಬಂಗಾಳದಲ್ಲಿ 'ಪ್ರತಾಪಾದಿತ್ಯ ಉತ್ಸವ'ವನ್ನು ಆಚರಿಸಲು ತೊಡಗಿದರು. ಮಹಾರಾಜ ಪ್ರತಾಪಾದಿತ್ಯನು (1561–1611) 16ನೇ ಶತಮಾನದ ಪ್ರಬಲ ಬಂಗಾಳಿ ಹಿಂದು ರಾಜ. ಸ್ವತಂತ್ರ ಸಾಮ್ರಾಜ್ಯವನ್ನು ಕಟ್ಟಿ, ಮೊಘಲರನ್ನು ಕಟುವಾಗಿ ವಿರೋಧಿಸಿದವನಾಗಿದ್ದ. ಆತ ದಕ್ಷಿಣ ಬಂಗಾಳವನ್ನು (ಜೆಸ್ಸೋರ್, ಖುಲ್ನಾ, ಬಕರ್‌ಗಂಜ್) ಆಳಿದ ಬಾರೋ ಭುಯನ್ ಮುಖ್ಯಸ್ಥರಲ್ಲಿ ಅತ್ಯಂತ ಪ್ರಮುಖರಾಗಿದ್ದರೂ ಗುರುದೇವರು ಅವನ ಹೆಸರಿನಲ್ಲಿ ಶಿವಾಜಿ ಉತ್ಸವದಂತೆ ಉತ್ಸವವನ್ನು ಆಚರಿಸುವುದನ್ನು ವಿರೋಧಿಸಿದರು. ಏಕೆಂದರೆ, ಅವರಿಗೆ ಶಿವಾಜಿ ಮಹಾರಾಜರ ಆದರ್ಶವು ಎಷ್ಟು ಉದಾತ್ತವಾಗಿತ್ತೆಂದರೆ, ಶಿವಾಜಿ ಮತ್ತು ಪ್ರತಾಪಾದಿತ್ಯರನ್ನು ಒಂದೇ ನೆಲೆಯಲ್ಲಿ ಇಡುವುದನ್ನು ಅವರು ಸುತರಾಂ ಒಪ್ಪಿಕೊಳ್ಳಲಿಲ್ಲ. ಶಿವಾಜಿಯ ಸಾಧನೆಗಳನ್ನು ಇಡೀ ಭಾರತವನ್ನು ಒಂದುಗೂಡಿಸುವ ದೃಷ್ಟಿಕೋನಯೆಂದು ಅವರು ವಾದಿಸುತ್ತಿದ್ದರು. ಶಿವಾಜಿಗೆ ಬೇರೆ ಯಾವುದೇ ರಾಜರು ಸರಿಸಾಟಿಯಲ್ಲ ಎಂದೇ ಅವರ ಅಭಿಮತವಾಗಿತ್ತು. ಕೊನೆಗೆ ಬಂಗಾಳದಲ್ಲಿ 'ಪ್ರತಾಪಾದಿತ್ಯ ಉತ್ಸವ' ಆಚರಣೆಯಾಗಲಿಲ್ಲ. ಕೊನೆಯವರೆಗೂ ಗುರುದೇವ ಟಾಗೋರರು ತಮ್ಮ ಶಿವಾಜಿ ಮಹಾರಾಜರ ಮೇಲಣ ಗೌರವಾದರ ಭಕ್ತಿಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಜತನದಿಂದ ನೋಡಿಕೊಂಡಿದ್ದರು. ಒಂದುವೇಳೆ ಅವರಿಂದು ಇದ್ದಿದ್ದರೆ, ಶಿವಾಜಿ ಮಹಾರಾಜರನ್ನು ಮತ್ತು ಮರಾಠರನ್ನು ತುಚ್ಛವಾಗಿ ಹೀಯಾಳಿಸುವ ಬಂಗಾಳಿಗಳನ್ನು ತರಾಟೆಗೆ ತೆಗೆದುಕೊಂಡು, ಛೀಮಾರಿ ಹಾಕುತ್ತಿದ್ದರೇನೋ.

ಇನ್ನೊಂದು ಉದಾಹರಣೆ: ಬಂಗಾಳ ಕಂಡ ಇನ್ನೊಬ್ಬ ಅಪ್ರತಿಮ ರಾಷ್ಟ್ರವಾದಿ ಕವಿ ಮತ್ತು ಪ್ರಸಿದ್ಧ ಲೇಖಕ ನವೀನಚಂದ್ರ ಸೇನ್ (1847–1909) ತಮ್ಮ 'ಸಂಗಮತಿ' ಎಂಬ ಬಂಗಾಳಿ ಕವನ ಸಂಕಲನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಗಾಢವಾದ ಭಾವಭಕ್ತಿ ಸೂಸುವ ಕವನಗಳ ಮೂಲಕ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಶಿವಾಜಿ ಮಹಾರಾಜರನ್ನು ಸ್ವಾತಂತ್ರ್ಯ, ಧೈರ್ಯ ಮತ್ತು ಪ್ರತಿರೋಧದ ಪ್ರಬಲ ಮೂರ್ತಿರೂಪವೆಂದು ಚಿತ್ರಿಸಿದ್ದಾರೆ. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದ ಉದಯದೊಂದಿಗೆ ಲಕ್ಷ್ಮಿಯಂತೆ ಹೊಳೆಯುತ್ತಿದ್ದ ಮೊಘಲ್ ಸಾಮ್ರಾಜ್ಯದ ವೈಭವ ಮತ್ತು ಭಾಗ್ಯ ನಿಧಾನವಾಗಿ ಮಂಕಾಗಿ ಅಂಧಕಾರದಲ್ಲಿ ಲೀನವಾಯಿತು (ವಿನಾಶವಾಯಿತು) ಎಂದು ಅವರು ಬರೆದಿದ್ದಾರೆ.

ಇಂತಹ ಅನೇಕ ಬಂಗಾಳಿ ಕವಿಗಳು ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿನ ತಮ್ಮ ಅದಮ್ಯ ಗೌರವಾದರವನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ಅವರೆಲ್ಲರೂ ಮೊದಲು ಪ್ರಖರ ರಾಷ್ಟ್ರವಾದಿಗಳಾಗಿದ್ದರು. ಅವರನ್ನು ಹಾಗೆ ಬರೆಯಲು ಪ್ರೇರೇಪಿಸಿದ್ದು ದೇಶಪ್ರೇಮ ಎಂಬ ಏಕಮೇವ ಸೂತ್ರ. ಇದೆಲ್ಲವೂ ಕ್ರಮೇಣ ಬದಲಾಗಲು ಶುರು ಹಚ್ಚಿದ್ದೇ 1920ರ ಅನಂತರ ಸೃಷ್ಟಿಸಿದ 'ಬೋರ್ಗಿ ಮತ್ತು 'ಮಹಾರಾಷ್ಟ್ರಪುರಾಣ'ದಂತಹ ಅಸಂಬದ್ಧ ಕಲ್ಪಿತಕತೆಗಳು! ಆದರೆ ಇವೆಲ್ಲದರ ಹೊರತಾಗಿಯೂ ಇಂದಿಗೂ ಬಂಗಾಳಿಗಳ ರಾಷ್ಟ್ರಪ್ರೇಮ ಮತ್ತು ಧರ್ಮ ರಕ್ಷಣೆಗಾಗಿ ಸದಾ ತತ್ಪರರಾಗಿರುವ ಅವರ ಕೆಚ್ಚೆದೆ ಮೆಚ್ಚುವಂತಹದು.

ಈ ಎಲ್ಲ ಕವಿವರೇಣ್ಯರ ಲೇಖನಗಳನ್ನು, ಬರೆಹಗಳನ್ನು ಮತ್ತು ಕವಿತೆ–ಕಾವ್ಯಗಳನ್ನು ಪುನಃ ಬಂಗಾಳಿ ಸಮಾಜದಲ್ಲಿ ಬಿತ್ತರಿಸಬೇಕು. ಅವರಲ್ಲಿ ಹುದುಗಿದ್ದ ರಾಷ್ಟ್ರಚೈತನ್ಯವನ್ನು ಉದ್ದೀಪನಗೊಳಿಸಬೇಕು. ತಮ್ಮ ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಉಳಿಸಿಕೊಂಡ ಬಂಗಾಳಿಗಳಿಗೆ ಕೋಟಿಕೋಟಿ ಪ್ರಣಾಮಗಳು.



ಭಾರತದ ಶೌರ್ಯಗಾಥೆ

ಭಾರತ ಮತ್ತು ಪಾಕಿಸ್ತಾನದ ನಡುವಿನ ಮಿಲಿಟರಿ ಸಮೀಕರಣವನ್ನೇ ಬದಲಿಸಿದ ಆಪರೇಷನ್ ಸಿಂದೂರ ನಡೆದು ಈಗ ಒಂದು ವರ್ಷ ಕಳೆದಿದೆ. ಈ ಸಂಘರ್ಷದ ಕುರಿತು ಹೊರಬಿದ್ದಿರುವ ಸಮಗ್ರ ಅಂತಾರಾಷ್ಟ್ರೀಯ ವರದಿಯೊಂದು ಭಾರತದ ಅಪ್ರತಿಮ ಯಶಸ್ಸನ್ನು ಎತ್ತಿ ಹಿಡಿದಿದೆ. ಭಾರತದ ನಿಖರ ದಾಳಿಗಳಿಂದ ಪಾಕಿಸ್ತಾನದ ಪ್ರಮುಖ ಸೇನಾ ಮೂಲಸೌಕರ್ಯಗಳು ಧ್ವಂಸಗೊಂಡಿದ್ದವು ಹಾಗೂ ಅಂತಿಮವಾಗಿ ಪಾಕಿಸ್ತಾನವೇ ಕದನ ವಿರಾಮಕ್ಕೆ ಮೊರೆ ಹೋಗುವಂತಾಗಿತ್ತು ಎಂದು ಈ ವರದಿ ಸಾಕ್ಷ್ಯಾಧಾರಿತವಾಗಿ ವಿವರಿಸಿದೆ.

ಬರೀ ಯುದ್ಧವಲ್ಲ

ಒಂದು ವರ್ಷದ ನಂತರ ಹಿಂತಿರುಗಿ ನೋಡಿದಾಗ, ಆಪರೇಷನ್ ಸಿಂದೂರ ಕೇವಲ ಯುದ್ಧ ವಿಮಾನಗಳ ಕಾಳಗವಾಗಿರಲಿಲ್ಲ. ಅದು ಭಾರತದ ತಾಂತ್ರಿಕ ಶಕ್ತಿ, ಸಂಘಟಿತ ಯುದ್ಧತಂತ್ರ ಮತ್ತು ದಕ್ಷ ನಾಯಕತ್ವದ ವಿಜಯವಾಗಿತ್ತು. ಪಾಕಿಸ್ತಾನದ ಸುಳ್ಳು ಸುದ್ದಿಗಳ ಅಬ್ಬರ ಅಂತಿಮವಾಗಿ ಭಾರತದ ನಿಖರ ಕ್ಷಿಪಣಿಗಳ ಅಬ್ಬರದ ಮುಂದೆ ಮಂಕಾಯಿತು. ಇಂದು ಈ ಕಾರ್ಯಾಚರಣೆ, ಆಧುನಿಕ ನೆಟ್‌ವರ್ಕ್ ಕೇಂದ್ರಿತ ಯುದ್ಧತಂತ್ರಕ್ಕೆ ಜಗತ್ತಿನಲ್ಲಿ ಒಂದು ಅತ್ಯುತ್ತಮ ಉದಾಹರಣೆಯಾಗಿ ಉಳಿದಿದೆ. ಇಷ್ಟಾದರೂ ಪಾಕಿಸ್ತಾನ ಭಯೋತ್ಪಾದಕರನ್ನು ಪೋಷಿಸುತ್ತಿರುವುದು ದುರಂತವೇ ಸರಿ.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರಕ್ಕೆ ಒಂದು ವರ್ಷ

ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಆರಂಭವಾದ ಆಪರೇಷನ್ ಸಿಂದುರ ಭಾರತದ ರಾಷ್ಟ್ರೀಯ ಭದ್ರತಾ ತಂತ್ರದಲ್ಲಿ ಮಹತ್ವದ ಬದಲಾವಣೆಯ ತಂದಿತು. ಡ್ರೋನ್‌ಗಳು, ನೆಟ್‌ವರ್ಕಿಂಗ್ ಮತ್ತು ಕೃತಕ ಬುದ್ಧಿಮತ್ತೆ(ಎಐ) ಬಳಸಿ ದಾಳಿ ನಡೆಸುವಲ್ಲಿ ಇದು ಹೊಸ ಮಾದರಿಯಾಯಿತು. ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆ ತಡೆಗಟ್ಟಲು ಭಾರತ ತೋರಿದ ರಾಜಕೀಯ ಇಚ್ಛಾಶಕ್ತಿಯ ಸಂಕೇತವಾಗಿ ಈ ಕಾರ್ಯಾಚರಣೆ ಕಂಡುಬಂತು. ಪ್ರಧಾನಿ ನರೇಂದ್ರ ಮೋದಿ ಭಾರತವು ಅಣು ಬೆದರಿಕೆಯನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಪಹಲ್ಗಾಮ್ ದಾಳಿಯಲ್ಲಿ 26 ಮಂದಿ ಮೃತಪಟ್ಟ ನಂತರ, ಮೇ 7ರಂದು ಭಾರತ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಒಂಬತ್ತು ಉಗ್ರ ಶಿಬಿರಗಳ ಮೇಲೆ ವಾಯು ದಾಳಿ ನಡೆಸಿ, ಸುಮಾರು 100 ಉಗ್ರರ ಹೆಡೆಮುರಿ ಕಟ್ಟಿತು. ಈ ದಾಳಿಗಳು ಬಹಾವಲ್ಪುರ, ಮುರಿದ್ಕೆ, ಸಿಯಾಲ್ಕೋಟ್, ಮುಜಾಫರಾಬಾದ್ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿದ್ದವು. ಇದರಿಂದ ಉಂಟಾದ ಉದ್ವಿಗ್ನತೆಗೆ ಪಾಕಿಸ್ತಾನ ಪ್ರತಿದಾಳಿ ನಡೆಸಿದರೂ, ಭಾರತವು ಹೆಚ್ಚಿನ ದಾಳಿಗಳನ್ನು ವಿಫಲಗೊಳಿಸಿತು. ಮೇ 10ರಂದು ಹಾಟ್‌ಲೈನ್ ಮಾತುಕತೆ ಬಳಿಕ ಪರಿಸ್ಥಿತಿ ಶಾಂತವಾಯಿತು. ಈ ಕಾರ್ಯಾಚರಣೆಯ ಬಳಿಕ ಭಾರತ ತನ್ನ ಸೇನಾ ಶಕ್ತಿಯನ್ನು ಹೆಚ್ಚಿಸಲು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಹೊಸ ಕ್ಷಿಪಣಿಗಳು, ಡ್ರೋನ್‌ಗಳು, ಎಸ್-400 ವ್ಯವಸ್ಥೆಗಳು, ರಾಫೆಲ್ ಯುದ್ಧ ವಿಮಾನಗಳು ಮತ್ತು ಐಎನ್ಎಸ್ ಅರಿಧಮನ್ ಸೇರಿದಂತೆ ಹಲವು ಅಸ್ತ್ರಗಳನ್ನು ಸೇನೆಗೆ ಸೇರ್ಪಡೆಗೊಳಿಸಿದೆ.

ಏನಿದು ವರದಿ?: ಸ್ವಿಜರ್ಲೆಂಡ್ ಮೂಲದ ಸೆಂಟರ್ ಡಿ ಹಿಸ್ಟೊಯಿರ್ ಎಟ್ ಡಿ ಪ್ರೊಸ್ಪೆಕ್ಟಿವ್ ಮಿಲಿಟೈರ್ಸ್ (ಸಿಎಚ್‌ಪಿಎಂ) ಜನವರಿ 15, 2026ರಂದು ಬಿಡುಗಡೆ ಮಾಡಿದ ಈ ವರದಿ, ಯುದ್ಧದ ಆರಂಭಿಕ ಹಂತದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿದ್ದ ಭ್ರಮೆಯನ್ನು ಹೊಡೆದೋಡಿಸಿದೆ. ಮಿಲಿಟರಿ ಇತಿಹಾಸಕಾರ ಆಡ್ರಿಯನ್ ಫಾಂಟನೆಲ್ಲಾಜ್ ಸಿದ್ಧಪಡಿಸಿದ ಈ ವರದಿ, 2025ರ ಮೇ 7 ರಿಂದ 10ರವರೆಗೆ ನಡೆದ 88 ಗಂಟೆಗಳ ವಾಯು ಸಮರದಲ್ಲಿ ಭಾರತ ಹೇಗೆ ಪಾಕಿಸ್ತಾನದ ವಾಯುಪ್ರದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು ಎಂಬುದನ್ನು ಉಪಗ್ರಹ ಚಿತ್ರಗಳ ಸಮೇತ ವಿವರಿಸಿದೆ.



ಕಾರ್ಯಾಚರಣೆಯ ಕೇಂದ್ರಬಿಂದುವಾದ ಮಹಿಳಾ ಅಧಿಕಾರಿಗಳು

ಈ ಕಾರ್ಯಾಚರಣೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಮಹಿಳಾ ಅಧಿಕಾರಿಗಳ ಪಾತ್ರ ದೇಶಕ್ಕೆ ಹೆಮ್ಮೆ ತಂದಿತು. ದಾಳಿಯ ನಂತರದ ಅಧಿಕೃತ ಸುದ್ದಿಗೋಷ್ಠಿಗಳಲ್ಲಿ ಭೂಸೇನೆ ಮತ್ತು ವಾಯುಸೇನೆಯ ಮಹಿಳಾ ಅಧಿಕಾರಿಗಳೇ ಮುಂಚೂಣಿಯಲ್ಲಿದ್ದು, ಸಂಕೀರ್ಣ ಮಿಲಿಟರಿ ವಿವರಗಳನ್ನು ಸಮಾಧಾನಚಿತ್ತದಿಂದ ಜಗತ್ತಿಗೆ ವಿವರಿಸಿದರು. ವಿಂಗ್ ಕಮಾಂಡರ್ ವ್ಯೊಮಿಕಾ ಸಿಂಗ್ ವಾಯುಸೇನೆಯ ಪರವಾಗಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರೆ, ಕರ್ನಲ್ ಸೋಫಿಯಾ ಖುರೇಷಿ ಭೂಸೇನೆಯ ಪರವಾಗಿ ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡಿದರು. ಇದು ಭಾರತೀಯ ಸೇನೆಯ ಆಧುನೀಕರಣ ಮತ್ತು ಸ್ತ್ರೀ ಶಕ್ತಿಯ ಸಬಲೀಕರಣದ ಸಂಕೇತವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಯಿತು. ಯುದ್ಧದಂತಹ ತುರ್ತು ಪರಿಸ್ಥಿತಿಯಲ್ಲೂ ಭಾರತದ ಸಾಂಸ್ಥಿಕ ಬದಲಾವಣೆ ಮತ್ತು ವೃತ್ತಿಪರತೆಯನ್ನು ಈ ಅಧಿಕಾರಿಗಳು ಜಗತ್ತಿಗೆ ತೋರಿಸಿಕೊಟ್ಟರು.

ಪಹಲ್ಗಾಮ್ ದಾಳಿಗೆ ತಕ್ಕ ಪ್ರತ್ಯುತ್ತರ

2025ರ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರು ನಡೆಸಿದ ಭೀಕರ ದಾಳಿಗೆ ಪ್ರತೀಕಾರವಾಗಿ ಭಾರತ ಈ ಆಪರೇಷನ್ ಸಿಂದೂರ ಆರಂಭಿಸಿತ್ತು. ಮೇ 7ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಬತ್ತು ಪ್ರಮುಖ ಉಗ್ರಗಾಮಿ ನೆಲೆಗಳ ಮೇಲೆ ಭಾರತೀಯ ಪಡೆಗಳು ಏಕಕಾಲಕ್ಕೆ ದಾಳಿ ನಡೆಸಿದವು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವೂ ವಾಯುದಾಳಿ ನಡೆಸಿದಾಗ ನಡೆದ ಸಂಘರ್ಷದಲ್ಲಿ ಭಾರತ ಮೊದಲು ಒಂದು ರಾಫೆಲ್, ಒಂದು ಮಿರಾಜ್-2000 ಮತ್ತು ಮಿಗ್-29 ಅಥವಾ ಸುಖೋಯ್-30 ವಿಮಾನಗಳನ್ನು ಕಳೆದುಕೊಂಡಿತು. ಇದನ್ನೇ ಪಾಕಿಸ್ತಾನ ದೊಡ್ಡದಾಗಿ ಬಿಂಬಿಸಿತ್ತು. ಆದರೆ, ಭಾರತದ ಅಸಲಿ ತಂತ್ರಗಾರಿಕೆ ಆರಂಭವಾಗಿದ್ದೇ ಅಲ್ಲಿಂದ.

ಉಪಗ್ರಹ ಸಾಕ್ಷ್ಯಗಳು ಮತ್ತು ಹಾನಿಯ ಅಂದಾಜು

ಪಾಕಿಸ್ತಾನದ ನೂರ್ ಖಾನ್, ಭೊಲಾರಿ, ಜಾಕೋಬಾಬಾದ್ ಮತ್ತು ಸರ್ಗೋದ ವಾಯುನೆಲೆಗಳಲ್ಲಿ ಭಾರಿ ಹಾನಿಯಾಗಿರುವುದನ್ನು ಉಪಗ್ರಹ ಚಿತ್ರಗಳು ಖಚಿತಪಡಿಸಿವೆ. ಸ್ವತಂತ್ರ ಭೌಗೋಳಿಕ ವಿಶ್ಲೇಷಕರು ಕೂಡ ಈ ದಾಳಿಗಳು ನಡೆದಿರುವುದನ್ನು ಸಮರ್ಥಿಸಿದ್ದಾರೆ. ಅಲ್ಲದೆ, ಭೊಲಾರಿ ವಾಯುನೆಲೆಯಲ್ಲಿ ಪಾಕಿಸ್ತಾನ ವಾಯುಸೇನೆಯ ಸಿಬ್ಬಂದಿ ಮೃತಪಟ್ಟಿರುವುದನ್ನು ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿ ಮುರಾದ್ ಅಲಿ ಶಾ ಒಪ್ಪಿಕೊಂಡಿದ್ದಾರೆ. ದಾಳಿ ನಡೆದ ಹಲವು ತಿಂಗಳುಗಳ ನಂತರವೂ ಅಲ್ಲಿ ದುರಸ್ತಿ ಕಾರ್ಯಗಳು ನಡೆಯುತ್ತಿರುವುದು ಈ ಹಾನಿಯ ಅಂದಾಜಿಗೆ ಮತ್ತಷ್ಟು ಸಾಕ್ಷ್ಯ ಒದಗಿಸಿದೆ.

ಭಾರತದ ಅಭೇದ್ಯ ರಕ್ಷಾ ಕವಚ

ಪಾಕಿಸ್ತಾನ ನೂರಾರು ಡ್ರೋನ್‌ಗಳು ಮತ್ತು ಹತ್ಫ್ ಕ್ಷಿಪಣಿಗಳ ಮೂಲಕ ಭಾರತದ ಮೇಲೆ ದಾಳಿಗೆ ಯತ್ನಿಸಿತು. ಆದರೆ ಭಾರತದ ಆಕಾಶ್‌ತೀರ್ ಮತ್ತು ಐಎಸಿಸಿಎಸ್ ಎಂಬ ಆಧುನಿಕ ರಕ್ಷಣಾ ಜಾಲ ಶತ್ರುವಿನ ದಾಳಿಯನ್ನು ಗಾಳಿಯಲ್ಲೇ ಹೊಡೆದುರುಳಿಸಿತು. ಅರ್ಧಕ್ಕಿಂತ ಹೆಚ್ಚು ಡ್ರೋನ್‌ಗಳನ್ನು ಭಾರತದ ಗನ್ ವ್ಯವಸ್ಥೆಗಳು ಪತ್ತೆಹಚ್ಚಿ ನಾಶಪಡಿಸಿದರೆ, ಉಳಿದವುಗಳನ್ನು ಎಲೆಕ್ಟ್ರಾನಿಕ್ ವಾರ್‌ಫೇರ್ ಮೂಲಕ ಹಾದಿ ತಪ್ಪಿಸಲಾಯಿತು.

ಪಾಕಿಸ್ತಾನದ ಗರ್ಭದೊಳಗೆ ಬ್ರಹ್ಮೋಸ್ ಗುಡುಗು

ಮೇ 10ರಂದು ಬೆಳಗಿನ ಜಾವ 2 ರಿಂದ 5 ಗಂಟೆಯ ನಡುವೆ ಭಾರತ ಅತ್ಯಂತ ನಿರ್ಣಾಯಕ ದಾಳಿ ನಡೆಸಿತು. ಭಾರತದ ನೆಲದಿಂದಲೇ ಉಡಾವಣೆಯಾದ ಬ್ರಹ್ಮೋಸ್, ಸ್ಕಾಲ್ಪ್-ಇಜಿ ಮತ್ತು ರಾಂಪೇಜ್ ಕ್ಷಿಪಣಿಗಳು ಪಾಕಿಸ್ತಾನದ ಒಳಗಿರುವ ಪ್ರಮುಖ ವಾಯುನೆಲೆಗಳನ್ನು ಧ್ವಂಸಗೊಳಿಸಿದವು.

- **ನೂರ್ ಖಾನ್ ವಾಯುನೆಲೆ: ಇಸ್ಲಾಮಾಬಾದ್ ಸಮೀಪದ ಈ ಪ್ರಮುಖ ನೆಲೆಯಲ್ಲಿದ್ದ ಕಮಾಂಡ್ ಸೆಂಟರ್ ಅನ್ನು ಬ್ರಹ್ಮೋಸ್ ಕ್ಷಿಪಣಿಗಳು ಪುಡಿಗಟ್ಟಿದವು.**
- **ಮುರೀದ್ ಮತ್ತು ರಹೀಮ್ ಯಾರ್ ಖಾನ್: ಇಲ್ಲಿನ ಡ್ರೋನ್ ನಿಯಂತ್ರಣ ಕೇಂದ್ರಗಳು ಮತ್ತು ರನ್-ವೇಗಳು ಹಾನಿಗೊಳಗಾದವು.**
- **ಸರ್ಗೋದ ಮತ್ತು ಭೊಲಾರಿ: ಈ ನೆಲೆಗಳಲ್ಲಿದ್ದ ಪಾಕಿಸ್ತಾನದ ಯುದ್ಧ ವಿಮಾನಗಳು ಹಾರುವ ಮೊದಲೇ ನೆಲದ ಮೇಲೆಯೇ ನಾಶವಾದವು.**

ಒಟ್ಟು 50ಕ್ಕೂ ಹೆಚ್ಚು ನಿಖರ ಕ್ಷಿಪಣಿಗಳನ್ನು ಭಾರತ ಬಳಸಿದ್ದು, ಇದರಿಂದ ಕಂಗೆಟ್ಟ ಪಾಕಿಸ್ತಾನ ಮೇ 10ರ ಮಧ್ಯಾಹ್ನದ ವೇಳೆಗೆ ಕದನ ವಿರಾಮಕ್ಕೆ ಮೊರೆ ಹೋಯಿತು.

ಶತ್ರುವಿನ ಕಣ್ಣು ಸೀಳಿದ ಭಾರತ: ಸೀಡ್ ಕಾರ್ಯಾಚರಣೆ



ಮೇ 8 ಮತ್ತು 9ರಂದು ಭಾರತ ಪಾಕಿಸ್ತಾನದ ವಾಯು ರಕ್ಷಣಾ ವ್ಯವಸ್ಥೆಯನ್ನು ಪೂರ್ಣವಾಗಿ ನಿಷ್ಕ್ರಿಯಗೊಳಿಸುವ ಸೀಡ್ ಕಾರ್ಯಾಚರಣೆ ಕೈಗೆತ್ತಿಕೊಂಡಿತು. ಚುನಿಯಾನ್ ಮತ್ತು ಪಸ್ರೂರ್‌ನಲ್ಲಿರುವ ಪಾಕಿಸ್ತಾನದ ರಡಾರ್‌ಗಳು ಮತ್ತು ಎಚ್‌ಕ್ಯೂ-9 ಕ್ಷಿಪಣಿ ಬ್ಯಾಟರಿಗಳನ್ನು ಇಸ್ರೇಲಿ ತಂತ್ರಜ್ಞಾನದ ಹ್ಯಾರೋಪ್ ಮತ್ತು ಹಾರ್ಪಿ ಲೊಯಿಟರಿಂಗ್ ಮುನಿಷನ್(ಆತ್ಮಹತ್ಯಾ ಡ್ರೋನ್) ಮೂಲಕ ಧ್ವಂಸಗೊಳಿಸಲಾಯಿತು. ಭಾರತದ ಎಸ್-400 ಕ್ಷಿಪಣಿ ವ್ಯವಸ್ಥೆ, ಸುಮಾರು 300 ಕಿ.ಮೀ ದೂರದಲ್ಲೇ ಶತ್ರು ವಿಮಾನಗಳನ್ನು ಪತ್ತೆಹಚ್ಚಿ ಹಿಮ್ಮೆಟ್ಟಿಸಿತು. ಇದರಿಂದ ಪಾಕಿಸ್ತಾನದ ಎಫ್-16 ಮತ್ತು ಜೆಎಫ್-17 ಯುದ್ಧ ವಿಮಾನಗಳಿಗೆ ತನ್ನದೇ ವಾಯುಪ್ರದೇಶದಲ್ಲಿ ಹಾರಾಡಲು ಭಯವಾಗುವಂತಹ ಸ್ಥಿತಿ ನಿರ್ಮಾಣವಾಯಿತು.

ಕಿರುಸುದ್ದಿ

ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ

ತಿರುವನಂತಪುರ: ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಯುಡಿಎಫ್ ಭರ್ಜರಿ ಗೆಲುವು ಸಾಧಿಸಿದೆ. ಈ ಮಧ್ಯೆ ಎಲ್ಲರ ಚಿತ್ತ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಮೂರು ಸ್ಥಾನಗಳ ಮೇಲೆ ಹರಿದಿದೆ. ಈ ಮೂರು ಅಭ್ಯರ್ಥಿಗಳ ಗೆಲುವಿನ ಬಗ್ಗೆ ಎಲ್ಲಾ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇದು ರಾಜ್ಯದ ರಾಜಕೀಯಕ್ಕೆ ಅಪಾಯವನ್ನುಂಟುಮಾಡುತ್ತದೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಬುಧವಾರ ಹೇಳುವ ಮೂಲಕ ಸಣ್ಣ ಗೆಲುವು ಮುಂದೆ ದೊಡ್ಡ ಬದಲಾವಣೆ ತರಲಿದೆ ಎಂಬುದರ ಬಗ್ಗೆ ಸೂಚನೆ ನೀಡಿದ್ದಾರೆ.

ಹಿಂಸಾಚಾರಗಳಲ್ಲಿ ಭಾಗಿ ಆದವರನ್ನು ಬಂಧಿಸಿ: ಇಸಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಮತದಾನದ ನಂತರದ ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿರುವವರನ್ನು ತಕ್ಷಣ ಬಂಧಿಸುವಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ರಾಜ್ಯದಲ್ಲಿ ನಡೆದ ಮತದಾನದ ನಂತರದ ಹಿಂಸಾಚಾರದ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ವಿಯೆಟ್ನಾಂ ಜತೆಗೆ ಭಾರತ ವ್ಯಾಪಾರ ಗುರಿ ದುಪ್ಪಟ್ಟು

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ವಿಯೆಟ್ನಾಂ ಅಧ್ಯಕ್ಷ ಟೋ ಲಾಮ್ ಬುಧವಾರ ಹೊಸದಿಲ್ಲಿಯಲ್ಲಿ ನಡೆದ ಮಾತುಕತೆಯ ವೇಳೆ ಉಭಯ ದೇಶಗಳ ಬಾಂಧವ್ಯವನ್ನು ವರ್ಧಿತ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆ ಹಂತಕ್ಕೆ ಏರಿಸಿದ್ದಾರೆ.

ಉಭಯ ರಾಷ್ಟ್ರಗಳು 2030ರ ವೇಳೆಗೆ ವಾರ್ಷಿಕ 25 ಬಿಲಿಯನ್ ಅಮೆರಿಕನ್ ಡಾಲರ್ ವ್ಯಾಪಾರ ಗುರಿ ನಿಗದಿಪಡಿಸಿವೆ. ಕಳೆದ ದಶಕದಲ್ಲಿ ದ್ವಿಪಕ್ಷೀಯ ವ್ಯಾಪಾರ ದುಪ್ಪಟ್ಟಾಗಿದ್ದು, ಪ್ರಸ್ತುತ 16 ಬಿಲಿಯನ್ ಡಾಲರ್ ತಲುಪಿದೆ. ಡಿಜಿಟಲ್ ಪಾವತಿ, ಅಪರೂಪದ ಭೂಖನಿಜಗಳು, ಔಷಧೀಯ ವಸ್ತುಗಳು, ಶಿಕ್ಷಣ, ಬ್ಯಾಂಕಿಂಗ್ ಮತ್ತು ಸಂಸ್ಕೃತಿ ಸೇರಿದಂತೆ ಒಟ್ಟು 13 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಔಷಧ ಪ್ರಾಧಿಕಾರಗಳ ನಡುವಿನ ಒಪ್ಪಂದ ವಿಯೆಟ್ನಾಂನಲ್ಲಿ ಭಾರತೀಯ ಔಷಧಿಗಳ ಲಭ್ಯತೆಯನ್ನು ಹೆಚ್ಚಿಸಲಿದೆ ಮತ್ತು ಕೃಷಿ ರಫ್ತು ಪ್ರಕ್ರಿಯೆಗಳನ್ನು ಸುಗಮಗೊಳಿಸಲಿದೆ.

ಎರಡೂ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಪರಸ್ಪರ ಸಹಕಾರವನ್ನು ಹೆಚ್ಚಿಸಲಿವೆ. ಭಾರತದ ಯುಪಿಐ ಮತ್ತು ವಿಯೆಟ್ನಾಂನ ವೇಗದ ಪಾವತಿ ವ್ಯವಸ್ಥೆಗಳನ್ನು ಶೀಘ್ರದಲ್ಲೇ ಪರಸ್ಪರ ಜೋಡಿಸಲಾಗುವುದು. ಇಂಡೋ-ಪೆಸಿಫಿಕ್ ಮತ್ತು ದಕ್ಷಿಣ ಚೀನಾ ಸಮುದ್ರದ ಪರಿಸ್ಥಿತಿಯ ಕುರಿತು ಚರ್ಚಿಸಿದ ನಾಯಕರು, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬದ್ಧತೆ ವ್ಯಕ್ತಪಡಿಸಿದರು.

ಈ ವರ್ಷದ ಅಂತ್ಯದೊಳಗೆ ಭಾರತ-ಆಸಿಯಾನ್ ವ್ಯಾಪಾರ ಒಪ್ಪಂದವನ್ನು ನವೀಕರಿಸಲು ನಾಯಕರು ಒಪ್ಪಿಕೊಂಡರು. ಅಧ್ಯಕ್ಷ ಲಾಮ್, ಮಂಗಳವಾರ ಮೂರು ದಿನಗಳ ಅಧಿಕೃತ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದರು.

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

ಚಂಡೀಗಢ: ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ.



ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ. ಸುಮಾರು 1 ಕಿಮೀ ದೂರದವರೆಗೆ ಸ್ಫೋಟದಂತಹ ಶಬ್ದ ಕೇಳಿಬಂದಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದು, ಜಲಂಧರ್ ನಿಲ್ಲಿಸಿದ್ದ ಆಕ್ಟಿವಾಗೆ(ಸ್ಕೂಟರ್) ಬೆಂಕಿ ಹೊತ್ತಿಕೊಂಡಿದೆ. ತನಿಖೆ ನಡೆಸುತ್ತಿದ್ದೇವೆ ಎಂದು ಜಲಂಧರ್ ಪೊಲೀಸ್ ಆಯುಕ್ತ ಧನ್‌ಪ್ರೀತ್ ಕೌರ್ ಹೇಳಿದರು. ಈ ನಡುವೆ ಖಲಿಸ್ತಾನಿ ಲಿಬರೇಷನ್ ಆರ್ಮಿ ದಾಳಿಯ ಹೊಣೆ ಹೊತ್ತುಕೊಂಡಿರುವ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಶಂಭು ರೈಲ್ವೆ ಹಳಿಯಲ್ಲೂ ಸ್ಫೋಟ ನಡೆದಿದ್ದು, ಈಗಿನ ಎರಡೂ ಘಟನೆಗಳೊಂದಿಗೆ ಯಾವುದೇ ಸಂಬಂಧವಿದೆಯೇ ಎಂದು ಭದ್ರತಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಯಾವುದೇ ಸಂಘಟನೆ ಈ ಸ್ಫೋಟಗಳ ಹೊಣೆ ಹೊತ್ತಿಲ್ಲ.

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ

ಕೋಲ್ಕತ್ತಾ: ನಾನು ನನ್ನ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ, ಕೇಂದ್ರವು ನನ್ನನ್ನು ವಜಾಗೊಳಿಸಬಹುದು ಎಂದು ಪಶ್ಚಿಮಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಪಕ್ಷದ ಹೊಸದಾಗಿ ಆಯ್ಕೆಯಾದ ಶಾಸಕರ ಸಭೆಯನ್ನುದ್ದೇಶಿಸಿ ಭಾಷಣದಲ್ಲಿ, ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಬಲವಂತವಾಗಿ ಸೋಲಿಸಲಾಗಿದೆ ಎಂದು ಹೇಳಿದ್ದಾರೆ. 1500 ಕ್ಕೂ ಹೆಚ್ಚು ತೃಣಮೂಲ ಕಾಂಗ್ರೆಸ್ ಕಚೇರಿಗಳನ್ನು ಹೈಜಾಕ್ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಬಂಗಾಳ ಚುನಾವಣಾ ಫಲಿತಾಂಶದ ನಂತರ ಇಂಡಿ ಕೂಟದಲ್ಲಿ ಹೆಚ್ಚಿನ ಒಗ್ಗಟ್ಟು ಇದೆ ಎಂದು ಅವರು ಹೇಳಿದರು. ರಾಜ್ಯವು ಚುನಾವಣೆಗೆ ಸಾಕ್ಷಿಯಾಗಿಲ್ಲ, ಆದರೆ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ ಎಂದು ಆರೋಪಿಸಿದ ಅವರು, ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಬಿಜೆಪಿಯನ್ನು ನೈತಿಕವಾಗಿ ಸೋಲಿಸಿದೆ ಎಂದು ಹೇಳಿದ್ದಾರೆ.

ಹತ್ತು ಶಾಸಕರು ಗೈರು: ಚುನಾವಣೆಯ ಸೋಲಿನ ನಂತರ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕರೆದಿದ್ದ ಪ್ರಮುಖ ಕಾರ್ಯತಂತ್ರದ ಸಭೆಗೆ ನೂತನವಾಗಿ ಆಯ್ಕೆಯಾದ 80 ಶಾಸಕರ ಪೈಕಿ ಸುಮಾರು 10 ಶಾಸಕರು ಗೈರುಹಾಜರಾಗಿದ್ದಾರೆ. ಮಮತಾ ಬ್ಯಾನರ್ಜಿ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮತ್ತು ಹಿರಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಮತ್ತು ಚುನಾವಣೋತ್ತರ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಈ ಸಭೆ ಆಯೋಜಿಸಲಾಗಿತ್ತು.

ಬಂಗಾಳಕ್ಕೆ ಬಿಜೆಪಿ ಸಿಎಂ ಪ್ರಮಾಣ ಸ್ವೀಕಾರ ಮೇ 9ಕ್ಕೆ


ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣ ವಚನ ಸಮಾರಂಭವು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯಲಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಬುಧವಾರ ಘೋಷಿಸಿದ್ದಾರೆ. ರಾಜ್ಯದಲ್ಲಿ ಟಿಎಂಸಿಯ 15 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಿದ ಬಿಜೆಪಿ ರಾಜ್ಯದಲ್ಲಿ ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧವಾಗಿದೆ. ಬೆಳಗ್ಗೆ 10 ಗಂಟೆಗೆ ಆರಂಭವಾಗಲಿರುವ ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಮತ್ತು ಹಲವಾರು ಕೇಂದ್ರ ಸಚಿವರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಹೊಸ ಬಿಜೆಪಿ ಸರ್ಕಾರವು ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೆಳಗ್ಗೆ 10 ಗಂಟೆಗೆ ಪ್ರಮಾಣ ವಚನ ಸ್ವೀಕರಿಸುತ್ತದೆ ಎಂದು ಭಟ್ಟಾಚಾರ್ಯ ಸುದ್ದಿಗಾರರಿಗೆ ತಿಳಿಸಿದರು.



ಡಿಎಂಕೆ, ಎಐಎಡಿಎಂಕೆಯನ್ನು ಪ್ರಮುಖ ಕ್ಷೇತ್ರಗಳಲ್ಲೇ ಸೋಲಿಸಿದ ಟಿವಿಕೆ

ಚೊಚ್ಚಲ ಪ್ರವೇಶದಲ್ಲೇ ಅಪೂರ್ವ ಸಾಧನೆ

ಚೆನ್ನೈ: ತೃತೀಯ ಶಕ್ತಿಯಾಗಿಯೂ ಸ್ಥಾನ ಸಿಗುವುದೋ ಇಲ್ಲವೋ ಎಂದು ಮತ ಎಣಿಕೆ ದಿನದಂದೂ ಬಹುಶಃ ಲೆಕ್ಕಾಚಾರ ಹಾಕಿರಬಹುದಾದ, ಚುನಾವಣಾ ಕಣದ ಪ್ರಪ್ರಥಮ ಸ್ಪರ್ಧಿ ಟಿವಿಕೆ, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಮುಖ ರಾಜಕೀಯ ಶಕ್ತಿಯಾಗಿ ಒಡಮೂಡಿರುವುದು ನಿಜಕ್ಕೂ ಅಚ್ಚರಿಯ ಸಂಗತಿ. ಪಕ್ಷದ ಸಾಧನೆ ಅದೆಷ್ಟು ಪರಿಣಾಮಕಾರಿಯಾಗಿದೆಯೆಂದರೆ ಡಿಎಂಕೆ ಮತ್ತು ಎಐಎಡಿಎಂಕೆಯನ್ನು ಹಲವು ಪ್ರಮುಖ ಕ್ಷೇತ್ರಗಳಲ್ಲೇ ಟಿವಿಕೆ ಪರಾಭವಗೊಳಿಸಿದೆ. ಎರಡು ದ್ರಾವಿಡ ದೈತರ ಸಂಯುಕ್ತ ಬಲವನ್ನು ಮುಚ್ಚೇಬಿಡುವ ಟಿವಿಕೆ ಸಾಮರ್ಥ್ಯವನ್ನು 2026ರ ಚುನಾವಣಾ ಡೇಟಾ ಬಯಲುಗೊಳಿಸಿದೆ.



ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಟಿವಿಕೆ ಗಳಿಸಿರುವ ಮತಗಳ ಪ್ರಮಾಣ ಡಿಎಂಕೆ, ಎಡಿಎಂಕೆಗಳ ಒಟ್ಟು ಮತಗಳ ಪ್ರಮಾಣಕ್ಕಿಂತ ಅತ್ಯಧಿಕವಿದೆ ಮತ್ತು ತಮಿಳುನಾಡಿನ ಆಧುನಿಕ ಚರಿತ್ರೆಯಲ್ಲಿ ರಾಜಕೀಯ ರಂಗಕ್ಕೆ ಚೊಚ್ಚಲ ಪ್ರವೇಶ ಮಾಡಿದ ಪಕ್ಷವೊಂದು ಈ ಪರಿ ಅತ್ಯಧಿಕ ಮತಗಳಿಸಿದ್ದಿಲ್ಲ. ಡಾ.ರಾಧಾಕೃಷ್ಣನ್ ನಗರದಲ್ಲಿ ಟಿವಿಕೆ ಅಭ್ಯರ್ಥಿ ಎನ್.ಮೇರಿ ವಿಲ್ಸನ್ ಶೇ.53.97 ಮತಗಳಿಸಿದ್ದಾರೆ. ಇಲ್ಲಿ ಡಿಎಂಕೆ ಅಭ್ಯರ್ಥಿ ಶೇ.26.56, ಎಐಎಡಿಎಂಕೆ ಅಭ್ಯರ್ಥಿ ಶೇ.14.8 ಮತಗಳಿಸಿದ್ದಾರೆ. ಎರಡೂ ಪಕ್ಷಗಳ ಅಭ್ಯರ್ಥಿಗಳು ಗಳಿಸಿದ ಮತಗಳ ಒಟ್ಟು ಪ್ರಮಾಣ ಕೂಡ ಶೇ.41.4. ವಿಲ್ಸನ್ ಅವರ ಗೆಲುವಿನ ಅಂತರ (ಶೇ.27.41)ಕೂಡ ಡಿಎಂಕೆ, ಎಡಿಎಂಕೆ ಅಭ್ಯರ್ಥಿಗಳು ಪಡೆದ ಒಟ್ಟು ಮತಗಳಿಗಿಂತ ಅತ್ಯಧಿಕವಾಗಿದೆ.

ಮಾಡವರಂನಲ್ಲಿ ಟಿವಿಕೆ ಅಭ್ಯರ್ಥಿ ಎಂ.ಎಲ್. ವಿಜಯಪ್ರಭು ಗಳಿಸಿರುವ ಮತಗಳ ಪ್ರಮಾಣ ಎದುರಾಳಿಗಳ ಒಟ್ಟು ಮತಗಳಿಂದ ದುಪ್ಪಟ್ಟು. ಇಂತಹ ವಿದ್ಯಮಾನಗಳು ಶೋಳಿಂಗನಲ್ಲೂರು, ಮದುರಾವೋಯಲ್ ಕ್ಷೇತ್ರಗಳಲ್ಲೂ ಘಟಿಸಿವೆ. ಇವೆರಡು ಕ್ಷೇತ್ರಗಳಲ್ಲಿ ಟಿವಿಕೆ ಅಭ್ಯರ್ಥಿಗಳಾದ ಇಸಿಆರ್ ಪಿ. ಶರವಣನ್ ಮತ್ತು ರೇವಂತ್ ಚರಣ್ ಅತ್ಯಧಿಕ ಮತಗಳಿಕೆಯೊಂದಿಗೆ ಸಾಂಪ್ರದಾಯಿಕ ದ್ರಾವಿಡ ಪಕ್ಷಗಳ ಅಭ್ಯರ್ಥಿಗಳನ್ನು ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ತಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಡಿಎಂಕೆಯ ಉದಯನಿಧಿ ಸ್ಟಾಲಿನ್ ಮತ್ತು ಪಿ.ಕೆ. ಸೇಕರ್‌ಬಾಬು ಛೇಪೌಕ್-ತಿರುವಳ್ಳಿಕೇಣಿ ಮತ್ತು ಬಂದರು ಕ್ಷೇತ್ರಗಳಲ್ಲಿ ಜಯ ಗಳಿಸಿದ್ದಾರೆ. ಇದರ ಹೊರತು ಡಿಎಂಕೆಯ ಭದ್ರಕೋಟೆ ಖ್ಯಾತಿಯ ಚೆನ್ನೈ ಮತ್ತು ಇದರ ಅರೆನಗರಗಳಲ್ಲಿ ಟಿವಿಕೆ ಹಿಡಿತ ಸಾಧಿಸಿದೆ. ಚೆನ್ನೈಯ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷವು ಶೇ. 45ಮೀರಿ ಮತ ಗಳಿಸಿದೆ. ಪೆರಂಬೂರು, ತಿರುವೊಟ್ಟಿಯೂರ್, ಪೂನಮಲ್ಲಿ, ಅವಡಿ, ಅಂಬತ್ತೂರು ಕ್ಷೇತ್ರಗಳಲ್ಲಿ ಶೇ.50 ಮೀರಿ ಹಿಡಿತ ಸಾಧಿಸಿದೆ.

ಬ್ರೆಜಿಲ್ ಹೈನುಗಾರಿಕೆ ಕ್ರಾಂತಿಗೆ ಭಾರತದ ಕೊಡುಗೆ

ಗುಜರಾತ್‌ನ ಕೃಷ್ಣ ಹೆಸರಿನ ಹೋರಿ ಸಹಕಾರ

ಭಾವನಗರ: 1960ರಲ್ಲಿ ಭಾವನಗರದ ಮಹಾರಾಜರು ಬ್ರೆಜಿಲ್‌ನ ಜಾನುವಾರು ಮಾಲೀಕರೊಬ್ಬರಿಗೆ ಉಡುಗೊರೆಯಾಗಿ ನೀಡಿದ್ದ ಕೃಷ್ಣ ಹೆಸರಿನ ಗಿರ್ ತಳಿಯ ಹೋರಿ, ಇಂದು ಬ್ರೆಜಿಲ್‌ನ ಒಟ್ಟು ಹಾಲು ಉತ್ಪಾದನೆಯ ಶೇ.80ರಷ್ಟು ಪಾಲಿಗೆ ತನ್ನ ವಂಶಾವಳಿಯ ಮೂಲಕ ಕಾರಣವಾಗಿದೆ ಎಂದು ಗುರುತಿಸಲಾಗಿದೆ. ದಕ್ಷಿಣ ಅಮೆರಿಕದ ಜಾನುವಾರುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 1958ರಲ್ಲಿ ಬ್ರೆಜಿಲ್‌ನ ಜಾನುವಾರು ಉದ್ಯಮಿ ಸೆಲ್ಸೊ ಗಾರ್ಸಿಯಾ ಸಿಡ್ ಪರವಾಗಿ ಕೌಬಾಯ್ ಇಲ್ಡೆಫೊನ್ಸೊ ದೊಸ್ ಸಾಂಟೋಸ್ ಅವರು ಕೃಷ್ಣನನ್ನು ಆಯ್ಕೆ ಮಾಡಿದ್ದರು. 1960ರಲ್ಲಿ ಬ್ರೆಜಿಲ್ ತಲುಪಿದ ಈ ಹೋರಿಯ ವಂಶವಾಹಿನಿ ಅಲ್ಲಿನ ಹೈನುಗಾರಿಕೆಯ ರಕ್ತಗತ ಗುಣಲಕ್ಷಣಗಳನ್ನು ನವೀಕರಿಸಿತು. ಅತಿಯಾದ ಅಂತರ್-ತಳಿ ಸಂವರ್ಧನೆಯಿಂದ ಉಂಟಾಗಿದ್ದ ಉತ್ಪಾದಕತೆಯ ಸಮಸ್ಯೆಗಳನ್ನು ಇದು ಯಶಸ್ವಿಯಾಗಿ ನಿವಾರಿಸಿತು. ಇಂದು ಬ್ರೆಜಿಲ್‌ನ ಒಂದು ಗಿರ್ ಹಸು ದಿನಕ್ಕೆ 20 ಲೀಟರ್ ಹಾಲು ನೀಡುತ್ತಿದ್ದು, ಇದು ಅಲ್ಲಿನ ಸ್ಥಳೀಯ ತಳಿಗಳ ಮೂಲ ಉತ್ಪಾದನೆಗಿಂತ ಹತ್ತು ಪಟ್ಟು ಹೆಚ್ಚಾಗಿದೆ. ಈ ತಳಿಶಾಸ್ತ್ರೀಯ ಬದಲಾವಣೆ, ಬ್ರೆಜಿಲ್ ಜಾಗತಿಕ ಹೈನುಗಾರಿಕಾ ಕ್ಷೇತ್ರದಲ್ಲಿ ಮುಂಚೂಣಿಗೆ ಬರಲು ಮತ್ತು ಬೃಹತ್ ವಾಣಿಜ್ಯ ಕೃಷಿ ಬೇಡಿಕೆಗಳನ್ನು ಪೂರೈಸಲು ಸಹಾಯ ಮಾಡಿದೆ.

ಐತಿಹಾಸಿಕ ಹಸ್ತಾಂತರ: ಮದ್ರಾಸ್‌ನ ಮೊದಲ ಭಾರತೀಯ ಗವರ್ನರ್ ಮತ್ತು ಭಾವನಗರದ ಮಹಾರಾಜರಾಗಿದ್ದ ಕೃಷ್ಣಕುಮಾರಸಿಂಹಜಿ ಭಾವಸಿಂಹಜಿ, ಕೃಷ್ಣನನ್ನು ದೊಸ್ ಸಾಂಟೋಸ್ ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಈ ಕೊಡುಗೆ, ಎರಡೂ ದೇಶಗಳ ನಡುವೆ ಇಂದಿಗೂ ಮುಂದುವರಿಯುತ್ತಿರುವ ಸುದೀರ್ಘ ಹೈನುಗಾರಿಕಾ ಪಾಲುದಾರಿಕೆ ಸ್ಥಾಪಿಸಿತು. ಭಾರತದಲ್ಲಿ ಇತರೆ ತಳಿಗಳೊಂದಿಗೆ ಅತಿಯಾಗಿ ಮಿಶ್ರತಳಿ ಸಂವರ್ಧನೆ ನಡೆಸಿದ ಕಾರಣ ಗಿರ್ ತಳಿ ಕ್ಷೀಣಿಸಿದೆ. ಇದನ್ನು ಸರಿಪಡಿಸಲು ಮತ್ತು ಭಾರತೀಯ ಮೂಲ ತಳಿಯನ್ನು ಪುನಃಸ್ಥಾಪಿಸಲು ಬ್ರೆಜಿಲ್‌ನಿಂದ ಇದೇ ಗಿರ್ ತಳಿಯನ್ನು ಮರಳಿ ಆಮದು ಮಾಡಿಕೊಳ್ಳಲು ಭಾರತ ಸರ್ಕಾರ ಇತ್ತೀಚೆಗೆ ನಿರ್ಧರಿಸಿದೆ.



ಅಂತಿಮ ಗೌರವ: ಕೃಷ್ಣನ ಮರಣದ ನಂತರ, ಅದರ ದೇಹವನ್ನು ಸಂರಕ್ಷಿಸಿ ಸಿಡ್ ಅವರ ತೋಟದ ಮನೆಯಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ಇರಿಸಲಾಗಿದೆ. ಹೈನುಗಾರಿಕಾ ಕ್ಷೇತ್ರಕ್ಕೆ ಈ ಹೋರಿ ನೀಡಿದ ಕೊಡುಗೆಯನ್ನು ಗೌರವಿಸಲು ಬ್ರೆಜಿಲ್ ಸರ್ಕಾರ ಅದರ ನೆನಪಿನಲ್ಲಿ ವಿಶೇಷ ಅಂಚೆ ಚೀಟಿಗಳು ಮತ್ತು ನಾಣ್ಯಗಳನ್ನು ಹೊರತಂದಿದೆ.

ಕಿರುಸುದ್ದಿ

ಕುಷ್ಟಗಿ-ಯಶವಂತಪುರ ರೈಲ್ವೆ ಸಂಪರ್ಕಕ್ಕೆ ಆಗ್ರಹ



ಕುಷ್ಟಗಿ: ಪಟ್ಟಣದಿಂದ ಯಶವಂತಪುರ-ಬೆಂಗಳೂರಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ರೈಲು ಓಡಾಟ ಪ್ರಾರಂಭಿಸುವಂತೆ ರೈಲ್ವೆ ಹೋರಾಟ ಸಮಿತಿ ಹೋರಾಟಗಾರ ಜಯತೀರ್ಥ ಆಚಾರ್ ಆಗ್ರಹಿಸಿದ್ದಾರೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುಷ್ಟಗಿ ರೈಲ್ವೆ ಮಾರ್ಗದ ಜೋಡಣೆ ಕಾರ್ಯ ಈಗಾಗಲೇ ಪೂರ್ಣಗೊಳಿಸಿದೆ. ನಮ್ಮ ಭಾಗದ ಪ್ರಯಾಣಿಕರು ಅನುಕೂಲಕ್ಕಾಗಿ ಪಟ್ಟಣದಿಂದ ಹುಬ್ಬಳ್ಳಿಗೆ ರೈಲು ಸಂಪರ್ಕ ಇದೆ. ಬಹು ದಿನದ ರೈಲ್ವೆ ಕನಸು ಈಡೇರಿದೆ. ಆದರೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕಾರ್ಯ ಈಡೇರಿದೆ. ಹುನಗುಂದ, ಇಳಕಲ್, ಕನಕಗಿರಿ, ತಾವರಗೇರಾ, ಬೇವೂರು, ಹಿರೇವಂಕಲಕುಂಟಾ, ಗಜೇಂದ್ರಗಡ, ಹನುಮಸಾಗರ, ಹನಮನಾಳ ಗ್ರಾಮಗಳಿಂದ ರಾಜಧಾನಿಗೆ ತೆರಳಲು ರಸ್ತೆ ಸಾರಿಗೆ ಮೂಲಕ ಖಾಸಗಿ ವಾಹನಗಳನ್ನು ನೆಚ್ಚಿಕೊಳ್ಳುವಂತಾಗಿದೆ. ಕೂಡಲೇ ರಾಜಧಾನಿಗೆ ಸಂಪರ್ಕ ಪ್ರಯಾಣಿಕರ ಅನುಕೂಲಕ್ಕಾಗಿ ರೈಲ್ವೆ ಸಂಪರ್ಕ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕ-ಕ ವಿಮೋಚನಾ ಹೋರಾಟಗಾರ ಬಸವರಾಜ್ ಗಾಣಿಗೇರ್ ಮಾತನಾಡಿ, ಕ.ಕರ್ನಾಟನ ಭಾಗಕ್ಕೆ 371 ಜೆ.ಕಲಾಂ ಕೇವಲ ನಾಮಕವಸ್ತೆಗೆ ಮಾತ್ರ ಉಳಿದಿದೆ. ವಿಶೇಷ ಸ್ಥಾನಮಾನ ದೊರೆತು 12 ವರ್ಷ ಗತಿಸಿದರೂ ಈ ಭಾಗದ ಸರ್ಕಾರಿ ಶಾಲೆಯಲ್ಲಿ ಅಂದಾಜು 30 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿವೆ. ವೈದ್ಯರಿಲ್ಲದೇ ಆಸ್ಪತ್ರೆ ಬಿಕೋ ಎನ್ನುತ್ತಿದೆ. 2025-26ನೇ ಸಾಲಿನಲ್ಲಿ 5 ಸಾವಿರ ಕೋಟಿ ಅನುದಾನದಲ್ಲಿ ಕೇವಲ 800 ಕೋಟಿ ಮಾತ್ರ ಅನುದಾನಕ್ಕೆ ಕ್ರಿಯಾ ಯೋಜನೆ ಸಿದ್ದಪಡಿಸಿದ್ದಾರೆ. ಕ.ಕರ್ನಾಟಕ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಚುನಾಯಿತ ಪ್ರತಿನಿಧಿಗಳು, ರಾಜಕೀಯ ಪಕ್ಷಗಳ ಪ್ರದೇಶಾಭಿವೃದ್ಧಿ ಮಂಡಳಿ ಭಾಗವಾಗಿದ್ದು, ಸಂಪೂರ್ಣ ವಿಫಲರಾಗಿದ್ದಾರೆ. ಮೇ 24ರಂದು ರಾಯಚೂರಿನಲ್ಲಿ 371 ಜೆ ಹೋರಾಟಗಾರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಭಾಗದವರು ಸಭೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಹೋರಾಟಗಾರರಾದ ಕಿರಣ್ ಜ್ಯೋತಿ,ಶ್ರೀಧರ್ ಬಾಬು ಘೋರ್ಪಡೆ ಇದ್ದರು.

ಆರಾಧ್ಯ ರೆಡ್ಡಿಗೆ ರಾಜ್ಯಮಟ್ಟದ ಗೌರವ

ಕಲಬುರಗಿ: ಮಾ.3ರಂದು ಕರ್ನಾಟಕ ಕಲಾ ಸಂಶೋಧನಾ ಅಕಾಡೆಮಿಯ ಪ್ರತಿಭಾವಂತ ವಿದ್ಯಾರ್ಥಿನಿ ಹಾಗೂ ಬಾಲ ನೃತ್ಯ ಕಲಾವಿದೆ ಆರಾಧ್ಯ ರೆಡ್ಡಿ ತಮ್ಮ ಅಸಾಮಾನ್ಯ ಪ್ರತಿಭೆಯಿಂದ ರಾಜ್ಯದ ಮಟ್ಟದಲ್ಲಿ ಗಮನಸೆಳೆದಿದ್ದಾರೆ. ಜಿಲ್ಲೆಯ ಜೇವರ್ಗಿ ತಾಲೂಕಿನ ಬಾಲ ಕಲಾವಿದೆ ಆರಾಧ್ಯ, ಗದಗದಲ್ಲಿ ನಡೆದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಆರಾಧ್ಯ ರೆಡ್ಡಿ ನೀಡಿದ ರೂಪಕ ಹಾಗೂ ನೃತ್ಯ ಪ್ರದರ್ಶನ ಪ್ರೇಕ್ಷಕರನ್ನು ಮೆಚ್ಚಿಸಿತು. ಅವರ ಪ್ರದರ್ಶನವು ಕೇವಲ ಕಲಾ ಕೌಶಲ್ಯಕ್ಕೆ ಸೀಮಿತವಾಗದೇ, ಸಮಾಜದಲ್ಲಿ ದುಷ್ಟ ವಿಚಾರಗಳು ಮತ್ತು ವಿಕೃತ ಮನೋಭಾವಗಳನ್ನು ತೊಡೆದುಹಾಕುವ ಸಂದೇಶವನ್ನೂ ಹೊತ್ತಿತ್ತು. ಪ್ರದರ್ಶನದ ವೇಳೆ ಅವರ ಪ್ರತಿಯೊಂದು ಹೆಜ್ಜೆಯಲ್ಲೂ ಶಿಸ್ತಿನ ಸ್ಪರ್ಶ, ಭಾವದ ಆಳ ಹಾಗೂ ಸಮಾಜದ ಬಗ್ಗೆ ಇರುವ ಕಾಳಜಿ ಸ್ಪಷ್ಟವಾಗಿ ಗೋಚರಿಸಿತು. ಈ ಹಿನ್ನೆಲೆಯಲ್ಲಿ ಪ್ರೇಕ್ಷಕರು ಮೆಚ್ಚುಗೆಯೊಂದಿಗೆ ಚಪ್ಪಾಳೆ ತಟ್ಟಿದರು. ಈ ಸಾಧನೆಗೆ ಗುರುತಾಗಿ ಆರಾಧ್ಯ ರೆಡ್ಡಿಗೆ ಪದ್ಮಭೂಷಣ ಡಾ.ಪಂಡಿತ್ ಪುಟ್ಟರಾಜ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ 30ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಅವರು ನೃತ್ಯ ಮತ್ತು ರೂಪಕ ಪ್ರದರ್ಶಿಸಿದ್ದು, ಚಿಕ್ಕ ವಯಸ್ಸಿನಲ್ಲೇ ಅಪಾರ ಅನುಭವ ಗಳಿಸಿದ್ದಾರೆ. ಅವರ ಸಾಧನೆಯ ಹಿಂದೆ ತಂದೆ-ತಾಯಿಯ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಪ್ರಮುಖ ಪಾತ್ರ ವಹಿಸಿದೆ. ಆರಾಧ್ಯ ರೆಡ್ಡಿಯ ಸಾಧನೆ ರಾಜ್ಯದ ಪಾಲಕರಿಗೆ ಪ್ರೇರಣೆಯಾಗಿದ್ದು, ಮಕ್ಕಳ ಕನಸುಗಳಿಗೆ ಬೆಂಬಲ ನೀಡಿದರೆ ಅವರು ಉನ್ನತ ಸಾಧನೆಗಳನ್ನು ಮಾಡಬಹುದು ಎಂಬುದಕ್ಕೆ ಉದಾಹರಣೆಯಾಗಿದ್ದು, ಇಂತಹ ಪ್ರತಿಭೆಗೆ ಇನ್ನಷ್ಟು ಅವಕಾಶಗಳು ದೊರೆಯಲಿ ಎಂಬ ಆಶಯ ವ್ಯಕ್ತವಾಗುತ್ತಿದೆ.



330 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಸರ್ಕಾರದಿಂದ ಅನುಮೋದನೆ

ಕ್ಯಾನ್ಸರ್ ಆಸ್ಪತ್ರೆ ಕನಸು ಶೀಘ್ರ ನನಸು

▸ ವೆಂಕಟೇಶ ದೇಸಾಯಿ

ದಿಗಂತ ವಿಶೇಷ

ಬಳ್ಳಾರಿ: ಗಣಿನಾಡು ಬಳ್ಳಾರಿಯಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಕನಸು ನನಸಾಗುವ ಕಾಲ ಸನ್ನಿಹಿತವಾಗಿದ್ದು, ಸರ್ಕಾರದ ಅನುಮೋದನೆ ದೊರೆತಿದೆ. ಆಸ್ಪತ್ರೆ ನಿರ್ಮಾಣಕ್ಕೆ ಕೆಎಂಇಆರ್‌ಸಿ ಅನುದಾನ 330 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲು ಸರ್ಕಾರ ಅನುಮೋದನೆ ನೀಡಿದೆ.

ರಾಜ್ಯದಲ್ಲಿ ಕೇವಲ ಬೆರಳೆಣಿಕೆಯಷ್ಟು ಇರುವ ಸರ್ಕಾರಿ ಕ್ಯಾನ್ಸರ್ ಆಸ್ಪತ್ರೆಗಳ ಸಾಲಿಗೆ ಈಗ ಗಣಿ ಜಿಲ್ಲೆ ಬಳ್ಳಾರಿ ಸೇರ್ಪಡೆಯಾಗಲಿದೆ. ಒಂದೇ ಸೂರಿನಡಿ ಕ್ಯಾನ್ಸರ್ ಚಿಕಿತ್ಸೆ ಕಲ್ಪಿಸುವ ಅತ್ಯಂತ ಹೈಟೆಕ್ ಆಸ್ಪತ್ರೆ ಇದಾಗಲಿದ್ದು, ಈ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ.

ಜಿಲ್ಲೆ ಕೈಗಾರಿಕೋದ್ಯಮಿಗಳ ತವರೂರು, ಕಬ್ಬಿಣದ ಅದಿರಿನ ಹೆಬ್ಬಾಗಿಲು ಎಂದು ಪ್ರಸಿದ್ಧಿಯಾಗಿದೆ. ಜಿಲ್ಲೆಯಲ್ಲಿ ವರ್ಷದಿಂದ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಚಿಕಿತ್ಸೆಗಾಗಿ ಕರ್ನೂಲ್, ಹೈದ್ರಾಬಾದ್, ಬೆಂಗಳೂರು, ಹುಬ್ಬಳ್ಳಿ ಸೇರಿ ವಿವಿಧ ಕಡೆ ತೆರಳಿ ಚಿಕಿತ್ಸೆ ಪಡೆಯಬೇಕಿತ್ತು. ಈ ಹಿನ್ನೆಲೆ ಅತಿಹೆಚ್ಚು ಕ್ಯಾನ್ಸರ್‌ಗೆ ತುತ್ತಾಗುತ್ತಿರುವ ಜಿಲ್ಲೆಯ ಜನರಿಗೆ ಸ್ಥಳೀಯ ಮಟ್ಟದಲ್ಲಿ ಅತ್ಯಾಧುನಿಕ ಗುಣಮಟ್ಟದ ಚಿಕಿತ್ಸಾ ಸೌಲಭ್ಯ, ಕಲ್ಪಿಸಿಕೊಡುವ ಉದ್ದೇಶದೊಂದಿಗೆ ಅನೇಕ ವರ್ಷಗಳಿಂದ ಪ್ರತ್ಯೇಕ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಬೇಡಿಕೆ ಇಡಲಾಗಿತ್ತು. ಈಗ ಇದಕ್ಕೆ ಕಾಲ ಕೂಡಿಬಂದಿದೆ. ಆಸ್ಪತ್ರೆ ನಿರ್ಮಾಣಕ್ಕೆ ಕೆಎಂಇಆರ್‌ಸಿ ಅನುದಾನ 330 ಕೋಟಿ ರೂ.ಗೆ ಅನುಮೋದನೆ ದೊರೆತಿರುವುದು ಬಹು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

> ಬಳ್ಳಾರಿಯಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡುವ ಕನಸು ನನಸಾಗಲಿದೆ. ಆಸ್ಪತ್ರೆ ನಿರ್ಮಾಣಕ್ಕಾಗಿ ಕೆಎಂಆರ್‌ಸಿಯಿಂದ 330 ಕೋಟಿ ರೂ. ಅನುದಾನ ಒದಗಿಸಲು ಅನುಮೋದನೆ ದೊರೆತಿದೆ. ಈ ಸುಸಜ್ಜಿತ ಆಸ್ಪತ್ರೆ, ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ, ನೆರೆಯ ಆಂಧ್ರದ ರೋಗಿಗಳು ಚಿಕಿತ್ಸೆಗೆ ಅನುಕೂಲವಾಗಲಿದೆ.
> ■ ಡಾ.ಗಂಗಾಧರ ಗೌಡ, ನಿರ್ದೇಶಕರು, ಬಿಎಂಆರ್‌ಸಿ

ಸೂಕ್ತ ಸ್ಥಳ ಆಯ್ಕೆಯಾಗಬೇಕಿದೆ: ಬಿಎಂಆರ್‌ಸಿಯಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ, ಮೂಲ ಸೌಲಭ್ಯಕ್ಕಾಗಿ ಗಣಿಗಾರಿಕೆಯಿಂದ ಸಂಗ್ರಹಗೊಂಡಿರುವ ಕೆಎಂಇಆರ್‌ಸಿ ಅನುದಾನದಡಿ 330.58 ಕೋಟಿ ರೂ.ಅನುಮೋದನೆ ದೊರೆತಿದೆ. ಕಳೆದ 2017ರಿಂದ ಪ್ರತ್ಯೇಕ ಆಸ್ಪತ್ರೆಗಾಗಿ ಬಿಎಂಆರ್‌ಸಿಯಿಂದ ಪ್ರಯತ್ನ ಮಾಡಲಾಗುತ್ತಿತ್ತು. ಈಗ ಅನುದಾನಕ್ಕೆ ಹಸಿರು ನಿಶಾನೆ ದೊರೆತಿರುವ ಹಿನ್ನೆಲೆ ಶೀಘ್ರದಲ್ಲೇ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ ದೊರೆಯುವ ನಿರೀಕ್ಷೆ ಮೂಡಿಸಿದೆ. ಆಸ್ಪತ್ರೆ ನಿರ್ಮಾಣಕ್ಕೆ ಬಿಎಂ ಆರ್ ಸಿ ವ್ಯಾಪ್ತಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟಿಬಿ ಆಸ್ಪತ್ರೆ ಬಳಿಯಿರುವ 5 ಎಕರೆ ಸ್ಥಳ ಮತ್ತು ಇಂದಿರಾ ನಗರದ ಬಳಿಯಿರುವ 16 ಎಕರೆ ಸ್ಥಳವನ್ನು ಗುರುತಿಸಿದ್ದು, ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತ ಸ್ಥಳದ ಆಯ್ಕೆ ಅಂತಿಮವಾಗಬೇಕಿದೆ.

ನಿತ್ಯ 30ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ: ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದಲ್ಲಿ ಸರ್ಜಿಕಲ್ ಆಂಕಾಲಜಿ ಪ್ರತ್ಯೇಕ ವಿಭಾಗವಿಲ್ಲದೇ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಕಳೆದ 2024ರ ಜನವರಿಯಿಂದ ಸರ್ಜರಿ, ಕಿಮೊ, ರೇಡಿಯೋತೆರಪಿ ಸೇರಿದಂತೆ ಸರ್ಜಿಕಲ್ ಆಂಕಾಲಜಿ ಪ್ರತ್ಯೇಕ ವಿಭಾಗವನ್ನಾಗಿ ಒಂದೇ ಸೂರಿನಡಿ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ನಿತ್ಯ ಸುಮಾರು 30ಕ್ಕೂ ಹೆಚ್ಚು ಕ್ಯಾನ್ಸರ್ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪ್ರತಿ ತಿಂಗಳು 20ಕ್ಕೂ ಹೆಚ್ಚು ರೋಗಿಗಳಿಗೆ ನಾನಾ ಬಗೆಯ ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗುತ್ತಿದೆ.

ಬಿಜೆಪಿ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಸಿಂಧನೂರು: ಪಂಚ ರಾಜ್ಯಗಳ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ,ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಭರ್ಜರಿ ಗೆಲುವು ಸಾದಿಸಿದ್ದರಿಂದ ಸಿಂಧನೂರಿನಲ್ಲಿ ಬಿಜೆಪಿ ಕಾರ್ಯಕರ್ತರಿಂದ ಮತ್ತು ಮುಖಂಡರಿಂದ ವಿಜಯೋತ್ಸವವನ್ನು ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಗ್ರಾಮೀಣ ಮಂಡಲದ ಅಧ್ಯಕ್ಷ ಯಂಕೋಬ ನಾಯಕ ರಾಮತ್ನಾಳ ಹಾಗೂ ಕೆ.ಕರಿಯಪ್ಪ ನವರ ನೇತೃತ್ವದಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿ,ಭಾರತಾಂಬೆ ದೀನ್ ದಯಾಳ್ ಉಪಾಧ್ಯಾಯ ಅವರು ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಸಿಹಿ ಹಂಚಿ ಸಂಭ್ರಮಿಸಿ ವಿಜಯೋತ್ಸವ ಆಚರಣೆ ಮಾಡಲಾಯಿತು.

ಮಹಿಳಾ ಅಧ್ಯಕ್ಷರಾದ ಮಹದಾನಂದ,ಸಹನಾ ಹಿರೇಮಠ,ಶಿವಮ್ಮ,ರೇಣುಕಾ,ಮುಖಂಡರಾದ ಸಿರಾಜ್ ಪಾಷಾ, ಚಾಂದ್ ಪಾಷಾ, ಶಿವು ಕುರಕುಂದಿ, ರಮೇಶ, ರಾಜು ಅಡವಿಭಾವಿ, ಮುತ್ತು ಬರ್ಸಿ, ಸೋಮನಾಥ ಕಲ್ಲೂರು, ಶ್ರೀನಿವಾಸ ಮೇಸ್ತ್ರಿ, ಶರಣಪ್ಪ ಬಂಡಿ,ರಾಮದಾಸ್ ಸಾಲಗುಂದಾ, ನಾಗರಾಜ್ ದೇವರಗುಡಿ,ಮೌನೇಶ ಹೊಸಮನಿ, ಮಲ್ಲಿಕಾರ್ಜುನ ರೆಡ್ಡಿ, ಕಾಶಿನಾಥ್ ಹಿರೇಮಠ, ರಮೇಶ ಗಾಳಿ, ಸೇರಿದಂತೆ ಮುಖಂಡರು, ಗಣ್ಯರು, ಪದಾಧಿಕಾರಿಗಳು, ಕಾರ್ಯಕರ್ತರು ಇನ್ನಿತರರು ಉಪಸ್ಥಿತರಿದ್ದರು.



ಕಸಾಪ ಬೆಳವಣಿಗೆಗೆ ಕನ್ನಡಿಗರು ಕೈಜೋಡಿಸಲಿ

ಕುರುಗೋಡು: ಕನ್ನಡದ ಕಂಪು ನಾಡಿನ ಮನೆ ಮನಗಳಲ್ಲಿ ಪಸರಿಸಿ ಸಾಹಿತ್ಯಶ್ರೀಮಂತಗೊಳಿಸಿ, ಉತ್ತೇಜಿಸಲು ಕಟ್ಟಲಾಗಿರುವ ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಈ ಸಂಸ್ಥೆ ಬೆಳವಣಿಗೆಗೆ ಪ್ರತಿಯೊಬ್ಬ ಕನ್ನಡಿಗರು ಕೈಜೋಡಿಸಬೇಕು ಎಂದು ಸಹಾಯಕ ಪ್ರಾಧ್ಯಾಪಕ ಡಾ.ತಿಪ್ಪೇರುದ್ರಸಂಡೂರು ಹೇಳಿದರು.

ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕಸಾಪ ತಾಲೂಕು ಘಟಕದ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದ ಅವರು, ಯುವಕರು ಪರಿಷತ್‌ನಲ್ಲಿ ಸದಸ್ಯತ್ವದ ನೊಂದಣಿ ಮಾಡಿಸಿ, ಕನ್ನಡದ ಅಭಿಮಾನ ಬೆಳಸಿಕೊವುದರ ಜೊತೆಗೆ ಸಾಹಿತ್ಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕನ್ನಡದ ಕವಿಗಳು, ಕೃತಿಗಳು, ವಿಚಾರಗಳನ್ನು ಅರಿಯಬೇಕು. ಇದರಿಂದ ಕನ್ನಡದ ಅಭಿಮಾನ ಬೆಳೆಯುತ್ತದೆ. ಕನ್ನಡ ಭಾಷೆ ಎಂದರೆ ಮೂರು ಅಕ್ಷರದ ಭಾಷೆ ಅಲ್ಲ, ಮುಕ್ಕೋಟಿ ದೇವತೆಗಳ ಮನಸ್ಸಿನ ಭಾವನೆಯೇ ಕನ್ನಡ ಭಾಷೆ. ಇಂತಹ ಕನ್ನಡ ಕಟ್ಟಿ ಬೆಳಸಲು ಕನ್ನಡದ ಮನಸ್ಸುಗಳು ಮುಂದಾಗಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಶಾಂತಲಾ ಉದ್ಘಾಟಿಸಿದರು. ಕಸಾಪ ಅಧ್ಯಕ್ಷ ನಾಗರಾಜ ಮಸೂತಿ ಹಾಗೂ ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ ಮಾತನಾಡಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಶಿಕ್ಷಕ ಎನ್.ಬಸವರಾಜ, ಸಿಆರ್‌ಪಿ ಎಚ್.ಜಡೇಶ್, 10ನೇ ತರಗತಿಯಲ್ಲಿ ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು. ಸಂಶೋಧಕ ಕೆ.ವೀರಭದ್ರಗೌಡ, ಚಿತ್ರಕಲಾ ಶಿಕ್ಷಕ ಮಣ್ಣೂರು ಬಸವರಾಜ, ವಿ.ಈರೇಶಪ್ಪ, ಉದಯಕುಮಾರ, ಕಸಾಪ ಸದಸ್ಯರು, ಕನ್ನಡದ ಅಭಿಮಾನಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಕ್ಕಳಿಗೆ ಸೂಕ್ಷ್ಮತೆಯಿಂದ ಕಲಿಸಿ: ಡಾ.ಕೃಷ್ಣಾರೆಡ್ಡಿ

ಹೂವಿನಹಡಗಲಿ: ಆಧುನಿಕ ರಂಗ ಪರಂಪರೆಗೆ ವೇದಿಕೆ ಕಲ್ಪಿಸಿಕೊಟ್ಟವರು ದಿವಂಗತ ಎಂ.ಪಿ.ಪ್ರಕಾಶ್ ಎಂದು ಕೃಷ್ಣದೇವರಾಯ ವಿಜಯನಗರ ವಿಶ್ವವಿದ್ಯಾಲಯದ ಕಲೆ ನಾಟಕ ವಿಭಾಗದ ಪ್ರಾಧ್ಯಾಪಕ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಹೇಳಿದರು.



ರಂಗಭಾರತಿ ಆಯೋಜಿಸಿರುವ ಬೇಸಿಗೆ ಚಿಣ್ಣರ ಮೇಳ-2026 ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಇಂದು ಸಾಂಸ್ಕೃತಿಕ ಕ್ಷೇತ್ರ ಬಡವಾಗುತ್ತಿದೆ. ಮಕ್ಕಳಿಗೆ ಸೂಕ್ಷ್ಮಮತೆ ಕಲಿಸಬೇಕಾಗಿದೆ. ನಿರಂತರ ಕಲಿಕೆಯಿಂದ ರಂಗಭೂಮಿ ಮಕ್ಕಳಿಗೆ ಕಲಿಸುವ ಪ್ರಯತ್ನ ಮಾಡಬೇಕು ಎಂದರು. ವಿಶ್ರಾಂತ ಪ್ರಾಚಾರ್ಯ ಪ್ರೊ.ಶಾಂತಮೂರ್ತಿ.ಬಿ.ಕುಲಕರ್ಣಿ ಮಾತನಾಡಿ, ಸಂಗೀತ, ನೃತ್ಯ, ಸಾಂಸ್ಕೃತಿ ಜೀವನಕ್ಕೆ ಬಹಳ ಅವಶ್ಯಕ. ಪೋಷಕರ ಕನಸು ಮಕ್ಕಳ ಮೇಲೆ ಹೇರಬಾರದು ಎಂದರು. ಕಲಾವಿದರ ಪ್ರಪಂಚ ಭಿನ್ನವಾಗಿರುತ್ತದೆ. ಪ್ರಕಾಶ್‌ರು ಹಾಕಿಕೊಟ್ಟಂತ ಪರಂಪರೆ ಮಕ್ಕಳು ಮುಂದುವರಿಸಲಿ ಎಂದರು.

ರಂಗಭಾರತಿ ಕಾರ್ಯಾಧ್ಯಕ್ಷೆ ಎಂ.ಪಿ.ಸುಮಾ ವಿಜಯ್ ಮಾತನಾಡಿ, ಮಕ್ಕಳಲ್ಲಿ ಕ್ರಿಯಾಶೀಲತೆ ಕಡಿಮೆಯಾಗುತ್ತಿದೆ. ಮಕ್ಕಳನ್ನು ಅತೀಯಾಗಿ ಮುದ್ದು ಮಾಡಬೇಡಿ ಶಿಸ್ತು ಕಲಿಸುವ ಕಡೆ ಗಮನ ಕೊಡಿ ಎಂದು ಹೇಳಿದರು. ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಪಿ.ಎಂ.ಶಿವಪ್ರಕಾಶ್ ಮಾತನಾಡಿ, 1964ರಲ್ಲಿ ಎಂ.ಪಿ.ಪ್ರಕಾಶ್ ಹುಟ್ಟುಹಾಕಿದ ರಂಗಭಾರತಿ ಇಂದು ಹೆಮ್ಮರವಾಗಿ ಬೆಳೆದಿದೆ. ಅವರ ಕನಸುಗಳು ನನಸಾಗಿವೆ. ಸಾಂಸ್ಕೃತಿಕ ಕಾರ್ಯಕ್ರಮ ಮೂಲಕ ರಾಜ್ಯ ರಾಷ್ಟ್ರಮಟ್ಟದ ಕಲಾವಿದರನ್ನು, ಸಾಧಕರನ್ನು, ಶ್ರೇಷ್ಠ ವ್ಯಕ್ತಿಗಳನ್ನು ಹೂವಿನಹಡಗಲಿಗೆ ಕರೆತಂದು ಪರಿಚಯಿಸಿದ ಕೀರ್ತಿ ಪ್ರಕಾಶರಿಗೆ ಸಲ್ಲುತ್ತದೆ. ಪ್ರಕಾಶನ ಕನಸುಗಳಿಗೆ ನೀರೆರದು ಅವರ ಮಕ್ಕಳಾದ ಸುಮಾ ವಿಜಯ್, ವೀಣಾ ಮಾಂತೇಶ್ ಪರಂಪರೆ ಉಳಿಸುವಲ್ಲಿ ಸಾರ್ಥಕ ಕಾರ್ಯ ಮಾಡುತ್ತಿದ್ದಾರೆ ಎಂದರು. ಕೃಷ್ಣದೇವರಾಯ ವಿವಿ ಸಿಂಡಿಕೇಟ್ ಮಾಜಿ ಸದಸ್ಯ ವಕೀಲ ಅಟವಾಳಗಿ ಕೊಟ್ರೇಶ್, ರಾಘವೇಂದ್ರ ರಾಯ್ಕರ್ ಉಪಸ್ಥಿತರಿದ್ದರು.

ಪಂಚತಂತ್ರ ಕಥೆಆಧಾರಿತ ಅರಾವಳಿ, ಹಿಡಿಂಬಾಸುತ ದಾನಪ್ಪ ತಳಗೇರಿ, ಆಸಿಫ್ ಹಡಗಲಿ ನಿರ್ದೇಶನದಲ್ಲಿ ಚಿಣ್ಣರು ನಾಟಕ ಪ್ರದರ್ಶಿಸುವರು.

ಎಂ.ಪಿ.ಸುಮಾ ವಿಜಯ್ ನೃತ್ಯ ನಿರ್ದೇಶನದಲ್ಲಿ ವೈವಿಧ್ಯಮಯ ನೃತ್ಯ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಅನುಷಾ ಪ್ರಾರ್ಥನೆ ಹಾಡಿದರು. ಪ್ರಭು ಸೊಪ್ಪಿನ್ ಸ್ವಾಗತಿಸಿದರು. ಶ್ರೀಲತಾ ನಿರೂಪಿಸಿದರು. ಚಂದ್ರಪ್ಪ ವಂದಿಸಿದರು.

ಪಂಚಮಸಾಲಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹಗರಿಬೊಮ್ಮನಹಳ್ಳಿ: ತಾಲೂಕು ಪಂಚಮಸಾಲಿ ಸಮಾಜದಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ 85ಕ್ಕೂ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಪ್ರತಿಭಾ ಪುರಸ್ಕಾರ ಸಮಾರಂಭ ಮೇ 17ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ರಾಜ್ಯ ಗೌರವಾಧ್ಯಕ್ಷ ಭಾವಿ ಬೆಟ್ಟಪ್ಪ ತಿಳಿಸಿದ್ದಾರೆ.

ಪಟ್ಟಣದ ಪಂಚಮಸಾಲಿ ಭವನದಲ್ಲಿ ನಡೆದಸಭೆಯಲ್ಲಿಅವರುಮಾತನಾಡಿದರು. ರಾಜ್ಯದ ಯಾವುದೇ ಜಿಲ್ಲೆಯ ತಾಲೂಕುಗಳಲ್ಲಿ ವ್ಯಾಸಂಗ ಮಾಡಿದ ನಮ್ಮ ತಾಲೂಕಿನ ವಿದ್ಯಾರ್ಥಿಗಳಿಗೆ ಮತ್ತು ನಮ್ಮ ತಾಲೂಕಿನಿಂದ ಬೇರೆ ತಾಲೂಕಿನಲ್ಲಿ ವ್ಯಾಸಂಗ ಮಾಡಿದ ಶೇ.85ಕ್ಕೂ ಹೆಚ್ಚು ಅಂಕಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಮೇ 12ರೊಳಗಾಗಿ ಪಟ್ಟಣದ ಪಂಚಮಸಾಲಿ ಭವನದ ಕಚೇರಿಗೆ ನೋಂದಾಯಿಸಿಕೊಳ್ಳಬೇಕು ಎಂದರು.

ಸಮಾಜದ ತಾಲೂಕು ಅಧ್ಯಕ್ಷ ಬಿ.ಮಂಜುನಾಥ ಗೌಡ ಮಾತನಾಡಿ, ಶಾಸಕ ಕೆ.ನೇಮರಾಜ ನಾಯ್ಕ ಉದ್ಘಾಟಿಸಲಿದ್ದು, ಗದ್ದಿಕೇರಿ ವಿರಕ್ತಮಠದ ಇಮ್ಮಡಿ ಮಹಾಂತ ಸ್ವಾಮೀಜಿ, ನಿಡಸೋಸಿ ನಿಜಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ಮಾಹಿತಿ ನೀಡಿದರು. ಅರ್ಜಿ ಸಲ್ಲಿಸುವವರು ದೂ.098807 67688(ಬಾವಿ ರವಿಂದ್ರ), 9945903670(ಶಿವಶಂಕರಗೌಡ) ಅವರನ್ನು ಸಂಪರ್ಕಿಸಬಹುದಾಗಿದೆ ಎಂದರು.

ಸಮಾಜದ ತಾಲೂಕು ಘಟಕದ ಮಾಜಿ ಅಧ್ಯಕ್ಷ ಅಕ್ಕಿ ಶಿವಕುಮಾರ್, ಕಾರ್ಯದರ್ಶಿ ಶಿವಶಂಕರಗೌಡ, ಉಪಾಧ್ಯಕ್ಷ ಎಂ.ಜ್ಯೋತೆಪ್ಪ, ನೌಕರರ ಘಟಕದ ಅಧ್ಯಕ್ಷ ವಿರೂಪಾಕ್ಷ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲಾ ಮೆಣಸಿಗಿ, ನಗರ ಘಟಕದ ಅಧ್ಯಕ್ಷೆ ಮಂಜುಳಾ ವಿರೂಪಾಕ್ಷಗೌಡ, ಜಿಲ್ಲಾ ಸಮಿತಿ ಸದಸ್ಯೆ ಮಂಗಳಾ ಬಸವರಾಜ, ಮುಖಂಡರಾದ ಸಂಚಿ ಶಿವಕುಮಾರ್, ವಿ.ಬಿ.ಮೆಣಸಿಗಿ, ಮಂಜುಳಾ ಬಳಿಗಾರ, ವೀರೇಶ್, ನವೀನ್, ಸಂತೋಷ್, ಗಂಡಿ ಶ್ರೀಧರ, ಪಿ.ಬಸವರಾಜ, ಮಲ್ಲಿಕಾರ್ಜುನಗೌಡ, ಬಸವನಗೌಡ ಇದ್ದರು. ಸಮಾಜದ ತಾಲೂಕು ಕಾರ್ಯದರ್ಶಿ ಬಾವಿ ರವೀಂದ್ರ, ನಿರೂಪಿಸಿದರು.

ಕನ್ನಡದ ಅಸ್ಮಿತೆ ಉಳಿಸುವಲ್ಲಿ ಕಸಾಪ ಪಾತ್ರ ಅನನ್ಯ

ಸಿರುಗುಪ್ಪ: ಕನ್ನಡ ನಾಡು-ನುಡಿಯ ವೈಭವವನ್ನು ಮೆರೆಯುವ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯನ್ನು ಸಿರುಗುಪ್ಪದ ಸಮೃದ್ಧಿ ಸಾಂಸ್ಕೃತಿಕ ಸಭಾಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಲಾದ ಈ ಸಮಾರಂಭವು ಕನ್ನಡಸಂಸ್ಕೃತಿಯಸಂಭ್ರಮದ ಜೊತೆಗೆ ಭಾಷಾಭಿಮಾನ ಮತ್ತು ಪರಂಪರೆಯ ಪುನರುಜ್ಜೀವನಕ್ಕೆ ಸಾಕ್ಷಿಯಾಯಿತು.



ಬಳ್ಳಾರಿ ವೈದ್ಯಕೀಯ ವಿದ್ಯಾಲಯದ ಕನ್ನಡ ಸಂಘದ ಅಧ್ಯಕ್ಷ ಡಾ.ಪರಸಪ್ಪ ಬಂದ್ರಕಳ್ಳಿ ಅವರು ಉದ್ಘಾಟಿಸಿ ಮಾತನಾಡಿದರು.

ಕಸಾಪದ ಕಾರ್ಯದರ್ಶಿ ಡಾ.ಹರೀಶ್ ಅವರು 'ಕನ್ನಡ ಅಸ್ಮಿತೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತು' ವಿಷಯದ ಮೇಲೆ ಉಪನ್ಯಾಸ ನೀಡಿ 'ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಒಂದು ಸಂಘಟನೆಯಲ್ಲ, ಅದು ಕನ್ನಡಿಗರ ಭಾವನೆಗಳ ಜೀವನಾಡಿ. ಜಾಗತೀಕರಣದ ಈ ವೇಗದ ಕಾಲಘಟ್ಟದಲ್ಲಿ ನಮ್ಮ ಮೂಲ ಅಸ್ಮಿತೆಯನ್ನು ಉಳಿಸಿಕೊಳ್ಳಲು ಸಾಹಿತ್ಯ ಮತ್ತು ಸಂಸ್ಕೃತಿಯ ಅರಿವು ಅವಶ್ಯಕ ಎಂದರು

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ 7ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶಿವಕುಮಾರ್ ಬಳಿಗಾರ್ ಅವರು, ಸಾಹಿತ್ಯ ಚಟುವಟಿಕೆಗಳು ನಿರಂತರವಾಗಿ ನಡೆಯುವ ಮೂಲಕ ಯುವಪೀಳಿಗೆಯಲ್ಲಿ ಭಾಷಾಭಿಮಾನವನ್ನು ಬೆಳೆಸುವುದು ಅತ್ಯಾವಶ್ಯಕ ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಿರುಗುಪ್ಪ ತಾಲೂಕು ಕಸಾಪ ಅಧ್ಯಕ್ಷ ಡಾ. ಮಧುಸೂದನ ಕಾರಿಗನೂರು, 'ತಾಲೂಕು ಘಟಕದ ವತಿಯಿಂದ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಹಲವು ಸಾರ್ಥಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಎಲ್ಲರ ಸಹಕಾರದಿಂದ ಕನ್ನಡ ಸೇವೆಯನ್ನು ಇನ್ನಷ್ಟು ವ್ಯಾಪಕಗೊಳಿಸಲಾಗುವುದು ಎಂದು ತಿಳಿಸಿದರು.

ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಕಲಾವಿದರು, ಸಾಹಿತಿಗಳು ಹಾಗೂ ಜಾನಪದ ಸೊಗಡಿನ ಬಯಲಾಟ ಕಲಾವಿದರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಕಸಾಪ ಕಾರ್ಯದರ್ಶಿ ಗಜೇಂದ್ರ, ಹೋಬಳಿ ಘಟಕಗಳ ಅಧ್ಯಕ್ಷರಾದ ನವೀನ್ ರೆಡ್ಡಿ, ರಮೇಶ್ ಭಜಂತ್ರಿ ಉಪಸ್ಥಿತರಿದ್ದರು. ಉಪನ್ಯಾಸಕ ಡಾ. ಚಂದ್ರಕಾಂತ್ ಅವರು ಕಾರ್ಯಕ್ರಮ ನಿರೂಪಿಸಿದರು. ವೆಂಕಟೇಶ್ ಯಾದವ್ ವಂದಿಸಿದರು.

ಪತ್ರಕರ್ತ ಹಳ್ಳಿಕೇರಿಗೆ 4 ಲಕ್ಷ ರೂ. ಮಂಜೂರು

ಬಳ್ಳಾರಿ: ಕೊಪ್ಪಳ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ಹಳ್ಳಿಕೇರಿ ಅವರಿಗೆ ಆಸ್ಪತ್ರೆ ಚಿಕಿತ್ಸೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4 ಲಕ್ಷ ರೂ. ಪರಿಹಾರ ಮಂಜೂರು ಮಾಡಿದ್ದು, ಕಾನಿಪ ಬಳ್ಳಾರಿ ಜಿಲ್ಲಾ ಘಟಕದ ಸರ್ವ ಸದಸ್ಯರು ಸಿಎಂ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದೆ. ಹನುಮಂತಪ್ಪ ಹಳ್ಳಿಕೇರಿ ಅವರು ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದು, ಅದರ ಚಿಕಿತ್ಸೆಗಾಗಿ ಹೆಚ್ಚಿನ ಹಣಕಾಸು ನೆರವು ಅಗತ್ಯವಿತ್ತು. ಈ ಕುರಿತು ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮುಖ್ಯಮಂತ್ರಿ ಅವರ ಗಮನಕ್ಕೆ ತಂದಿದ್ದು, ನೆರವು ಕೋರಿದ್ದರು.

ವಿಪಿಕೆ ಫೌಂಡೇಷನ್ ಕಾರ್ಯ ಶ್ಲಾಘನೀಯ

ಕುಷ್ಟಗಿ: ಎಲೆ ಮರೆಯ ಕಾಯಿಯಂತೆ ಮಾಡುತ್ತಿರುವ ಸೇವೆ ಗುರುತಿಸುವ ಮೂಲಕ ಪ್ರಶಸ್ತಿ ಪುರಸ್ಕಾರ ನೀಡುತ್ತಿರುವ ದಯಾನಂದ ಪುರಿ ಸಂಸ್ಥೆ ಹಾಗೂ ವಿಪಿಕೆ ಫೌಂಡೇಷನ್ ಅವರ ಕಾರ್ಯ ಶ್ಲಾಘನೀಯ ಎಂದು ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ ಅಭಿಪ್ರಾಯಪಟ್ಟರು.

ಪಟ್ಟಣದ ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ ನಿವಾಸದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಬುಡ್ನೇಸಾಬ ಕಲಾದಗಿ, ಸಮಾಜಸೇವೆ ಕ್ಷೇತ್ರದಲ್ಲಿ ಸುರೇಶಗೌಡ ಕುಂಟನಗೌಡರಗೆ ಅಭಿನವ ಗವಿಶ್ರೀ ಪ್ರಶಸ್ತಿ ವಿತರಿಸಿ ಮಾತನಾಡಿದರು.

ದೋಟಿಹಾಳ ಗ್ರಾಮದ ದಯಾನಂದ ಪುರಿ ಸಂಸ್ಥೆ ಹಾಗೂ ವಿಪಿಕೆ ಫೌಂಡೇಷನ್ ಅವರು ಸಮಾಜ ಸೇವೆ, ಆರೋಗ್ಯ ಜಾಗೃತಿ, ರಕ್ತದಾನ, ನೇತ್ರ ಚಿಕಿತ್ಸಾ ಶಿಬಿರ ಸೇರಿದಂತೆ ಅನೇಕ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವ ಜೊತೆಗೆ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶೇಖರಗೌಡ ಮಾಲಿಪಾಟೀಲ, ಶಿವಶಂಕರಗೌಡ ಪಾಟೀಲ, ಸಾಹಿತಿ ಹನುಮೇಶ ಶೆಟ್ಟರ ಗುಮಗೇರಿ, ವಿಪಿಕೆ ಫೌಂಡೇಷನ್ ಮುಖ್ಯಸ್ಥ ಶ್ರೀನಿವಾಸ ಕಂಟ್ಲಿ, ಮಹಾಂತೇಶ ಅಗಸಿಮುಂದಿನ, ಇಮಾಮಸಾಬ ಗರಡಿಮನಿ, ಮೈಹಿಬುಬು ಮುಲ್ಲಾ, ಅನೀಲಕುಮಾರ ಕಮ್ಮಾರ, ಪರಶಿವಮೂರ್ತಿ ಮಾಟಲದಿನ್ನಿ, ಸಂಗಮೇಶ ಲೂತಿಮಠ, ಸೋಮಶೇಖರ ವೈಜಾಪೂರು ಸೇರಿದಂತೆ ಅನೇಕರು ಇದ್ದರು.



72 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶೀಘ್ರ ಟೆಂಡರ್

ಕೊಪ್ಪಳ: ನಮ್ಮ ಭಾಗದ ಆದಿಶಕ್ತಿ ಆಗಿರುವ ಶ್ರೀಹುಲಿಗೆಮ್ಮ ದೇವಿಯ ದೇವಸ್ಥಾನವನ್ನು ಅಭಿವೃದ್ಧಿಪಡಿಸಲು ಹಲವು ಯೋಜನೆ ಗಳನ್ನು ರೂಪಿಸಿದ್ದೇವೆ ಎಂದು ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಹೇಳಿದರು.



ಹಿಟ್ನಾಳ ಜಿ. ಪಂವ್ಯಾಪ್ತಿಯ ಹಿಟ್ನಾಳ, ಕಂಪಸಾಗರ,ಹುಲಿಗಿ, ಮುನಿರಾಬಾದ್ ಆರ್.ಎಸ್., ಹಳೆಲಿಂಗಪುರ, ಹೊಸಲಿಂಗಪುರ, ಮಟ್ಟಿ ಮುದ್ಲಾಪುರ, ಹೊಳೆ ಮುದ್ಲಾಪುರ ಮುನಿರಾಬಾದ್ ಡ್ಯಾಮ್ ಹಾಗೂ ಹೊಸಳ್ಳಿ ಗ್ರಾಮದಲ್ಲಿ 12.38 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ಈಗಾಗಲೇ ಹಲವು ಕಾಮಗಾರಿಗಳನ್ನು ಕೈಗೊಂಡಿದ್ದು ಈಗಾಗಲೇ ಹಲವು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ ನಿನ್ನೆ ಬೆಂಗಳೂರಿನಲ್ಲಿ ಸಾರಿಗೆ ಮತ್ತು ಮುಜರಾಯಿ ಇಲಾಖೆಯ ಸಚಿವರಾದ ರಾಮಲಿಂಗ ರೆಡ್ಡಿ ಅವರನ್ನು ಭೇಟಿಯಾಗಿ ಶ್ರೀಹುಲಿಗೆಮ್ಮ ದೇವಿಯ ಜಾತ್ರೆಗೆ ಆಹ್ವಾನಿಸಿದ ವೇಳೆಯಲ್ಲಿ ಇನ್ನೂ 72 ಕೋಟಿ ವೆಚ್ಚದ ವೆಚ್ಚದ ಕಾಮಗಾರಿಗಳಿಗೆ ಶೀಘ್ರದಲ್ಲಿ ಟೆಂಡರ್ ಕರೆಯಲು ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಸಚಿವರ ಗಮನಕ್ಕೆ ತಂದಿದ್ದೇನೆ ಎಂದರು.

ಹುಲಿಗೆಮ್ಮ ದೇವಸ್ಥಾನಕ್ಕೆ ಹಿಟ್ನಾಳ ಕ್ರಾಸ್ ಮುಖಾಂತರ ಹೆಚ್ಚಿನ ಭಕ್ತರು ಸಂಚಾರ ಮಾಡುತ್ತಿರುವುದರಿಂದ ಈಗಾಗಲೇ ಆ ರಸ್ತೆಗೂ ಕೂಡ 4.20 ಕೋಟಿ ಅನುಧಾನ ನೀಡಿದ್ದು ಈಗಾಗಲೇ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಡಿಗಲ್ಲು: ಕೊಪ್ಪಳ ತಾಲೂಕಿನ ಹಿಟ್ನಾಳ ಗ್ರಾಮದಲ್ಲಿ 4 ಕೋಟಿ ವೆಚ್ಚದಲ್ಲಿ ಹಾಗೂ ಹೊಸಳ್ಳಿ ಗ್ರಾಮದಲ್ಲಿ 4 ಕೋಟಿ ವೆಚ್ಚದಲ್ಲಿ ಸರಕಾರಿ ಪ್ರಾಥಮಿಕ /ಪ್ರೌಢ ಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಪರಿವರ್ತಿಸಿ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗೆ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅಡಿಗಲ್ಲು ನೆರವೇರಿಸಿದರು.

ಸಂದರ್ಭದಲ್ಲಿ ಮಾಜಿ ನಾಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ್ ಗುಪ್ತಾ, ವಿ.ಆರ್.ಪಾಟೀಲ, ಮಾಜಿ ಜಿಪಂ ಸದಸ್ಯ ಗವಿಸಿದ್ದಪ್ಪ ಕರಡಿ, ಗ್ಯಾರಂಟಿ ಸಮಿತಿ ಅಧ್ಯಕ್ಷ ಬಾಲಚಂದ್ರನ್ ಮುನಿರಬಾದ್, ಕೆ.ಎಂ.ಸೈಯದ್, ವಿಶ್ವನಾಥ್ ರಾಜೂರು, ಪಾಲಾಕ್ಷಪ್ಪ ಗುಂಗಾಡಿ, ಯಂಕಪ್ಪ ಹೊಸಳ್ಳಿ, ಚೆನ್ನಿ ಆರ್ ಎಸ್ ಈರಣ್ಣ ಹುಲಿಗಿ, ಧರ್ಮಣ್ಣ ಕಂಪಸಾಗರ, ಪ್ರಶಾಂತ್ ಗೌಡ್ರು, ನಾರಾಯಣ ಬಿಲಂಕರ್, ವೆಂಕಟೇಶ್ ಹಿಟ್ನಾಳ,ಸೋಮಶೇಖರ್ ಹಿಟ್ನಾಳ,ಹನಮಂತಪ್ಪ ಹ್ಯಾಟಿ, ಶರಣಪ್ಪ ಉಪ್ಪಾರ್, ಮಾರುತಿ ಬಗನಾಳ, ರಾಮೂರ್ತಿ ಮುನಿರಬಾದ್, ಬಸಣ್ಣ ಬೇವೂರು,ಆಶೋಕ್ ಹಿಟ್ನಾಳ, ಹನಮಂತ ಗಿಡ್ಡಾಲಿ, ತಹಶೀಲ್ದಾರ್ ಬಸವರಾಜ,ಅಕ್ಬರ್ ಪಲ್ಟಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿಗೆ ಡಿಸಿ ಸೂಚನೆ

ವಿಜಯನಗರ: ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯ ಸುಪ್ರೀಂ ಕೋರ್ಟ್ ಆದೇಶದನ್ವಯ ವೈಜ್ಞಾನಿಕವಾಗಿ, ಸಮರ್ಪಕವಾಗಿ ವಿಲೇವಾರಿ ಮಾಡಲು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕಟ್ಟುನಿಟ್ಟಿನ ಆದೇಶ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ವಿಸಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿ, ಕಸ ವಿಲೇವಾರಿಯನ್ನಷ್ಟೇ ಗುರಿಯಾಗಿಟ್ಟುಕೊಳ್ಳದೇ, ಪರಿಸರ ಸಮತೋಲನ ಕಾಪಾಡಿಕೊಳ್ಳುವುದು ಯೋಜನೆ ಉದ್ದೇಶ. ನಗರ-ಗ್ರಾಮೀಣ ಪ್ರದೇಶಗಳಲ್ಲಿ ಕಸ ಎಲ್ಲೆಂದರಲ್ಲಿ ಎಸೆಯಬಾರದು. ಕಸ ಸುಡುವುದು, ಭೂಮಿಯಲ್ಲಿ ಹೂಳುವುದಾಗಲಿ ಮಾಡದೇ, ವೈಜ್ಞಾನಿಕ ವಿಲೇವಾರಿ ಮಾಡುವ ಮೂಲಕ ತ್ಯಾಜ್ಯ ಮುಕ್ತ ಪರಿಸರ ನಿರ್ಮಿಸಬೇಕು. ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ತ್ಯಾಜ್ಯ ಮರುಬಳಕೆಗೆ ನೀಡಬೇಕು. ಹಸಿ ಕಸದಿಂದ ಕಾಂಪೋಸ್ಟ್ ನಂತಹ ಗೊಬ್ಬರ ತಯಾರಿಸಿ ಮಣ್ಣಿನ ಫಲವತ್ತತೆ ಹೆಚ್ಚಿಸುವುದ ಎಂದರು.

ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಹೊಸ ನಿಯಮ ಅನ್ವಯ ದಿನಕ್ಕೆ 100 ಕೆಜಿಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಸಂಸ್ಥೆ ಅಥವಾ 20,000 ಚ.ಮೀ.ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಅಪಾರ್ಟ್‌ಮೆಂಟ್, ವಾಣಿಜ್ಯ ಮಳಿಗೆ ತಮ್ಮ ಆವರಣದಲ್ಲೇ ತ್ಯಾಜ್ಯ ಸಂಸ್ಕರಣಾ ಘಟಕ ಹೊಂದುವುದು ಕಡ್ಡಾಯ. ತಪ್ಪಿದಲ್ಲಿ ಅಂತಹ ಸಂಸ್ಥೆಗಳು ಬೃಹತ್ ತ್ಯಾಜ್ಯ ಉತ್ಪಾದಕ ಜವಾಬ್ದಾರಿ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿದೆ. ಈ ನಿಯಮ ಉಲ್ಲಂಘಿಸಿ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ಸ್ಥಳದಲ್ಲೇ ದಂಡ ವಿಧಿಸುವ ವ್ಯವಸ್ಥೆ ಜಾರಿಗೆ ತರಲು ಚಿಂತನೆ ನಡೆಸಲಾಗಿದೆ ಎಂದರು.

ಹಸಿ ಕಸ ಮತ್ತು ಒಣ ಕಸ ಮನೆಯಲ್ಲೇ ಪ್ರತ್ಯೇಕಿಸಿ ಕಸ ವಿಲೇವಾರಿ ವಾಹನಗಳಿಗೆ ನೀಡಬೇಕು. ಇದರಿಂದ ಕಾರ್ಮಿಕರ ಶ್ರಮ, ಸಮಯ ಉಳಿತಾಯವಾಗಲಿದೆ. ಪ್ರತಿ ವರ್ಷ ಜೂನ್ 30ರೊಳಗೆ ತ್ಯಾಜ್ಯ ಸಂಸ್ಕರಣೆ ಸಂಪೂರ್ಣ ಮಾಹಿತಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ನಗರಸಭೆ ಪೌರಾಯುಕ್ತ ಶಿವಕುಮಾರ್, ಉಪವಿಭಾಗಾಧಿಕಾರಿ ವಿವೇಕ್, ತಹಶೀಲ್ದಾರ್ ಶೃತಿ.ಎಂ, ಸೇರಿದಂತೆ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇದ್ದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2026-27 ದಿನಾಂಕ: 06-05-2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:-25 ದಿನಾಂಕ:- 06-04-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ ವಾರ್ಡ ವಾರು ಅನುದಾನದಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 1) ಇಂಡೆಂಟ್ ನಂ-**DMA/2026-27/AUCTION6647** ಮರು ಕರೆ ಕಾಮಗಾರಿ

(**CAT-2A**) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

2) ಇಂಡೆಂಟ್ ನಂ-57117 ರೂ. 5.00ಲಕ್ಷ (2ನೇ ಕರೆ) 3) ಇಂಡೆಂಟ್ ನಂ-57150 ರೂ. 7.00ಲಕ್ಷ (2ನೇ ಕರೆ)
4) ಇಂಡೆಂಟ್ ನಂ-57147 ರೂ. 15.00ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

5) ಇಂಡೆಂಟ್ ನಂ-55682 ರೂ. 35.64ಲಕ್ಷ (2ನೇ ಕರೆ) 6) ಇಂಡೆಂಟ್ ನಂ-57151 ರೂ. 3.93ಲಕ್ಷ (2ನೇ ಕರೆ)
7) ಇಂಡೆಂಟ್ ನಂ-55559 ರೂ. 19.00ಲಕ್ಷ (3ನೇ ಕರೆ) 8) ಇಂಡೆಂಟ್ ನಂ-55403 ರೂ. 10.00ಲಕ್ಷ (3ನೇ ಕರೆ)
9) ಇಂಡೆಂಟ್ ನಂ-54130 ರೂ. 8.20ಲಕ್ಷ (4ನೇ ಕರೆ) 10) ಇಂಡೆಂಟ್ ನಂ-54128 ರೂ. 11.80ಲಕ್ಷ (4ನೇ ಕರೆ)
11) ಇಂಡೆಂಟ್ ನಂ-51425 ರೂ. 4.90ಲಕ್ಷ (5ನೇ ಕರೆ) 12) ಇಂಡೆಂಟ್ ನಂ-52224 ರೂ. 10.00ಲಕ್ಷ (5ನೇ ಕರೆ)
13) ಇಂಡೆಂಟ್ ನಂ-43491 ರೂ. 5.40ಲಕ್ಷ (7ನೇ ಕರೆ) 14) ಇಂಡೆಂಟ್ ನಂ-44540 ರೂ. 6.45ಲಕ್ಷ (9ನೇ ಕರೆ)
15) ಇಂಡೆಂಟ್ ನಂ-44538 ರೂ. 6.45ಲಕ್ಷ (9ನೇ ಕರೆ) 16) ಇಂಡೆಂಟ್ ನಂ-41453 ರೂ. 18.03ಲಕ್ಷ (6ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ **ದೂರವಾಣಿ ಸಂಖ್ಯೆ: 0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 07-05-2026** ಪಡೆಯಬಹುದಾಗಿದೆ.

ಕ್ರ. ಸಂ 02 ರಿಂದ 16ರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 22-05-2026 ರಂದು ಸಾಯಂಕಾಲ 4.00 ಗಂಟೆಯವರೆಗೆ**
ಕ್ರ. ಸಂ ಕ್ರ. ಸಂ 02 ರಿಂದ 16ರ ಟೆಂಡರ್ ತೆರೆಯುವ **ದಿನಾಂಕ: 25-05-2026 ಸಾಯಂಕಾಲ 4.30 ಗಂಟೆಯ** ನಂತರ ತೆರೆಯಲಾಗುವುದು.

ಕ್ರ. ಸಂ 01ರ ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ (e-Auction) ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟ್‌ಲ್ (KPPP) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ನಿಯಮಗಳನ್ನು ಒಳಗೊಂಡಿರುವ ಟೆಂಡರ್ ದಾಸ್ತಾವೇಜ್‌ನ್ನು ಅಂತರಜಾಲ ವಿಳಾಸ **kppp.karnataka.gov.in** ದಲ್ಲಿ **ದಿನಾಂಕ: 07-05-2026** ರಿಂದ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿ ಕುರಿತು ಸರಬರಾಜು (Bidders) ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಕಚೇರಿ ರವರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 16-05-2026 ರಂದು 17.30.00 ಗಂಟೆಯವರೆಗೆ**
ಇ-ಹರಾಜು ಪಾಲ್ಗೊಳ್ಳಲು ಕೊನೆಯ **ದಿನಾಂಕ: 18-05-2026 ರಂದು 17.30.000 ಗಂಟೆಯವರೆಗೆ**
ಇ-ಹರಾಜು ಜರುಗುವ **ದಿನಾಂಕ: 20-05-2026 ಮುಂಜಾನೆ 10.00 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ.**

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಸಂ.ಇ/ಧಾರವಾಡ/130/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ

ನಗರಸಭೆ ಕಾರ್ಯಾಲಯ, ಶಹಾಪುರ

ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ಟೆಂಡರ್/ಜಾ.ಪ್ರ./2026-27 ದಿನಾಂಕ:05.05.2026

ಇ-ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ-2000 ನಿಯಮದಂತೆ 2025-26ನೇ ಸಾಲಿನ ಅಮೃತ್ 2.0 ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಯ ಅರ್ಹ ಗುತ್ತಿಗೆದಾರರಿಗೆ/ ಏಜೇನ್ಸಿರವರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರೆಕ್ಯೂರ್‌ಮೆಂಟ್ ಪೂರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಅವ್ಹಾನಿಸಲಾಗಿದೆ.

1) Name of works: IMPROVEMENT OF NAGARKERE (LAKE) IN SHAHAPUR CMC LIMITS UNDER AMRUT 2.0. **Indent Number:** DMA/2026-27/OW/WORK_INDENT57633. **Estimate cast (in lakhs):** 234.24. **E M D (in Rs):** As per E-Portal. **Class of contractor:** Class 1 and Above.

1) **ಟೆಂಡರ್ ಪ್ರಾರಂಭ ದಿನಾಂಕ:** 05/05/2026 2) **ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 19/05/2026 ಸಾಯಂಕಾಲ 5:30 ಘಂಟೆಗೆ 3) **ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 21/05/2026 ಬೆಳಿಗ್ಗೆ 11.00 ಘಂಟೆಗೆ 4) **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:** 25/05/2026 ಬೆಳಿಗ್ಗೆ 11.00 ಘಂಟೆಗೆ 5) **ವಿಳಾಸ:** www.kppp.karnatak.gov.in

ಸಹಿ/- ಪೌರಾಯುಕ್ತರು
ನಗರಸಭೆ ಶಹಾಪುರ

ವಾ.ಸಾ.ಸಂ.ಇ/ಯಾದಗಿರಿ/53/ಕೆ.ಎಸ್.ಎಂ.ಸಿ.ಎ/2026-27

ಪುರಸಭೆ ಕಾರ್ಯಾಲಯ, ಬ್ಯಾಡಗಿ-581 106, ಜಿಲ್ಲೆ : ಹಾವೇರಿ

ದೂರವಾಣಿ (08375), ಕಛೇರಿ : 228444, ಅಧ್ಯಕ್ಷರು : 228266, ಫ್ಯಾಕ್ಸ್ : 226444

ಪುಸಬ್ಯಾ/ಆವಿ/ಸ್ವಸಿಬೆಲು/ವಹಿ-/2025-26 ದಿನಾಂಕ : 05-05-2026

ಟೆಂಡರ್ ಪ್ರಕಟಣೆ ಇ-ಪ್ರೋಕ್ಯೂರಮೆಂಟ ಪೋರ್ಟಲ್ ಮೂಲಕ

ಬ್ಯಾಡಗಿ ಪುರಸಭೆಯ ಘನ ತ್ಯಾಜ್ಯ ವಿಲೆವಾರಿ ಘಟಕದಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದಂತೆ ಕೆಪಿಪಿಪಿ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)
01	ಬ್ಯಾಡಗಿ ಪುರಸಭೆ ಘನ ತ್ಯಾಜ್ಯ ವಿಲೇವಾರಿ ಘಟಕ **Sy No 20** ರಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಸಂಸ್ಕರಿಸುವುದು. ಇಂಡೆಂಟ ನಂ: **DMA/2025-26/SE7496/CALL-3**	**33.94**	**84850.00**

ಟೆಂಡರ ಪ್ರೊಸಸಿಂಗ್ ಫೀ ಮತ್ತು ಟೆಂಡರ ಶೇಡ್ಯೂಲ್: ಕೆಪಿಪಿಪಿ ಪೋರ್ಟಲ್‌ನಲ್ಲಿ ನಮೂದಾಗಿರುವಂತೆ. ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಆರೋಗ್ಯ ಶಾಖೆಯಿಂದ ಅಥವಾ **www.kppp.karnataka.gov.in** ನಿಂದ ಪಡೆಯಬಹುದಾಗಿದೆ.

ಸಹಿ/- (ವಿನಯಕುಮಾರ ಹೊಳೆಪ್ಪಗೋಳ KMAS)
ಮುಖ್ಯಾಧಿಕಾರಿ ಪುರಸಭೆ, ಬ್ಯಾಡಗಿ.

ಸಹಿ/- (ಕಲ್ಯಾಣಿ ಕಾಂಬಳೆ KAS)
ಆಡಳಿತಾಧಿಕಾರಿ, ಪುರಸಭೆ, ಬ್ಯಾಡಗಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/76/2026-27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026-27/144 ದಿನಾಂಕ: 06.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024-25 ನೇ ಸಾಲಿನ KKRDB ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬಿ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಸಿಂಗಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **08-05-2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **08/05/2026** ಸಮಯ 10:00 ಗಂಟೆಯಿಂದ **22/05/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **08/05/2026** ಸಮಯ 16:00 ಗಂಟೆಯಿಂದ **22/05/2026** ಸಮಯ 16:00 ಗಂಟೆವರೆಗೆ ತಾಂತ್ರಿಕ & ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **25/05/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/68/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-ಕಾಂಪಾ/ಸಿಆರ್-3/25-26 ದಿನಾಂಕ: 05.05.2026

ಅಲ್ಪಾವದಿ ಇ-ಟೆಂಡರ್ ಪ್ರಕಟಣೆ. (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, ನೆಡುತೋಪು ರಚನೆ ಮತ್ತು ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಇ-ಟೆಂಡರು ಸಲ್ಲಿಸಲು ಕೊನೆಯ ದಿ:13.05.2026 ಅಪರಾಹ್ನ 4.00 ಗಂಟೆಯವರೆಗೆ 2. ಟೆಂಡರು ತೆರೆಯುವ ದಿ:14.05.2026 ಅಪರಾಹ್ನ 4.30ಗಂಟೆ

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/16/05/187

IN THE COURT OF MOTOR ACCIDENT CLAIMS TRIBUNAL AT BENGALURU
MVC NO. 4164/2025 (SCCH-18)

BETWEEN: C. Krishnamani & others ... **PETITIONERS**
AND: Raju & another ... **RESPONDENTS**

NOTICE TO RESPONDENT No.1

Mr. Raju, S/o: Siddanna, R/at: No.10-71, Shivapura Galli, Humnabad, Bidar - 585330.

Take notice that the petitioners have filed the above claim petition against the Respondents for the compensation of Rs.60,00,000/- for the death of Raghavendra in a Road Traffic Accident on 22/04/2025 at about 9.00 P.M., Infront of Plumber Muniraju's land, Jogerahalli, Tavarekere Hobli, Bengaluru South, Bengaluru, by your offending Motorcycle bearing No. KA-02-JC-9609. The Respondent No.1 above named are hereby directed to appear before this Hon'ble Court either in person or through the pleader on the **08/06/2026** before SCCH-18 at **11:00 A.M.**, to defend the above case, failing which the matter will be determined as Ex-parte.

Given under my hand & seal of the court on this 05/05/2026

By order of the Court, Assistant Registrar, Court of Small Causes, Bangalore

NAGENDRA .M, Advocate
No.37, 1st Main, 12th A Cross, Defense Colony, Bagalagunte, Nagasandra Post, Bengaluru-560073

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬಸವನ ಬಾಗೇವಾಡಿ ರವರ ಕಾರ್ಯಾಲಯ

ಫೋನ್:08358-244081 ಇ-ಮೇಲ್:www.tlhbbagewadi@gmail.com

ಸಂ:ತಾ.ಸಾ.ಆ.ಬ.ಬಾ/ಟೆಂಡರ್/ಪಥ್ಯಾಹಾರ/2025-26/29/380 ದಿನಾಂಕ:04.05.2026

ಇ-ಪ್ರಕ್ಯುರಮೆಂಟ ಟೆಂಡರ್ ಪ್ರಕಟಣೆ

ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ 2026-27 ನೇ ಸಾಲಿಗಾಗಿ ಉಪಹಾರ ಮತ್ತು ಸಿದ್ಧಪಡಿಸಿದ ಉತ್ತಮ ದರ್ಜೆಯ ಪಥ್ಯಾಹಾರ (ಚಪಾತಿ/ರೊಟ್ಟಿ, ಅನ್ನ, ಸಾಂಬಾರು) ಹಾಗೂ ಬಾಳೆ ಹಣ್ಣು, ಬೇಯಿಸಿದ ಕೋಳಿ ಮೊಟ್ಟೆ ಹಾಗೂ ಉತ್ತಮ ದರ್ಜೆಯ ಬ್ರೇಡ್, ಕಾಫೀ/ಟೀ ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ 8 ದಿನಗಳ ಕಾಲಾವಕಾಶ ನೀಡಿ ಮರು ಅಲ್ಪಾವಧಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2027 ರ ವರೆಗೆ ಮಾತ್ರ ಇರುತ್ತದೆ. ಟೆಂಡರಿನ ಅಂದಾಜು ಮೌಲ್ಯ ರೂ.30,00,000/- ಗಳು ಇದ್ದು, ಟೆಂಡರ್ ವಿವರ ಈ ಕೆಳಗಿನಂತಿದೆ.

ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ-ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ, ಇವರಿಂದ ಪಡೆಯಬಹುದು. ಮೊ:9448920612, 9740494801

ಇ-ಮೇಲ್: tlhbbagewadi@gmail.com

ಟೆಂಡರ ವಿವರ

ಟೆಂಡರ್ ಪ್ರಕಟಣೆ ಸಂಖ್ಯೆ: DHFWS/2025-26/SE1973/Call-2

01) ಇ-ಪೋರ್ಟಲ್ ಟೆಂಡರ ಅಪ್ಲೋಡ್ ಮಾಡುವ ದಿನಾಂಕ: As per portal, 04.05.2026
02) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: As per portal, 12.05.2026, ಸಂಜೆ 4.30 ಘಂಟೆಗೆ.
03) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: As per portal, 14.05.2026 ಬೆಳಿಗ್ಗೆ 11.00 ಘಂಟೆಗೆ.
04) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ: As per portal, 18.05.2026 ಬೆಳಿಗ್ಗೆ 11.00 ಘಂಟೆಗೆ.

ಸೂಚನೆ: 1) ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್ ತೆರೆಯುವ ದಿನಾಂಕದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯ ದಿನದಂದು ತೆರೆಯಲಾಗುವುದು.

ಸಹಿ/- ಆಡಳಿತ ವೈದ್ಯಾಧಿಕಾರಿಗಳು,
ತಾಲೂಕಾ ಸಾರ್ವಜನಿಕ ಆಸ್ಪತ್ರೆ,
ಬಸವನ ಬಾಗೇವಾಡಿ

ವಾಸಾಸಂಇ/ವಿಜಯಪುರ/80/ಕೆಎಸ್‌ಎಂಸಿಎ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: (0836) 2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 ದಿನಾಂಕ: 06-05-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ ಸದಸ್ಯರ /ಮಹಾಪೌರರ/ಉಪಮಹಾಪೌರರ/ಅಮೃತ 2.0 ಅನುದಾನ

1) ಇಂಡೆಂಟ್ ನಂ. 53896/9.93 ಲಕ್ಷ/ಸಾಮಾನ್ಯ 2) ಇಂಡೆಂಟ್ ನಂ. 54610/10.00ಲಕ್ಷ/ಸಾಮಾನ್ಯ 3) ಇಂಡೆಂಟ್ ನಂ. 54149/13.00 ಲಕ್ಷ/ಸಾಮಾನ್ಯ 4) ಇಂಡೆಂಟ್ ನಂ. 54147/2.25 ಲಕ್ಷ/ಸಾಮಾನ್ಯ 5) ಇಂಡೆಂಟ್ ನಂ. 54612/10.00 ಲಕ್ಷ/ಸಾಮಾನ್ಯ 6) ಇಂಡೆಂಟ್ ನಂ. 49139/2.00ಲಕ್ಷ/ಸಾಮಾನ್ಯ 7) ಇಂಡೆಂಟ್ ನಂ. 56116/8.50 ಲಕ್ಷ/ಪರಿಶಿಷ್ಟ ಜಾತಿ 8) ಇಂಡೆಂಟ್ ನಂ. 55124/30.00 ಲಕ್ಷ/ಸಾಮಾನ್ಯ 9) ಇಂಡೆಂಟ್ ನಂ. 55128/10.00 ಲಕ್ಷ/ಸಾಮಾನ್ಯ 10) ಇಂಡೆಂಟ್ ನಂ. 54105/ 14.00 ಲಕ್ಷ/ಸಾಮಾನ್ಯ 11) ಇಂಡೆಂಟ್ ನಂ. 48796/10.00 ಲಕ್ಷ/ ಸಾಮಾನ್ಯ 12) ಇಂಡೆಂಟ್ ನಂ. 54159/4.05 ಲಕ್ಷ/ಸಾಮಾನ್ಯ 13) ಇಂಡೆಂಟ್ ನಂ. 53141/7.10 ಲಕ್ಷ/ ಸಾಮಾನ್ಯ 14) ಇಂಡೆಂಟ್ ನಂ. 53145/18.45 ಲಕ್ಷ/ಸಾಮಾನ್ಯ 15) ಇಂಡೆಂಟ್ ನಂ. 54629/7.00 ಲಕ್ಷ/ಸಾಮಾನ್ಯ 16) ಇಂಡೆಂಟ್ ನಂ. 54075/15.00 ಲಕ್ಷ/ಸಾಮಾನ್ಯ 17) ಇಂಡೆಂಟ್ ನಂ. 54145/15.00 ಲಕ್ಷ/ಸಾಮಾನ್ಯ 18) ಇಂಡೆಂಟ್ ನಂ. 53571/25.00 ಲಕ್ಷ/ಸಾಮಾನ್ಯ 19) ಇಂಡೆಂಟ್ ನಂ. 54626/4.10 ಲಕ್ಷ/ಸಾಮಾನ್ಯ 20) ಇಂಡೆಂಟ್ ನಂ. 54158/5.11 ಲಕ್ಷ/ಸಾಮಾನ್ಯ 21) ಇಂಡೆಂಟ್ ನಂ. 54141/10.00 ಲಕ್ಷ/ಸಾಮಾನ್ಯ 22) ಇಂಡೆಂಟ್ ನಂ. 51287/14.10 ಲಕ್ಷ/ಸಾಮಾನ್ಯ 23) ಇಂಡೆಂಟ್ ನಂ. 54630/35.00 ಲಕ್ಷ/ಸಾಮಾನ್ಯ 24) ಇಂಡೆಂಟ್ ನಂ. 56117/10.00 ಲಕ್ಷ/ಸಾಮಾನ್ಯ 25) ಇಂಡೆಂಟ್ ನಂ. 53994/32.00 ಲಕ್ಷ/ಸಾಮಾನ್ಯ 26) ಇಂಡೆಂಟ್ ನಂ. 53101/38.00 ಲಕ್ಷ/ಸಾಮಾನ್ಯ 27) ಇಂಡೆಂಟ್ ನಂ. 53103/6.50 ಲಕ್ಷ/ಸಾಮಾನ್ಯ 28) ಇಂಡೆಂಟ್ ನಂ. 53075/13.00 ಲಕ್ಷ/ಸಾಮಾನ್ಯ 29) ಇಂಡೆಂಟ್ ನಂ. 54088/26.60 ಲಕ್ಷ/ಸಾಮಾನ್ಯ 30) ಇಂಡೆಂಟ್ ನಂ. 53901/25.00 ಲಕ್ಷ/ಸಾಮಾನ್ಯ 31) ಇಂಡೆಂಟ್ ನಂ. 49066/7.27 ಲಕ್ಷ/ಸಾಮಾನ್ಯ 32) ಇಂಡೆಂಟ್ ನಂ. 49822/5.00 ಲಕ್ಷ/ಸಾಮಾನ್ಯ 33) ಇಂಡೆಂಟ್ ನಂ. 54391/2.20 ಲಕ್ಷ/ಸಾಮಾನ್ಯ 34) ಇಂಡೆಂಟ್ ನಂ. 51957/10.00 ಲಕ್ಷ/ಸಾಮಾನ್ಯ 35) ಇಂಡೆಂಟ್ ನಂ. 52551/3.00 ಲಕ್ಷ/ಸಾಮಾನ್ಯ 36) ಇಂಡೆಂಟ್ ನಂ. 52217/23.60 ಲಕ್ಷ/ಸಾಮಾನ್ಯ 37) ಇಂಡೆಂಟ್ ನಂ. 54745/6.00 ಲಕ್ಷ/ಸಾಮಾನ್ಯ 38) ಇಂಡೆಂಟ್ ನಂ. 56235/30.27 ಲಕ್ಷ/ಪರಿಶಿಷ್ಟ ಜಾತಿ 39) ಇಂಡೆಂಟ್ ನಂ. 56205/8.05 ಲಕ್ಷ/ಪರಿಶಿಷ್ಟ ಜಾತಿ 40) ಇಂಡೆಂಟ್ ನಂ. 56191/8.05 ಲಕ್ಷ/ಸಾಮಾನ್ಯ 41) ಇಂಡೆಂಟ್ ನಂ. 56152/12.00 ಲಕ್ಷ/ಪ್ರವರ್ಗ-2ಎ 42) ಇಂಡೆಂಟ್ ನಂ. 55242/25.00 ಲಕ್ಷ/ಪರಿಶಿಷ್ಟ ಜಾತಿ 43) ಇಂಡೆಂಟ್ ನಂ. 56145/25.00 ಲಕ್ಷ/ಸಾಮಾನ್ಯ 44) ಇಂಡೆಂಟ್ ನಂ. 57647/11.50ಲಕ್ಷ/ಸಾಮಾನ್ಯ 45) ಇಂಡೆಂಟ್ ನಂ. 57649/30.00 ಲಕ್ಷ/ಪರಿಶಿಷ್ಟ ಜಾತಿ 46) ಇಂಡೆಂಟ್ ನಂ. 56949/10.30 ಲಕ್ಷ/ಸಾಮಾನ್ಯ 47) ಇಂಡೆಂಟ್ ನಂ. 55951/2.50 ಲಕ್ಷ/ಸಾಮಾನ್ಯ 48) ಇಂಡೆಂಟ್ ನಂ. 56976/25.00 ಲಕ್ಷ/ಸಾಮಾನ್ಯ 49) ಇಂಡೆಂಟ್ ನಂ. 55327/21.80 ಲಕ್ಷ/ಸಾಮಾನ್ಯ 50) ಇಂಡೆಂಟ್ ನಂ. 58004/34.00 ಲಕ್ಷ/ಸಾಮಾನ್ಯ 51) ಇಂಡೆಂಟ್ ನಂ. 57958/5.00 ಲಕ್ಷ/ಸಾಮಾನ್ಯ 52) ಇಂಡೆಂಟ್ ನಂ. 57360/5.00 ಲಕ್ಷ/ಸಾಮಾನ್ಯ 53) ಇಂಡೆಂಟ್ ನಂ. 54100/20.00 ಲಕ್ಷ/ಸಾಮಾನ್ಯ 54) ಇಂಡೆಂಟ್ ನಂ. 52924/4.00ಲಕ್ಷ/ಸಾಮಾನ್ಯ 55) ಇಂಡೆಂಟ್ ನಂ. 52884/5.00 ಲಕ್ಷ/ಸಾಮಾನ್ಯ 56) ಇಂಡೆಂಟ್ ನಂ. 49114/34.00 ಲಕ್ಷ/ಸಾಮಾನ್ಯ. 57) ಇಂಡೆಂಟ್ ನಂ. 54567/45.00 ಲಕ್ಷ/ಪ್ರವರ್ಗ-1 58) ಇಂಡೆಂಟ್ ನಂ. 57619/8.00 ಲಕ್ಷ/ಪ್ರವರ್ಗ-2ಎ 59) ಇಂಡೆಂಟ್ ನಂ. 57622/7.00 ಲಕ್ಷ/ಪರಿಶಿಷ್ಟ ಜಾತಿ 60) ಇಂಡೆಂಟ್ ನಂ. 57621/19.00 ಲಕ್ಷ/ಪರಿಶಿಷ್ಟ ಜಾತಿ 61) ಇಂಡೆಂಟ್ ನಂ. 56778/12.63 ಲಕ್ಷ/ಪ್ರವರ್ಗ-2ಎ 62) ಇಂಡೆಂಟ್ ನಂ. 56779/12.00 ಲಕ್ಷ/ಪ್ರವರ್ಗ-1 63) ಇಂಡೆಂಟ್ ನಂ. 56777/25.75 ಲಕ್ಷ/ಸಾಮಾನ್ಯ. 64) ಇಂಡೆಂಟ್ ನಂ. 57692/8.00 ಲಕ್ಷ/ಪರಿಶಿಷ್ಟ ಜಾತಿ 65) ಇಂಡೆಂಟ್ ನಂ. 57956/5.00 ಲಕ್ಷ/ಸಾಮಾನ್ಯ. 66) ಇಂಡೆಂಟ್ ನಂ. 57995/4.88 ಲಕ್ಷ/ಸಾಮಾನ್ಯ. 67) ಇಂಡೆಂಟ್ ನಂ. 57993/5.00 ಲಕ್ಷ/ಪ್ರವರ್ಗ-2ಎ 68) ಇಂಡೆಂಟ್ ನಂ. 57991/6.30 ಲಕ್ಷ/ಸಾಮಾನ್ಯ 69) ಇಂಡೆಂಟ್ ನಂ. 57576/410.00 ಲಕ್ಷ/ಸಾಮಾನ್ಯ

ಒಟ್ಟು 69 ಕಾಮಗಾರಿಗಳು ಮೊತ್ತ ರೂ.1417.29 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ** ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆ: 0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅ.ನಂ. 1 ರಿಂದ 69 ರವರೆಗೆ **ದಿನಾಂಕ: 08-05-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 55 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 27-05-2026 ಸಂಜೆ 04:00 ಗಂಟೆ
2) ಟೆಂಡರ್ ತೆರೆಯುವ ದಿನಾಂಕ: 29-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (56 ರಿಂದ 68 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-05-2026 ಸಂಜೆ 04.00 ಗಂಟೆ
2) ಟೆಂಡರ್ ತೆರೆಯುವ ದಿನಾಂಕ : 18-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (69 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-06-2026 ಸಂಜೆ 04.00 ಗಂಟೆ
2) ಟೆಂಡರ್ ತೆರೆಯುವ ದಿನಾಂಕ: 17-06-2026 ಸಂಜೆ 04:30 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22-06-2026 ಸಂಜೆ 04:30 ಗಂಟೆ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ಡಿಐಪಿಆರ್/ಧಾರವಾಡ/134/ಮಣಿಪಾಲ್/2026-27

ಕರ್ನಾಟಕ ಅರಣ್ಯ ಅಕಾಡೆಮಿ

ಜಂಟಿ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಗುಂಗರಗಟ್ಟಿ, ಪೋಸ್ಟ್: ಮುಮ್ಮಿಗಟ್ಟಿ, ಧಾರವಾಡ - 580011
ಇ-ಮೇಲ್: jointdirkfa@aranya.gov.in / dcfgugdwd@yahoo.in

ಸಂಖ್ಯೆ:ಎ2/ಆಯವ್ಯಯ/ಹೊ.ಗು/ಅ.ಇ-ಟೆಂಡರ್/ಸಿಆರ್/2026-27 ದಿನಾಂಕ: 05-05-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಮೂರನೇ ಕರೆ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **2026-27** ನೇ ಸಾಲಿನಲ್ಲಿ **ಕರ್ನಾಟಕ ಅರಣ್ಯ ಅಕಾಡೆಮಿ, ಗುಂಗರಗಟ್ಟಿ, ಧಾರವಾಡದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ವೃಂದದ ನೌಕರರನ್ನು ಪೂರೈಸುವ** ಕುರಿತು ಏಕ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ ಹಾಗೂ ಸದರಿ ಅಲ್ಪಾವಧಿ ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13-05-2026 ರಂದು ಪೂರ್ವಾಹ್ನ 10.30 ಗಂಟೆವರೆಗೆ ಮಾತ್ರ ಇರುತ್ತದೆ** ಹಾಗೂ ದಿನಾಂಕ: **14-05-2026 ರಂದು ಪೂರ್ವಾಹ್ನ 11.00 ಗಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು.** ಒಂದು ವೇಳೆ ಸದರಿ ದಿನದಂದು ಅನಿವಾರ್ಯ ಕಾರಣದಿಂದ ಅಲ್ಪಾವಧಿ ಇ-ಟೆಂಡರ್ ರದ್ದು ಪಡಿಸಿದ್ದಲ್ಲಿ ಅಥವಾ ಟೆಂಡರ್‌ದಾರರು ಯಾರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಅಟೋಎಕ್ಸಟೇನ್‌ಶನ್ ಅವಧಿಯು 07 ದಿವಸಗಳ ಅವಧಿಗೆ ಮಾತ್ರ ಇರುತ್ತದೆ. ಟೆಂಡರ್ ಮೊತ್ತ ಯುನಿಟ್ **ನಂ. 1) ರೂ. 44,86,746.00,** ಇ.ಎಮ್.ಡಿ 2% ಮೊತ್ತ **ರೂ. 90,000.00** ಹಾಗೂ **ಯುನಿಟ್ ನಂ. 2) ರೂ. 47,43,729.00,** ಇ.ಎಮ್.ಡಿ 2% ಮೊತ್ತ **ರೂ. 95,000.00,** ಭದ್ರತಾ ಠೇವಣಿ ಟೆಂಡರ್ ಮೊತ್ತದ ಶೇಕಡಾ 5% ರಷ್ಟು ಇರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಅಂತರ್ಜಾಲವನ್ನು ಅಥವಾ ಕಚೇರಿಯ ವೇಳೆಯಲ್ಲಿ ಈ ಕಚೇರಿಗೆ ಹಾಗೂ ದೂರವಾಣಿ ಮುಖಾಂತರ ಮೊಬೈಲ್ ಸಂಖ್ಯೆ: **8762271466** ಕ್ಕೆ ಸಂಪರ್ಕಿಸಬಹುದಾಗಿದೆ.

INDENT NO: KFD/2026-27/SE1926
INDENT NO: KFD/2026-27/SE1927

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಕರ್ನಾಟಕ ಅರಣ್ಯ ಅಕಾಡೆಮಿ, ಧಾರವಾಡ

ವಾಸಾಸಂಇ/ಧಾರವಾಡ/129/ಆಡ್ವರ್ಟೋರ್/2026-27

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ

ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,-577213,
Email:tumcoscng@gmail.com, info@tumcos.com Mo:7349033006

R.NO.:2026-27/128 DATE: 06-05-2026

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಸಂಘದ ಸಾಗರಪೇಟೆ ಶಾಖೆಯ ಕಟ್ಟಡಕ್ಕೆ ಹವಾ ನಿಯಂತ್ರಣ ವ್ಯವಸ್ಥೆ (ಏರ್ ಕಂಡೀಶನ್ ಸಿಸ್ಟಮ್) ಅಳವಡಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಇ.ಎಂ.ಡಿ.ಮೊತ್ತ:50,000/-ರೂ.ಗಳು ಟೆಂಡರ್ ನಂಬರ್ :TUMCOSL/2026-27/OW/WORK_INDENT3, ಟೆಂಡರ್ ಟೈಟಲ್ :SUPPLY AND INSTALLATION OF AIR CONDITION SYSTEM FOR TUMCOS LTD AT SAGARA-PETE. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ 22/05/2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಅಂತರ್ಜಾಲ ಅಥವಾ https://www.tumcos.com ಸಂಪರ್ಕಿಸಿ

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ನಗರಸಭೆ ಕಾರ್ಯಾಲಯ ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/02/2026-27
ದಿನಾಂಕ:04.05.2026

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ 2026-27 ನೇ ಸಾಲಿನ ನಗರಸಭೆ ನಿಧಿಯಡಿಯಲ್ಲಿ ನೀರು ಸರಬರಾಜು ಕೊಳವೆ ಮಾರ್ಗಗಳ ಲೀಕೇಜ್ (ಪಂಪ್ ಹೌಸ್ ಒಳಗೊಂಡು) ವಾರ್ಷಿಕ ದುರಸ್ಥಿ ಮತ್ತು ನಿರ್ವಹಣೆಯ 3 ಸಂಖ್ಯೆ ಪ್ಯಾಕೇಜ್‌ಗಳಿಗೆ, ಒಳಚರಂಡಿ ಮಾರ್ಗಗಳ ವಾರ್ಷಿಕ ದುರಸ್ಥಿ ಮತ್ತು ನಿರ್ವಹಣೆಯ 2 ಸಂಖ್ಯೆ ಪ್ಯಾಕೇಜ್‌ಗಳಿಗೆ, ಪೌರಾಯುಕ್ತರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳಿಗೆ ಕಛೇರಿ ನಿರ್ವಹಣೆಗೆ ನಾಲ್ಕು ಚಕ್ರದ ಎರಡು ಸಂಖ್ಯೆ ವಾಹನಗಳನ್ನು ಖರೀದಿಸಲು ಮತ್ತು 2022-23, 2024-25 ಮತ್ತು 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ (ನಿರ್ಬಂದಿತ) ದಲ್ಲಿ 3 ಸಂಖ್ಯೆ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಪ್ಯಾಕೇಜ್ ಸಂಖ್ಯೆ: 1 ರಿಂದ 6 ರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18.05.2026 ರ ಸಂಜೆ 17.30 ಗಂಟೆವರೆಗೆ.** ಹಾಗೂ ಪ್ಯಾಕೇಜ್ ಸಂಖ್ಯೆ: 7 ರಿಂದ 9 ಕ್ಕೆ **ದಿನಾಂಕ: 11.05.2026 ರ ಸಂಜೆ 17.30 ಗಂಟೆವರೆಗೆ.**

(2) ಪ್ಯಾಕೇಜ್ ಸಂಖ್ಯೆ: 1 ರಿಂದ 6 ರ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 20.05.2026 ರ ಬೆಳಿಗ್ಗೆ 11.00 ಗಂಟೆಗೆ.** ಹಾಗೂ ಪ್ಯಾಕೇಜ್ ಸಂಖ್ಯೆ: 7 ರಿಂದ 9 ನ್ನು **ದಿನಾಂಕ: 13.05.2026 ರ ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/-
ಆಡಳಿತಾಧಿಕಾರಿಗಳು
ನಗರಸಭೆ, ಕೋಲಾರ
ಹಾಗೂ ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ

ಸಹಿ/-
ಪೌರಾಯುಕ್ತರು
ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:59/ಕೆಎಸ್‌ಎಂಸಿಎ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:952/ಗದಗ/ಕಾನಿಇಂ(ವಿ)/ವಿ.ಸಂಖ್ಯೆ-/2026-27/553 ದಿನಾಂಕ:05.05.2026

ಟೆಂಡರ್ ಪ್ರಕಟಣೆ

ಕವಿಪ್ರನಿನಿಯ ಗದಗ ಕಾರ್ಯಾಚರಣೆಗಳ ವಿಭಾಗದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) 220ಕೆವಿ ಗದಗ ಉಪಕೇಂದ್ರದಲ್ಲಿ 220 ಕೆವಿ ಲೈನ್‌ಗಳಿಗೆ ಅರ್ಥ್ ಸ್ವಿಚ್‌ನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವ ಕಾಮಗಾರಿ. **2)** 110ಕೆವಿ ಮುಂಡರಗಿ & 110ಕೆವಿ ಶಿಂಗಟಾಲೂರು ಉಪಕೇಂದ್ರದಲ್ಲಿ ಬ್ಯಾಟರಿ ಚಾರ್ಜರ್ ಕಾಮಗಾರಿ. **3)** 110ಕೆವಿ ಕೊಣ್ಣೂರು ಉಪಕೇಂದ್ರದಲ್ಲಿ 33 ಕೆವಿ ಮಿಂಚು ನಿರೋಧಕಗಳನ್ನು ಸರಬರಾಜು ಮಾಡುವುದು. **4)** 220ಕೆವಿ ಹರ್ತಿ ಉಪಕೇಂದ್ರದಲ್ಲಿ 220ಕೆವಿ ಬಸ್ ಕಪ್ಲರ್ ಕಂಪ್ರೆಸ್ಸರನ್ನು ಕೂಲಂಕುಷ ಪರೀಕ್ಷೆ ಮತ್ತು ದುರಸ್ತಿ ಮಾಡುವುದು. **5)** 110 ಕೆವಿ ಗದಗ, ಮುಂಡರಗಿ, ಶಿಂಗಟಾಲೂರು & ಬೆಳ್ಳಟ್ಟಿ ಉಪಕೇಂದ್ರದಲ್ಲಿ ಲಾಗ್ ಪುಸ್ತಕ, ಮಾರ್ಗ ಮುಕ್ತತೆ ಪುಸ್ತಕಗಳನ್ನು ಸರಬರಾಜು ಮಾಡುವುದು. **6)** 220ಕೆವಿ ಗದಗ ಉಪಕೇಂದ್ರದಲ್ಲಿ 220ಕೆವಿ ಲೈನ್‌ಗೆ ಸರ್ಜ್ ಕೌಂಟರ್‌ಗಳನ್ನು ಸರಬರಾಜು ಮಾಡುವುದು. **7)** 220ಕೆವಿ ಹರ್ತಿ ಉಪಕೇಂದ್ರದಲ್ಲಿ ಸಿಟಿ, ಪಿಟಿ, ಮತ್ತು ಸಿವಿಟಿ ಮಾರ್ಷಲಿಂಗ್ ಬಾಕ್ಸನ್ನು ದುರಸ್ತಿ ಮಾಡುವುದು. **8)** 220ಕೆವಿ ಗದಗ ಉಪಕೇಂದ್ರದಲ್ಲಿ ಅಂಡರ್ ಹಂಗ್ ಐಸೋಲೇಟರ್ ಪಿಐ ಮತ್ತು ಫಿಮೇಲ್ ಸಂಪರ್ಕದ ಭಾಗ (Female contact) ಜಿಆರ್ ಪವರ್ ಮೇಕ್ ಐಸೋಲೇಟರ್‌ನ 220 ಕೆವಿ ಡೋನಿ ಲೈನ್-2ಗೆ ಸರಬರಾಜು ಮಾಡುವುದು ಮತ್ತು ಸ್ಥಾಪಿಸುವ ಕಾಮಗಾರಿ. **9)** 220ಕೆವಿ ಗದಗ ಉಪಕೇಂದ್ರದಲ್ಲಿ 220ಕೆವಿ ಬಾಗಲಕೋಟೆ ಲೈನ್ 1 ಮತ್ತು 2ಗಳಿಗೆ Male contact ಐಸೋಲೇಟರ್‌ಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವ ಕಾಮಗಾರಿ. **10)** 110ಕೆವಿ ಡಂಬಳ ಉಪಕೇಂದ್ರಕ್ಕೆ 03 ಸಂಖ್ಯೆಯ 11ಕೆವಿ ಕರೆಂಟ್ ಟ್ರಾನ್ಸ್‌ಫಾರ್ಮರನ್ನು ಸರಬರಾಜು ಮಾಡುವುದು. **11)** 220 ಕೆವಿ ಗದಗ ಉಪಕೇಂದ್ರದಲ್ಲಿ IEC 61850 ಪ್ರೋಟೋಕಾಲನ್ನು ಬೆಂಬಲಿಸುವ ಸಂಖ್ಯಾತ್ಮಕ ರಿಲೇಗಳಿಂದ 100ಎಂವಿಎ ಟ್ರಾನ್ಸ್‌ಫಾರ್ಮರ್-3 ಫ್ಯಾನೆಲ್‌ನಲ್ಲಿ ಒದಗಿಸಲಾದ REF (64R) ರಿಲೇಯನ್ನು ಬದಲಾಯಿಸುವ ಕಾಮಗಾರಿ. **12)** 220ಕೆವಿ ಗದಗ ಉಪಕೇಂದ್ರದಲ್ಲಿ 61850 ಪ್ರೋಟೋಕಾಲ್ ಅನ್ನು ಬೆಂಬಲಿಸುವ ರಿಲೇಗಳಿಂದ 100ಎಂವಿಎ ಟ್ರಾನ್ಸ್‌ಫಾರ್ಮರ್-1 & 2 ಬ್ಯಾಕ್ ಅಪ್ ರಿಲೇ & 110 ಕೆವಿ ಗದಗ ಲೈನ್ ಬ್ಯಾಕ್ ಅಪ್ ರಿಲೇಯನ್ನು ಬದಲಾಯಿಸುವುದು. **13)** 220ಕೆವಿ ಗದಗ ಉಪಕೇಂದ್ರದಲ್ಲಿ AFAS ಇಂಟಿಗ್ರೇಷನ್ IEC 61850 ಪ್ರೋಟೋಕಾಲ್ ರಿಲೇಯೊಂದಿಗೆ 110ಕೆವಿ ಮತ್ತು 220 ಕೆವಿ ಬಸ್ ಕಪ್ಲರ್ ಬ್ಯಾಕ್ ಅಪ್ ರಿಲೇಗಳನ್ನು ಬದಲಾಯಿಸುವುದು.

ವಿಚಾರಣೆಯ ವಿವರಗಳನ್ನು ದಿನಾಂಕ: **07.05.2026 ರಂದು 10:00 ಗಂಟೆಯ** ನಂತರ ಈ ಕಚೇರಿಯಿಂದ ಪಡೆಯಬಹುದು. ಕೊನೆಯ ದಿನಾಂಕ: **21.05.2026 ರಂದು ಸಂಜೆ: 04:00 ಗಂಟೆಯವರೆಗೆ.**

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯಾಚರಣೆಗಳ ವಿಭಾಗ, ಕವಿಪ್ರನಿನಿ, ಬಾಪೂಜಿನಗರ, ಗದಗ-582103.

ಸಾಲಬಾಧೆ: ರೈತ ಆತ್ಮಹತ್ಯೆ

ಹಾವೇರಿ: ಸಾಲಬಾಧೆ ತಾಳಲಾರದೆ ರೈತರೊಬ್ಬರು ನೇಣು ಬಿಗಿದುಕೊಂಡು ಮೃತಪಟ್ಟಿರುವ ಘಟನೆ ರಾಣೇಬೆನ್ನೂರು ತಾಲೂಕು ಚಳಗೇರಿ ಗ್ರಾಮದಲ್ಲಿ ನಡೆದಿದೆ. ಚಳಗೇರಿಯ ಮಹೇಶಪ್ಪ ಶಂಕ್ರಪ್ಪ ಬೆನಕನಕೊಂಡ (67) ನೇಣಿಗೆ ಶರಣಾದ ರೈತ. ಇವರು ಕೃಷಿ ಕೆಲಸಕ್ಕೆಂದು ಬ್ಯಾಂಕಿನಲ್ಲಿ 1.50 ಲಕ್ಷ ಸಾಲ ಮಾಡಿಕೊಂಡಿದ್ದಾರೆ. ಆಗಾಗ್ಗೆ ಬಡ್ಡಿ ಹಣ ಪಾವತಿಸಿದರೂ ಸಹಿತ ಅಸಲು ಹಣ ಹಾಗೆ ಉಳಿದಿತ್ತು. ಎರಡ್ಮೂರು ವರ್ಷಗಳಿಂದ ಅತಿವೃಷ್ಟಿ, ಅನಾವೃಷ್ಟಿ ಮಳೆಯಿಂದಾಗಿ ಬೆಳೆ ಸರಿಯಾಗಿ ಬಾರದ ಹಿನ್ನೆಲೆ ಈ ಸಾಲವನ್ನು ತೀರಿಸುವುದು ಹೇಗೆ ಎನ್ನುವ ಚಿಂತೆಯಲ್ಲಿ ತನ್ನಷ್ಟಕ್ಕೆ ತಾನೆ ಮನೆಯ ತಗಡಿಗೆ ಹಾಕಿದ ಕಬ್ಬಿಣದ ಪಟ್ಟಿಗೆ ಶಾಲಿನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆ ಎಂದು ಮೃತನ ಮಗ ಮಂಜು ಬೆನಕನಕೊಂಡ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಕಡ್ಡಿ (ಕೆಂಪು)	2211	5506
ಕಡ್ಡಿ (ಬಿಳಿ)	5519	5799
ಉದ್ದು	2609	6659
ಹೆಸರು	4010	4750
ಹುರಳಿ	3718	3718
ಜೋಳ	1502	4311
ಆಲಸಂಧಿ	1502	1502
ಗೋವಿನಜೋಳ	1851	1921
ಸಾಸಿವೆ	4259	4259
ಕುಶಭಿ	5411	5451
ಸೋಯಾಬಿನ್	5870	6300
ತೊಗರಿ	2259	4259
ಗೋಧಿ	2407	2559
ಶೇಂಗಾ	5320	7100
ಮೆಣಸಿನಕಾಯಿ	4469	40399

ಕ್ರಿಮಿ. ನಂ.: 503/2026
[illegible]
ಈ ಹೊತ್ತು ಕೋರ್ಟಿನ ಶೀಲು ವ ಮೋಹರು ಹಾಕಿ 8-4-2026 ರಂದು ಕೊಡಲ್ಪಟ್ಟಿದೆ.
ಸ್ಥಳ: ರಾಣೇಬೆನ್ನೂರ
ದಿನಾಂಕ: 6/4/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- (ಶ್ರೀ ಹೆಚ್.ಆರ್. ಹನುಮಂತಪ್ಪ)
ಶಿರಸ್ತೇದಾರರು, ರಾಣೇಬೆನ್ನೂರ ಪ್ರಿನ್ಸಿಪಲ್ ಸಿನೀಯರ ಸಿವಿಲ್ ಜಡ್ಜ ನ್ಯಾಯಾಲಯ,
ಸಹಿ/- ಶ್ರೀ ಕುಮಾರ ಡಿ. ಮಡಿವಾಳರ, ವಕೀಲರು ವ ನೋಟರಿ (ಭಾರತ ಸರ್ಕಾರ ರಾಣೇಬೆನ್ನೂರ

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 519 /2026
ಅರ್ಜಿದಾರರು : 1) ಸಾಲುಮನೆ ಲಕ್ಷ್ಮಮ್ಮ ಗಂಡ ಹೆಚ್ ದುರುಗಪ್ಪ, ವಯಸ್ಸು 44 ವರ್ಷ, ವಾಸ: ನಾಗೇನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ, 2) ಅಜ್ಜಯ್ಯ ತಾಯಿ ದಿವಂಗತ ಸಣ್ಣ ತಿಪ್ಪಮ್ಮ, ವಯಸ್ಸು 18 ವರ್ಷ,
3) ಟಿ.ಎಸ್. ಸ್ವಪ್ನ ತಾಯಿ ದಿವಂಗತ ಸಣ್ಣ ತಿಪ್ಪಮ್ಮ, ವಯಸ್ಸು 15 ವರ್ಷ, ಅರ್ಜಿದಾರ 2 ಮತ್ತು 3 ರವರ ವಿಳಾಸ ತಾಳೂರು ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ಹಾಗೂ
ಎದುರುದಾರರು : ಮಾನ್ಯ ತಹಶೀಲ್ದಾರರು ಜನನ ಮರಣ ನೊಂದಣಾಧಿಕಾರಿಗಳು ತಾಲೂಕು ಕಛೇರಿ ಸಂಡೂರು.
ನೋಟಿಸ್
ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ 1 ರವರ ತಂಗಿ ಮತ್ತು 2 ಮತ್ತು 3 ರವರ ತಾಯಿಯವರಾದ ಸಣ್ಣ ತಿಪ್ಪಮ್ಮ ತಂದೆ ಅಂಜಿನಪ್ಪ, ಇವರು ದಿನಾಂಕ: 01-04-2011 ರಂದು ತಾಳೂರು ಗ್ರಾಮ, ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 01-06-2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 23/04/2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಹಿ/- ಕುಮಾರಸ್ವಾಮಿ ಹೆಚ್.
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-4/ಟೆಂಡರ್:02/2026-27/137
ದಿನಾಂಕ : 04-05-2026

ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

MVS (O&M) ಯೋಜನೆಯಡಿ ಹಾವೇರಿ ತಾಲೂಕಿನ ಈ ಕೆಳಕಂಡ ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ & ನಿರ್ವಹಣೆ (O&M) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
(1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ : **11-05-2026** ರ 11:00 ಗಂಟೆವರೆಗೆ (2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **14-05-2026** ರ 17:00 ಗಂಟೆವರೆಗೆ (3) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **15-05-2026**ರ 17:30 ಗಂಟೆ ನಂತರ
ಇಂಡೆಂಟ್ ನಂ :- (1) Providing Operation and Maintenance of Multi Village Water Supply scheme to Kanavalli and Other 8 villages in Haveri Taluk of Haveri District (RWSSD/2024-25/WS/WORK_INDENT8544/CALL-4)
(2) Providing Operation and Maintenance of Multi Village Water Supply scheme to Agadi and Other 7 villages in Haveri Taluk of Haveri District. (RWSSD/2024-25/WS/WORK_INDENT8413/CALL-3)
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/- ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/79/2026-27

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2026-27/257
ದಿನಾಂಕ : 06-05-2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, KW-2,

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1,KW-2, ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 9 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
WORK_INDENT : 25786, 26379, 26380, 26382, 26385, 26389, 26407, 26417, 26422
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **16.77** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **25.15** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ :- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.
ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **07-05-2026** ರಿಂದ **22-05-2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **25-05-2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ವಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾಜ್. ಇಂಜನೀಯರಿಂಗ್ ವಿಭಾಗ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/49/2026-27 ಗದಗ

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂಖ್ಯೆ:ಕಾಪಾಇಂ/ಪಂರಾಇಂ/ವಿದಾ/ಇ-ಪ್ರೊಕ್ಯೂರ್ ಮೆಂಟ್//2026-27/210
ದಿನಾಂಕ:-06/5/2026

ಕೆ.ಪಿ.ಪಿ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ವಿಭಾಗದಿಂದ 2026-27ನೇ ಸಾಲಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ಹಾಗೂ 5 ಉಪವಿಭಾಗಗಳಿಗೆ ಅಗತ್ಯವಿರುವ ಡಾಟಾ ಎಂಟ್ರಿ ಆಪರೇಟರ್‌ಗಳು, ವಾಹನ ಚಾಲಕರು ಮತ್ತು ಗ್ರೂಪ್-ಡಿ ಸೇವೆಯನ್ನು ಹೊರ ಸಂಪನ್ಮೂಲಗಳಿಂದ ಪಡೆಯಲು ಕರೆದಿರುವ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಇಲಾಖಾ ನಿಯಾಮಾವಳಿಯ ಮೇರೆಗೆ ಕೆಪಿಪಿ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು Standard bid documents ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:16-5-2026 ರ ಸಾಯಂಕಾಲ 5.00 ಗಂಟೆಯವರೆಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು.
ವಾಸಾಇ/ಡಿಪಿಜೆ/64/
ಕೆಎಸ್‌ಎಂಸಿಎ/2026-27
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304,
ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)
ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2026-27/410 ದಿನಾಂಕ: 05.05.2026

ಅಲ್ಪಾವಧಿ ಟೆಂಡರ ಅಧಿಸೂಚನೆ
(ಕೆ.ಪಿ.ಪಿ.-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-1 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.
ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.
ಟೆಂಡರಗಿಟ್ಟ ಅಂದಾಜು ಮೊತ್ತ ರೂ. 422.00 ಲಕ್ಷ
1. ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ, 2.ಪ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 12.05.2026 ರ 11.00 ಬೆಳಿಗ್ಗೆ , 3. ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 13.05.2026 ರ 4.00 ಸಾಯಂಕಾಲ, 4.ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ, 5. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿ ಯಲ್ಲಿ): 18.05.2026 ರ 11.00 ಬೆಳಿಗ್ಗೆ, 6. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):20.05.2026 ರ ಬೆಳ್ಳಿಗ್ಗ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ)
ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp. karnataka. gov.in/kpp-protal/index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ
DIPR/BGM/RO-NO-199/KSMCA/2026-27

ಅಸಲ ದಾವಾ ಸಂಖ್ಯೆ: 37/2026
ಮೆ॥ ಜೆ.ಎಂ.ಎಫ್.ಸಿ. ನರಗುಂದ ಇವರ ನ್ಯಾಯಾಲಯದಲ್ಲಿ
ವಾದಿಯರು : 1) ಬಸವರಾಜ ತಂ. ವೀರಭದ್ರಪ್ಪ ಸುಳ್ಳದ 2) ರುದ್ರಪ್ಪ ತಂ. ವೀರಭದ್ರಪ್ಪ ಸುಳ್ಳದ
ವಿರುದ್ಧ
ಪ್ರತಿವಾದಿಯರು : 1) ಕರ್ನಾಟಕ ಸರಕಾರ, ಇದರ [illegible]

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 518 /2026
ಅರ್ಜಿದಾರರು : 1) ಹೊನ್ನರಾಜು ಎನ್. ತಂದೆ ಲೇಟ್ ಎಂ.ನಾಗಪ್ಪ, ವಯಸ್ಸು: 37 ವರ್ಷ
2) ಕೆ.ಹೆಚ್. ಕಾರ್ತಿಕ್ ತಂದೆ ಹೊನ್ನರಾಜು, ವಯಸ್ಸು: 10 ವರ್ಷ, 3) ಎನ್.ಹೆಚ್. ಮನೋಜ್ [illegible]

ಕ್ರಿಮಿ. ನಂ.: 502/2026
[illegible]

ಕ್ರಿಮಿ. ನಂ.: 136/2026
[illegible]

ಕ್ರಿಮಿನಲ್ ಮಿಸಲೇನಿಯಸ್ ನಂ:175/2026
ಮಾನ್ಯ ಜೆ.ಎಮ್.ಎಫ್.ಸಿ ನ್ಯಾಯಧೀಶರು ಶಿಗ್ಗಾಂವ ಇವರ ನ್ಯಾಯಲಯಕ್ಕೆ
ಅರ್ಜಿದಾರರು:1)ಶ್ರೀ ಮಹೇಶ ತಂದೆ ಅಶೋಕ ಬಂಗಾಲಿ
ವಿರುದ್ಧ
ಎದುರುಗಾರರು:ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಬಂಕಾಪೂರ ವ ಜನನ-ಮರಣ ನೋಂದಣಿಅಧಿಕಾರಿಗಳು ಬಂಕಾಪೂರ ತಾ:ಶಿಗ್ಗಾಂವ ಜಿ:ಹಾವೇರಿ
ಪತ್ರಿಕಾ ಪ್ರಕಟಣೆ
ಇದರಲ್ಲಿ ಅರ್ಜಿದಾರರ ಹೆಂಡತಿಯಾದ ಶ್ರೀಮತಿ ಅನಿತಾ ಕೋಂ ಮಹೇಶ ಬಂಗಾಲಿ ಇವರು ದಿನಾಂಕ: 18/06/2023ರಂದು ಹಾವೇರಿ ಜಿಲ್ಲಾ ಶಿಗ್ಗಾಂವ ತಾಲೂಕ ಬಂಕಾಪೂರ ಗ್ರಾಮದ ಕೊಟ್ಟಿಗೇರಿ ಓಣಿಯ ಅರ್ಜಿದಾರನ ಮನೆಯಲ್ಲಿ ಮೃತರಾಗಿರುತ್ತಾರೆ. ಅರ್ಜಿದಾರನ ವಾರಸಾ ಪಡೆಯಲು ಮೃತರಾದವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಸಲುವಾಗಿ ಮಾನ್ಯ ನ್ಯಾಯಲಯದಲ್ಲಿ ಪ್ರಕರಣ ದಾಖಲಿಸಿದ್ದು, ಅದು ದಿನಾಂಕ:25/06/2026 ರಂದು ಮುದ್ದತ್ತು ನೇಮಿಸಿದ್ದು, ಸದರಿ ಪ್ರಕರಣ ಸಂಬಂಧಿಸಿದಂತೆ ಯಾರದರು ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮಾನ್ಯ ನ್ಯಾಯಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿ ಆದೇಶ ಮಾಡಲಾಗುವುದು ಅಂತ ಕೊಟ್ಟ ಪತ್ರಿಕಾ ಪ್ರಕಟಣೆ.
ಸ್ಥಳ: ಶಿಗ್ಗಾಂವ
ದಿನಾಂಕ:05/05/2026
ಸಹಿ/- ಶಿರಸ್ತೇದಾರರು
ಮಾನ್ಯ ಜೆ.ಎಮ್.ಎಫ್.ಸಿ. ನ್ಯಾಯಧೀಶರು ನ್ಯಾಯಲಯ ಶಿಗ್ಗಾಂವ
ಅರ್ಜಿದಾರರ ಪರ ವಕೀಲರು
ಸಹಿ/-ಶ್ರೀ ಎಸ್.ವ್ಹಿ.ಶೆಟ್ಟಿ ವಕೀಲರು,ಶಿಗ್ಗಾಂವ

[illegible]
... ನ್ಯಾಯಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿ ಆದೇಶ ಮಾಡಲಾಗುವುದು ಅಂತ ಕೊಟ್ಟ ಪತ್ರಿಕಾ ಪ್ರಕಟಣೆ.
ಸ್ಥಳ: ಶಿಗ್ಗಾಂವ
ದಿನಾಂಕ:05/05/2026
ಸಹಿ/- ಶಿರಸ್ತೇದಾರರು
ಕಿರಿಯ ದಿವಾಣಿ ನ್ಯಾಯಧೀಶರು ಜೆ.ಎಮ್.ಎಫ್.ಸಿ. ನ್ಯಾಯಲಯ ಶಿಗ್ಗಾಂವ
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಸಿ.ಎಮ್. ಹರಕುಣಿ ವಕೀಲರು, ಶಿಗ್ಗಾಂವ

ಸಾರ್ವಜನಿಕ ಪ್ರಕಟಣೆ

ಸಾರ್ವಜನರಿಕಗೆ ರೋಣದಿಂದ ಶ್ರೀ ಎಸ್. ಎಲ್.ದಂಡಿನ ವಕೀಲರು ನಮ್ಮ ಪಕ್ಷಗಾರಳಾದ ಶ್ರೀಮತಿ ಶಿವಕ್ಕ ಕೋಂ. ಸೋಮಪ್ಪ ಸುಣಗದ ಸಾ: ಅಮರಗೊಳ ತಾ: ನವಲಗುಂದ ಜಿ: ಧಾರವಾಡ ಇವರು ಕೊಟ್ಟ ಮಾಹಿತಿ ವ, ಅಧಿಕಾರ ಹಾಗೂ ದಾಖಲೆಗಳ ಆಧಾರದಿಂದ ಕೊಡುವ ಸಾರ್ವಜನಿಕ ನೋಟಿಸ್ ಏನೆಂದರೆ,
ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಪೈಕಿ ಮೊರಬ ಹೊಬಳಿಯ ಅಮರಗೊಳ ಗ್ರಾಮದ ಜಮೀನು ಅದರ ರಿ.ಸ.ನಂ 88/3 ಕ್ಷೇತ್ರ 1 ಎಕರೆ 14 ಗುಂಟೆ ಆಕಾರ 2-59 ಪೈಸ ನೇದ್ದು ಜಮೀನು ಇದ್ದು, ಸದರಿ ಜಮೀನಿನ ಚಕಬಂದಿ ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಎ.ಎನ್. ಪಾಟೀಲ ಇವರ ಜಮೀನು ಉತ್ತರಕ್ಕೆ : ಎಸ್.ಎಸ್. ಕಿತ್ತಲಿ ಇವರ ಜಮೀನು, ದಕ್ಷಿಣಕ್ಕೆ : ಬಿ.ಎನ್. ಕಿತ್ತಲಿ ಇವರ ಜಮೀನು ಈ ಚಕ್ಕಬಂದಿ ಮಧ್ಯದಲ್ಲಿ ಇರುವ ಸಂಪೂರ್ಣ ಜಮೀನನ್ನು ಅದರ ಮಾಲೀಕರು ವ, ಕಬ್ಜಾ ವಹಿವಾಟದಾರ ನಾತೆಯಿಂದ ಜನರಲ್ ಮಾರಾಟಕ್ಕೆ ಹಚ್ಚಿದ್ದು, ನಮ್ಮ ಪಕ್ಷಗಾರಳು ಸದರ ಮೇಲ್ಕಾಣಿಸಿದ ಜಮೀನನ್ನು ಖರೀದಿಸುವವರು ಇದ್ದು, ಸಾರ್ವಜನಿಕರಿಗೆ ಈ ಮೇಲ್ಕಾಣಿಸಿದ ಆಸ್ತಿಯ ಬಗ್ಗೆ ಯಾರಾದರೂ ಹಕ್ಕು, ಹಿತಸಂಬಂದ, ಆಕ್ಷೇಪಣೆ ಇದ್ದಲ್ಲಿ ಸೂಕ್ತವಾದ ದಾಖಲೆಗಳೊಂದಿಗೆ ಈ ನೋಟಿಸ್ ಪ್ರಕಟವಾದ 15 ದಿನಗಳ ಒಳಗಾಗಿ ನಮಗೆ ತಿಳಿಸತಕ್ಕದ್ದು, ಒಂದು ವೇಳೆ 15 ದಿನಗಳ ನಂತರ ನೀವು ಆಕ್ಷೇಪಣೆ ಸಲ್ಲಿಸಿದ್ದಲ್ಲಿ ಅದನ್ನು ಪರಿಗಣೆಸಲಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್.
ಸ್ಥಳ : ನವಲಗುಂದ/ರೋಣ
ದಿನಾಂಕ : 06/05/2026
ಸಹಿ/- ಶ್ರೀ ಎಸ್. ಎಲ್. ದಂಡಿನ
ಶಿವಪೇಟೆ 4ನೇ ಕ್ರಾಸ್, ರೋಣ,
ತಾ: ರೋಣ, ಜಿ: ಗದಗ -582209
ಮೋ. ನಂ: 7026380658-7833350558.

ಅಸಲು ದಾವಾ ನಂ. : 376/2024
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ ಇವರ ನ್ಯಾಯಾಲಯದಲ್ಲಿ
1. ಶ್ರೀಮತಿ ಶಾಂತಾಬಾಯಿ ಗಂ. ರಾಮಸಿಂಗ ರಜಪೂತ .....ವಾದಿ
ವಿರುದ್ಧ
1. ಶ್ರೀಮತಿ ಲಲಿತಾಬಾಯಿ ಗಂ. ನಾರಾಯಣಸಿಂಗ ರಜಪೂತ ಹಾಗೂ ಇತರರು .....ಪ್ರತಿವಾದಿಯರು
ಡ್ರಾಫ್ಟ್ ಸಮನ್ಸ ಕಲಮು 5 ನಿಯಮ 20 (1) (ಎ) ಸಿ.ಪಿ.ಸಿ. ಅಡಿಯಲ್ಲಿ
5) ಶಂಕರಸಿಂಗ ತಂ. ರಾಮಸಿಂಗ ರಜಪೂತ ವಯಾ: 44 ವರ್ಷ, ಉದ್ಯೋಗ: ಖಾಸಗಿ ಕೆಲಸ ಸಾ: #46-ಬಿ, ಸೆಕ್ಟರ ನಂ. 15, ನವನಗರ ಬಾಗಲಕೋಟ ತಾ: ಜಿ: ಬಾಗಲಕೋಟ
ಈ ಮೂಲಕ ಮೇಲ್ಕಾಣಿಸಿದ ಪ್ರತಿವಾದಿ ನಂ.5 ರವರಿಗೆ ಸದರಿ ಕೋರ್ಟ ಸಮನ್ಸ ಮೂಲಕ ತಿಳಿಸುವದೇನೆಂದರೆ :-
ಮೇಲ್ಕಾಣಿಸಿದ ಅಸಲು ದಾವೆಯಲ್ಲಿ ವಾದಿ/ ಅರ್ಜಿದಾರರು ಮಾನ್ಯ ಪ್ರಧಾನ ದಿವಾಣೀ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್. ಎಫ್.ಸಿ. ಬಾಗಲಕೋಟ ಇವರಲ್ಲಿ ಅಸಲು ದಾವಾ ನಂ. 376/2024 ಅಂತಾ ದಾವಾ ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ನಂ.5 ರವರು ತಮ್ಮ ತಂಟೆ ವ, ತಕರಾರುಗಳು ಇದ್ದಲ್ಲಿ ತಾವುಗಳು ಮೇಲ್ಕಾಣಿಸಿದ ಪ್ರಕರಣದಲ್ಲಿ ದಿನಾಂಕ 24/6/2026 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಮಾನ್ಯ ನ್ಯಾಯಾಲಯದಲ್ಲಿ ಹಾಜರಿದ್ದು ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಏಕಪಕ್ಷೀಯ ತೀರ್ಮಾನ ಕೈಗೊಳ್ಳಲಾಗುವದು ಅಂತಾ ಇವತ್ತಿನ ದಿವಸ ದಿನಾಂಕ: 27/4/2026 ರಂದು ನ್ಯಾಯಲಯದ ಶೀಲು ಹಾಗೂ ಮೊಹರದೊಂದಿಗೆ ನೀಡಿದ ಸಾರ್ವಜನಿಕ ನೋಟಿಸು.
ಸ್ಥಳ : ಬಾಗಲಕೋಟ
ದಿನಾಂಕ: 24-04-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಮೆ॥ ಪ್ರಧಾನ ದಿವಾಣೀ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ
ಸಹಿ/- ಎಮ್.ವ್ಹಿ. ಚಿತ್ತರಗಿ,
ಅರ್ಜಿದಾರ ಪರ ವಕೀಲರು

ಆರೆಂಜ್ ಕ್ಯಾಪ್



ಕ್ಲಾಸೆನ್ (ಹೈದರಾಬಾದ್)
494 ರನ್

ಪರ್ಪಲ್ ಕ್ಯಾಪ್



ಭುವನೇಶ್ವರ್ (ಆರ್‌ಸಿಬಿ)
17 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ದಿಲ್ಲಿ	10	4	6	0	8	-0.949
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	9	2	7	0	4	-1.076

ಅಹಮದಾಬಾದ್‌ನಲ್ಲಿ ಫೈನಲ್ | ಚಂಡೀಗಢದಲ್ಲಿ 2 ಕ್ವಾಲಿಫೈಯರ್ | ಚೆನ್ನಸ್ವಾಮಿಗಿಲ್ಲ ಪ್ಲೇಆಫ್ ಭಾಗ್ಯ

ಬೆಂಗಳೂರಿನಿಂದ ಫೈನಲ್ ಸ್ಥಳಾಂತರ!

ಬೆಂಗಳೂರು: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಕ್ವಾಲಿಫೈಯರ್ ಹಾಗೂ ಫೈನಲ್ ಪಂದ್ಯಗಳನ್ನು ಸ್ಥಳಾಂತರಿಸಲಾಗಿದೆ. ಬದಲಾಗಿ ಕಳೆದ ಬಾರಿ ಫೈನಲ್‌ಗೆ ಆತಿಥ್ಯ ನೀಡಿದ್ದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಫೈನಲ್ ಪಂದ್ಯವನ್ನು ಸತತ ಎರಡನೇ ಬಾರಿ ಆಯೋಜಿಸಲು ಸಿದ್ಧವಾಗಿದೆ.

ಹಿಂದಿನ ಟೂರ್ನಿ ಗೆದ್ದ ತಂಡದ ತವರಲ್ಲಿ ಫೈನಲ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯ ನಡೆಸುವುದು ಐಪಿಎಲ್‌ನ ವಾಡಿಕೆ. ಆದರೆ ವಿವಿಧ ಕಾರಣಗಳಿಂದ ಪಂದ್ಯಗಳನ್ನು ಸ್ಥಳಾಂತರಿಸಲಾಗಿದ್ದು, ಬೆಂಗಳೂರಿನಿಂದ ಪಂದ್ಯಗಳು ಕೈತಪ್ಪಿವೆ. ಧರ್ಮಶಾಲಾದಲ್ಲಿ ಮೊದಲ ಪ್ಲೇಆಫ್ ಪಂದ್ಯ ನಡೆಯಲಿದ್ದರೆ, ಚಂಡೀಗಢದ ಹೊಸ ಕ್ರೀಡಾಂಗಣ ಎಲಿಮಿನೇಟರ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯಕ್ಕೆ ಆತಿಥ್ಯ ನೀಡಲಿದೆ. ಫೈನಲ್ ಪಂದ್ಯ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಬಿಸಿಸಿಐ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರು ಕ್ರೀಡಾಂಗಣದಲ್ಲಿ ಪ್ಲೇಆಫ್: ಬಿಸಿಸಿಐ ತನ್ನ ಹೇಳಿಕೆಯಲ್ಲಿ ಅಂಕಪಟ್ಟಿಯಲ್ಲಿ ಅಗ್ರ ಎರಡು ತಂಡಗಳನ್ನು ಒಳಗೊಂಡ ಕ್ವಾಲಿಫೈಯರ್ 1, ಮೇ 26 ರಂದು ಧರ್ಮಶಾಲಾದಲ್ಲಿ ನಡೆಯಲಿದ್ದು, ಎರಡು ತಂಡಗಳಿಗೆ ಫೈನಲ್‌ಗೆ ನೇರ ಸ್ಥಾನ ಪಡೆಯುವ ಅವಕಾಶವಿದೆ. ನಂತರ ನ್ಯೂ ಚಂಡೀಗಢದ ನ್ಯೂ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣಕ್ಕೆ ವಿಸ್ತಾರಗೊಳ್ಳಲಿದೆ. ಮೇ 27 ರಂದು ಮೂರನೇ ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳ ನಡುವೆ ಎಲಿಮಿನೇಟರ್ ಅನ್ನು ಆಯೋಜಿಸುತ್ತದೆ. ಅದೇ ಸ್ಥಳವು ಮೇ 29 ರಂದು ಕ್ವಾಲಿಫೈಯರ್ 2 ಅನ್ನು ಸಹ ಆಯೋಜಿಸುತ್ತದೆ, ಅಲ್ಲಿ ಕ್ವಾಲಿಫೈಯರ್ 1 ರಲ್ಲಿ ಸೋತವರು ಎರಡನೇ ಫೈನಲಿಸ್ಟ್ ಅನ್ನು ನಿರ್ಧರಿಸಲು ಎಲಿಮಿನೇಟರ್‌ನ ವಿಜೇತರನ್ನು ಎದುರಿಸುತ್ತಾರೆ. ಸೀಸನ್ ಮೇ 31 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಗ್ರ್ಯಾಂಡ್ ಫೈನಲ್‌ನೊಂದಿಗೆ ಕೊನೆಗೊಳ್ಳುತ್ತದೆ. ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ–ಅದ್ಭುತವಾದ ಅಂತಿಮ ಪಂದ್ಯಕ್ಕೆ ವೇದಿಕೆ ಸಜ್ಜಾಗಿದೆ.



ಸ್ಥಳಾಂತರಕ್ಕೆ ಕಾರಣವೇನು?

ಕೆಲವು ಕಾರ್ಯಾಚರಣೆ ಮತ್ತು ವ್ಯವಸ್ಥಾಪನಾ ಪರಿಗಣನೆಗಳಿಂದಾಗಿ, ಈ ಋತುವಿನಲ್ಲಿ ಟಾಟಾ ಐಪಿಎಲ್ 2026 ಪ್ಲೇಆಫ್‌ಗಳನ್ನು ವಿಶೇಷ ಪ್ರಕರಣವಾಗಿ ಮೂರು ಸ್ಥಳಗಳಲ್ಲಿ ನಡೆಸಲಾಗುವುದು ಎಂದು ಬಿಸಿಸಿಐ ಉಲ್ಲೇಖಿಸಿದೆ. ಫೈನಲ್ ಪಂದ್ಯವನ್ನು ಬೆಂಗಳೂರು ಆಯೋಜಿಸಬೇಕಿತ್ತು. ಆದಾಗ್ಯೂ, ಬಿಸಿಸಿಐನ ಸ್ಥಾಪಿತ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳ ವ್ಯಾಪ್ತಿಯನ್ನು ಮೀರಿದ ಸ್ಥಳೀಯ ಸಂಘ ಮತ್ತು ಅಧಿಕಾರಿಗಳ ಕೆಲವು ಅವಶ್ಯಕತೆಗಳಿಂದಾಗಿ, ಸ್ಥಳವನ್ನು ಸ್ಥಳಾಂತರಿಸಲಾಗಿದೆ ಎನ್ನಲಾಗಿದೆ.

ಅಹಮದಾಬಾದ್‌ನಲ್ಲಿ ಫೈನಲ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ಸತತ ಎರಡನೇ ಬಾರಿ ಫೈನಲ್‌ಗೆ ಆತಿಥ್ಯ ನೀಡಲಿದೆ. ವಾಡಿಯ ಪ್ರಕಾರ 2025ರ ಐಪಿಎಲ್ ಫೈನಲ್ ಕೂಡ ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ ಪ್ರತಿಕೂಲ ಹವಾಮಾನದಿಂದಾಗಿ ಪಂದ್ಯವನ್ನು ಅಹದಾಬಾದ್‌ಗೆ ಸ್ಥಳಾಂತರಿಸಲಾಗಿತ್ತು.

ಪ್ಲೇಆಫ್ ವೇಳಾಪಟ್ಟಿ

- ಕ್ವಾಲಿಫೈಯರ್ 1 – ಮೇ 26 – ಎಚ್‌ಪಿಸಿಎ ಕ್ರೀಡಾಂಗಣ, ಧರ್ಮಶಾಲಾ
- ಎಲಿಮಿನೇಟರ್ – ಮೇ 27 – ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಕ್ವಾಲಿಫೈಯರ್ 2 – ಮೇ 29 – ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಫೈನಲ್ – ಮೇ 31 – ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್



ಅಹಮದಾಬಾದ್‌ನಲ್ಲಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಿದೆ. ಅಲ್ಲಿ ಪಂದ್ಯ ನಡೆದರೆ ಲಕ್ಷ ಜನರು ವೀಕ್ಷಿಸಬಹುದು ಅದಕ್ಕಾಗೇ ಬೆಂಗಳೂರಿನಿಂದ ಸ್ಥಳಾಂತರಗೊಂಡಿರಬಹುದು. ಶಾಸಕರು, ಟಿಕೆಟ್ ಕೇಳಿರುವುದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ.

■ ಡಿ. ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಐಪಿಎಲ್ ಪ್ಲೇಆಫ್ ಆತಿಥ್ಯ: ಕೆಎಸ್‌ಸಿಎ ಸ್ಪಷ್ಟೀಕರಣ

ಪ್ಲೇಆಫ್ ಪಂದ್ಯಗಳ ಸ್ಥಳಾಂತರ ಕುರಿತಂತೆ ಕೆಎಸ್‌ಸಿಎ ನಿರಾಶೆ ವ್ಯಕ್ತಪಡಿಸಿದ್ದು, ಅಧ್ಯಕ್ಷ ಹಾಗೂ ಮಾಜಿ ಭಾರತೀಯ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಬಿಸಿಸಿಐ ಜೊತೆ ನೇರ ಸಂಪರ್ಕದಲ್ಲಿದ್ದರು. ಬೆಂಗಳೂರಿನಲ್ಲಿ ಪಂದ್ಯಗಳನ್ನು ಆಯೋಜಿಸಲು ಸಿದ್ಧತೆ ಹಾಗೂ ಆಸಕ್ತಿಯನ್ನು ತಿಳಿಸಿದ್ದರು, ಬಿಸಿಸಿಐ ನಿರ್ಧಾರ ನಾವು ಗೌರವಿಸುತ್ತೇವೆ. ನಮಗೆ ಇನ್ನೂ ಅಧಿಕೃತ ಕಾರಣ ತಿಳಿದುಬಂದಿಲ್ಲ ಎಂದಿದೆ. ಈ ಸೀಸನ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಪಂದ್ಯಗಳು ಸುಗಮ ನಿರ್ವಹಣೆ, ಜನಸ್ತೋಮ ನಿಯಂತ್ರಣ ಮತ್ತು ಉತ್ತಮ ಪ್ರೇಕ್ಷಕ ಅನುಭವಕ್ಕಾಗಿ ಮೆಚ್ಚುಗೆ ಪಡೆದಿವೆ ಎಂದು ಸಂಘ ಹೇಳಿದೆ. ಇದರಿಂದ ದೊಡ್ಡ ಮಟ್ಟದ ಪಂದ್ಯಗಳನ್ನು ಯಶಸ್ವಿಯಾಗಿ ನಡೆಸುವ ಸಾಮರ್ಥ್ಯ ನಮ್ಮಲ್ಲಿದೆ ಎಂಬುದನ್ನು ಮತ್ತೊಮ್ಮೆ ಸಾಬೀತಾಗಿದೆ ಎಂದು ಕೆಎಸ್‌ಸಿಎ ತಿಳಿಸಿದೆ. ಆದರೆ, ಎಲ್ಲಾ ಸಿದ್ಧತೆಗಳಿದ್ದರೂ ಪ್ಲೇಆಫ್ ಪಂದ್ಯಗಳನ್ನು ಇತರ ಕೇಂದ್ರಗಳಿಗೆ ನೀಡಿರುವ ಬಿಸಿಸಿಐ ತೀರ್ಮಾನವನ್ನು ನಾವು ಗೌರವಿಸುತ್ತೇವೆ. ಇದರ ಹಿಂದಿನ ಕಾರಣಗಳನ್ನು ಅಧಿಕೃತವಾಗಿ ತಿಳಿಸಲಾಗಿಲ್ಲವಾದರೂ, ಬಿಸಿಸಿಐಗೆ ಇರುವ ಅಧಿಕಾರವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ ಎಂದು ಸಂಘ ಸ್ಪಷ್ಟಪಡಿಸಿದೆ. ಮುಂದೆಯೂ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳನ್ನು ಆಯೋಜಿಸಲು ನಾವು ಸಿದ್ಧರಾಗಿದ್ದು, ಬಿಸಿಸಿಐ, ಫ್ರಾಂಚೈಸಿಗಳು ಹಾಗೂ ಇತರೆ ಎಲ್ಲ ಹಿತಾಸಕ್ತಿಪಕ್ಷಗಳಿಗೆ ಪೂರ್ಣ ಸಹಕಾರ ನೀಡುತ್ತೇವೆ ಎಂದು ಕೆಎಸ್‌ಸಿಎ ಭರವಸೆ ನೀಡಿದೆ.

ಕಿರುಸುದ್ದಿ

ಭಾರತ-ಪಾಕ್ ದ್ವಿಪಕ್ಷೀಯ ಸರಣಿಗಳಿಗೆ ನಿರ್ಬಂಧ



ಹೊಸದಿಲ್ಲಿ: ಭಾರತ ಆಯೋಜಿಸುವ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪಾಕಿಸ್ತಾನ ಕ್ರೀಡಾಪಟುಗಳಿಗೆ ಅವಕಾಶ ನೀಡಿರುವ ಭಾರತ ಸರ್ಕಾರ, ಯಾವುದೇ ಕಾರಣಕ್ಕೂ ಭಾರತೀಯ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಬರುವುದಿಲ್ಲ ಎಂದಿದೆ. ಆಪರೇಷನ್ ಸಿಂದೂರ ನಂತರ ತನ್ನ ಎಲ್ಲಾ ಕ್ರೀಡಾ ಸಂಸ್ಥೆಗಳಿಗೆ ಪಾಕಿಸ್ತಾನದೊಂದಿಗೆ ಸಂಬಂಧಗಳನ್ನು ಮುರಿದುಕೊಳ್ಳಲು ಹೇಳಿತ್ತು. ಇಷ್ಟು ದಿನ ಭಾರತದಲ್ಲಿ ಮತ್ತು ಪಾಕಿಸ್ತಾನದಲ್ಲಿ ನಡೆದಿದ್ದ ಕ್ರೀಡಾಕೂಟಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿಯಾಗಿರಲಿಲ್ಲ. ಬುಧವಾರ ಕ್ರೀಡಾ ಪ್ರಾಧಿಕಾರದಿಂದ ಪ್ರಕಟವಾಗಿರುವ ಪ್ರಕಟಣೆ ಪ್ರಕಾರ, ಭಾರತದಲ್ಲಿ ನಡೆಯುವ ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನ ಕೀಡಾಪಟುಗಳು ಭಾಗವಹಿಸಬಹುದು. ಆದರೆ ಯಾವುದೇ ಕಾರಣಕ್ಕೂ ಭಾರತದ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಹೋಗಬಾರದು. ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಉಭಯ ದೇಶಗಳ ನಡುವಿನ ಯಾವುದೇ ಕ್ರೀಡೆಯ ದ್ವಿಪಕ್ಷೀಯ ಸರಣಿಗಳು ಭಾರತದಲ್ಲಾಗಲಿ, ಪಾಕಿಸ್ತಾನದಲ್ಲಾಗಲಿ ನಡೆಯುವುದಿಲ್ಲ, ಆದರೆ ಅಂತಾಷ್ಟ್ರೀಯ ಕ್ರೀಡಾಕೂಟಗಳ ಬದ್ಧತೆ ಗಮನದಲ್ಲಿಟ್ಟುಕೊಂಡು ನಾವು ಪಾಕಿಸ್ತಾನಿ ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕೊಡುತ್ತೇವೆ ಎಂದಿದೆ. ಕ್ರಿಕೆಟ್ ವಿಚಾರದಲ್ಲೂ ದ್ವಿಪಕ್ಷೀಯ ಸರಣಿಗೆ ಅವಕಾಶ ನೀಡಿಲ್ಲ, ಆದರೆ ಐಸಿಸಿ, ಎಸಿಸಿ ಕೂಟಗಳನ್ನು ಭಾರತ ಆಯೋಜಿಸಿದರೆ, ಪಾಕಿಸ್ತಾನಿ ಆಟಗಾರರಿಗೆ ಭಾರತಕ್ಕೆ ಪ್ರಯಾಣಿಸಲು ಅವಕಾಶ ನೀಡಲಾಗುವುದು. ಆದರೆ, ಭಾರತ ಪಾಕಿಸ್ತಾನಕ್ಕೆ ತಿರಸ್ಕರಿಸಿದ ನಂತರ ಪಾಕಿಸ್ತಾನ ತನ್ನ ಎಲ್ಲಾ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ ನಡೆಸುವಂತೆ ಒಪ್ಪಂದ ಮಾಡಿಕೊಂಡಿದೆ.

- ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನಿ ಪಟುಗಳಿಗೆ ಅನುಮತಿ
- ನಮ್ಮ ಕ್ರೀಡಾಪಟುಗಳು ಪಾಕ್‌ಗೆ ಕಾಲೂ ಇಡಲ್ಲ; ಕ್ರೀಡಾ ಪ್ರಾಧಿಕಾರ

ಟಿಟಿ: ಭಾರತಕ್ಕೆ ಸೋಲು

ಲಂಡನ್: ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ 32ನೇ ಸುತ್ತಿನ ಪಂದ್ಯದಲ್ಲಿ ಆಸ್ಟ್ರಿಯಾ ವಿರುದ್ಧ 0–3 ಅಂತರದಲ್ಲಿ ಸೋತ ನಂತರ ಭಾರತೀಯ ಪುರುಷರ ತಂಡವು ಹೊರಬಿತ್ತು. ಮಾನವ್ ಥಕ್ಕರ್ ಮತ್ತು ಸತ್ಯನ್ ಜ್ಞಾನಶೇಖರನ್ ತಮ್ಮ ಎದುರಾಳಿಗಳ ವಿರುದ್ಧ ಸೌಮ್ಯವಾಗಿ ಶರಣಾದರೆ, ಮನುಷ್ ಶಾ ಒಂದು ಗಂಟೆ 34 ನಿಮಿಷಗಳ ಕಾಲ ನಡೆದ ಟೈನಲ್ಲಿ ಸೋತರು. ರಾಬರ್ಟ್ ಗಾರ್ಡೋಸ್ ವಿರುದ್ಧದ ಟೈನಲ್ಲಿ ಮೊದಲು ಮೈದಾನಕ್ಕಿಳಿದವರು ಮನುಷ್ ಶಾ. ಮೊದಲ ಗೇಮ್ ಅನ್ನು 11–6 ಅಂತರದಿಂದ ಗೆದ್ದರು ಆದರೆ ಮುಂದಿನ ಎರಡು ಗೇಮ್‌ಗಳನ್ನು 7–11 ಮತ್ತು 3–11 ಅಂತರದಿಂದ ಸೋತು ನಾಲ್ಕನೇ ಗೇಮ್ ಅನ್ನು 11–8 ಅಂತರದಿಂದ ಗೆದ್ದರು. ಆದರೆ ನಿರ್ಣಾಯಕ ಪಂದ್ಯದಲ್ಲಿ, ಭಾರತೀಯ ಆಟಗಾರ 11–13 ಅಂತರದಿಂದ ಸೋತರು. 32 ರ ಸುತ್ತಿನಲ್ಲಿ ಯುಎಸ್‌ಎ ವಿರುದ್ಧ 3–1 ಅಂತರದಲ್ಲಿ ಸೋತ ನಂತರ ಭಾರತೀಯ ಮಹಿಳಾ ತಂಡವೂ ಹೊರಬಿತ್ತು. ಯಶಸ್ವಿನಿ ಘೋರ್ಪಡೆ ಸ್ಯಾಲಿ ಮೊಯ್ಲ್ಯಾಂಡ್ ವಿರುದ್ಧ 8–11, 8–11, 7–11 ಅಂತರದಲ್ಲಿ ಸೋತರು, ಆದರೆ ಮಣಿಕಾ ಬಾತ್ರಾ ಜೆಸ್ಸಿಕಾ ರೆಯೆಸ್ ಲೈ ಅವರನ್ನು 11–2, 11–7, 8–11, 11–4 ಅಂತರದಲ್ಲಿ ಸೋಲಿಸುವ ಮೂಲಕ ಒಂದು ಹಿನ್ನಡೆ ಅನುಭವಿಸಿದರು. ಆದಾಗ್ಯೂ, ದಿಯಾ ಚಿಟಾಲೆ ಮತ್ತು ಮಣಿಕಾ ಕ್ರಮವಾಗಿ ಲಿಲಿ ಜಾಂಗ್ ಮತ್ತು ಮೊಯ್ಲ್ಯಾಂಡ್ ಅವರ ಕೈಯಲ್ಲಿ ಸತತ ಸೋಲುಗಳನ್ನು ಅನುಭವಿಸಿದರು.

ಲಯಕ್ಕೆ ಮರಳುವ ಭರವಸೆಯಲ್ಲಿ ಪಾಟಿದಾರ್ ಪಡೆ

ಇಂದು ಲಖನೌ V/S ಬೆಂಗಳೂರು

ಲಖನೌ: ಎರಡನೇ ಸ್ಥಾನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಪ್ಲೇಆಫ್ ಮತ್ತು ಟಾಪ್ ಎರಡರ ಸ್ಥಾನ ಭದ್ರಗೊಳಿಸಲು ಲಖನೌ ಜತೆಗಿನ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಲು ಸಿದ್ಧವಾಗಿದೆ.

ಪಂದ್ಯಾವಳಿಯ ಗುರುವಾರದ ಪಂದ್ಯದಲ್ಲಿ ಬೆಂಗಳೂರು ಮತ್ತು ಲಖನೌ ತಂಡಗಳು ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಸೋತಿರುವ ಆರ್‌ಸಿಬಿ ಒಂದು ವಾರದ ನಂತರ ಮೈದಾನಕ್ಕೆ ಕಾಲಿಡುತ್ತಿದೆ. ಇತ್ತ ಲಖನೌ ಆಡಿರುವ ಬಹುತೇಕ ಪಂದ್ಯಗಳಲ್ಲಿ ಸೋತು ಕಂಗೆಟ್ಟಿದೆ. ಅಳಿವು–ಉಳಿವು ಹೋರಾಟದಲ್ಲಿರುವ ಲಖನೌ ಸೋತರೆ ಮನೆ ಹಾದಿ ಹಿಡಿಯಬೇಕಿದೆ. ಬೆಂಗಳೂರು 12 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿದ್ದರೂ, 3 ಮತ್ತು 4ನೇ ಸ್ಥಾನದಲ್ಲಿರುವ ರಾಜಸ್ಥಾನ ಮತ್ತು ಹೈದರಾಬಾದ್ ತಂಡಗಳು ಸುಭದ್ರ ಫೈಟ್ ಕೊಡುತ್ತಿವೆ. ಕೆಳಗಿರುವ ಗುಜರಾತ್ ಮತ್ತು ಚೆನ್ನೈ ತಂಡಗಳು ಕೂಡ ಗೆಲುವುಗಳೊಂದಿಗೆ ಮಿಂಚುತ್ತಿವೆ. ಹೀಗಿರುವಾಗ ಬೆಂಗಳೂರು ಕೂಡ ಗೆಲುವು ಸಾಧಿಸಬೇಕಾದ ಒತ್ತಡದೊಂದಿಗೆ ಮೈದಾನಕ್ಕಿಳಿಯಬೇಕಿದೆ. ಲಖನೌ ಬೆಂಗಳೂರಿನಲ್ಲಿ ಆಡುವಾಗ ಆರ್‌ಸಿಬಿಯೊಂದಿಗೆ ಹೀನಾಯ ಸೋಲು ಕಂಡಿತ್ತು. ವಾಡಿಕೆಯಂತೆ ಎರಡನೇ ಮುಖಾಮುಖಿಯು ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪಿಚ್: ಏಕಾನಾ ಕ್ರೀಡಾಂಗಣದ ಪಂದ್ಯ ಬ್ಯಾಟರ್‌ಗಳಿಗೆ ಕಾಟ ಕೊಡಲಿದೆ. ದೊಡ್ಡ ಸ್ಕೋರ್ ನಿರ್ಮಿಸಲಾಗಲ್ಲ, ಬೌನ್ಸ್, ಇಬ್ಬನಿ ಮತ್ತು ಸ್ವಿಂಗ್ ಬೌಲರ್‌ಗಳಿಗೆ ಲಾಭವಿತ್ತಿದೆ. ಸ್ಪಿನ್ನರ್‌ಗಳಿಗೆ ಹೇಳಿ ಮಾಡಿಸಿದ ಪಿಚ್. 180ಕ್ಕೆ ಮುಟ್ಟಿದರೆ ಅದು ದೊಡ್ಡ ಸ್ಕೋರ್, ಹೀಗಿರುವಾಗ ಚೇಸಿಂಗ್ ಮಾಡಿದವರು ಹೆಚ್ಚಿನ ಲಾಭ ಗಳಿಸಲಿದ್ದಾರೆ.



ಲಖನೌಗೆ ಗೆಲ್ಲಬೇಕಾದ ಒತ್ತಡ

ಬ್ಯಾಟರ್‌ಗಳೊಮ್ಮೆ ಬೌಲರ್‌ಗಳೊಮ್ಮೆ ಕೈಕೊಡುತ್ತಿದ್ದಾರೆ. ಚಿಂತೆಗೀಡಾಗಿದ್ದ ನಿಕೋಲಸ್ ಪೂರನ್ ಬ್ಯಾಟಿಂಗ್ ಸುಧಾರಣೆ ಕಂಡಿದೆ. ಕಳೆದ ಪಂದ್ಯದಲ್ಲಿ ಅವರು ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ವಿಶ್ವಾಸ ಹಿಗ್ಗಿಸಿದೆ. ತಂಡಕ್ಕೆ ಜೋಸ್ ಇಂಗ್ಲಿಸ್ ಕೂಡ ಬಲ ತಂದಿದ್ದಾರೆ. ಪಂತ್, ಮಾರ್ಕ್ರಂ ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಮೋಹ್ಸಿನ್, ಶಮಿ ಬಿಟ್ಟರೆ ಇನ್ನುಳಿದವರು ದುಬಾರಿಯಾಗಿದ್ದಾರೆ. ಪ್ರಿನ್ಸ್ ಉತ್ತಮ ಬೌಲಿಂಗ್ ಮಾಡಿದ್ದರೂ ಕಳೆದ ಪಂದ್ಯಗಳಲ್ಲಿ ವಿಕೆಟ್ ಸಿಕ್ಕಿಲ್ಲ.

ಆರ್‌ಸಿಬಿಗೆ ಆತ್ಮವಿಶ್ವಾಸ

ತವರಿನ ಎಲ್ಲಾ ಪಂದ್ಯಗಳನ್ನು ಮುಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕಳೆದ ಪಂದ್ಯದಲ್ಲಿ ಸೋತರೂ ಬಲಿಷ್ಠ ಬ್ಯಾಟಿಂಗ್ ಮತ್ತು ಬೌಲಿಂಗ್ ಪಡೆಯನ್ನು ರಜತ್ ಪಡೆ ಹೊಂದಿದೆ. ಮುಖ್ಯವಾಗಿ ವಿರಾಟ್ ಕೊಹ್ಲಿ ಲಯದಲ್ಲಿದ್ದಾರೆ. ಸಾಲ್ಟ್ ಗಾಯದಿಂದಾಗಿ ಲಂಡನಿಗೆ ತೆರಳಿರುವುದು ತಂಡಕ್ಕಾದ ಹಿನ್ನಡೆ. ಅವರ ಬದಲಿಗೆ ಆಡುತ್ತಿರುವ ಬೆಥೆಲ್ ಲಯ ಕಂಡುಕೊಳ್ಳಬೇಕಿದೆ. ಮಧ್ಯಮ ಕ್ರಮಾಂಕದಲ್ಲಿ ಪಡಿಕ್ಕಲ್, ರಜತ್, ಡೆವಿಡ್ ಮತ್ತು ಕೃನಾಲ್ ಉತ್ತಮ ಪ್ರದರ್ಶನವನ್ನೇ ನೀಡಿದ್ದಾರೆ. ಬೌಲಿಂಗ್‌ನಲ್ಲಿ ಭುವನೇಶ್ವರ್ ಮತ್ತು ಹ್ಯಾಜೆಲ್ವುಡ್ ವಿಶ್ವಾಸ ಹೆಚ್ಚಿಸಿದರೆ, ಶೇಫರ್ಡ್, ಕೃನಾಲ್ ಕೂಡ ಉತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿದ್ದಾರೆ.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಏಕಾನಾ, ಲಖನೌ. ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಂಜಾಬ್‌ಗೆ ಕಠಿಣ ಸವಾಲು

ಹೈದರಾಬಾದ್: ಅಗ್ರ ನಾಲ್ಕು ಬ್ಯಾಟರ್‌ಗಳ ಅಬ್ಬರದ ನಡುವೆ ಕಳಪೆ ಫೀಲ್ಡಿಂಗ್‌ನಿಂದ ಕಂಗೆಟ್ಟ ಪಂಜಾಬ್ ಮಹತ್ವದ ಪಂದ್ಯದಲ್ಲಿ ದೊಡ್ಡ ಗುರಿ ಪಡೆಯಿತು. ಅಭಿಷೇಕ್ ಹಾಗೂ ಹೆಡ್ ನೀಡಿದ ಅಬ್ಬರದ ಆರಂಭದ ನಂತರ ಕ್ಲಾಸೆನ್, ಕಿಶನ್ ಮತ್ತು ರೆಡ್ಡಿ ಮಿಂಚಿದ್ದು, ಹೈದರಾಬಾದ್ ತನ್ನ ಅಸಲು ಆಟವಾಡಲು ಶಕ್ಯವಾಯಿತು.

ಪ್ಲೇಆಫ್ ಫೈಟ್ ನಡೆಯುತ್ತಿರುವ ನಡುವೆ ಪಂಜಾಬ್ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಗಿಳಿದ ಹೈದರಾಬಾದ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿದೆ.

ಅಬ್ಬರದ ಆರಂಭ: ಬ್ಯಾಟಿಂಗ್‌ಗಿಳಿದ ಸನ್‌ಗೆ ಅಭಿ ಮತ್ತು ಹೆಡ್ ಯಥಾಪ್ರಕಾರ ಸ್ಫೋಟಕ ಆರಂಭ ಕೊಟ್ಟರು. ಮೊದಲನೇ ಓವರ್‌ನಿಂದಲೂ ದಂಡಿಸುವ ನೀತಿ ಗೋಚರಿಸಿತು. ನಾನ್‌ಸ್ಟ್ರೈಕ್‌ನಲ್ಲಿ ನಿಂತ ಹೆಡ್ ಸೆಟ್ ಆದರೆ, ಅಭಿ 4 ಸಿಕ್ಸರ್ 2



ಬೌಂಡರಿಯೊಂದಿಗೆ 35 ರನ್ ಚಚ್ಚಿ 13ನೇ ಬಾಲ್‌ನಲ್ಲಿ ಔಟಾದರು. ಮುಂದೆ ಬಂದ ಕಿಶನ್ ಸಿಂಗಲ್‌ಗಳ ಮೂಲಕ ಸಾಥ್ ಕೊಟ್ಟರೆ, ಹೆಡ್ ದಂಡಿಸುವ ಜವಾಬ್ದಾರಿ ಹೊತ್ತರು. ಪವರ್‌ಪ್ಲೇ ಅಂತ್ಯಕ್ಕೆ ಹೈದರಾಬಾದ್ 79 ರನ್ ಗಳಿಸಿತು. ಮಧ್ಯಮ ಓವರ್‌ಗಳ ಆರಂಭದಲ್ಲಿ ಹೆಡ್ ಜತೆಗೆ ಕಿಶನ್ ಕೂಡ ಕೈಚಳಕ ತೋರಿಸಿದರು. ಅಬ್ಬರದ ಬ್ಯಾಟಿಂಗ್ ಮಾಡುತ್ತಿದ್ದ ಹೆಡ್ (38; 19, 3ಬೌ, 3ಸಿ) ಔಟಾದರು. ಕಿಶನ್ ಹಾಗೂ ಕ್ಲಾಸೆನ್ ನಿಂತರು. ನಿಧಾನವಾಗಿ ಸ್ಕೋರ್ ಹೆಚ್ಚಿಸುತ್ತಾ ಬಂದ ಈ ಜೋಡಿ ಮಧ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಕೂಡ ಮಾಡಿತು. ಮಧ್ಯಮ ಓವರ್‌ಗಳಲ್ಲಿ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ಅಲ್ಲಿ ಹೈದರಾಬಾದ್ 103 ರನ್ ಗಳಿಸಿತು. ಕಿಶನ್ ಅರ್ಧಶತಕ ಬಾರಿಸುತ್ತಿದ್ದಂತೆ ವಿಕೆಟ್ ಒಪ್ಪಿಸಿದರು. ಕ್ಲಾಸೆನ್ ಸೆಟ್ ಆದರು. ಡೆತ್ ಓವರ್‌ಗಳಲ್ಲಿ ಕ್ಲಾಸೆನ ಅಬ್ಬರಿಸಿದರು. ಒಂದು ಹಂತದಲ್ಲಿ ನಿಧಾನ ಬ್ಯಾಟಿಂಗ್ ಮಾಡುತ್ತಿದ್ದ ಅವರು, 4 ಸಿಕ್ಸರ್ 3 ಬೌಂಡರಿಯೊಂದಿಗೆ ಒಟ್ಟು 69★ ರನ್ ಗಳಿಸಿದರು. ಅಂತಿಮದಲ್ಲಿ ರೆಡ್ಡಿ ಕೂಡ ಬಿರುಸಿನ ಬ್ಯಾಟಿಂಗ್ ಮೂಲಕ 29★ ರನ್ ಗಳಿಸಿದರು. ಡೆತ್‌ನಲ್ಲಿ ಹೈದರಾಬಾದ್ 53 ರನ್ ಚಚ್ಚಿತು.

ಕಳಪೆ ಫೀಲ್ಡಿಂಗ್: ಪಂಜಾಬ್ ತೀರಾ ಕಳಪೆ ಫೀಲ್ಡಿಂಗ್ ಪ್ರದರ್ಶಿಸಿತು. ಕಿಶನ್ ಅವರಿಗೆ 2, ಕ್ಲಾಸೆನ್‌ಗೆ 2 ಜೀವದಾನಗಳು ಸಿಕ್ಕವು. ಕೊನೊಲಿ, ಶಶಾಂಕ್ ಕ್ಯಾಚ್ ಕೈಚೆಲ್ಲಿದರೆ, ಪ್ರಭಸಿಮ್ರನ್ ಸ್ಟಂಪಿಂಗ್ ಬಿಟ್ಟರು. ಇದಲ್ಲದೆ ಪಂಜಾಬ್ ಬೌಂಡರಿ ತಡೆಯುವಲ್ಲಿಯೂ ಹಿನ್ನಡೆ ಅನುಭವಿಸಿತು.

ಸಂಜು ಅಬ್ಬರಕ್ಕೆ ಬಸವಳಿದ ದಿಲ್ಲಿ

ಹೊಸದಿಲ್ಲಿ: ಸಂಜು ಸ್ಯಾಮ್ಸನ್ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್ ರೇಸ್‌ನಲ್ಲಿ ತನ್ನ ಸ್ಪರ್ಧೆ ಇನ್ನಷ್ಟು ಗಟ್ಟಿಯಾಗಿಸಿದೆ.

ಮಹತ್ವದ ಪಂದ್ಯದಲ್ಲಿ ದಿಲ್ಲಿ ಹಾಗೂ ಚೆನ್ನೈ ಮುಖಾಮುಖಿಯಾಗಿದ್ದವು. ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 155 ರನ್‌ಗಳಿಸಿತು. ಚೆನ್ನೈ ಪರ ಪ್ರಖರ ದಾಳಿ ಸಂಘಟಿಸಿದ ನೂರ್ 2 ವಿಕೆಟ್ ಪಡೆದರೆ, ಆಕೀಲ್ 14 ಬಾಲ್ ಡಾಟ್ ಮಾಡಿ ಮಿಂಚಿದರು. ದಿಲ್ಲಿ ಪರ ರಿಜ್ವಿ(40★), ಸ್ಟಬ್ಸ್(38) ರನ್ ಗಳಿಸಿದರು. ಗುರಿ ಬೆನ್ನತ್ತಿದ ಚೆನ್ನೈ 17.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ಸಂಜು ಸ್ಯಾಮ್ಸನ್(87★), ಕಾರ್ತಿಕ್(41★) ರನ್ ಗಳಿಸಿದರು.

- ಪ್ಲೇಆಫ್ ಕನಸು ಭದ್ರ
- ಸಂಕಷ್ಟದಲ್ಲಿ ದಿಲ್ಲಿ

ಸಂಜು ಮಿಂಚಿನಾಟ: ಗುರಿ ಬೆನ್ನತ್ತುವಾಗ ಚೆನ್ನೈಗೂ ನಿಧಾನ ಆರಂಭ ಸಿಕ್ಕಿತು. ರುತುರಾಜ್ ಗಾಯಕ್ವಾಡ್ ಪರದಾಡಿದರು. ಸಂಜು ಸೆಟ್ ಆಗುವತ್ತ ಸಾಗಿದರು. ರುತುರಾಜ್ ಗಾಯಕ್ವಾಡ್ 6 ರನ್‌ಗೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಯಥಾಪ್ರಕಾರ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಪವರ್ ಪ್ಲೇ ಮುಕ್ತಾಯಕ್ಕೆ ಚೆನ್ನೈ 44 ರನ್ ಗಳಿಸಿತು. ಉರ್ವಿಲ್ 2 ಸಿಕ್ಸರ್ ಬಾರಿಸಿದರೂ ಅವರ ಇನ್ನಿಂಗ್ಸ್ 17 ರನ್‌ಗೆ ಮಾತ್ರ ಸೀಮಿತವಾಗಿತ್ತು. ಬಳಿಕ ಬಂದ ಕಾರ್ತಿಕ್ ಕೂಡ ನಿಧಾನ ಆರಂಭ ಮಾಡಿದರು. ಅಷ್ಟೊತ್ತಿಗಾಗಲೇ ಸೆಟ್ ಆಗಿದ್ದ ಸಂಜು ಸ್ಫೋಟಕ ಬ್ಯಾಟಿಂಗ್‌ನತ್ತ ಸಾಗಿದರು. ಯಾದವ್ ಎಸೆದ ಓವರ್‌ನಲ್ಲಿ 2 ಸಿಕ್ಸರ್, ಒಂದು ಬೌಂಡರಿ ಬಾರಿಸಿ ಪಂದ್ಯ ಸಡಿಲುಗೊಳಿಸಿದರು. ಇತ್ತ ಕಾರ್ತಿಕ್ ಕ್ರೀಜ್‌ಗೆ ಅಂಟಿಕೊಂಡು ನಿಂತರು. ಸಂಜು ಸಿಕ್ಸರ್‌ಗಳ ಅಬ್ಬರಕ್ಕೆ ಚೆನ್ನೈ ಪಂದ್ಯ ಬಾಚಿಕೊಂಡಿತು. ಕಾರ್ತಿಕ್ ನಾನ್‌ಸ್ಟ್ರೈಕ್‌ನಲ್ಲಿ ನಿಲ್ಲುತ್ತಿದ್ದಂತೆ ನಿಧಾನವಾಗಿ ಪಂದ್ಯ ಗೆಲ್ಲಿಸಿದರು. ನಟರಾಜನ್ ಓವರ್‌ನಲ್ಲಿ ಮತ್ತೆ 2 ಸಿಕ್ಸರ್ ಬಾರಿಸಿದರು. 15ನೇ ಓವರ್‌ನಲ್ಲಿ ಚೆನ್ನೈ ಗೆಲುವು ಖಚಿತಪಡಿಸಿಕೊಂಡಿತು. ಔಪಚಾರಿಕತೆಯಲ್ಲಿ ಕಾರ್ತಿಕ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 111 ರನ್‌ಗಳ ಜೊತೆಯಾಟ ನಿರ್ಮಿಸಿತು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ದಿಲ್ಲಿ 155 ರನ್ ಗಳಿಸುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತು. ಚೆನ್ನೈ ಸಂಘಟಿತ ಬೌಲಿಂಗ್ ದಾಳಿಗೆ ತತ್ತರಿಸಿದ ನಂತರ ಸ್ಟಬ್ ಆಸರೆಯಾದರು. ಅಂತಿಮದಲ್ಲಿ ಸಮೀರ್ 40★ ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು.

ಆರ್ಚರಿ ವಿಶ್ವಕಪ್: ಭಾರತ ತಂಡಕ್ಕೆ ಭಾರೀ ನಿರಾಸೆ

ಶಾಂಘೈ: ಪದಕದ ಭರವಸೆ ಮೂಡಿಸಿದ್ದ ಭಾರತದ ಕಾಂಪೌಂಡ್ ಪುರುಷ ಹಾಗೂ ಮಹಿಳಾ ತಂಡಗಳು ಆರ್ಚರಿ ವಿಶ್ವಕಪ್ ಹಂತ–2ರಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲವಾಗಿವೆ. ನಿರ್ಣಾಯಕ ಕ್ಷಣಗಳಲ್ಲಿ ಒತ್ತಡ ನಿಭಾಯಿಸಲು ಸಾಧ್ಯವಾಗದೇ ಭಾರತ ಕಾಂಪೌಂಡ್ ವಿಭಾಗದ ಅಭಿಯಾನ ಅಂತ್ಯಗೊಳಿಸಿತು.

ಮಹಿಳಾ ತಂಡದಿಂದ ದೊಡ್ಡ ಹಿನ್ನಡೆ ಉಂಟಾಯಿತು. ಜ್ಯೋತಿ ಸುರೇಖಾ ವೆನ್ನಂ, ಪ್ರಗತಿ ಮತ್ತು ಅದಿತಿ ಸ್ವಾಮಿ ಹೊಂದಿದ್ದ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಟರ್ಕಿ ವಿರುದ್ಧ 227–233 ಅಂತರದಲ್ಲಿ ಸೋತು ಹೊರಬಿತ್ತು. ಹಜಲ್ ಬುರುನ್, ಡೆಫ್ನೆ ಚಾಕ್ಮಾಕ್ ಮತ್ತು ಎಮಿನೆ ರಾಬಿಯಾ ಒಗುಜ್ ಹೊಂದಿದ್ದ ಟರ್ಕಿ ತಂಡ ಎರಡನೇ ಅಂತ್ಯದಿಂದಲೇ ನಿಯಂತ್ರಣ ಸಾಧಿಸಿ ಸುಲಭ ಗೆಲುವು ಪಡೆದಿತು. ಮೊದಲ ಹಂತದಲ್ಲಿ ಮೆಕ್ಸಿಕೋದಲ್ಲಿ ಭಾರತಕ್ಕೆ ಏಕೈಕ ಚಿನ್ನ ತಂದುಕೊಟ್ಟಿದ್ದ ಇದೇ ತಂಡದಿಂದ ಈ ಬಾರಿ ನಿರೀಕ್ಷೆ ಹೆಚ್ಚು ಇತ್ತು.

ಪುರುಷರಲ್ಲಿ: ಪುರುಷರ ವಿಭಾಗದಲ್ಲಿ ಓಜಸ್ ದಿಯೋತಲೆ, ಸಾಹಿಲ್ ಜಾಧವ್ ಮತ್ತು ಕುಶಾಲ್




ದಲಾಲ್ ತಂಡ ಸೆಮಿಫೈನಲ್ ತಲುಪಿ ನಿರೀಕ್ಷೆ ಮೂಡಿಸಿತು. ಆದರೆ ನಿರ್ಣಾಯಕ ಹಂತದಲ್ಲಿ ಎರಡು ಸತತ ಸೋಲುಗಳಿಂದ ಪದಕವಿಲ್ಲದೆ ಹಿಂದಿರುಗಬೇಕಾಯಿತು. ಕಂಚಿನ ಪದಕ ಪಂದ್ಯದಲ್ಲಿ ಚೀನಾ ವಿರುದ್ಧ 234–234 ಸಮಬಲದ ಬಳಿಕ ಶೂಟ್ ಆಫ್‌ನಲ್ಲಿ ಸೋಲು ಕಂಡಿತು. ಎರಡೂ ತಂಡಗಳು ಸಮಾನ ಅಚ್ಚುಕಟ್ಟಾದ ಮೂರು ಬಾಣಗಳನ್ನು ಹೊಡೆದರೂ, ಚೀನಾದ ಎರಡು ಬಾಣಗಳು ಕೇಂದ್ರಕ್ಕೆ ಹೆಚ್ಚು ಸಮೀಪವಾಗಿದ್ದರಿಂದ ಭಾರತ ಸೋತಿತು. ಸೆಮಿಫೈನಲ್‌ನಲ್ಲಿ ಅಮೆರಿಕ ವಿರುದ್ಧ 234–235 ಅಂತರದಲ್ಲಿ ಸೋಲು ಕಂಡುದು ಇನ್ನಷ್ಟು ನೋವು ತಂದಿತು. ಮೊದಲ ಮೂರು ಅಂತ್ಯಗಳವರೆಗೆ ಮುನ್ನಡೆ ಕಾಯ್ದುಕೊಂಡಿದ್ದರೂ ಕೊನೆಯ ಕ್ಷಣದಲ್ಲಿ ಕೇವಲ ಮೂರು ಬಾರಿ ದಶ ಅಂಕ ಗಳಿಸಿದರೆ, ಎದುರಾಳಿ ಐದು ಬಾರಿ ದಶ ಅಂಕ ಗಳಿಸಿತು.

ವೈಯಕ್ತಿಕ ವಿಭಾಗದಲ್ಲಿ ಸಮಾಧಾನ: ಆದರೆ ವೈಯಕ್ತಿಕ ವಿಭಾಗದಲ್ಲಿ ಸ್ವಲ್ಪ ಸಮಾಧಾನಕರ ಫಲಿತಾಂಶ ಕಂಡುಬಂದಿದೆ. ಎಲ್ಲಾ ಭಾರತೀಯ ಆಟಗಾರರು ಮೂವತ್ತೆರಡರ ಸುತ್ತಿಗೆ ಪ್ರವೇಶಿಸಿದ್ದಾರೆ. ಪುರುಷರ ವಿಭಾಗದಲ್ಲಿ ಅಭಿಷೇಕ್ ವರ್ಮಾ, ಜಾಧವ್, ಕುಶಾಲ್ ಮತ್ತು ದಿಯೋತಲೆ ಮುಂದಿನ ಹಂತ ತಲುಪಿದ್ದು, ವರ್ಮಾ ಮತ್ತು ಜಾಧವ್ ನಡುವೆ ದೇಶೀಯ ಪೈಪೋಟಿ ನಡೆಯಲಿದೆ. ಮಹಿಳಾ ವಿಭಾಗದಲ್ಲಿ ಮಧುರಾ ಚೀನಾದ ವಾಂಗ್ ಯುಯೆ ವಿರುದ್ಧ ಕಠಿಣ ಗೆಲುವು ಸಾಧಿಸಿದರೆ, ಜ್ಯೋತಿ ಪರಿಪೂರ್ಣ ಪ್ರದರ್ಶನ ನೀಡಿ ಗೆಲುವು ಸಾಧಿಸಿದರು. ಅದಿತಿ ಸ್ವಾಮಿ ಹಾಗೂ ಪ್ರಗತಿ ಕೂಡ ತಮ್ಮ ಪಂದ್ಯಗಳಲ್ಲಿ ಜಯ ಸಾಧಿಸಿ ಮುಂದಿನ ಹಂತಕ್ಕೆ ಅರ್ಹತೆ ಪಡೆದಿದ್ದಾರೆ.

ಇದೀಗ ಮಿಶ್ರ ತಂಡದಲ್ಲಿ ದಿಯೋತಲೆ ಮತ್ತು ಅದಿತಿ ಜೋಡಿ ಮಾತ್ರ ಪದಕದ ಭರವಸೆಯಾಗಿ ಉಳಿದಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5976

ಎಡದಿಂದ ಬಲಕ್ಕೆ
1.ಮರದಿಂದ ಸಿಕ್ಕಿದ ಫಲ (2)
4.ಅಹಂಕಾರದ ಸಮಾನಪದ (2)
6.ರಾತ್ರಿಯ ಅಧಿಪತಿ ಈ ಚಂದ್ರ (4)
8.ಇದು ಹಸಿರು ಕಚ್ಚಾ ಮಾವು (4)
10.ಕಲೆ-ಸೌಂದರ್ಯವನ್ನು ಆಸ್ವಾದಿಸುವವನು (3)
11.ಕೃಷ್ಣನ ಮಾವನಾದ ಮಥುರೆಯ ರಾಜ (2)
12.ದಾಖಲೆ-ನೋಂದಣಿಯಿದು (3)
14.ಕಿರೀಟದ ಅಲಂಕಾರವಾದ ಹಕ್ಕಿಯ ಪುಕ್ಕ (2)
16.ದಾರಿಗನನ್ನು ಹೀಗೂ ಹೇಳಬಹುದು (4)
17.ನೆಲಕ್ಕುರುಳುವುದು (4)

ಮೇಲಿನಿಂದ ಕೆಳಕ್ಕೆ
1.ತೂಕ ಅಥವಾ ಭಾರವಿಲ್ಲದಿರುವುದು(3)
2.ವೇದವ್ಯಾಸರ ತಂದೆ ಈ ಮುನಿ (4)
3.ಪ್ರಾಥಮಿಕ-ಪ್ರೌಢದ ನಡುವಿನ ವ್ಯಾಸಂಗ (4)
5.ಒಣಜಂಬ-ಅತಿಯಾದ ಮೆರೆತವಿದು (3)
7.ಮಂದಿ ನೆಲೆಸಿರುವ ಸ್ಥಳ (4)
9.ಮಾಯಾವಿದ್ಯೆ ತಿಳಿದವನು (4)
11.ಅಫಘಾನಿಸ್ತಾನದ ಅತಿ ದೊಡ್ಡ ನಗರ (4)
12.ಸೊಂಟಪಟ್ಟಿಯನ್ನು ಹೀಗೂ ಹೇಳುತ್ತೇವೆ (4)
13.ಕೆಟ್ಟ ಉಪದೇಶ-ದುಷ್ಟ ಸಲಹೆಯಿದು (4)
15.ಬೆಳೆಯಲ್ಲಿ ಕಡಿತ ಮಾಡುವುದು (4)

5975 ಉತ್ತರ

ಎಡದಿಂದ ಬಲಕ್ಕೆ:
1.ದುರಾಗ್ರಹಪೀಡಿತ
3.ತೊಡಿಸು 5.ಗುಜರಿ
7.ಮಕಮಕಿಸು
8.ಪಾಯಸ 9.ಸುಮನಾ
11.ಸಂನ್ಯಾಸ 13.ಗಜರಿಪು
14.ನಾಗಮುರಿ 15.ದಿಕ್ಪಟ

ಮೇಲಿನಿಂದ ಕೆಳಕ್ಕೆ :
1.ದುಕ್ಕುಡಿ 2.ತನುಜ
3.ತೊಳೆ 4.ಸುಮರಸ
5.ಗುಸುಗುಸು 6.ರಿಣ
8.ಪಾರಂಗತ 10.ನಾಗರಿಕ
11.ಸಂಪುಟ 12.ಸನಾದಿ

ಬಿಎಸ್‌ವೈ ಅಭಿಮಾನೋತ್ಸವದ ಪೂರ್ವಭಾವಿ ಸಭೆ

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ: ಸಿಸಿಪಾ

ಗದಗ: ನಗರದ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನದಲ್ಲಿ ಸಾರ್ಥಕ 50 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ನಮ್ಮ ಗದಗ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ಪೂರ್ವಭಾವಿ ಸಭೆ ಜರುಗಿತು.



ಶಾಸಕ ಸಿ.ಸಿ.ಪಾಟೀಲ, ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಎಂ.ಎಸ್.ಕರೀಗೌಡ್ರ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನಿರ್ಮಲಾ ಕೊಳ್ಳಿ, ನಗರ ಮಂಡಲ ಅಧ್ಯಕ್ಷ ಸುರೇಶ ಮರಳಪ್ಪನವರ, ಗ್ರಾಮೀಣ ಮಂಡಲ ಅಧ್ಯಕ್ಷ ಬೂದಪ್ಪ ಹಳ್ಳಿ, ಎಂ.ಎಂ.ಹಿರೇಮಠ, ಜಗನ್ನಾಥಸಾ ಭಾಂಡಗೆ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ ಅಕ್ಕಿ, ಒಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಸುಧೀರ ಕಾಟಿಗರ, ಎಸ್.ಸಿ.ಮೋರ್ಚಾ ಜಿಲ್ಲಾಧ್ಯಕ್ಷ ಮಂಜುನಾಥ ಮುಳಗುಂದ, ಬಿ.ಎಸ್. ಚಿಂಚಲಿ, ವಸಂತ ಮೇಟಿ, ಪ್ರದೀಪ ನವಲಗುಂದ, ಸುರೇಶ ಚಿತ್ತರಗಿ, ಅನೀಲ ಅಬ್ಬಿಗೇರಿ, ಉಮೇಶಗೌಡ ಪಾಟೀಲ, ಶಿವು ಹಿರೇಮನಿಪಾಟೀಲ, ಪ್ರಶಾಂತ ನಾಯ್ಕರ, ಮುತ್ತು ಮುಶಿಗೇರಿ, ಅಶೋಕ ಸಂಕಣ್ಣವರ, ಮಾಂತೇಶ ನಲವಡಿ, ನಾಗರಾಜ ತಳವಾರ, ಮಹೇಶ ದಾಸರ, ಮಂಜುನಾಥ ಶಾಂತಗೇರಿ, ಸುರೇಶ ಹೆಬಸೂರ, ಕುಮಾರ ಮಾರನಬಸರಿ, ಮಂಜುನಾಥ ಶಾಂತಗೇರಿ, ಶಂಕರ ಕರಿಬಿಷ್ಟಿ, ಬಸವರಾಜ ನರೆಗಲ್, ವಸಂತ ಹಬೀಬ, ಶಾರದಾ ಸಜ್ಜನರ, ಸ್ವಾತಿಅಕ್ಕಿ, ಪುಷ್ಪಾ ಪೂಜಾರ, ರೇಖಾ ಗವಳಿ, ರವಿ ಮಾನ್ವಿ, ವಿನೋದ ಹಂಸನೂರ ಇದ್ದರು. ರಮೇಶ ಸಜ್ಜಗಾರ ನಿರೂಪಿಸಿದರು. ಶಂಕರ ಕಾಕಿ ವಂದಿಸಿದರು.

ಸೈಕಲ್ ಮೇಲೆ ಸಂಚರಿಸಿ ಪಕ್ಷ ಸಂಘಟಿಸಿದ ಬಿಎಸ್‌ವೈ

ಹುಬ್ಬಳ್ಳಿ: ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸವ ಸಮಾರಂಭದ ಅಂಗವಾಗಿ ಪೂರ್ವಭಾವಿ ಸಭೆ ನಡೆಯಿತು.



ಈ ವೇಳೆ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾತನಾಡಿ, ಹುಬ್ಬಳ್ಳಿ ಈದಗಾ ಮೈದಾನದ ಹೋರಾಟ ಪ್ರಾರಂಭವಾಗಿ ಕರ್ನಾಟಕದ ಅನೇಕ ನಾಯಕ ಪ್ರಹ್ಲಾದ ಜೋಶಿ, ಅನಂತಕುಮಾರ, ಅನಂತಕುಮಾರ ಹೆಗಡೆ, ಈಶ್ವರಪ್ಪ, ರಾಣಿ ಚನ್ನಮ್ಮ ಮೈದಾನದ ಹೋರಾಟದಿಂದ ಈ ಮಟ್ಟಿಗೆ ಬೆಳೆದು ಬಂದಿದ್ದಾರೆ. ಹೋರಾಟದಲ್ಲಿ ಬಿ.ಎಸ್. ಯಡಿಯೂರಪ್ಪ ರವರು ಅನಂತಕುಮಾರ ತಮ್ಮ ಜೀವನವನ್ನು ಅರ್ಪಿಸಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ ರವರು ರಾಜ್ಯಾದ್ಯಂತ ಸೈಕಲ್ ಮೇಲೆ ಸಂಚರಿಸಿ ಪಕ್ಷ ಬೆಳೆಸಿದವರು. ಆ ಸಂದರ್ಭದಲ್ಲಿ ಚುರುಮರಿ ಚಹಾ ಸೇವಿಸಿ ಪಕ್ಷ ಕಟ್ಟಿದವರು. ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಬೆಳೆದು ರಾಜ್ಯದ ಮುಖ್ಯಮಂತ್ರಿ ಯಾದ ನಾಯಕ ಬಿ.ಎಸ್.ಯಡಿಯೂರಪ್ಪ ರವರು ನಾವು ಸಾವಿರಾರು ಸಂಖ್ಯೆಯಲ್ಲಿ ಹೋಗಿ ಅವರಿಗೆ ಗೌರವಿಸಿದರೆ ಇದಕ್ಕಿಂತ ಹೆಚ್ಚು ಬೇರೆ ಬೇಕಿಲ್ಲ ಎಂದರು.

ವಿಭಾಗೀಯ ಪ್ರಭಾರಿ ಜಯತೀರ್ಥ ಕಟ್ಟಿ ಮಾತನಾಡಿ, ಹಲವಾರು ವರ್ಷಗಳ ಬಗ್ಗೆ ಸಂಘರ್ಷ ನಡೆಸಿ ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿ ಶಿಕಾರಿಪುರದಲ್ಲಿ ಬೆಳೆದು ರಾಜ್ಯ ನಾಯಕರಾದ ವ್ಯಕ್ತಿ ಬಿ.ಎಸ್ .ಯಡಿಯೂರಪ್ಪ ರವರು. ರಾಜ್ಯದ ನಾಯಕರಾಗಿ ಮುಖ್ಯಮಂತ್ರಿಯಾಗಿ ಅನೇಕ ಯೋಜನೆಗಳನ್ನು ತಂದಿದ್ದಾರೆ. ಅದರಲ್ಲೂ ವಿಶೇಷವಾಗಿ ಭಾಗ್ಯಲಕ್ಷ್ಮಿ ಬಾಂಡ್, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್ ನೀಡಿ ರಾಜ್ಯದ ಜನತೆಗೆ ಮನೆ ಮಾತಾಗಿದ್ದಾರೆ.

ಒಂದು ಸಮಯದಲ್ಲಿ ಬಿ.ಎಸ್.ಯಡಿಯೂರಪ್ಪ ನವರ ಅಂಬಾಸಿಡರ್ ಕಾರಿನಲ್ಲಿ ಪ್ರವಾಸ ಮಾಡುವಾಗ ಕಾರ್‌ಗೆ ಡಿಸೇಲ್ ಹಾಕಲು ಸಹ ದುಡ್ಡು ಇರುತ್ತಿರಲಿಲ್ಲ, ದಕ್ಷಿಣ ಭಾರತದ ದಂತಕಥೆ ಬಿ.ಎಸ್ .ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳುವುದು ನಮ್ಮ ಸುದೈವ ಎಂದರು. ಪ್ರಧಾನ ಕಾರ್ಯದರ್ಶಿಗಳಾದ ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ಮಹಾಪೌರ ಜ್ಯೋತಿ ಪಾಟೀಲ್, ಉಪಮಹಾ ಪೌರ ಸಂತೋಷ ಚವ್ಹಾಣ, ಹು-ಧಾ ಪೂರ್ವ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ, ರಾಜ್ಯ ಹಿಂದುಳಿದ ಮೋರ್ಚಾ ಉಪಾಧ್ಯಕ್ಷ ಸತೀಶ್ ಶೇಜವಾಡಕರ, ರಾಜ್ಯ ಎಸ್‌ಟಿ ಮೋರ್ಚಾ ಕೋಶಾಧ್ಯಕ್ಷ ಮಣಿಕಂಠ ಶಾಗೋಟಿ ಉಪಸ್ಥಿತರಿದ್ದರು.

ಅಧಿಕಾರಿಗಳಿಂದ ಜಾಣ ಕುರುಡು ವರ್ತನೆ | ಸಾರ್ವಜನಿಕರ ಆಕ್ರೋಶ

ಜಲಮೂಲಗಳಲ್ಲಿ ಮರಳುಗಳ್ಳರ ಹಾವಳಿ

ನಿತೀಶ ಪಾಟೀಲ



ಕಲಾದಗಿ: ಬೇಸಿಗೆ ಬಂತೆಂದರೆ ಸಾಕು ಜಲಮೂಲಗಳಲ್ಲಿ ಮರಳುಗಳ್ಳರ ಹಾವಳಿ ತೀವ್ರವಾಗುತ್ತಿದ್ದು, ಘಟಪ್ರಭಾ ನದಿ ಒಡಲು ಖಾಲಿ ಆಯಿತು ಎಂದರೆ ಸಾಕು ಮರಳು ಚೋರರು ಆಕ್ಟಿವ್ ಆಗಿ ನದಿ ಒಡಲು ಬಗೆದು ಮರಳು ಹೊರ ತರಲು ಹೊಂಚು ಹಾಕಲು ಮುಂದಾಗುತ್ತಿದ್ದಾರೆ.

ದಿಗಂತ ವಿಶೇಷ

ಗ್ರಾಮದಿಂದ ಕೂಗಳತೆ ದ'ೂರ'ದ'ಲ್ಲಿರ'ುವ' ಮಿಡಚಿ ಹಳ್ಳದಲ್ಲಿ ಅಲ್ಲಲ್ಲಿ ಮರಳು ತೆಗೆದಿರುವ ಗುಂಡಿ ಬಿದ್ದಿದ್ದರೂ ಸಂಬಂಧಿಸಿದ ಅಧಿಕಾರಿಗಳು ಕಣ್ಣು ಮುಚ್ಚಿ ಜಾಣ ಕುರುಡು ವರ್ತನೆ ತೋರುತ್ತಿದ್ದಾರಾ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಬೇಸಿಗೆ ಬರುವುದನ್ನೇ ಕಾಯುತ್ತಾ ಕೂತ ಮರಳುಗಳ್ಳರು ನದಿ ಒಡಲು ಬತ್ತಿ ಬರಿದಾದೊಡನೆ ನದಿ ಒಡಲಿಗೆ ಕನ್ನ ಹಾಕಿ ಮರಳು ದಂಧೆ ಪ್ರಾರಂಭವಾಗುತ್ತೆ. ಬಾಗಲಕೋಟೆ ತಾಲೂಕಿನ ಸರಹದ್ದು ಉದಗಟ್ಟಿ ಗ್ರಾಮದಿಂದ ಹಿಡಿದು ಶಾರದಾಳ, ಅಂಕಲಗಿ, ಕಲಾದಗಿ, ಹಿರೇಸಂಶಿ ಈ ಭಾಗದಲ್ಲಿ ನದಿ ಒಡಲು ಬೇಸಿಗೆಯಲ್ಲಿ ಎರಡು ಮೂರು ಬಾರಿ ಬತ್ತಿ ಬರಿದಾಗೋದು ಸಾಮಾನ್ಯ. ಆ ವೇಳೆ ಮರಳು ಚೋರರು ನದಿ ಹಳ್ಳದ ಒಡಲಿಗೆ ಕನ್ನ ಹಾಕಿ ಮರಳು ದಂಧೆ ಶುರು ಮಾಡುತ್ತಾರೆ.

ಈಬಗ್ಗೆ ಪೊಲೀಸ್ ಇಲಾಖೆ, ಆರ್.ಡಿ.ಪಿ.ಆರ್. ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖಾ ಅಧಿಕಾರಿಗಳು, ಮರಳು ಟಾಸ್ಕಫೋರ್ಸ್ ಸಮಿತಿ ಅಧಿಕಾರಿಗಳ ಗಮನಕ್ಕಿದ್ದರೂ ನಿರ್ಲಕ್ಷವೋ? ಅಥವಾ ಯಾರದೋ ಒತ್ತಡದಿಂದ ಕೈಕಟ್ಟಿ ಕುಳಿತಂತೆ ಅನುಮಾನ ವ್ಯಕ್ತವಾಗುತ್ತಿದ್ದು, ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ ಹಾಕಬೇಕಿದ್ದ ಇಲಾಖೆಗಳು ಮೂಕ ಪ್ರೇಕ್ಷಕರಂತೆ ವರ್ತಿಸುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಹಳ್ಳದ ಮರಳಿಗೂ ಕಳ್ಳರ ಹಾವಳಿ: ಅಂಕಲಗಿ, ಶಾರದಾಳ ಕ್ರಾಸ್ ರಸ್ತೆ ಮದ್ಯೆ ಬರುವ ಮಿಡ್ಚಿ ಹಳ್ಳದಲ್ಲಂತೂ ಮರಳು ದಂಧೆ ಜೋರಾಗೆ ನಡೆಯುತ್ತೆ. ಸ್ಥಳೀಯರ ಬೇಡಿಕೆಗನುಗುಣವಾಗಿ ರಾತ್ರಿ ಹೊತ್ತು ಹಳ್ಳದಲ್ಲಿ ಮರಳು ತುಂಬುವುದು ಸಾಮಾನ್ಯವಾಗಿದ್ದು, ಇದಕ್ಕೆ ಯಾವ ಕಾಲದ ಮಿತಿನೂ ಇಲ್ಲ, ಬೇಸಿಗೆ ಇರಲಿ, ಚಳಿಗಾಲವಿರಲಿ ಮರುಳು ದಂಧೆಕೋರರಿಗೆ ಜಾಕ್‌ಪಾಟ ಇದ್ದ ಹಾಗೆ. ಈ ಹಳ್ಳದಲ್ಲಿ ಅಲ್ಲಲ್ಲಿ ಮರಳು ತುಂಬಿದ ತಗ್ಗುಗಳು ಹಾಗೂ ಹಳ್ಳದ ಮಧ್ಯ ಭಾಗದಲ್ಲಿ ಅತಿಯಾಗಿ ಟ್ರ್ಯಾಕ್ಟರ್ ಹಾದು ಹೋಗಿ ರಸ್ತೆಯೇ ನಿರ್ಮಾಣವಾಗಿದ್ದರೂ ಸಹ ಇಲಾಖೆಗಳಿಗೆ ಯಾವುದೇ ರೀತಿ ಅನುಮಾನ ಬಾರದೇ ಇರುವುದು ವಿಪರ್ಯಾಸ.

ಜಲಮೂಲಗಳ ದಿಕ್ಕು ಬದಲು: ಅಕ್ರಮ ಮರಳು ಗಣಿಗಾರಿಕೆಯಿಂದಾಗಿ ಜಲಮೂಲಗಳ ದಿಕ್ಕೇ ಬದಲಾಗುತ್ತಿದ್ದು, ಅಕ್ರಮ ಮರಳು ತುಂಬುವುದರಿಂದ ಅಂತರ್ಜಲ ಮಟ್ಟ ಕಡಿಮೆಯಾಗುತ್ತಿದೆ. ಹಳ್ಳಗಳಲ್ಲಿ ಮರುಳು ತುಂಬುವುದರಿಂದ ಮಳೆಗಾಲದಲ್ಲಂತೂ ಹರಿವಿನ ದಿಕ್ಕು ಬದಲಾಗಿ ಅಕ್ಕಪಕ್ಕದ ಜಮೀನಿನ ಬದುಗಳಲ್ಲಿ ಕೊರಕಲು ಉಂಟಾಗಿ ನೀರು ನುಗ್ಗಿ ರೈತರಿಗೆ ಹಾನಿಯಾಗುತ್ತಿದೆ. ಜಲಮೂಲಗಳಿಂದ ನೈಸರ್ಗಿಕ ಸಂಪನ್ಮೂಲಗಳ ಲೂಟಿಯನ್ನು ತಡೆಯಲು ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಮರಳು ಚೋರರ ಹೆಡೆಮುರಿ ಕಟ್ಟಲಿದ್ದಾರೆಯೇ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ.

> ಮಿಡ್ಚಿ ಹಳ್ಳದ ಬಳಿ ನಮ್ಮ ಹೊಲ ಗದ್ದೆಗಳಿವೆ. ಹಳ್ಳದಲ್ಲಿ ಉಸುಕು ತುಂಬಿಕೊಂಡು ಹೋಗಿ ಹಳ್ಳದಲ್ಲಿ ಮುಳ್ಳು ಕಂಟಿಗಳು ಬೆಳೆದಿವೆ. ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೆ ಹೊಲದ ಬದುವನ್ನು ಕೊಚ್ಚುತ್ತಿವೆ. ಇದರಿಂದ ನಮ್ಮ ಹೊಲಗಳಿಗೆ ಹಾನಿಯಾಗುತ್ತಿದೆ. ತಕ್ಷಣವೇ ಹಳ್ಳದಲ್ಲಿ ಮರಳು ತುಂಬುವುದನ್ನು ಅಧಿಕಾರಿಗಳು ಸಂಪೂರ್ಣವಾಗಿ ತಡೆಯಬೇಕು.
> ■ ಕಿರಣ ಅರಕೇರಿ, ಶಾರದಾಳ ಗ್ರಾಮದ ರೈತ

> ಕಲಾದಗಿ ಭಾಗದಲ್ಲಿ ಮರುಳು ದಂಧೆ ನಡೆಯುತ್ತಿರುವುದು ಗಮನಕ್ಕೆ ಇಲ್ಲ. ನದಿ ಮರುಳು ಎತ್ತುವುದು ಕಾನೂನು ಪ್ರಕಾರ ಅಪರಾಧ. ಟಾಸ್ ಫೋರ್ಸ್ ಸಮಿತಿಗೆ ಸೂಚನೆ ನೀಡಿ ಉದಗಟ್ಟಿ ಶಾರದಾಳ ಅಂಕಲಗಿ ಭಾಗದಲ್ಲಿ ನೀಗಾ ಇಡಲು, ಮತ್ತು ಚೆಕ್‌ಪೋಸ್ಟ್ ನಿರ್ಮಿಸಲಾಗುವುದು. ಸದ್ಯ ಗ್ರಾಮ ಆಡಳಿತಾಧಿಕಾರಿಗಳಿಗೆ ನದಿ ಭಾಗದಲ್ಲಿ ತೆರಳಿ ವೀಕ್ಷಣೆ ಮಾಡಲು ಸೂಚಿಸುತ್ತೇನೆ.
> ■ ವಾಸುದೇವ ಸ್ವಾಮಿ, ತಹಶೀಲ್ದಾರ್ ಬಾಗಲಕೋಟೆ

ಕಿರುಸುದ್ದಿ

ಶುದ್ಧ ಗಾಳಿ: ವಿಜಯಪುರ ನಗರ ದೇಶಕ್ಕೆ 4ನೇ ಸ್ಥಾನ

ವಿಜಯಪುರ: ಶುದ್ಧ ಗಾಳಿ ಬೀಸುವ ನಗರಗಳ ಪಟ್ಟಿಯಲ್ಲಿ ವಿಜಯಪುರ ನಗರ ದೇಶದಲ್ಲಿಯೇ 4ನೇ ಸ್ಥಾನ ಗಳಿಸುವ ಮೂಲಕ ದೇಶದ ಗಮನಸೆಳೆದಿದ್ದು, ಇದು ಶಾಸಕ ಯತ್ನಾಳ ಅಭಿವೃದ್ಧಿ ಕಾರ್ಯಕ್ಕೆ ಸಾಕ್ಷಿ ಎಂದು ಸ್ವಾಮಿ ವಿವೇಕಾನಂದ ಸೇನೆ ಅಧ್ಯಕ್ಷ ಚಂದ್ರಶೇಖರ ಚೌಧರಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಸನಗೌಡ ಪಾಟೀಲ ಯತ್ನಾಳರು ಶಾಸಕರಾದ ಮೇಲೆ ನಿರೀಕ್ಷೆ ಮೀರಿ ಅನುದಾನ ತಂದು ನಗರದ ಪ್ರಮುಖ ರಸ್ತೆಗಳನ್ನು ಮಾದರಿ ರಸ್ತೆಯಾಗಿ ಅಭಿವೃದ್ಧಿ, ಬಡಾವಣೆ, ಕಾಲೋನಿಗಳ ಆಂತರಿಕ ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆಯ ಸುಧಾರಣೆ, ಸ್ವಚ್ಛತೆಗೆ ಆದ್ಯತೆ ಸೇರಿದಂತೆ ಹಲವು ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದರ ಫಲವಾಗಿ ವಿಜಯಪುರ ನಗರವು ಸ್ವಚ್ಛ ವಾತಾವರಣ ಮತ್ತು ಸುಧಾರಿತ ನಗರ ವ್ಯವಸ್ಥೆಯೊಂದಿಗೆ ಗಮನ ಸೆಳೆಯುತ್ತಿದೆ. ಇದರಿಂದ ವಿಜಯಪುರ ನಗರವು ವಾಸಕ್ಕೆ ಮತ್ತಷ್ಟು ಅನುಕೂಲಕರವಾಗಿದ್ದು, ಉತ್ತಮ ವಾಯು ಗುಣಮಟ್ಟ ಹೊಂದಿರುವ ಭಾರತದ ನಗರಗಳ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದು ತನ್ನ ಸ್ಥಾನವನ್ನು ಮತ್ತಷ್ಟು ದೃಢಪಡಿಸಿಕೊಂಡಿದೆ. ಕಳೆದ ವರ್ಷ 6ನೇ ಸ್ಥಾನಗಳಿಸಿತ್ತು ಎಂದು ತಿಳಿಸಿದ್ದಾರೆ.

ಚಿತ್ರದುರ್ಗಕ್ಕೆ ಪ್ರಭು ಡಿಗ್ಗಾವಿ ಸೈಕಲ್ ಯಾತ್ರೆ



ಗದಗ: ಮಾಜಿ ಸಿಎಂ ಬಿ.ಎಸ್ .ಯಡಿಯೂರಪ್ಪನವರು ದಕ್ಷಿಣ ಭಾರತದಲ್ಲಿ ಬಿಜೆಪಿ ಸಂಘಟಿಸಿ ರಾಜ್ಯಾದ್ಯಂತ ಸೈಕಲ್ ಮೂಲಕ ಬಿಜೆಪಿ ಬಲಪಡಿಸಿ ಜನಸೇವೆ ಮಾಡುತ್ತಾ ಇದೀಗ 50 ವರ್ಷ ಪ್ರಯುಕ್ತ ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವಕ್ಕೆ ನಗರದಿಂದ ಚಿತ್ರದುರ್ಗಕ್ಕೆ ಸೈಕಲ್ ಮೂಲಕ ಬಿ.ವೈ.ವಿಜಯೇಂದ್ರ ಹಾಗೂ ಸುಧೀರ್ ಕಾಟಿಗರ್ ಅಭಿಮಾನಿ ಪ್ರಭು ಡಿಗ್ಗಾವಿಗೆ ನಗರದ ಪುಟ್ಟರಾಜ ಗವಾಯಿಗಳ ಮಠದಲ್ಲಿ ಪೂಜೆ ಮಾಡುವ ಮುಖಾಂತರ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲಯ್ಯಜ್ಜನವರು ಚಾಲನೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಓಬಿಸಿ ಮೋರ್ಚ ರಾಜ್ಯ ಕಾರ್ಯದರ್ಶಿ ಸುಧೀರ್ ಕಾಟಿಗರ್ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ್ ಪಾಟೀಲ, ಮಂಡಲ ಅಧ್ಯಕ್ಷ ಸುರೇಶ್ ಮರಳ್ ಪ್ಪನವರ್, ಶಂಕರ್ ಕಾಕಿ, ಅನಿಲ ಅಬ್ಬಿಗೇರಿ, ರಮೇಶ್ ಸಜ್ಜಗಾರ್, ಜಯಶ್ರೀ ಉಘಲಾಟ, ಸಂತೋಷ ಅಕ್ಕಿ, ಬಸವರಾಜ್ ನೆರೆಗಲ್, ಇರ್ಷಾ ಮಾನ್ವಿ, ರವಿ ಮಾನ್ವಿ, ಮಂಜುನಾಥ್ ಶಾಂತಗೇರಿ, ದೇವೇಂದ್ರಪ್ಪ ಹೂಗಾರ್, ರವಿ ಚವಾನ್, ನಾರಾಯಣ ಟಿಕಂದಾರ್, ಕುಶಾಲ್ ಕಾಟಿಗರ್ ಇದ್ದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಜಿಲ್ಲೆಯಿಂದ 5ಸಾವಿರ ಕಾರ್ಯಕರ್ತರು ಭಾಗಿ

ಯಾದಗಿರಿ: ಚಿತ್ರದುರ್ಗದಲ್ಲಿಮೇ 9ರಂದು ಆಯೋಜಿಸಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ 50 ಸಾರ್ಥಕ ವರ್ಷದ ಕಾರ್ಯಕ್ರಮಕ್ಕೆ ಗಿರಿಜಿಲ್ಲೆಯಿಂದ ಐದು ಸಾವಿರ ಬಿಜೆಪಿ ಕಾರ್ಯಕರ್ತರು, ಮುಖಂಡರು, ಪದಾಧಿಕಾರಿಗಳು ತೆರಳಿದ್ದಾರೆಂದು ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ತಿಳಿಸಿದ್ದಾರೆ.



ಮಂಗಳವಾರ ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾದಗಿರಿ ಜಿಲ್ಲೆಗೆ ಬಿಎಸ್‌ವೈ ಅವರ ಕೊಡುಗೆ ಅಪಾರವಾಗಿದೆ. ಜಿಲ್ಲೆಯಾಗಲು ಅವರೇ ಕಾರಣ, ಹೀಗಾಗಿ ಚಿತ್ರದುರ್ಗದ ಸಮಾರಂಭದಲ್ಲಿ ಜಿಲ್ಲಾ ಬಿಜೆಪಿಯಿಂದ ವಿಶೇಷ ಸನ್ಮಾನ ಜರುಗಲಿದೆ ಎಂದರು. ವೀರಶೈವ ಧರ್ಮದ ಪಂಚಪೀಠಗಳ ಜಗದ್ಗುರುಗಳು, ನಾಡಿನ ಹೆಸರಾಂತ ಮಠಗಳ ಶ್ರೀಗಳು, ವಿವಿಧ ಸಮುದಾಯಗಳ ಗುರುಗಳು ಭಾಗವಹಿಸಲಿರುವ ಈ ಐತಿಹಾಸಿಕ ಕಾರ್ಯಕ್ರಮವನ್ನು ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟಿಸಲಿದ್ದು, ಮಾಜಿ ಸಚಿವ, ಹಾಲಿ ಸಂಸದ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆ ವಹಿಸಲಿದ್ದಾರೆಂದರು.

> ಯಾದಗಿರಿ ಜಿಲ್ಲೆ ಮಾಡಿದ ಯಡಿಯೂರಪ್ಪಗೆ ವಿಶೇಷ ಸನ್ಮಾನ

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶರೆಡ್ಡಿ ಮುದ್ನಾಳ, ಮುಖಂಡರಾದ ರಾಚಣ್ಣಗೌಡ ಮುದ್ನಾಳ, ನಾಗರತ್ನ ಕುಪ್ಪಿ, ದೇವೇಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಮ ಕುರಕುಂದಿ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ವೆಂಕಟರೆಡ್ಡಿ ಅಬ್ಬೆತುಮಕೂರು, ಬಿಜೆಪಿ ಜಿಲ್ಲಾ ಮಾಧ್ಯಮ ಸಂಚಾಲಕ ವಿರೂಪಾಕ್ಷಯ್ಯ ಸ್ವಾಮಿಹೆಡಗಿಮದ್ರಾ ಸೇರಿದಂತೆಯೇ ಇತರರಿದ್ದರು.

ಸಿಯುಕೆಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನದ ಕರಪತ್ರ ಬಿಡುಗಡೆ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ದೇವಾಲಯಗಳ ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಸಾರ್ವಜನಿಕ ನೀತಿ ವಿಷಯದ ಕುರಿತು 2026ರ ಆಗಸ್ಟ್ 5ರಿಂದ 7ರವರೆಗೆ ನಡೆಯಲಿರುವ ಅಂತಾರಾಷ್ಟ್ರೀಯ ಸಮ್ಮೇಳನದ ಕರಪತ್ರವನ್ನು ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ, ಕುಲಸಚಿವ ಪ್ರೊ. ಆರ್.ಆರ್.ಬಿರಾದಾರ ಸೇರಿದಂತೆ ವಿವಿಧ ಅಧ್ಯಾಪಕರು ಬಿಡುಗಡೆ ಮಾಡಿದರು.



ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಮತ್ತು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿ, ನವದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ "ದೇವಾಲಯ ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಸಾರ್ವಜನಿಕ ನೀತಿ: ಆಡಳಿತ, ಜೀವನೋಪಾಯಗಳು ಮತ್ತು ಸ್ಥಿರ ಪ್ರಾದೇಶಿಕ ಅಭಿವೃದ್ಧಿ'' ಎಂಬ ವಿಷಯದ ಅಂತಾರಾಷ್ಟ್ರೀಯ ಸಮ್ಮೇಳನ ಸಿಯುಕೆ ಆವರಣದಲ್ಲಿ ನಡೆಯಲಿದೆ. ಸಮ್ಮೇಳನದಲ್ಲಿ ದೇವಾಲಯಗಳ ಆರ್ಥಿಕ, ಸಾಮಾಜಿಕ ಹಾಗೂ ಸಾರ್ವಜನಿಕ ನೀತಿ ಸಂಬಂಧಿತ ಆಯಾಮಗಳ ಕುರಿತು ಪ್ರಬಂಧ ಮಂಡನೆ, ಚರ್ಚೆ ಮತ್ತು ಸಂವಾದಗಳು ನಡೆಯಲಿವೆ. ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಶಿಕ್ಷಣ ತಜ್ಞರು, ಸಂಶೋಧಕರು, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ವಿವಿಧ ದೇವಾಲಯಗಳ ಆಡಳಿತಾಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದರು.

ದೇವಾಲಯಗಳು ಮತ್ತು ಪ್ರಾದೇಶಿಕ ಅಭಿವೃದ್ಧಿ, ಜೀವನೋಪಾಯ ಸೃಷ್ಟಿ, ಸಾಂಸ್ಕೃತಿಕ ಸಂರಕ್ಷಣೆ ಮತ್ತು ಸ್ಥಿರ ಪ್ರವಾಸೋದ್ಯಮಕ್ಕೆ ನೀಡುವ ಕೊಡುಗೆ ಅನ್ವೇಷಿಸುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಆಸಕ್ತರು ದೇವಾಲಯ ಆರ್ಥಿಕತೆ ಮತ್ತು ಅದರ ಆರ್ಥಿಕ ಪರಿಣಾಮ, ಆಡಳಿತ ಮತ್ತು ಕಾನೂನು ಚೌಕಟ್ಟುಗಳು, ಸ್ಥಿರ ಪ್ರವಾಸೋದ್ಯಮ, ಪರಂಪರೆ ಮತ್ತು ಸಾಂಸ್ಕೃತಿಕ ಸಂಪತ್ತು, ದೇವಾಲಯ ನಿರ್ವಹಣೆಯಲ್ಲಿ ಡಿಜಿಟಲ್ ನವೀಕರಣ ಮತ್ತು ಕೃತಕ ಬುದ್ಧಿಮತ್ತೆ ಕುರಿತು ಪ್ರಬಂಧ ಮಂಡನೆ ಮಾಡಬಹುದಾಗಿದೆ.

ಸಂಕ್ಷಿಪ್ತ ಪ್ರಬಂಧ ಸಲ್ಲಿಕೆಗೆ ಜೂನ್ 15, 2026 ಕೊನೆಯ ದಿನವಾಗಿದ್ದು, ಸಂಪೂರ್ಣ ಪ್ರಬಂಧ ಸಲ್ಲಿಕೆಗೆ ಜು.15, 2026 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಡಾ. ಜಿ. ಮಹೇಂದ್ರ ರೆಡ್ಡಿ 9666851851 ಮತ್ತು ಡಾ.ಎಸ್. ಲಿಂಗಮೂರ್ತಿ 9014030809 ಸಂಪರ್ಕಿಸಬಹುದಾಗಿದೆ ಎಂದರು.

ಆಕಾಶವಾಣಿ ಕೇಂದ್ರದಿಂದ ವಾಕಥಾನ್ ಮೇ 8ರಂದು

ಧಾರವಾಡ: ಆಕಾಶವಾಣಿ ಸಾರ್ಥಕ ಪ್ರಸಾರ ಸೇವೆಯ 90ನೇ ವರ್ಷಾಚರಣೆ ಪ್ರಯುಕ್ತ ಧಾರವಾಡ ಕೇಂದ್ರದಿಂದ ಮೇ 8ರಂದು ಬೆಳಗ್ಗೆ 7.30ಕ್ಕೆ ವಾಕಥಾನ್, ಮೇ 11ರಂದು ಸಂಜೆ 6.30ಕ್ಕೆ ಶಾಸ್ತ್ರೀಯ ಸಂಗೀತ ಸಂಜೆ ಹಮ್ಮಿಕೊಂಡಿದ್ದಾಗಿ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥೆ ಮಂಜುಳಾ ಪುರಾಣಿಕ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಹುಶ್ರುತ ಆಕಾಶವಾಣಿ, ಬಹುಜನ ಹಿತಾಯ ಬಹುಜನ ಸುಖಾಯ ಧ್ಯೇಯದೊಂದಿಗೆ ಆರಂಭಗೊಂಡ ಭಾರತೀಯ ಪ್ರಸಾರ ಸೇವೆ, ಸುವರ್ಣ ದಿನಗಳ ನೆನಪಿನಲ್ಲಿ ದೇಶದ ಸಾಂಸ್ಕೃತಿಕ, ಮಾಹಿತಿ ಮತ್ತು ಪ್ರಸಾರ ಇತಿಹಾಸದಲ್ಲಿ ವಿಶೇಷ ಕ್ಷಣ ಗುರುತಿಸಿ, ತಲೆಮಾರುಗಳವರೆಗೆ ಪ್ರತಿಧ್ವನಿಸುವ ಧ್ವನಿ ಹುಟ್ಟನ್ನು ದೇಶಾದ್ಯಂತ ಸಂಭ್ರಮಿಸಲಾಗುತ್ತಿದೆ ಎಂದರು.

ಮೇ 8ರ ಬೆಳಗ್ಗೆ 7.30ಕ್ಕೆ ನಡೆಯುವ ವಾಕಥಾನ್, ಆಕಾಶವಾಣಿ ಕೇಂದ್ರದ ಆವರಣದಿಂದ ಜ್ಯುಬ್ಲಿ ವೃತ್ತದವರೆಗೆ ನಡೆಯಲಿದೆ. ವಾಕಥಾನ್‌ಗೆ ಆಕಾಶವಾಣಿ ಕೇಂದ್ರದ ಅಭಿಯಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ ಚಾಲನೆ ನೀಡಲಿದ್ದಾರೆ ಎಂದರು.

ಮೇ 11ರಂದು 6.30ಕ್ಕೆ ನಗರದ ಆಲೂರು ವೆಂಕಟರಾವ ಸಾಂಸ್ಕೃತಿಕ ಸಭಾಭವನದಲ್ಲಿ ನಡೆಯುವ ಶಾಸ್ತ್ರೀಯ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಹಳಿಯಾಳದ ಕೆ.ಎಲ್.ಎಸ್.ವಿಶ್ವನಾಥರಾವ್ ದೇಶಪಾಂಡೆ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾಂಶುಪಾಲ ಡಾ.ವಾದಿರಾಜ ಕುಲಕರ್ಣಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಅಲ್ಲದೇ, ಆಕಾಶವಾಣಿ ಧಾರವಾಡ ಕೇಂದ್ರದ ಅಭಿಯಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ ಅಧ್ಯಕ್ಷತೆ ವಹಿಸುವರು. ಆಕಾಶವಾಣಿ ಎ-ಶ್ರೇಣಿ ಶಾಸ್ತ್ರೀಯ ಸಂಗೀತ ಗಾಯಕ ರಘುನಂದನ ಭಟ್ ಹಾಗೂ ಬಿ ಹೈ ಶ್ರೇಣಿ ಬಾನ್ಸುರಿ ಕಲಾವಿದೆ ಕೃತಿಕಾ ಜಂಗಿನಮಠ, ಕೊಳಲು ವಾದನ ಪ್ರಸ್ತುತ ಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕುಮಾರ ಅಂಗಡಿ, ಮಾಯಾ ಚಿಕ್ಕೇರೂರ ಇದ್ದರು.

ಗಾಂಜಾ ಮಾರಾಟ: ಆರೋಪಿ ಬಂಧನ

ಹಳಿಯಾಳ: ಪಟ್ಟಣದ ದೇಶಪಾಂಡೆ ನಗರದ ಕೈಗಾರಿಕಾ ಪ್ರದೇಶದ ಪ್ರೆಸ್ಟೀಜ್ ಬುಕ್‌ಹೌಸ್ ಎದುರಿನ ರಸ್ತೆಯಲ್ಲಿ ಸ್ವಂತ ಲಾಭಕ್ಕಾಗಿ ಒಣಗಿದ ಗಾಂಜಾ ಮಾರುತ್ತಿದ್ದ ಆರೋಪಿ ಮಹಮ್ಮದ್ ಜಬೀವುಲ್ಲಾ ಮಾಬುಲಿ ಮಕ್ತೇಸಾಬ (25) ಆರೋಪಿಯನ್ನು ದಾಳಿ ಮಾಡಿ 178 ಗ್ರಾಂ ಒಣ ಗಾಂಜಾವನ್ನು ವಶಪಡಿಸಿಕೊಂಡು ಹಳಿಯಾಳ ಪೊಲೀಸ್ ಠಾಣೆಯ ಸಿಬ್ಬಂದಿಗಳು ತನಿಖೆಗೆ ಒಳಪಡಿಸಿದ್ದಾರೆ.



ವಿದ್ಯುತ್ ತಂತಿ ಸ್ಪರ್ಶಿಸಿ ಬಾಲಕಿ ಸಾವು

ಚಿಕ್ಕೋಡಿ: ತಾಲೂಕಿನ ಇಂಗಳಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಮನೆಯ ಮೇಲಿಂದ ಆಯತಪ್ಪಿ ಕೆಳಗೆ ಬಿದ್ದು 9 ವರ್ಷದ ಬಾಲಕಿ ಸಾನ್ವಿ ಕಾಂಬಳೆ ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ.ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 3ನೇ ತರಗತಿ ವಿದ್ಯಾರ್ಥಿನಿ ಸಾನ್ವಿ ಆಟವಾಡುವಾಗ ಸ್ಕಿಪಿಂಗ್ ಹಗ್ಗ ವಿದ್ಯುತ್ ತಂತಿಯ ಮೇಲಿ ಬಿದ್ದಿದೆ. ಮನೆಯ ಮೇಲೆ ಏರಿ ಹಗ್ಗ ತೆಗೆದುಕೊಳ್ಳುವಾಗ ವಿದ್ಯುತ್ ಸ್ಪರ್ಶಿಸಿ ಕೆಳಗೆ ಬಿದ್ದಿದ್ದಾಳೆ. ಮನೆಯ ಮೇಲಿಂದ ಕೆಳಗೆ ಬಿದ್ದು ಗಾಯಗೊಂಡ ಬಾಲಕಿಯನ್ನು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ಚಿಕಿತ್ಸೆ ಫಲಕಾರಿಯಾಗದೆ ಬಾಲಕಿ ಸಾನ್ವಿ ಕಾಂಬಳೆ ಮೃತ ಪಟ್ಟಿದ್ದಾಳೆ. ಈ ಕುರಿತು ಅಂಕಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿದ್ಯುತ್ ತಗುಲಿ ಸಾವು

ಹಾವೇರಿ: ವಿದ್ಯುತ್ ಕಂಬದಲ್ಲಿ ಕರೆಂಟ್ ರಿಪೇರಿ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಗುಲಿ ಎಲೆಕ್ಟ್ರಿಷಿಯನ್ ಒಬ್ಬರು ಮೃತಪಟ್ಟ ಘಟನೆ ಜಿಲ್ಲೆಯ ಬಂಕಾಪುರ ಪಟ್ಟಣದಲ್ಲಿ ನಡೆದಿದೆ. ಸಲೀಂ ಅಬ್ದುಲ್‌ರಜಾಕ ನೆಲಮನಿ (38) ಎಂಬ ಎಲೆಕ್ಟ್ರಿಷಿಯನ್ ಮೃತಪಟ್ಟಿದ್ದಾರೆ. ಪಟ್ಟಣದ ಆಸಾರ್ ಓಣಿಯಲ್ಲಿರುವ ಹಜರತ್ ಸೈಯದ್ ಅಲ್ಲಾವುದ್ದೀನ ಶಾ ಖಾದ್ರಿ ದರ್ಗಾದಲ್ಲಿ ವಿದ್ಯುತ್ ಕಂಬದಲ್ಲಿ ರಿಪೇರಿ ಮಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ತಗುಲಿದ್ದರಿಂದ ಮೃತಪಟ್ಟಿದ್ದಾರೆಂದು ಮೃತನ ಸಹೋದರ ಮೋದಿನಸಾಬ ನೆಲಮನಿ ಪೊಲೀಸರ ಎಫ್‌ಐಆರ್‌ನಲ್ಲಿ ತಿಳಿಸಿದ್ದಾರೆ. ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲು ಜಾರಿ ನದಿಯಲ್ಲಿ ಬಿದ್ದು ಸಾವು

ಹಾವೇರಿ: ಕುಮದ್ವತಿ ನದಿಯಲ್ಲಿ ಮೀನು ಹಿಡಿಯಲು ಹೋಗಿದ್ದ ವ್ಯಕ್ತಿಯೊಬ್ಬರು ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮುಳುಗಿ ಮೃತಪಟ್ಟಿರುವ ಘಟನೆ ರಟ್ಟೀಹಳ್ಳಿ ತಾಲೂಕು ಕೋಡಮಗ್ಗಿ ಗ್ರಾಮದಲ್ಲಿ ನಡೆದಿದೆ. ಚನ್ನಕೇಶವ ರುದ್ರಪ್ಪ ವಾಲ್ಮೀಕಿ (45) ಮೃತ ದುರ್ದೈವಿ. ಇವರು ಕೊಡಮಗ್ಗಿ ಗ್ರಾಮದ ಬಂಗಾರಪ್ಪ ಎಮ್ಮೇರ ಎಂಬುವವರ ಜಮೀನಿನ ಹತ್ತಿರ ಇರುವ ಕುಮದ್ವತಿ ನದಿಯಲ್ಲಿ ಮೀನು ಹಿಡಿಯಲು ಹೋದಾಗ ಘಟನೆ ಸಂಭವಿಸಿದೆ. ಹಿರೇಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಂಡದಲ್ಲಿ ಈಜಾಡಲು ತೆರಳಿದ್ದ ಬಾಲಕ ಸಾವು

ಕಲಬುರಗಿ: ಹೊಂಡದಲ್ಲಿ ಈಜಾಡಲು ತೆರಳಿದ್ದ ಬಾಲಕ ಮೃತಪಟ್ಟ ಘಟನೆ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿ ಪಟ್ಟಣದ ಹೊರವಲಯದ ಡಿಗ್ಗಿ ತಾಂಡಾದಲ್ಲಿ ಸಂಭವಿಸಿದೆ.ಮೃತ ಬಾಲಕನನ್ನು ಡಿಗ್ಗಿತಾಂಡಾ ನಿವಾಸಿ ರಿತೇಶ್ (12) ಎಂದು ಗುರುತಿಸಲಾಗಿದೆ. ರೈಲ್ವೆ ಕಾಮಗಾರಿಗಾಗಿ ನಿರ್ಮಿಸಲಾಗಿದ್ದ ಬೃಹತ್ ಹೊಂಡದಲ್ಲಿ ಮಳೆಯ ನೀರು ಸಂಗ್ರಹವಾಗಿತ್ತು. ಇದೇ ಹೊಂಡದಲ್ಲಿ ತನ್ನ ಸ್ನೇಹಿತರ ಜೊತೆ ಈಜಾಡಲು ತೆರಳಿದ್ದ ರಿತೇಶ್, ದುರದೃಷ್ಟವಶಾತ್ ಮುಳುಗಿ ಮೃತಪಟ್ಟಿದ್ದಾನೆ.ಘಟನೆ ತಿಳಿದ ಸ್ಥಳೀಯರು ತಕ್ಷಣವೇ ಬಾಲಕನ ಮೃತದೇಹವನ್ನು ಹೊರತೆಗೆದಿದ್ದಾರೆ. ಈ ಸಂಬಂಧ ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಈ ಘಟನೆ ಸ್ಥಳೀಯರಲ್ಲಿ ದುಃಖದ ವಾತಾವರಣ ಮೂಡಿಸಿದೆ.

ಕುಕ್ಕುಟ ಸಂಜೀವಿನಿ ಯೋಜನೆ ಯಶಸ್ವಿಯಾಗಲಿ

ಮಸ್ಕಿ: ತಾಲೂಕಿನ ವಟಗಲ್ ಗ್ರಾಮ ಪಂಚಾಯತಿಗೆ ಮಸ್ಕಿ ತಾಪಂ ಆಡಳಿತ ಅಧಿಕಾರಿಗಳು ಮತ್ತು ರಾಯಚೂರು ಜಿಪಂ ಮುಖ್ಯ ಯೋಜನಾಧಿಕಾರಿಗಳಾದ ಡಾ.ಟಿ.ರೋಣಿ ಅವರು ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.



ವಟಗಲ್ ಗ್ರಾಮ ಪಂಚಾಯತಿಯಲ್ಲಿ ಸಿಬ್ಬಂದಿ ಹಾಜರಾತಿ ವಹಿ ಪರಿಶೀಲಿಸಿದರು. ತೆರಿಗೆ ವಸೂಲಾತಿ, ಆಸ್ತಿ ಸಮೀಕ್ಷೆ ಕುರಿತು ಮಾಹಿತಿ ಪಡೆದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಇಂಜಿನಿಯರ್ ಅವರೊಂದಿಗೆ ಜೆಜೆಎಂ ಅನುಷ್ಠಾನ ಕುರಿತು ಸಭೆ ನಡೆಸಿದರು. ತದ ನಂತರ ಗುಡಿಹಾಳ ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಕೆರೆಗೆ ಭೇಟಿ ನೀಡಿ, ಮಾಹಿತಿ ಪಡೆದರು.

ಈ ವೇಳೆ ವಟಗಲ್ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ತಿಮ್ಮನಗೌಡ, ಗ್ರಾಪಂ ಸಿಬ್ಬಂದಿ ಇದ್ದರು.

ತದ ನಂತರ ಮೆದಕಿನಾಳ ಗ್ರಾಮ ಪಂಚಾಯತಿಯ ಗವಿಸಿದ್ದೇಶ್ವರ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ನಾಗರಬೆಂಚಿ ಗ್ರಾಮದ ಜ್ಯೋತಿ ಸಂಜೀವಿನಿ ಸ್ವ ಸಹಾಯ ಗುಂಪಿನ ಮಹಿಳೆಯರು ಕುಕ್ಕುಟ ಸಂಜೀವಿನಿ ಯೋಜನೆಯಡಿ ಆರಂಭಿಸಿದ ಕೋಳಿ ಫಾರಂಗೆ ಭೇಟಿ ನೀಡಿದರು. ಮಹಿಳೆಯರ ಸಬಲೀಕರಣ ಉದ್ದೇಶದೊಂದಿಗೆ ಆರಂಭಿಸಿದ ಕುಕ್ಕುಟ ಸಂಜೀವಿನಿ ಯೋಜನೆಗೆ ಎಲ್ಲೆಡೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.

ಯೋಜನೆಯಲ್ಲಿ ತೊಡಗಿರುವ ಮಹಿಳೆಯರನ್ನು ಕೇಂದ್ರ ಸರ್ಕಾರದ ವತಿಯಿಂದ ದೆಹಲಿಯಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಿಫಾರಸು ಮಾಡಲಾಗುವುದು. ಇಲ್ಲಿ ಲಭ್ಯವಾಗುವ ಮೊಟ್ಟೆಗಳನ್ನು ಸ್ಥಳೀಯ ಅಂಗನವಾಡಿ, ಶಾಲೆಯ ಮಕ್ಕಳಿಗೆ ಮೊಟ್ಟೆ ಪೂರೈಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ಸ್ವ ಸಹಾಯ ಒಕ್ಕೂಟದ ಮಹಿಳೆಯರು ಕೋಳಿ ಫಾರಂ ಅನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು. ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಕೋಳಿಗಳ ಆರೈಕೆಗೆ ವಿಶೇಷವಾಗಿ ಗಮನಹರಿಸಬೇಕು. ಪಶು ವೈದ್ಯರ ಸಲಹೆಯಂತೆ ಶೆಡ್ ಅನ್ನು ತಂಪಾಗಿಸಬೇಕು ಎಂದರು.

ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ, ಎನ್ ಆರ್ ಎಲ್ ಎಂ ಸಿಬ್ಬಂದಿಗಳಾದ ಈರಪ್ಪ, ಪ್ರಕಾಶ್ ಇತರರಿದ್ದರು.

ಕಿರುಸುದ್ದಿ

ಮಂಜುನಾಥಯ್ಯಗೆ ಪಿಎಚ್‌ಡಿ ಪ್ರದಾನ



ಲಕ್ಷ್ಮೇಶ್ವರ: ಪಟ್ಟಣದ ಐತಿಹಾಸಿಕ ಮಠ ಕರೆವಾಡಿಮಠದ ಉತ್ತರಾಧಿಕಾರಿಯಾದ ಮಂಜುನಾಥಯ್ಯ ದೇವರು ಪ್ರೊ.ನೆಲ್ಲಿಕಟ್ಟೆ ಎಸ್. ಸಿದ್ದೇಶ ಮಾರ್ಗದರ್ಶನದಲ್ಲಿ ಶಕ್ತಿವಿಶಿಷ್ಟಾದ್ವೈತ ಮತ್ತು ಹೊನ್ನಾಳಿ ಹಿರೇಕಲ್ಮಠ ಎಂಬ ಸಂಶೋಧನಾ ಮಹಾಪ್ರಬಂಧ ಮಂಡಿಸಿದ್ದಕ್ಕಾಗಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದ 35ನೇ ಘಟಿಕೋತ್ಸವದಲ್ಲಿ ಕರ್ನಾಟಕ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದರು. ಪ್ರೊ.ನೆಲ್ಲಿಕಟ್ಟೆ ಎಸ್.ಸಿದ್ದೇಶ ಮಾರ್ಗದರ್ಶನ ಮಾಡಿದರು. ಕುಲಪತಿ ಪ್ರೊ. ಶರತ ಅನಂತಮೂರ್ತಿ ಸೇರಿದಂತೆ ಅನೇಕರಿದ್ದರು.

ಪಕ್ಷಿಗಳಿಗೆ ನೀರಿನ ತೊಟ್ಟಿ ಇಡುವ ಕಾರ್ಯಕ್ರಮ ಇಂದು

ಮುಂಡರಗಿ: ಇಲ್ಲಿಯ ಸ್ವಾಮಿ ವಿವೇಕಾನಂದ ಶಾಲೆ ಆವರಣದಲ್ಲಿರುವ 60ಕ್ಕೂ ಹೆಚ್ಚು ಗಿಡಗಳಿಗೆ ಬೇಸಿಗೆ ನಿಮಿತ್ತ ಪ್ರಾಣಿ–ಪಕ್ಷಿಗಳಿಗೆ ಕುಡಿಯುವ ನೀರಿನ ಅನುಕೂಲತೆಗಾಗಿ ನೀರು ತುಂಬಿದ ತೊಟ್ಟೆಗಳನ್ನು ಕಟ್ಟಿ, ಅಲ್ಲಿಯೇ ಕಾಳು ಇಡುವ ಕಾರ್ಯಕ್ರಮ ಮೇ 7ರಂದು ಬೆಳಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ.ಮುಖ್ಯ ಅತಿಥಿಗಳಾಗಿ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಈಶ್ವರಪ್ಪ ಹಂಚಿನಾಳ, ಶಿಂಗಟಾಲೂರ ವೀರಭದ್ರೇಶ್ವರ ಟ್ರಸ್ಟ್ ಕಮಿಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ, ಆರ್‌ಎಫ್‌ಒ ಮಂಜುನಾಥ ಮೇಗಳಮನಿ, ಶೇಖರಗೌಡ ಪಾಟೀಲ, ಸಿ.ಎಸ್.ಅರಸನಾಳ, ದೇವರಡ್ಡಿ ಇಮ್ರಾಪೂರ, ಗುಡದೀರಪ್ಪ ಲಿಂಗಶೆಟ್ಟರ ಭಾಗವಹಿಸಿ ಮಕ್ಕಳಿಗೆ ತಿಳುವಳಿಕೆ ನೀಡುವರು. ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಮಗ್ರ ರೈತ ಸಂಘಟನೆಗಳ ಒಕ್ಕೂಟದಿಂದ ಸಭೆ



ಲಕ್ಷ್ಮೇಶ್ವರ: ಸಮಗ್ರ ರೈತ ಸಂಘಟನೆಗಳ ಒಕ್ಕೂಟದಿಂದ ಮೇ 8ರಂದು ಮದ್ಯಾಹ್ನ 12ಕ್ಕೆ ಪಟ್ಟಣದ ಕೆಂಚಲಾಪುರ ಓಣಿ ಮಾಗಡಿ ಇಂಡಸ್ಟ್ರೀಜ್‌ನಲ್ಲಿ ರೈತರ ವಿವಿಧ ಬೇಡಿಕೆ, ಸಮಸ್ಯೆಗಳ ಕುರಿತು ಚರ್ಚಿಸಲು ಸಮಾಲೋಚನ ಸಭೆ ಕರೆಯಲಾಗಿದೆ. ರೈತ ಸಂಘಟನೆಗಳು, ರೈತರ ಮುಖಂಡರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಒಕ್ಕೂಟದ ಅಧ್ಯಕ್ಷ ಮಂಜುನಾಥ ಮಾಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಭೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ರಾಸಾಯನಿಕ ಗೊಬ್ಬರಗಳ ಕೊರತೆ ಹಾಗೂ ತಂತ್ರಾಂಶದ (ಎಫ್‌ಐಡಿ) ಮುಖಾಂತರ ಗೊಬ್ಬರ ವಿತರಣಾದಿದರಿಂದಾಗು ಸಮಸ್ಯೆ, 2025–26 ನೇ ಸಾಲಿನ ಮುಂಗಾರು ಹಂಗಾಮಿನ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಬೆಳೆವಿಮೆ ರೈತರ ಖಾತೆಗೆ ಜಮೆಯಾಗದಿರುವ ಕುರಿತು, ಹಿಂಗಾರು ಹಂಗಾಮಿನಲ್ಲಿ ಬೆಂಬಲ ಬೆಲೆಯಡಿ ಕಡೆಲ ಮಾರಾಟ ಮಾಡಿದ ರೈತರಿಗೆ ಹಣ ಜಮೆಯಾಗದಿರುವುದು, ಕೃಷಿ ಇಲಾಖೆಯಿಂದ ಸಕಾಲಕ್ಕೆ ಸಹಾಯಧನದಡಿ ಬಿತ್ತನೆ ಬೀಜ, ಕೃಷಿ ಪರಿಕರಗಳ ಸೌಲಭ್ಯ ಇತರೇ ಸಮಸ್ಯೆಗಳ ಕುರಿತು ಚರ್ಚಿಸಿ ಸರ್ಕಾರದ ಗಮನ ಸೆಳೆಯುವ ಬಗ್ಗೆ ನಿರ್ಧರಿಸಲಾಗುವುದು. ಇದಕ್ಕೆ ಎಲ್ಲ ರೈತರ ಸಹಕಾರ ಅಗತ್ಯವಾಗಿದೆ ಎಂದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2412-5710
ಉದ್ದಿನಕಾಳು	5714-5714
ಅಜವಾನ	10320-10320
ಅಲಸಂದಿ	3412-6056
ಹತ್ತಿ	7200-7200
ಹೆಸರುಕಾಳು	2007-8015
ಗೆಜ್ಜಿ ಶೇಂಗಾ	4911-6864
ಹುರುಳಿಕಾಳು	3798-3798
ಜೋಳ	1633-4521
ಮೆಕ್ಕೆಜೋಳ	1212-1609
ನವಣೆ	2909-2909
ಕುಸುಬಿ	3900-5326
ಸೂರ್ಯಕಾಂತಿ	5869-6619
ತೊಗರಿ	4044-5314
ಗೋಧಿ	1802-6525



ಗದಗ: ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ, ಎಸ್ ಐ ಆರ್ ಜಾಗೃತಿ ಅಭಿಯಾನದ ಪಕ್ಷದ ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ ಅಕಾಲಿಕ ನಿಧನರಾದ ಹಿನ್ನೆಲೆಯಲ್ಲಿ ಗದಗ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೌನಾಚರಣೆ ಮಾಡಲಾಯಿತು. ಶಾಸಕ ಸಿ.ಸಿ. ಪಾಟೀಲ, ಜಿಲ್ಲಾ ಅಧ್ಯಕ್ಷ ರಾಜಣ್ಣ ಕುರಡಗಿ, ಪದಾಧಿಕಾರಿಗಳು, ಪ್ರಮುಖರು, ಕಾರ್ಯಕರ್ತರು ಸೇರಿ ಅಗಲಿದ ಜಗದೀಶ ಹಿರೇಮನಿ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಇಂದು ಧರ್ಮ ಜಾಗೃತಿ ಸಮಾವೇಶ, ಇಷ್ಟಲಿಂಗ ಪೂಜೆ

ಲಕ್ಷ್ಮೇಶ್ವರ: ಪಟ್ಟಣದ ಐತಿಹಾಸಿಕ ಹಿನ್ನಲೆಯುಳ್ಳ ಲಕ್ಷಾಪತಿ ಹಾಲೇವಾಡಿಮಠದಲ್ಲಿನ ಜಗದ್ಗುರು ರೇಣುಕಾಚಾರ್ಯ ಮಂದಿರದ ರಜತ ಮಹೋತ್ಸವ, ರೇಣುಕಾಚಾರ್ಯರ ಯುಗಮಾನೋತ್ಸವ, ಮಠದ ವಂಶಜರ ಸ್ಮರಣೆ, ಗದ್ದುಗೆಗಳ ಅನಾವರಣ ಹಾಗೂ ಧರ್ಮ ಜಾಗೃತಿ ಸಮಾವೇಶ ಮೇ.7ರಂದು ಬಾಳೇಹೊನ್ನೂರಿನ ಶ್ರೀ ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ನಡೆಯಲಿದೆ.

ಬೆಳಿಗ್ಗೆ 9ಕ್ಕೆ ಬಾಳೇಹೊನ್ನೂರಿನ ಡಾ.ವೀರಸೋಮೇಶ್ವರ ಜಗದ್ಗುರುಗಳ ಸಾನಿಧ್ಯದಲ್ಲಿ ಶ್ರೀಮಠದಲ್ಲಿ ಇಷ್ಟಲಿಂಗ ಮಹಾಪೂಜೆ ನೇರವೇರಲಿದೆ. ನಂತರ ಬೆಳಿಗ್ಗೆ 11ಕ್ಕೆ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಿನ್ನಲೆ ರೇಣುಕರ ಮಂಗಲ ಮಹಾಮೂರ್ತಿ ಮತ್ತು ಜಗಜ್ಯೋತಿ ಬಸವಣ್ಣನವರ ಭಾವಚಿತ್ರದ ಮೆರವಣಿಗೆ ಹಾಲೇವಾಡಿಮಠದಿಂದ ಪಟ್ಟಣದ ಪ್ರಮುಖ ಮಾರ್ಗದಲ್ಲಿ ಸಕಲ ವಾದ್ಯಮೇಳದೊಂದಿಗೆ ನೆರವೇರಲಿದೆ. ಸಂಜೆ 4ಕ್ಕೆ ಶ್ರೀ ಸೋಮೇಶ್ವರ ತೇರಿನ ಮನೆ ಆವರಣದಲ್ಲಿ ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ಧರ್ಮ ಜಾಗೃತಿ ಸಮಾರಂಭ ನಡೆಯಲಿದೆ. ಮುಕ್ತಿಮಂದಿರದ ಶ್ರೀ ವಿಮಲರೇಣುಕ ವೀರಮುಕ್ತಿ ಮುನಿ ಶಿವಾಚಾರ್ಯರು, ಸಮ್ಮುಖವನ್ನು ನೊಣವಿನಕೇರಿಯ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗಿ ಶಿವಾಚಾರ್ಯರು, ಬನ್ನಿಕೊಪ್ಪ, ಗಂಜಿಗಟ್ಟಿ, ಸಿದ್ದರಬೆಟ್ಟ, ಕರೇವಾಡಿಮಠ ಸೇರಿ ವಿವಿಧ ಮಠಾಧೀಶರು ಉಪಸ್ಥಿತರಿರುವರು. ಶಾಸಕ ಡಾ.ಚಂದ್ರು ಲಮಾಣಿ ಅಧ್ಯಕ್ಷತೆ ವಹಿಸುವರು. ಉದ್ಘಾಟನೆಯನ್ನು ಸಂಸದ ಬಸವರಾಜ ಬೊಮ್ಮಾಯಿ ನೆರವೇರಿಸುವರು. ಮಾಜಿ ಶಾಸಕರುಗಳಾದ ಜಿ.ಎಂ ಮಹಾಂತಶೆಟ್ಟರ, ಜಿ.ಎಸ್ ಗಡ್ಡದೇವರಮಠ ಭಾವಚಿತ್ರ ಬಿಡುಗಡೆಗೊಳಿಸುವರು. ಡಾ. ಸಿದ್ದಲಿಂಗೇಶ ಸಜ್ಜನಶೆಟ್ಟರ ಉಪನ್ಯಾಸ ನೀಡುವರು.



ಗದಗ: ನಗರದ ಪಶುವೈದ್ಯಕೀಯ ಕಾಲೇಜಿನಲ್ಲಿ ಪಶುವೈದ್ಯಕೀಯ ಕಾಲೇಜುಗಳ ಪ್ರಾಧ್ಯಾಪಕರ ಸಂಘಟನೆಯವರು ನಡೆಸುತ್ತಿರುವ ಪ್ರತಿಭಟನೆಗೆ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಬೆಂಬಲ ವ್ಯಕ್ತಪಡಿಸಿದರು. ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ರಾಮಚಂದ್ರ ಹಾಗೂ ಕರ್ನಾಟಕ ಚಿತ್ರಕಲಾ ಮಹಾವಿದ್ಯಾಲಯಗಳ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಾ. ಬಿ.ಎಲ್.ಚವ್ಹಾಣ ಇದ್ದರು.

ಬಿಸಿಲಿನಿಂದ ಪಾರಾಗಲು ಮರದ ನೆರಳೇ ಆಸರೆ

ಸೀತಲ ಓಲೇಕಾರ

ಗಜೇಂದ್ರಗಡ: ವಾಣಿಜ್ಯ ನಗರಿ ಖ್ಯಾತಿಯ ಗಜೇಂದ್ರಗಡ ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಬಿಸಿಲ ಧಗೆ ಹೆಚ್ಚುತ್ತಿದ್ದು, ನಗರ ಪ್ರದೇಶದ ಜನರು ರಸ್ತೆಯ ಅಕ್ಕಪಕ್ಕದ ಮರದ ನೆರಳಿನ ಆಸರೆ ಪಡೆಯುತ್ತಿದ್ದಾರೆ.

ಗಜೇಂದ್ರಗಡ ಪಟ್ಟಣದಲ್ಲಿ ದಿನದಿಂದ ದಿನಕ್ಕೆ 30ರಿಂದ 39ಡಿಗ್ರಿ ಸೆ. ಆಸುಪಾಸು ಬಿಸಿಲಿನ ತಾಪಮಾನ ಬದಲಾಗುತ್ತಿದ್ದು ಮನೆಯಲ್ಲಿ ಫ್ಯಾನಿಲ್ಲದೇ ಕುಳಿತುಕೊಳ್ಳುವುದು ಕಷ್ಟ, ಜನರು ಮರ ಹುಡುಕಿಕೊಂಡು ಬರುತ್ತಿದ್ದಾರೆ. ನಗರಕ್ಕೆ ಸುತ್ತಮುತ್ತಲಿನ ಜನತೆ ಬಟ್ಟೆ, ವಿವಿಧ ವಸ್ತುಗಳು ಖರೀದಿ ಮಾಡಲು ಆಗಮಿಸುತ್ತಾರೆ. ಆದರೆ ಅವರಿಗೆ ಬಿಸಿಲಿನ ಶಾಖ ತಟ್ಟಿದ್ದು, ಸಾರ್ವಜನಿಕರು ನೆರಳಿನ ಆಸರೆಯತ್ತ ಮುಖವಾಡಿದ್ದು, ನಗರದಲ್ಲಿ ಜೋಡು ರಸ್ತೆಯಲ್ಲಿ ನೆಟ್ಟ ಗಿಡಗಳು ಗ್ರಾಹಕರಿಗೆ ಕೊಟ್ಟ ಆರಾಮದಾಯಕ ಅನುಭವ ನೀಡುತ್ತಿವೆ.

ಇಂತಹ ಉತ್ತಮ ಪರಿಸರ ವಾತವರಣ ಜೋಡು ರಸ್ತೆಯಲ್ಲಿನ ಅಂಗಡಿಗಳ ಮಾಲೀಕರು, ಬೀದಿಬದಿಯಲ್ಲಿನ ವ್ಯಾಪಾರಿಗಳು ಕಾಪಾಡಿಕೊಂಡು ಉಳಿಸಿಕೊಂಡು ಹೋದ ಪಕ್ಷದಲ್ಲಿ ಅಂಗಡಿಗಳ ಸುತ್ತಮುತ್ತಲೂ ಉತ್ತಮ ಪರಿಸರ ನಿರ್ಮಾಣವಾಗುತ್ತದೆ ಎಂದು ಪರಿಸರವಾದಗಳ ಇಚ್ಛೆ.

ಸಸಿಗಳು ಗಿಡಗಳಾಗಿ ಬೆಳೆಯಲು ಸಾರ್ವಜನಿಕರು ಮಾತ್ರವಲ್ಲದೆ, ಅಧಿಕಾರದಲ್ಲಿನ ಜನಪತ್ರಿನಿಧಿಗಳು, ತಾಲೂಕಾ ಆಡಳಿತ, ಪುರಸಭೆ ಸಹಯೋಗ ಇದ್ದಲ್ಲಿ ಕೋಟೆನಾಡಿನಲ್ಲಿನ ರಸ್ತೆಯ ಪಕ್ಕದ ಹಸಿರಿನ ವಾತಾವರಣವು ಬೇರೊಂದು ತಾಲೂಕಿಗೆ ಮಾದರಿಯಾಗಿರುವುದು ಯಾವುದೇ ಸಂದೇಹವಿಲ್ಲ.

ಸಮೀಪದ ಗೋಗೇರಿ, ರಾಜೂರು, ರಾಂಪೂರ, ಕುಟೋಜಿ ಗ್ರಾಪಂ ವ್ಯಾಪ್ತಿಯಲ್ಲಿನ ಮುಂತಾದ ಗ್ರಾಮಗಳಲ್ಲಿ ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ಬೇವಿನಮರ, ಆಲದಮರ, ಅರಳೆ ಮರ ಸೇರಿದಂತೆ ಇನ್ನಿತರ ಮರಗಳ ಅಡಿ ಸಂಜೆವರೆಗೂ ಜನರು ಕುಳಿತುಕೊಳ್ಳುತ್ತಿದ್ದಾರೆ.



> ಈ ಹಿಂದೆ ಸಸಿಗಳನ್ನು ನೆಟ್ಟಾಗ ನಮ್ಮ ಸಿಬ್ಬಂದಿಗಳು ಅವುಗಳಿಗೆ ನೀರುಣಿಸುವ ಮೂಲಕ ಬೆಳೆಸುವಲ್ಲಿ ಶ್ರಮಿಸಿದ್ದಾರೆ. ಸಸಿಗಳು ಬೆಳೆದು ಮರಗಳಾಗಿದ್ದು, ಅವುಗಳನ್ನು ಕಾಪಾಡಲು ಪುರಸಭೆ ಜೊತೆಗೆ ಸಾರ್ವಜನಿಕರು ಸಹ ಕೈಜೋಡಿಸಬೇಕಿದೆ.
> ■ ಬಸವರಾಜ ಬಳಗಾನೂರ, ಗಜೇಂದ್ರಗಡ ಪುರಸಭೆ ಮುಖ್ಯಾಧಿಕಾರಿ.

> ಈ ಹಿಂದೆ ಮಾಜಿ ಶಾಸಕ ಕಳಕಪ್ಪ ಬಂಡಿ ಜೋಡುರಸ್ತೆ ಪಕ್ಕದಲ್ಲಿ ಸಸಿ ನೆಟ್ಟಾಗ ಅನೇಕರು ಇವುಗಳು ಬೆಳೆದು ಪ್ರಯಾಣಿಕರಿಗೆ ತೊಂದರೆಯುಂಟು ಮಾಡುತ್ತವೆ ಎಂದಿದ್ದರು. ಆದರೆ ಆ ಸಸಿಗಳು ಈಗ ಜನರಿಗೆ ವಿಶ್ರಾಂತಿ ಪಡೆಯುವ ತಾಣವಾಗಿದೆ. ಈ ಮರಗಳನ್ನುಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ.
> ■ ರಾಜೇಂದ್ರ ಘೋರ್ಪಡೆ, ಬಿಜೆಪಿ ನಗರ ಘಟಕದ ಅಧ್ಯಕ್ಷ

ಪಿಡಿಒ ಆತ್ಮಹತ್ಯೆ ಪ್ರಕರಣ: ತನಿಖೆಗೆ ಆಗ್ರಹ

ಗದಗ: ರೋಣ ತಾಲೂಕಿನ ಅಸೂಟಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿಡಿಒ ಮುಕ್ತುಮ್ ಹುಸೇನ ಆತ್ಮಹತ್ಯೆ ಪ್ರಕರಣ ಸಮಗ್ರ ಹಾಗೂ ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಂಘದ ಸದಸ್ಯರು ಹಾಗೂ ಆರ್.ಡಿ.ಪಿ.ಆರ್ ವೃಂದ ಸಂಘಗಳ ಪದಾಧಿಕಾರಿಗಳು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಅಧ್ಯಕ್ಷ ರಿಯಾಜ ಕೆ. ಮಾತನಾಡಿ, ಪಿಡಿಒಗಳ ಮೇಲೆ ದಿನದಿಂದ ದಿನಕ್ಕೆ ಕೆಲಸದ ಒತ್ತಡ ಹೆಚ್ಚುತ್ತಿದ್ದು, ಮೇಲಧಿಕಾರಿಗಳ ಅನಾವಶ್ಯಕ ಹಸ್ತಕ್ಷೇಪ ಹಾಗೂ ಆಡಳಿತಾತ್ಮಕ ಒತ್ತಡದಿಂದ ಅಧಿಕಾರಿಗಳು ಮಾನಸಿಕವಾಗಿ ಕುಗ್ಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಇದೇ ರೀತಿಯ ಒತ್ತಡಗಳು ಮುಕ್ತುಮ್ ಹುಸೇನ ಅವರ ಆತ್ಮಹತ್ಯೆಗೆ ಕಾರಣವಾಗಿರಬಹುದೆಂಬ ಅನುಮಾನ ವ್ಯಕ್ತಪಡಿಸಿದ ಅವರು, ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸಂಪೂರ್ಣ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಘಟನೆಗೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮೃತರ ಕುಟುಂಬಕ್ಕೆ ತಕ್ಷಣ ನ್ಯಾಯ ಒದಗಿಸಿ ಸಮರ್ಪಕ ಪರಿಹಾರ ಧನ ನೀಡಬೇಕು. ಜೊತೆಗೆ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ನೀಡುವ ಮೂಲಕ ಆರ್ಥಿಕ ಭದ್ರತೆ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಪಿಡಿಒಗಳ ಮೇಲೆ ಇರುವ ಅತಿಯಾದ ಕೆಲಸದ ಒತ್ತಡವನ್ನು ಕಡಿಮೆ ಮಾಡುವ ಕ್ರಮಗಳನ್ನು ಸರ್ಕಾರ ಜಾರಿಗೆ ತರಬೇಕು. ಕೆಲಸದ ಸಮಯ, ಹೊಣೆಗಾರಿಕೆ ಹಾಗೂ ಆಡಳಿತಾತ್ಮಕ ನಿಯಮಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಬೇಕು. ಜೊತೆಗೆ ಪಿಡಿಒಗಳಿಗೆ ಭದ್ರತೆ ಹಾಗೂ ಮಾನಸಿಕ ಬೆಂಬಲ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಮೇಲಧಿಕಾರಿಗಳ ಅನಾವಶ್ಯಕ ಹಸ್ತಕ್ಷೇಪವನ್ನು ನಿಯಂತ್ರಿಸಿ ಪಿಡಿಒಗಳಿಗೆ ಸೇವಾ ಸ್ವಾಯತ್ತತೆ ನೀಡುವ ಮೂಲಕ ಉತ್ತಮ ಕಾರ್ಯ ವಾತಾವರಣ ನಿರ್ಮಿಸಬೇಕೆಂದು ಸಂಘದ ಮುಖಂಡರು ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪಿಡಿಒಗಳ ಸೇವಾ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ ಅವರು, ನ್ಯಾಯಕ್ಕಾಗಿ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ವಿವಿಧ ತಾಲೂಕುಗಳಿಂದ ಆಗಮಿಸಿದ್ದ ಪಿಡಿಒಗಳು, ಕಾರ್ಯದರ್ಶಿಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.



ಮಹನೀಯರ ಕೊಡುಗೆ ಸ್ಮರಿಸೋಣ: ದೇವರಡ್ಡಿ



ಮುಂಡರಗಿ: ಕನ್ನಡ ಸಾಹಿತ್ಯ ಪರಿಷತ್ ಸಾಹಿತ್ಯ ಸಮ್ಮೇಳನ ಮಾಡುವ ಮೂಲಕ ಅನೇಕ ಕವಿಗಳಿಗೆ, ಸಾಹಿತಿಗಳಿಗೆ ಸದಾ ಪ್ರೋತ್ಸಾಹ ನೀಡುವ ಕಾರ್ಯ ಮಾಡುತ್ತಾ ಬಂದಿದೆ. 1915 ಮೇ 5ರಂದು ಮೈಸೂರಿನ ಶಂಕರಪೂರ ಬಡಾವಣೆ ಒಂದು ಚಿಕ್ಕ ಕೊಠಡಿಯಲ್ಲಿ ಪ್ರಾರಂಭವಾಗಿ ಕರ್ನಾಟಕ ಸಾಹಿತ್ಯ ಪರಿಷತ್ ರೂಪಗೊಂಡು ನಂತರ ಕನ್ನಡ ಸಾಹಿತ್ಯ ಪರಿಷತ್ ಮರುನಾಮಕರಣವಾಗಿ 112 ನೇ ಸಂಸ್ಥಾಪನ ದಿನಾಚರಣೆ ಆಚರಿಸಿಕೊಳ್ಳುತ್ತಿದೆ. ಇದಕ್ಕೆ ಶ್ರಮಿಸಿದ ಮಹನೀಯರ ಕೊಡುಗೆ ನಾವೆಲ್ಲರೂ ಸ್ಮರಿಸೋಣ ಎಂದು ಶಿಕ್ಷಕ ರವಿ ದೇವರಡ್ಡಿ ಹೇಳಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕ ಹಾಗೂ ಕರಾ ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಇವುಗಳ ಆಶ್ರಯದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪಣಾ ದಿನಾಚರಣೆ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ದಾರಿ ಕುರಿತು ಉಪನ್ಯಾಸ ನೀಡಿದರು.

ಜ.ಅ.ವಿ. ಸಮಿತಿ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಉದ್ಘಾಟಿಸಿ ಮಾತನಾಡಿದರು.

ಅತಿಥಿಗಳಾಗಿಭಾಗವಹಿಸಿದಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾದರ ಅಣ್ಣಿಗೇರಿ ಮಾತನಾಡಿದರು.

ಕಸಾಪ ಅಧ್ಯಕ್ಷಎಂ.ಜಿ.ಗಚ್ಚಣ್ಣವರ ಮಾತನಾಡಿ, ಮುಂಡರಗಿ ಕಸಾಪ ಘಟಕದಿಂದ ಮೇ 7 ಮತ್ತು 8ರಂದು ಡಾ.ನಿಂಗು ಸೊಲಗಿಯವರ ಸಹಕಾರದಿಂದ ರಾಮೇನಹಳ್ಳಿ ಶಾಲೆಯಲ್ಲಿ ಮಕ್ಕಳ ಸಾಹಿತ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. ಸರ್ವರೂ ಇದರ ಸದುಪಯೋಗ ಪಡೆದುಕೊಳಲಿ ಎಂದರು.

ಕಾಶಿನಾಥ ಬಿಳಿಮಗ್ಗದ ಮಾತನಾಡಿದರು.

ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕನ್ನಡ ವಿಷಯಕ್ಕೆ 125 ಕ್ಕೆ 125 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಕಸಾಪ ಘಟಕದಿಂದ ಸನ್ಮಾನಿಸಿ ಪ್ರೋತ್ಸಾಹಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಮುಂಡರಗಿ ನಾಟ್ಯ ಬಿಂದು ಅಕಾಡಮಿ ಮಕ್ಕಳಿಂದ ನೃತ್ಯ ಕಾರ್ಯಕ್ರಮ ನಡೆಯಿತು. ಅಕಾಡಮಿ ಸಂಸ್ಥಾಪಕ ಚಂದ್ರು ಶಿರಿ ಅವರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

ಪ್ರಾಚಾರ್ಯ ಸಂತೋಷ ಹಿರೇಮಠ, ಡಾ.ನಿಂಗು ಸೊಲಗಿ, ಎನ್.ಎನ್.ಕಲಕೇರಿ, ಸುರೇಶ ಬಾವಿಹಳ್ಳಿ, ಕೃಷ್ಣಮೂರ್ತಿ ಸಾಹುಕಾರ, ಕಸಾಪ ಕಾರ್ಯಕಾರಣಿ ಸದಸ್ಯರು, ಕರಾ ಬೆಲ್ಲದ ಮಹಾವಿದ್ಯಾಲಯದ ಉಪನ್ಯಾಸಕರು, ಸಿಬ್ಬಂದಿಗಳ,ಕಾಲೇಜು ವಿದ್ಯಾರ್ಥಿಗಳು ಇದ್ದರು. ಹಿರಿಯ ಸಾಹಿತಿ ಶಂಕರ ಕೂಕನೂರ ಸೌಆಗತಿಸಿದರು. ಕಸಾಪ ಗೌರವ ಕಾರ್ಯದರ್ಶಿ ಮಂಜುನಾಥ ಮುಧೋಳ ಪ್ರಾಸ್ತಾವಿಸಿದರು. ಕನ್ನಡ ಪ್ರಾದ್ಯಾಪಕ ಡಾ.ಜೆ ಕುಮಾರ ನಿರೂಪಿಸಿ, ವಂದಿಸಿದರು.

ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ

ಲಕ್ಷ್ಮೇಶ್ವರ: ಕಾರ್ಮಿಕರಿಗೆ ಕೊಡುವ ಕಿಟ್ ಗುಣಮಟ್ಟದಿಂದ ಕೂಡಿಲ್ಲ ಅವುಗಳನ್ನು ವಿತರಣೆ ಮಾಡೋದು ದುರಾದೃಷ್ಟಕರ ವಿಷಯ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ತಾಪಂ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆಯಿಂದ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ, ಕಟ್ಟಡ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಿಸಿ, ಮಾತನಾಡಿದ ಅವರು, ಕಾರ್ಮಿಕರಿಗೆ ಕಿಟ್ ಒದಗಿಸುವ ಟೆಂಡರ್ ಗುತ್ತಿಗೆದಾರ ಕಳಪೆ ಗುಣಮಟ್ಟದ ಕಿಟ್ ಪೂರೈಸಿದ್ದಾರೆ. ಕಾರ್ಮಿಕರ ಸಂಘಟನೆಗಳ ಸದಸ್ಯರಿಗೆ ಈ ಬಗ್ಗೆ ಹೇಳಿದ. ಉತ್ತಮ ಗುಣಮಟ್ಟದ ಕಿಟ್ ಬಂದಾಗ ವಿತರಣೆ ಮಾಡೋಣ ಅಂತಾ ಈ ಬಗ್ಗೆ ಸರ್ಕಾರದ ಗಮನಕ್ಕೆ ತರೋಣ ಅಂತಾ, ಕಾರ್ಮಿಕರು ಮತ್ತೆ ಶಾಸಕರು ಕೊಟ್ಟಿಲ್ಲ ಎಂಬ ಆರೋಪ ನಮ್ಮ ಮೇಲೆ ಬೇಡ ಎಂದು ವಿತರಣೆ ಮಾಡಿದ್ದೇನೆ. ಕಳಪೆ ಗುಣಮಟ್ಟದ ಬಗ್ಗೆ ಕಾರ್ಮಿಕ ಸಂಘಟನೆಗಳು ಏನು ಕ್ರಮಕೈಗೊಳ್ಳುತ್ತಿರಿ ಕೈಗೊಳ್ಳಿ ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಗಮನ ಹರಿಸಬೇಕು ಎಂದರು.

ತಾಲೂಕಿನಲ್ಲಿ ಗೌಂಡಿ ಕಿಟ್ 202,ಎಲೆಕ್ಟ್ರಿಷಿಯನ್ 48, ಪ್ಲಂಬರ್, 15 ವೇಲ್ಡರ್, 11 ಪೇಂಟರ್, 48 ಕಾರಪೇಂಟರ್ 38 ಒಟ್ಟು 362ಕಿಟ್ ಫಲಾನುಭವಿಗಳಿಗೆ ವಿತರಣೆ ಮಾಡಲಾಗುತ್ತಿದೆ ಎಂದರು.

ಈ ವೇಳೆ ತಾಪಂ ಇಒ ಮಂಜುಳಾ ಹಕಾರಿ, ತಾಪಂ ಎಡಿ ಧರ್ಮರ ಕೃಷ್ಣಪ್ಪ, ಕಾರ್ಮಿಕರ ಇಲಾಖೆ ನಿರೀಕ್ಷಕ ಅಭಿನಂದನ ಕೌಟಕೊಪ್ಪ, ಡಿಇಒ ಶೋಭಾ ಸ್ವಾಮಿ, ರಾಣಿ ಪಾಟೀಲ್, ಕಟ್ಟಡ ಕಾರ್ಮಿಕರ ಸಂಘಟನೆ ಸದಸ್ಯರು ಅನೇಕ ಇದ್ದರು.



ಮೇ 17ರಂದು ಪ್ರತಿಭಾ ಪುರಸ್ಕಾರ



ಮುಂಡರಗಿ: ತಾಲೂಕಿನ ಹಾಲಮತ ಮಹಾಸಭಾ ಮತ್ತು ಕುರುಬರ ಸಂಘದ ಆಶ್ರಯದಲ್ಲಿ ಮೇ 17ರಂದು ಬೆಳಗ್ಗೆ 10.30 ಕ್ಕೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಎಲ್ಲ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗುವುದು ಎಂದು ಎರಡು ಘಟಕಗಳ ತಾಲೂಕಾ ಅಧ್ಯಕ್ಷ ಸುರೇಶ ಹಲವಾಗಲಿ ಮತ್ತು ಶ್ರೀನಿವಾಸ ಅಬ್ಬಿಗೇರಿ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮುಂಡರಗಿ ತಾಲೂಕಿನಲ್ಲಿ ಒಟ್ಟು 40 ಪ್ರೌಢಶಾಲೆಗಳಿದ್ದು, ಪ್ರತಿಶಾಲೆಗೆ ಪ್ರಥಮ ಸ್ಥಾನದಲ್ಲಿ ಪಾಸ್ ಆದ ಯಾವುದೇ ಸಮಾಜದ ವಿದ್ಯಾರ್ಥಿಯನ್ನು ಗುರುತಿಸಿ ಪುರಸ್ಕರಿಸಲಾಗುದು. ಪಿಯುಸಿಯಲ್ಲಿ ಪ್ರತಿ ಕಾಲೇಜಿನ ವಾಣಿಜ್ಯ, ವಿಜ್ಞಾನ ಮತ್ತು ಕಲಾ ವಿಭಾಗದಲ್ಲಿ ಪ್ರತ್ಯೇಕವಾಗಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸತ್ಕರಿಸಲಾಗುವುದು. ಕಳೆದ 2–3 ವರ್ಷದಿಂದ ಹಾಲಮತ ಮಹಾಸಭಾ ಮತ್ತು ಕುರುಬರ ಸಂಘ ಎಲ್ಲ ಸಮಾಜದ ಮಕ್ಕಳನ್ನು ಪುರಷ್ಕರಿಸುವ ಕಾರ್ಯಕ್ರಮ ಹಮ್ಮಿಕೊಂಡು ಜನಮನ್ನಣೆ ಪಡೆದುಕೊಂಡಿದೆ ಎಂದರು.

ಈ ಸಮಾರಂಭದಲ್ಲಿ ಒಟ್ಟು 50 ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸತ್ಕರಿಸಲಾಗುವುದು.

ಹಿರಿಯರಾದ ಶಿವನಗೌಡ ಗೌಡ್ರ ಮಾತನಾಡಿ, ಹೆಸರೂರಿನ ಭೀಮಾಂಬಿಕಾ ಮಠದ ಆವರಣದಲ್ಲಿ ನಡೆಯುವುದು. ಮಠದ ಧರ್ಮರ ಅಭಿಮನ್ಯಜ್ಜ ಅವರು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಆರ್‌ಟಿಒ ಬಸವಣ್ಣೆಪ್ಪ ಹರ್ತಿ, ಮಂಜುನಾಥ ಮೇಗಲಮನಿ, ರುದ್ರಣ್ಣ ಗುಳಗುಳಿ, ರಾಜು ಮೌರ್ಯ ಮುಂತಾದವರು ಭಾಗವಹಿಸುವರು.

ಹೆಚ್ಚಿನ ಮಾಹಿತಿಗೆ 9945439126, 9449252565, 9972253650 ಗೆ ಸಂಪರ್ಕಿಸಲು ವಿನಂತಿಸಲಾಯಿತು.

ಪತ್ರಿಕಾ ಗೋಷ್ಠಿಯಲ್ಲಿ ಚಿಕ್ಕಮಕ್ಕಳ ತಜ್ಞ ಡಾ.ಗೋಣೇಶ ಮೇವುಂಡಿ, ಜಗದೀಶ ಸಂಗಟಿ, ಪರಶುರಾಮ ತಿಗರಿ, ರಾಘವೇಂದ್ರ ಮುಂತಾದವರಿದ್ದರು.

ಮಕ್ಕಳ ಸಾಹಿತ್ಯ ನಿರ್ಲಕ್ಷ್ಯ ಸಲ್ಲ: ಡಾ.ರಾಜೇಂದ್ರ ಗಡಾದ

ಗದಗ: ಮಕ್ಕಳ ಮನೋವಿಕಾಸಕ್ಕೆ ಸಾಹಿತ್ಯ ಪೂರಕವಾದ್ದು, ಮಕ್ಕಳ ಸಾಹಿತ್ಯದ ಮಹತ್ವವರಿತು ಹಿರಿಯ ಸಾಹಿತಿಗಳು ಕೃತಿಗಳನ್ನು ರಚಿಸಿದ್ದಾರೆ. ಆದರೆ, ಇಂದು ಮಕ್ಕಳ ಸಾಹಿತ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ರಾಜೇಂದ್ರ ಗಡಾದ ತಿಳಿಸಿದರು.

ಜಿಲ್ಲಾ ಕಸಾಪ ವತಿಯಿಂದ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಜರುಗಿದ ಶಿಕ್ಷಕ ದಂಪತಿಗಳಾದ ಅನ್ನಪೂರ್ಣದೇವಿ ಹಾಗೂ ಸಿದ್ದಲಿಂಗಯ್ಯ ವಸ್ತ್ರದ ಅವರ ಸ್ಮರಣಾರ್ಥ ದತ್ತಿ ಉಪನ್ಯಾಸದಲ್ಲಿ ಮಾತನಾಡಿ, ಶಿಕ್ಷಕರು ಮಕ್ಕಳ ಜೊತೆಗೆ ಸದಾ ಸಾಂಗತ್ಯ ಹೊಂದಿರುವದರಿಂದ ಅವರ ಅಭಿರುಚಿ, ಆಸಕ್ತಿಗನುಗುಣವಾಗಿ ಸಾಹಿತ್ಯ ರಚಿಸಿ ಜೀವನ ಮೌಲ್ಯ ಬಿಂಬಿಸುವ ಕಾರ್ಯ ಮಾಡಿದ್ದಾರೆ. ಅನೇಕ ಕವಿಗಳು ಮಕ್ಕಳ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ ಎಂದರು.



ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳ ಸಾಹಿತ್ಯ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಪೂರಕ ಕಾರ್ಯಕ್ರಮ ರೂಪಿಸಬೇಕು. ಮಕ್ಕಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಬೇಕು ಎಂದರು.

ಶಿಕ್ಷಕ ಸಾಹಿತಿ ಡಾ.ರಾಮಚಂದ್ರ ಹಂಸನೂರ ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಪಠ್ಯ ಕಲಿಕೆ ಜೊತೆಗೆ ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಬೇಕು ಎಂದರು.

ಸಾಹಿತಿ ಚಂದ್ರಶೇಖರ ವಸ್ತ್ರದ ಮಾತನಾಡಿ, ಆದರ್ಶ ಶಿಕ್ಷಕ ದಂಪತಿ ಸಿದ್ದಲಿಂಗಯ್ಯ, ಅನ್ನಪೂರ್ಣದೇವಿ ವಸ್ತ್ರದ ದಂಪತಿಗಳು ಶಿಸ್ತು, ಸಮಯ ಪ್ರಜ್ಞೆಗೆ ಮಾದರಿ. ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ರೂಪಿಸಿದರು ಎಂದರು.

ಚಿನ್ನಮ್ಮ ವಸ್ತ್ರದ, ಕೆ.ಎಚ್ .ಬೇಲೂರ, ಅನ್ನದಾನಿ ಹಿರೇಮಠ, ಸಿ.ಕೆ.ಎಚ್.ಕಡಣಿ ಶಾಸ್ತ್ರಿ, ಅಂದಾನೆಪ್ಪ ವಿಭೂತಿ, ಕ್ಷಮಾ ವಸ್ತ್ರದ, ವಿನಯ ವಸ್ತ್ರದ, ಬಸವರಾಜ ಗಿರಿತಿಮ್ಮಣ್ಣವರ, ಬಿ.ಬಿ.ಹೊಳಗುಂದಿ, ಸಿ.ಎಂ. ಮಾರನಬಸರಿ, ಎಂ.ಎಫ್.ಡೋಣಿ, ರತ್ನಕ್ಕ ಪಾಟೀಲ, ಭಾರತಿ ಕೋಟಿ, ಮೋಹನ ಕೋಟಿ, ಎಸ್.ಯು. ಸಜ್ಜನಶೆಟ್ಟರ, ರಶ್ಮಿ ಅಂಗಡಿ, ಈರಣ್ಣ ಮಣಕವಾಡ, ಅಶೋಕ ಸತ್ಯರೆಡ್ಡಿ, ಅಶೋಕ ಬರಗುಂಡಿ, ಬೂದೇಶ ಮಜ್ಜಿಗುಡ್ಡ, ಡಿ.ಜಿ.ಕುಲಕರ್ಣಿ, ಎಸ್.ಪಿ.ಹೊಂಬಳ, ಜೆ.ಎ.ಪಾಟೀಲ ರೇಣುಕಾ ಹಂಸನೂರ, ಕಿರಣ ಬಡಿಗೇರ, ಬಸವರಾಜ ವಾರಿ, ಸಮರ್ಥ ಹಂಸನೂರ, ಶೇಖಣ್ಣ ಕಳಸಾಪೂರ, ಬೂದಪ್ಪ ಅಂಗಡಿ, ಮಾಲತೇಶಗೌಡ ಪಟೇಲ, ಅನಂತ ಮೋಹನ ಭಟ್, ಶಶಿಧರ ರೇಶ್ಮೆ, ಶಿವಾಜಿ ಕಾಂಬಳೇಕರ ಇದ್ದರು. ರಕ್ಷಿತಾ ಗಿಡ್ನಂದಿ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ರಾಹುಲ ಗಿಡ್ನಂದಿ ವಂದಿಸಿದರು.

ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

ಗಜೇಂದ್ರಗಡ: ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದ ವತಿಯಿಂದ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಾಹಿತ್ಯ ಸಂಸ್ಕೃತಿ ಸಂವರ್ಧನೆ ಕನ್ನಡ ಸಾಹಿತ್ಯ ಪರಿಷತ್ ಉಪನ್ಯಾಸ ಕಾರ್ಯಕ್ರಮ ನಗರದ ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಬುಧವಾರ ನಡೆಯಿತು.

ಸಾಹಿತ್ಯ ಸಂಸ್ಕೃತಿ, ಸಂವರ್ಧನೆ ಕನ್ನಡ ಸಾಹಿತ್ಯ ಪರಿಷತ್ ಎಂಬ ವಿಷಯ ಕುರಿತು ಉಪನ್ಯಾಸಕ ಅರವಿಂದ್ ವಡ್ಡರ್ ಉಪನ್ಯಾಸ ನೀಡಿದರು.

ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಅಮರೇಶ್ ಗಾಣಿಗೆ ಅಧ್ಯಕ್ಷತೆ ವಹಿಸಿದರು.

ಈ ವೇಳೆ ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಹಾಗೂ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂತರಾವ ಗಾರಗಿ, ಬಸಯ್ಯ ಹಿರೇಮಠ ಪುಂಡಲೀಕ ಕಲ್ಲಿಗನೂರ, ಬಿ.ಟಿ.ಹೊಸಮನಿ, ಎಫ್.ಎಚ್.ಡಾಲಯತ, ಎಸ್. ಎಸ್.ನರೇಗಲ್ಲ, ಎಂ.ಎ.ಮಳಗಾವಿ ಸೇರಿದಂತೆ ಅನೇಕರು ಇದ್ದರು.



ಧರ್ಮದ ನುಡಿ ಬೆಂಕಿಯ ಕಿಡಿ ನಾಟಕ ಪ್ರದರ್ಶನ ಮೇ 11ಕ್ಕೆ

ನರೇಗಲ್ಲ: ಇಲ್ಲಿನ ಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಕಟ್ಟಿಬಸವೇಶ್ವರ ನಾಟ್ಯ ಸಂಘ ವತಿಯಿಂದ ಹಜರತ್ ರಹಿಮಾನ್ ಶಾವಲಿ ಶರಣರ ಉರುಸಿನ ಅಂಗವಾಗಿ ಬೃಹತ್ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಮೇ 11,ಸೋಮವಾರದಂದು ರಾತ್ರಿ 10ಕ್ಕೆ ಹಿರೇಬೂದಿಹಾಳದ ಡಿ.ಆರ್. ಪೂಜಾರ ವಿರಚಿತ ಧರ್ಮದ ನುಡಿ ಬೆಂಕಿಯ ಕಿಡಿ ಅರ್ಥಾತ್ ಅನಾಥ ಕಟ್ಟಿದ ಅರಿಶಿಣದ ತಾಳಿ ಎಂಬ ಸಾಮಾಜಿಕ ಕ್ರಾಂತಿಕಾರಿ ಹಾಗೂ ಹಾಸ್ಯಭರಿತ ನಾಟಕವು ಅತ್ಯಂತ ವೈಭವದಿಂದ ಜರುಗಲಿದೆ. ಹಿರೇಮಠದ ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯರು, ಹಜರತ್ ಮಂಜೂರ ಹುಸೇನ ಶಾವಲಿ ದರ್ಗಾದ ಶರಣರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ನಿವೃತ್ತ ಶಿಕ್ಷಕ ಮಲ್ಲನಗೌಡ ನಿಂ.ಪಾಯಪ್ಪಗೌಡ್ರ ಅಧ್ಯಕ್ಷತೆ ವಹಿಸುವರು.

ಗುರು ಪುಟ್ಟರಾಜ ಮೆಲೋಡೀಸ್ ಮತ್ತು ಶಬ್ಬರ ನಾಯಕ ಬಾದಾಮಿ ತಂಡದಿಂದ ಸುಶ್ರಾವ್ಯ ಸಂಗೀತ ಹಾಗೂ ಗಾಯನವಿರಲಿದೆ.

ಆಧುನಿಕ ವಿದ್ಯುತ್ ದೀಪಾಲಂಕಾರ ಮತ್ತು ಭವ್ಯ ರಂಗಸಜ್ಜಿಕೆಯೊಂದಿಗೆ ಸ್ಥಳೀಯ ಹಾಗೂ ಸುತ್ತಮುತ್ತಲಿನ ಪ್ರತಿಭಾನ್ವಿತ ಕಲಾವಿದರು ಈ ನಾಟಕದಲ್ಲಿ ಅಭಿನಯಿಸಲಿದ್ದಾರೆ. ಮಾಲೀಕರಾದ ಮಲ್ಲನಗೌಡ ಪಾಯಪ್ಪಗೌಡರ ಮತ್ತು ಪರಪ್ಪ ಬೆಡಗಲ್ಲ ಉಮೇಶ ಸಂಗನಾಳಮಠ ಪಪಂ ಮಾಜಿ ಅಧ್ಯಕ್ಷ ಕಲ್ಮೇಶ ತೊಂಡಿಹಾಳ ಮಹಾದೇವಪ್ಪ ಬೇವಿನಕಟ್ಟಿ ಮುಂತಾದವರು ಉಪಸ್ಥಿತಿ ಇರುವರು. ಕಲಾ ಅಭಿಮಾನಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸ ಬೇಕೆಂದು ಸಂಘಟಕರು ಕಟ್ಟಿಬಸವೇಶ್ವರ ಓಣಿಯ ಸಮಸ್ತ ಗುರು–ಹಿರಿಯರು, ಯುವ ಮಿತ್ರರು ಹಾಗೂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ 6 ಕೋಟಿ ಅನುದಾನ | ಬಡ ರೋಗಿಗಳಿಗೆ ಅನುಕೂಲ

ಕೆಎಂಸಿಆರ್‌ಐನಲ್ಲಿ ಮತ್ತೊಂದು ಸಿಟಿ ಸ್ಕ್ಯಾನ್ ಸೆಂಟರ್ ಸ್ಥಾಪನೆ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ನಗರದ ಕರ್ನಾಟಕ ವೈದ್ಯಕೀಯ ಕಾಲೇಜ್ ಹಾಗೂ ಸಂಶೋಧನಾ ಸಂಸ್ಥೆ (ಕೆಎಂಸಿಆರ್‌ಐ) ನಲ್ಲಿ ರೋಗಿಗಳ ಅನುಕೂಲಕ್ಕಾಗಿ ಮತ್ತೊಂದು ಸಿಟಿ ಸ್ಕ್ಯಾನ್ ಸೆಂಟರ್ ಸ್ಥಾಪಿಸಲಾಗಿದ್ದು, ಕಳೆದ ಎರಡು ವಾರದಿಂದ ರೋಗಿಗಳು ಇದರ ಸೌಲಭ್ಯ ಪಡೆಯುತ್ತಿದ್ದಾರೆ.

ರಾಜ್ಯ ಸರ್ಕಾರದ 6 ಕೋಟಿ ರೂ. ಅನುದಾನದಲ್ಲಿ ಕೆಎಂಸಿಆರ್‌ಐ ಆಸ್ಪತ್ರೆಯ ಹಳೇ ಕಟ್ಟಡದಲ್ಲಿ (102 ವಾರ್ಡ್‌ನಲ್ಲಿ) ಕೇಂದ್ರ ಸ್ಥಾಪಿಸಲಾಗಿದೆ. ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಕಳೆದ 12 ವರ್ಷದ ಹಿಂದೆ ಸಿಟಿ ಸ್ಕ್ಯಾನ್ ಸೆಂಟರ್ ಸ್ಥಾಪಿಸಲಾಗಿತ್ತು. ಇಷ್ಟು ವರ್ಷಗಳ ಕಾಲ ಬಡ ರೋಗಿಗಳಿಗೆ ಇದು ಆಧಾರವಾಗಿತ್ತು. ಹಳೆಯ ಯಂತ್ರಗಳಿರುವುದರಿಂದ ಪದೇ ಪದೆ ತಾಂತ್ರಿಕ ದೋಷಗಳು ಎದುರಾಗಿ ರೋಗಿಗಳಿಗೆ ಸಮಸ್ಯೆಯಾಗುತ್ತಿತ್ತು. ಇದನ್ನು ಪರಿಹರಿಸುವ ಉದ್ದೇಶದಿಂದ ಕೆಎಂಸಿಆರ್‌ಐ ಆಸ್ಪತ್ರೆಯ ಸಿಬ್ಬಂದಿ ಅತ್ಯಾಧುನಿಕ ಯಂತ್ರಗಳ ವಿವಿಧ ಸೌಲಭ್ಯಗಳ ಒಳಗೊಂಡ ಸಿಟಿ ಸ್ಕ್ಯಾನ್ ಸೆಂಟರ್ ಆರಂಭಿಸಿದೆ.

ವಿಳಂಬಕ್ಕೆ ಕಡಿವಾಣ: ನಗರದ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಬಡ ರೋಗಿಗಳು ಸಿಟಿ ಸ್ಕ್ಯಾನ್ ಮಾಡಿಸಲು ಕೆಲಸ ಕಾರ್ಯಗಳನ್ನು ಬಿಟ್ಟು ಮೂರು ನಾಲ್ಕು ದಿನ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಪ್ರತಿದಿನವೂ 100ಕ್ಕೂ ಹೆಚ್ಚು ಜನರು ಸಿಟಿ ಸ್ಕ್ಯಾನ್ ಸೆಂಟರ್ ಮುಂದೆ ನಿಲ್ಲುವಂತಾಗಿತ್ತು. ಅದರಲ್ಲಿ 20–30 ತುರ್ತು ಸಿಟಿ ಸ್ಕ್ಯಾನಿಂಗ್ ಸೌಲಭ್ಯ ಪಡೆಯುತ್ತಿದ್ದರು. ಇದು ರೋಗಿಗಳಿಗೆ ತೊಂದರೆಯಾಗುವುದರ ಜೊತೆಗೆ, ಬಡ ರೋಗಿಗಳು ಖಾಸಗಿ ಸ್ಕ್ಯಾನ್ ಸೆಂಟರ್ ಮೊರೆ ಹೋಗುವ ಅನಿವಾರ್ಯ ಎದುರಾಗಿತ್ತು. ರೋಗಿಗಳಿಗೆ ಎದುರಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕೆಎಂಸಿಆರ್‌ಐ ಆಸ್ಪತ್ರೆ ಮುಂದಾಗಿದೆ.

ಸಿಟಿ ಸ್ಕ್ಯಾನಿಂಗ್ ಮಾಡಿಸುವ ರೋಗಿಗಳು ಸಂಬಂಧಿಸಿದ ವೈದ್ಯರ ಶಿಫಾರಸು ಪತ್ರ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಕ್ಲಿನಿಕ್ ಹಿಸ್ಟರಿ ಪಡೆದು ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ನೋಂದಣಿ ಮಾಡಿಸಬೇಕು. ಬಿಪಿಎಲ್ ಕಾರ್ಡ್ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಉಚಿತ ಸೌಲಭ್ಯ ಸಿಗಲಿದೆ. ಇನ್ನೂ ಎಪಿಎಲ್ ಕಾರ್ಡ್‌ದಾರರಿಗೆ ಶೇ.50ರಷ್ಟು ದರ ನಿಗದಿ ಪಡಿಸಲಾಗಿದೆ.



> ಕೆಎಂಸಿಆರ್‌ಐ ಆಸ್ಪತ್ರೆಗೆ ಆಗಮಿಸುವ ರೋಗಿಗಳಿಗೆ ಸಿಟಿ ಸ್ಕ್ಯಾನಿಂಗ್ ಸೌಲಭ್ಯ ಒದಗಿಸುವುದು ವಿಳಂಬವಾಗುತ್ತಿತ್ತು. ಇದನ್ನು ಪರಿಹರಿಸಲು 6 ಕೋಟಿ ವೆಚ್ಚದಲ್ಲಿ ನೂತನ ಸ್ಕ್ಯಾನಿಂಗ್ ಸೆಂಟರ್ ಆರಂಭಿಸಲಾಗಿದೆ. ಬಡ ರೋಗಿಗಳು ಇದರ ಸೌಲಭ್ಯ ಪಡೆಯಲಿ.
> ■ **ಡಾ. ಈಶ್ವರ ಹಸಬಿ,** ವೈದ್ಯಕೀಯ ಅಧೀಕ್ಷಕ, ಕೆಎಂಸಿಆರ್‌ಐ

> ಸಿಟಿ ಸ್ಕ್ಯಾನ್ ಸೌಲ್ಯಭ ಪಡೆಯಲು ದಿನಗಟ್ಟಲೇ ಕಾಯಬೇಕಾದ ಅನಿವಾರ್ಯತೆ ಎದುರಾಗಿತ್ತು. ಈಗ ನೂತನ ಸೆಂಟರ್ ಆರಂಭಿಸಿದ್ದು, ತಕ್ಷಣ ಸೌಲಭ್ಯ ಸಿಗವ ಭರವಸೆ ಮೂಡಿದೆ.
> ■ **ಪ್ರಕಾಶ ಬಂಡಿವಾಡ,** ರೋಗಿ ಸಂಬಂಧಿ

ಕರ್ನಾಟಕ ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಗೆ (ಕೆಎಂಸಿಆರ್‌ಐ) ನಿತ್ಯನೂರಾರು ಬಡ ರೋಗಿಗಳು ಚಿಕಿತ್ಸೆ ಪಡೆಯಲು ಆಗಮಿಸುತ್ತಾರೆ. ಅದರಲ್ಲಿ 100ಕ್ಕೂ ಹೆಚ್ಚು ರೋಗಿಗಳಿಗೆ ಸಿಟಿ ಸ್ಕ್ಯಾನಿಂಗ್ ಸೌಲಭ್ಯ ಅವಶಕವಾಗಿದೆ. ರೋಗಿಗಳ ಗಂಟೆಗಟ್ಟಲೇ ಕಾಯಿಸದೆ ತಕ್ಷಣ ಸೌಲಭ್ಯ ಒದಗಿಸಲು ಮತ್ತೊಂದು ಸಿಟಿ ಸ್ಕ್ಯಾನ್ ಸೆಂಟರ್ ಆರಂಭಿಸಲಾಗಿದೆ ಎಂದು ಕೆಎಂಸಿಆರ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಈಶ್ವರ ಹಸಬಿ ತಿಳಿಸಿದರು.

ಜಿಮ್ಸ್ ಆಸ್ಪತ್ರೆಯಲ್ಲಿ ಸನ್ ಸ್ಟ್ರೋಕ್‌ಗೆ ಪ್ರತ್ಯೇಕ ವಾರ್ಡ್

ಬಿಸಿಲಿನ ತಾಪಕ್ಕೆ ಗದಗ ಧಗ ಧಗ...!

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ಉತ್ತರ ಕರ್ನಾಟಕ ಭಾಗದಲ್ಲಿ ರಣ ಬಿಸಿಲಿನ ರೌದ್ರ ನರ್ತನ ಜೋರಾಗಿದೆ. ದಿನೆ ದಿನೇ ಬಿಸಿಲಿನ ತಾಪಮಾನ ಏರಿಕೆ ಆಗುತ್ತಲೇ ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಬಿಸಿಗಾಳಿ ಬೀಸುತ್ತಿದ್ದು, ಜನರು ಮಧ್ಯಾಹ್ನದ ಸಂದರ್ಭದಲ್ಲಿ ಹೊರಗೆ ಅಡ್ಡಾಡುವುದನ್ನೇ ನಿಲ್ಲಿಸಿದ್ದಾರೆ.

ಬಿಸಿಲಾಘಾತಕ್ಕೆ (ಹೀಟ್ ಸ್ಟ್ರೋಕ್) ಒಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 10 ಹಾಸಿಗೆಗಳ ವಿಶೇಷ ವಾರ್ಡ್ ತೆರೆಯಲಾಗಿದೆ. ಇಲ್ಲಿ ವೆಂಟಿಲೇಟರ್ ಸೇರಿದಂತೆ ಹಲವು ಸೌಲಭ್ಯಗಳಿದ್ದು, ಚಿಕಿತ್ಸೆ ನೀಡಲು ತಜ್ಞ ವೈದ್ಯರು ಮತ್ತು ಸಹಾಯಕ್ಕೆ ನರ್ಸ್‌ಗಳನ್ನು ನಿಯೋಜಿಸಲಾಗಿದೆ.

ಬೇಸಿಗೆಯಲ್ಲಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಪ್ರಖರ ಬಿಸಿಲು ಇರುತ್ತದೆ. ಈ ಸಮಯದಲ್ಲಿ ಮಕ್ಕಳು, ಗರ್ಭಿಣಿಯರು, ವೃದ್ಧರು ಹೊರಗಡೆ ಅಡ್ಡಾಡಬಾರದು. ಹೆಚ್ಚು ಸಮಯ ಬಿಸಿಲಿನಲ್ಲಿ ಇರುವುದರಿಂದ ದೇಹ ನಿರ್ಜಲೀಕರಣವಾಗುವುದು ಮಾತ್ರವಲ್ಲದೇ ಕಿಡ್ನಿ ಸ್ಟೋನ್‌ನಂತಹ ಸಮಸ್ಯೆಗಳಿಗೂ ಕಾರಣವಾಗಬಹುದು ಎಂದು ವೈದ್ಯರು ಎಚ್ಚರಿಸಿದ್ದಾರೆ.

ಬಿಸಿಲಾಘಾತದಿಂದ ರಕ್ಷಣೆ ಪಡೆಯಲು ದ್ರವ ಪದಾರ್ಥಗಳನ್ನು ಹೆಚ್ಚು ಸೇವಿಸಬೇಕು. ನೀರು, ಒಆರ್ ಎಸ್, ಎಳನೀರು, ಕಬ್ಬಿನ ಹಾಲು, ನಿಂಬೆಹಣ್ಣಿನ ಪಾನಕ, ಕಲ್ಲಂಗಡಿ ರಸವನ್ನು ಆಗಾಗ ಸೇವಿಸುವುದರಿಂದ ದೇಹಕ್ಕೆ ಶಕ್ತಿ ಸಿಗುತ್ತದೆ. ಕಾರ್ಬೋನೆಟೆಡ್ ಪಾನೀಯಗಳನ್ನು ತಪ್ಪಿಸುವುದು ಉತ್ತಮ ಎಂಬುದು ವೈದ್ಯರ ಸಲಹೆಯಾಗಿದೆ.

ಬೇಸಿಗೆ ಅವಧಿಯಲ್ಲಿ ಡ್ರೈ ಪದಾರ್ಥಗಳಿಗಿಂತ ಮಜ್ಜಿಗೆ ಅಥವಾ ಮೊಸರನ್ನ ಹಾಗೂ ಮೆತ್ತನೆಯ ಆಹಾರಗಳನ್ನು ಹೆಚ್ಚು ಸೇವಿಸಬೇಕು. ಹೆಚ್ಚು ಮಸಾಲೆ ಪದಾರ್ಥಗಳಿರುವ ಆಹಾರ ಕಡಿಮೆ ಮಾಡುವುದು ಒಳಿತು.

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಕಟ್ಟಡದ ಎರಡನೇ ಮಹಡಿಯಲ್ಲಿ ಹೀಟ್ ಸ್ಟ್ರೋಕ್ ವಾರ್ಡ್ ತೆರೆಯಲಾಗಿದೆ. ಇಲ್ಲಿ ಚಿಕಿತ್ಸೆಗೆ ಬೇಕಿರುವ ಔಷಧ, ಉಪಕರಣಗಳು ಮತ್ತು ವೈದ್ಯರ ತಂಡ ಇದೆ. 10 ಹಾಸಿಗೆಗಳಲ್ಲಿ ಐದು ಪುರುಷರಿಗೆ, ಉಳಿದ ಐದು ಹಾಸಿಗೆಯನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಮಕ್ಕಳಿಗಾಗಿ ಮೂರು ಪ್ರತ್ಯೇಕ ಹಾಸಿಗೆ ಸೌಲಭ್ಯ ಒದಗಿಸಲಾಗಿದೆ.

ಬಿಸಿಲಾಘಾತದಿಂದ ದೇಹದಲ್ಲಿನ ನೀರಿನ ಅಂಶ ಕಡಿಮೆ ಆಗುತ್ತದೆ. ತೀವ್ರ ತಲೆನೋವು, ತಲೆಸುತ್ತು, ವಾಂತಿ, ಅತಿಸಾರ, ಚರ್ಮ ಸುಡುವ ಅನುಭವ ಸೇರಿವೆ. ಹೀಟ್ ಸ್ಟ್ರೋಕ್‌ನಿಂದ ಅಸ್ವಸ್ಥಗೊಂಡು ಈವರೆಗೆ ಇಲ್ಲಿ ಯಾರೂ ಚಿಕಿತ್ಸೆ ಪಡೆದಿಲ್ಲ, ಆದರೆ, ನಿರ್ಜಲೀಕರಣದಿಂದ ಬಳಲಿ ಬಂದ ಹೆಚ್ಚಿನ ಜನರಿಗೆ ಚಿಕಿತ್ಸೆ ಕೊಡಲಾಗಿದೆ. ಬಿಸಿಲಾಘಾತದ ತೀವ್ರತೆ ಹೆಚ್ಚಾಗಿದ್ದರೆ ಒಂದು ದಿನ ಅಡ್ಮಿಟ್ ಮಾಡಿಕೊಂಡು ಚಿಕಿತ್ಸೆ ಕೊಡಲಾಗುತ್ತದೆ. ನಂತರ ಹೀಟ್ ಸ್ಟ್ರೋಕ್ ವಾರ್ಡ್ ಬೇಸಿಗೆ ಮುಗಿಯುವವರೆಗೆ ಕಾರ್ಯಾಚರಿಸಲಿದೆ. ಮಳೆಗಾಲಕ್ಕೆ ಅದು ನ್ಯೂಮೋನಿಯಾ ವಾರ್ಡ್ ಆಗಿ ಪರಿವರ್ತನೆಗೊಳ್ಳಲಿದೆ.



ಜಿಮ್ಸ್ ಆಸ್ಪತ್ರೆ ಫುಲ್ ಅಲರ್ಟ್

ಬಿರು ಬಿಸಿಲು ರಣಕೇಕೆ ಹಾಕುತ್ತಿದೆ. ಮಕ್ಕಳು, ಬಾಣಂತಿಯರು, ಗರ್ಭಿಣಿಯರು, ವೃದ್ಧರು ಅನಾರೋಗ್ಯಕ್ಕೆ ಒಳಗಾದವರು ಈ ಬಿಸಿಲಿನ ಪ್ರತಾಪಕ್ಕೆ ನಲುಗುತ್ತಿದ್ದಾರೆ. ಲವಣಾಂಶ, ನೀರಿನ ಅಂಶ ಕಡಿಮೆಯಾದ್ರೆ ಡಿ-ಹೈಡ್ರೆಷನ್ ಆಗುತ್ತೆ. ಇದರಿಂದ ತಲೆ ನೋವು, ವಾಂತಿ, ಹೀಟ್ ಸ್ಟ್ರೋಕ್ ಆಗುತ್ತೆ. ಹೀಗಾಗಿ ಜಿಮ್ಸ್ ಆಸ್ಪತ್ರೆ ಫುಲ್ ಅಲರ್ಟ್ ಆಗಿದೆ. ಸನ್ ಸ್ಟ್ರೋಕ್ ರೋಗಿಗಳ ಚಿಕಿತ್ಸೆಗೆ ಜಿಮ್ಸ್ ವೈದ್ಯರು, ಸಿಬ್ಬಂದಿ ಸನ್ನದ್ಧರಾಗಿದ್ದಾರೆ.

> ಅವಳಿ ನಗರದಲ್ಲಿ ದಿನದಿಂದ ದಿನಕ್ಕೆ ಬಿಸಿಲಾಘಾತಕ್ಕೆ ಚಿಕಿತ್ಸೆ ನೀಡಲು ವಿಶೇಷ ವಾರ್ಡ್ ತೆರೆಯಲಾಗಿದೆ. ರೋಗಿಗಳ ಸಂಖ್ಯೆ ಆಧಾರದ ಮೇಲೆ ಹೆಚ್ಚಿನ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುತ್ತದೆ.
> ■ **ಡಾ.ಬಸವರಾಜ ಬೊಮ್ಮನಹಳ್ಳಿ,** ಜಿಮ್ಸ್ ನಿರ್ದೇಶಕ

> ಬಿಸಿಲಿನಿಂದ ಆರೋಗ್ಯದಲ್ಲಿ ಏರುಪೇರಾದರೂ ಸ್ಪೇಷಲ್ ಚಿಕಿತ್ಸೆ ಲಭ್ಯವಾಗುತ್ತಿರುವುದು ಖುಷಿಯ ವಿಚಾರ. ಜಿಮ್ಸ್ ಅಷ್ಟೇ ಅಲ್ಲಾ ಜಿಲ್ಲೆಯ ಎಲ್ಲಾ ತಾಲೂಕು ಆಸ್ಪತ್ರೆಯಲ್ಲಿ ಸನ್ ಸ್ಟ್ರೋಕ್, ಹೀಟ್ ಸ್ಟ್ರೋಕ್‌ಗೆ ವಿಶೇಷ ವಾರ್ಡ್ ನಿರ್ಮಾಣವಾಗಬೇಕು.
> ■ **ವಿಶ್ವನಾಥ ಖಾನಪೂರ,** ವಿಕಾಸ ವೇದಿಕೆಯ ಅಧ್ಯಕ್ಷ

ಕಿರುಸುದ್ದಿ

ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ಪಾಟೀಲ



ಬೆಳಗಾವಿ: ಕರ್ನಾಟಕ ಕೇಡರ್ನ್ ಐಪಿಎಸ್ ಅಽಕಾರಿ ಮತ್ತು ಕರ್ನಾಟಕ ರಾಜ್ಯ ಮೀಸಲು ಪಡೆಯ ಐಜಿಪಿಯಾಗಿರುವ ಸಂದೀಪ್ ಪಾಟೀಲ್ ಅವರು ಈಗ ಮತ್ತೆ ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ನೇಮಕರಾಗಿದ್ದಾರೆ. ಕರ್ನಾಟಕ ರಾಜ್ಯ ಮೀಸಲು ಪಡೆಯ ಐಜಿಪಿಯಾಗಿರುವ ಸಂದೀಪ್ ಪಾಟೀಲ್ ಅವರನ್ನು ರಾಜ್ಯ ಸರ್ಕಾರ ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ.

ಕಲಬುರಗಿ-ದಾಂಡೇಲಿ ಮಧ್ಯೆ ಬಸ್ ಸಂಚಾರ

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-1ರ ವ್ಯಾಪ್ತಿಯ ಕಲಬುರಗಿ ಘಟಕ-1ರಿಂದ ಕಲಬುರಗಿಯಿಂದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಗೆ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗಾಗಿ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 1ರಿಂದ ಕಲಬುರಗಿ-ದಾಂಡೇಲಿ ನಾನ್ ಎಸಿ ಸ್ಲೀಪರ್ ಬಸ್ ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಬಸ್ ಜೇವರ್ಗಿ, ಶಹಾಪುರ, ಲಿಂಗಸೂಗುರು, ಕುಷ್ಟಗಿ, ಗದಗ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಸಂಚರಿಸುತ್ತದೆ. ಕಲಬುರಗಿ ಬಸ್ ನಿಲ್ದಾಣದಿಂದ ರಾತ್ರಿ 10 ಗಂಟೆಗೆ ಹೊರಟು ಬೆಳಿಗ್ಗೆ 8.30ಕ್ಕೆ ದಾಂಡೇಲಿ ತಲುಪಲಿದೆ. ದಾಂಡೇಲಿ ಬಸ್ ನಿಲ್ದಾಣದಿಂದ ಸಂಜೆ 6.30ಕ್ಕೆ ಹೊರಟು ಬೆಳಿಗ್ಗೆ 5 ಗಂಟೆಗೆ ಕಲಬುರಗಿ ತಲುಪಲಿದೆ. ಪ್ರಯಾಣಿಕರು ಸಾರಿಗೆಯ ಸದುಪಯೋಗ ಪಡೆದುಕೊಳ್ಳುವಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕಲಬುರಗಿ ವಿಭಾಗ-1ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ಕೋರಿದ್ದಾರೆ.

ಉಪಚುನಾವಣೆಯಲ್ಲಿ ಜನ ನಮಗೆ ಆಶೀರ್ವಾದ ಮಾಡಿದ್ದಾರೆ: ಎಂಬಿಪಾ



ವಿಜಯಪುರ: ರಾಜ್ಯದ ಎರಡು ಉಪ ಚುನಾವಣೆಯಲ್ಲಿ ರಾಜ್ಯದ ಜನ ನಮಗೆ ಆಶೀರ್ವಾದ ಮಾಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ರಾಜ್ಯದ ಎರಡು ಉಪಚುನಾಣೆ ಯಲ್ಲಿ ಕಾಂಗ್ರೆಸ್ ಗೆಲುವು ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಜಾತ್ಯತೀತ ಪಕ್ಷ ಕಾಂಗ್ರೆಸ್ ಪಕ್ಷ ಎಂಬ ಕಾರಣಕ್ಕೆ ಜನ ಆಶೀರ್ವಾದ ಮಾಡಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗೆ ಮಹಿಳೆಯರು ಹೆಚ್ಚಿನ ವಿಶ್ವಾಸ ಇಟ್ಟು ಜನ ಎರಡು ಮತಕ್ಷೇತ್ರದಲ್ಲಿ ಜನ ಬೆಂಬಲ ಸೂಚಿಸಿದ್ದಾರೆ ಎಂದರು.

ತಮಿಳುನಾಡು ಫಲಿತಾಂಶ ವಿಚಾರಕ್ಕೆ ಪ್ರತಿಕ್ರಿಯಿಸಿ, ತಮಿಳುನಾಡಿನಲ್ಲಿ ಹೊಸ ಯುಗ ಆರಂಭವಾಗಿದೆ. ರಾಜಕಾರಣದಲ್ಲಿ ಬದಲಾವಣೆ ಜನ ಬಯಸುತ್ತಿದ್ದಾರೆ. 10 ವರ್ಷ ಆದ ಮೇಲೆ ಆಡಳಿತ ವಿರೋಧಿ ಅಲೆ ಅಲ್ಲಿ ಆಗಿದೆ ಎಂದರು.

ಒಬ್ಬ ಯುವಕನಿಗೆ ಜನರು ಆಶಯ ಇಟ್ಟುಕೊಂಡು ಮತ ಕೊಟ್ಟಿದ್ದಾರೆ. ಡಿಎಂಕೆ, ಎಐಡಿಎಂಕೆ ಇದ್ದರೂ ಯುವಕನಿಗೆ ಬೆಂಬಲ ನೀಡಿದ್ದಾರೆ. ನಮ್ಮದು ಶೇ.20ರಷ್ಟು ಮತ ತಗೆದುಕೊಳ್ಳ ಬಹುದು ಎಂಬ ಊಹೆ ಇಟ್ಟುಕೊಂಡಿದ್ದೇವೆ. ನಮ್ಮ ಊಹೆಗೆ ಮೀರಿ ಜನರು ಬೆಂಬಲ ನೀಡಿದ್ದಾರೆ ಎಂದರು.

ವಿಜಯ ಅವರಿಗೆ ಕಾಂಗ್ರೆಸ್ ಪಕ್ಷ ಕೂಡ ಬೆಂಬಲ ಸೂಚಿಸುತ್ತಿದೆ. ಜನರ ಅಭಿಪ್ರಾಯದಂತೆ ನಾವು ವಿಜಯ ಅವರಿಗೆ ಬೆಂಬಲ ಸೂಚಿಸುತ್ತಿದ್ದೇವೆ ಎಂದರು.

ಮಮತಾ ನಿಲುವು ಮೂರ್ಖತನದ ಪರಮಾವಧಿ: ಶೆಟ್ಟರ



ಗದಗ: ಪಶ್ಚಿಮ ಬಂಗಾಳದಲ್ಲಿ ಅಲ್ಲಿಯ ಜನ ಭಾರತೀಯ ಜನತಾ ಪಾರ್ಟಿಗೆ 206 ಶಾಸಕರನ್ನು ಆರಿಸಿ ಸಂಪೂರ್ಣವಾಗಿ ಆಶೀರ್ವದಿಸಿದ್ದು, ಇದನ್ನು ಒಪ್ಪಿಕೊಂಡು ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಹುದ್ದೆಗೆ ರಾಜೀನಾಮೆ ನೀಡದೆ ಮೊಂಡುತನದಿಂದ ಮುಖ್ಯಮಂತ್ರಿಗಳ ಪದವಿಗೆ ರಾಜೀನಾಮೆ ನೀಡದೆ ಇರುವುದು ಮೂರ್ಖತನದ ಪರಮಾವಧಿ ಆಗಿದೆ ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.

ನಗರಕ್ಕೆ ಭೇಟಿ ನೀಡಿ ಪತ್ರಕರ್ತರೊಂದಿಗೆ ಮಾತನಾಡಿ, ಕಳೆದ 15 ವರ್ಷಗಳಿಂದ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸಿದ ಮಮತಾ ಬ್ಯಾನರ್ಜಿರವರ ಆಡಳಿತಕ್ಕೆ ಬೇಸತ್ತ ಜನ ಭಾರತೀಯ ಜನತಾ ಪಾರ್ಟಿಗೆ ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ 2/3 ಬಹುಮತವನ್ನು ಸ್ಪಷ್ಟವಾಗಿ ನೀಡಿರುವರು. ಪಶ್ಚಿಮ ಬಂಗಾಳದ ಮತದಾರರಿಗೆ ನಾನು ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುವೆ.

ಟಿಎಮ್‌ಸಿಯ ಗುಂಡಾಗಿರಿ ಸತತವಾಗಿ ಕೇಂದ್ರ ಸರ್ಕಾರದೊಂದಿಗೆ ಸಂಘರ್ಷ, ಕೇಂದ್ರ ಸರ್ಕಾರದ ಯೋಜನೆಗಳನ್ನು ಜಾರಿಗೆ ತರದೇ ಜನರಿಗೆ ಮೋಸ ಮಾಡಿದ್ದನ್ನು ಅರಿತ ಅಲ್ಲಿಯ ಜನ ಟಿಎಮ್‌ಸಿ ತಕ್ಕ ಪಾಠ ಕಲಿಸಿದ್ದಾರೆ ಎಂದರು.

100 ಕ್ಷೇತ್ರಗಳಲ್ಲಿ ಮತ ಚೋರಿ ಆಗಿದೆ ಎಂದು ಮಮತಾ ಬ್ಯಾನರ್ಜಿರವರು ಆರೋಪಿಸಿದ್ದು ಇದನ್ನು ಬೆಂಬಲಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ದಿವಾಳಿತನದ ಪರಮಾವಧಿ ಒಂದು ರಾಜ್ಯದ ಜನ ಸರ್ಕಾರ ಬದಲಿಸಿದಾಗ ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬ ಚುನಾಯಿತ ಸರ್ಕಾರದ ಜವಾಬ್ದಾರಿ. ಅದನ್ನು ಬಿಟ್ಟು ಬೇಜಾವಾಬ್ದಾರಿಯಿಂದ ಹೇಳಿಕೆ ನೀಡುವ ಮಮತಾ ಬ್ಯಾನರ್ಜಿ ಹಾಗು ರಾಹುಲ್ ಗಾಂಧಿಯವರ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಮೇ 9ರಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿಯ ಹಿರಿಯ ಧುರೀಣ ಬಿ.ಎಸ್.ಯಡಿಯೂರಪ್ಪನವರು ರಾಜಕೀಯ ಪ್ರವೇಶಿಸಿ 50 ವರ್ಷ ಕಳೆದ ಸಂಭ್ರಮಾಚರಣೆಯನ್ನು ಚಿತ್ರದುರ್ಗ ನಗರದಲ್ಲಿ ಅಭಿಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಗದಗ ಜಿಲ್ಲೆಯಿಂದ ಹೆಚ್ಚಿನ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಜಿಲ್ಲಾ ವಕ್ತಾರ ಎಂ.ಎಂ.ಹಿರೇಮಠ, ಮಾಜಿ ಪ್ರಾಧಿಕಾರದ ಅಧ್ಯಕ್ಷ ಸಂಗಮೇಶ ದುಂದೂರ, ತೋಟೋಸೊ ಭಾಂಡಗೆ, ಶಹರ ಅಧ್ಯಕ್ಷ ಸುರೇಶ ಮರಳಪ್ಪನವರ, ಕೆ.ಪಿ.ಕೋಟಿಗೌಡ್ರ, ರಮೇಶ ಸಜ್ಜಗಾರ, ಮಂಜುನಾಥ ಶಾಂತಗೇರಿ, ರವಿ ಮಾನ್ವಿ ಇದ್ದರು.

ವಾಲಿಬಾಲ್: ರಾಜ್ಯಮಟ್ಟಕ್ಕೆ ಆಯ್ಕೆ



ಕಲಬುರಗಿ: ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್ ಕಾಲೇಜಿನ ವಾಲಿಬಾಲ್ ತಂಡವು ಬಳ್ಳಾರಿಯ ಬಳ್ಳಾರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್ಮೆಂಟ್ ಅಡಿಯಲ್ಲಿ ನಡೆದ ಕಲಬುರ್ಗಿ ವಲಯ ಮಟ್ಟದ ಪುರುಷರ ವಾಲಿಬಾಲ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ದಿನಾಂಕ ಮೇ 8ರಂದು ತುಮಕೂರಿನ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆವರಣದಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಆಡಲಿದ್ದಾರೆ.

ಈ ಸಾಧನೆ ಮಾಡಿದ ಕಾಲೇಜಿನ ವಾಲಿಬಾಲ್ ತಂಡಕ್ಕೆ ಸಂಸ್ಥೆಯ ಅಧ್ಯಕ್ಷ ಶಶೀಲ್ ಜಿ ನಮೋಶಿ, ಉಪಾಧ್ಯಕ್ಷ ರಾಜಾ ಭಿ ಭೀಮಳ್ಳಿ, ಕಾರ್ಯದರ್ಶಿ ಉದಯಕುಮಾರ್ ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ.ಕೈಲಾಸ ಪಾಟೀಲ್ ಹಾಗೂ ಎಲ್ಲ ಆಡಳಿತ ಮಂಡಳಿ ಸದಸ್ಯರು ಕಾಲೇಜಿನ ಪ್ರಾಚಾರ್ಯ ಡಾ.ಸಿದ್ಧರಾಮ ಪಾಟೀಲ್, ಡಾ.ಎಸ್.ಆರ್. ಹೊಟ್ಟೆ ಉಪ ಪ್ರಾಚಾರ್ಯ ಡಾ. ಭಾರತಿ ಹರಸೂರ ಎಂಜಿನಿಯರಿಂಗ್ ಕಾಲೇಜಿನ ಕ್ರೀಡಾ ನಿರ್ದೇಶಕ ಶರಣಮ್ಮ ಕುಪ್ಪಿ ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಹಳೇ ವೈಷಮ್ಯಕ್ಕೆ ತಲ್ವಾರ್‌ನಿಂದ ಮಾರಣಾಂತಿಕ ಹಲ್ಲೆ

ಒಂದೇ ಗಂಟೆಯಲ್ಲಿ ಆರೋಪಿಗಳ ಬಂಧನ



ಬೆಳಗಾವಿ: ಇಲ್ಲಿನ ಅಮನ್ ನಗರದಲ್ಲಿ ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ಮೂವರು ಯುವಕರ ಮೇಲೆ ತಲ್ವಾರ್‌ನಿಂದ ಮಾರಣಾಂತಿಕ ಹಲ್ಲೆ ಮಾಡಿರುವ ಭೀಕರ ಘಟನೆ ಮಂಗಳವಾರ ರಾತ್ರಿ ವೇಳೆ ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಆರೋಪಿಗಳನ್ನು ಕೇವಲ ಒಂದು ಗಂಟೆಯ ಅವಧಿಯಲ್ಲಿ ಆರು ಜನರನ್ನು ಬಂಧಿಸುವಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆಂದು ತಿಳಿಸಿದರು.

ಮೇ 5ರಂದು ಎಪಿಎಂಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲ ವ್ಯಕ್ತಿಗಳ ನಡುವೆ ಹಳೆಯ ವೈಷಮ್ಯ ಇದ್ದ ಕಾರಣ ಮಾತಿಗೆ ಮಾತುಗಳು ಬೆಳೆದ ಸಂದರ್ಭದಲ್ಲಿ ತಲ್ವಾರ್‌ನಿಂದ ಮಾರಣಾಂತಿಕವಾಗಿ ಹಲ್ಲೆ ಮಾಡಿದ ಆರೋಪಿಗಳು ಘಟನಾ ಸ್ಥಳದಿಂದ ಪರಾರಿಯಾಗಿದ್ದರು.

ಆರೋಪಿಗಳಾದ ಹುಸೇನ್, ಜಾವೀದ್ ಸೇರಿದಂತೆ ಎಂಟು ಜನರ ತಂಡವು ಮಜೀದ್ ಶೇಖ್ ಹಾಗೂ ಇತರರ ಮೇಲೆ ತಲ್ವಾರ್‌ನಿಂದ ಹಲ್ಲೆ ನಡೆಸಿತ್ತು. ಘಟನೆಯಲ್ಲಿ ಅಮನ್ ನಗರದ ವಲಿ ಶೇಖ್, ಇಮಾಮ್ ಶೇಖ್ ಮತ್ತು ಮಜೀದ್ ಶೇಖ್ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಪ್ರಕರಣ ದಾಖಲಾದ ಒಂದು ಗಂಟೆಯಲ್ಲೇ ಮಾಳಮಾರುತಿ ಪಿಐ ನೇತೃತ್ವದ ತಂಡ ಆರು ಆರೋಪಿಗಳನ್ನು ಸೆರೆಹಿಡಿದಿದೆ. ಈ ಗಲಾಟೆಗೆ ಸಂಬಂಧಿಸಿದಂತೆ ದೂರು ಮತ್ತು ಪ್ರತಿದೂರುಗಳು ದಾಖಲಾಗಿದ್ದು, ಕೊಲೆ ಯತ್ನ ಹಾಗೂ ಆರ್ಮ್ಸ್ ಆಕ್ಟ್ ಅಡಿಯಲ್ಲಿ ಕೇಸ್ ಹಾಕಲಾಗಿದೆ. ಜಗಳದಲ್ಲಿ ತಲ್ವಾರ್ ಬಳಸಿದವರ ವಿರುದ್ಧ ರೌಡಿ ಶೀಟ್ ತೆರೆಯುವುದಾಗಿ ಕಮಿಷನರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಬಿಎಸ್‌ಎಫ್ ಯೋಧರ ಭವಿಷ್ಯದ ಜೊತೆ ಚೆಲ್ಲಾಟ: ಶಿಂಧೆ ಆರೋಪ



ಬೆಳಗಾವಿ: ಬಿಎಸ್‌ಎಫ್ ನಲ್ಲಿ ಕರೆಯಲಾದ 2023ರ ಹುದ್ದೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ತರಬೇತಿ ಪಡೆದ ಬಳಿಕ ಅರ್ಹತೆ ಪತ್ರ ತಿರಸ್ಕಾರವಾಗಿದೆ ಎಂದು ಸಾಕಷ್ಟು ಅಭ್ಯರ್ಥಿಗಳಿಗೆ ಸೇವೆಯಿಂದ ಬಿಡುಗಡೆ ಮಾಡಿ ವಂಚನೆಯಾಗಿದೆ ಎಂದು ಡಾ.ಗಿರಿರಾಜ್ ಎನ್. ಶಿಂಧೆ ಹೇಳಿದರು.

ಬುಧವಾರ ಬೆಳಗಾವಿ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳು ಅರ್ಹತೆ ಪತ್ರದಿಂದ ನೇಮಕವಾಗಿಲ್ಲ, ಸಾಕಷ್ಟು ಶ್ರಮ ಪಟ್ಟು ಎಲ್ಲ ಪರೀಕ್ಷೆಯಲ್ಲಿ ನೇಮಕವಾಗಿರುತ್ತಾರೆ. ಆದರೆ, ಸ್ಕಿಲ್ ಸರ್ಟಿಫಿಕೇಟ್ ಸಲುವಾಗಿ ಅವರನ್ನು ಸೇವೆಯನ್ನು ತೆಗೆದುಹಾಕುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಕಳೆದ ಎರಡು ವರ್ಷಗಳಿಂದ ಸೇವೆ ಸಲ್ಲಿಸಿರುವ ಅಭ್ಯರ್ಥಿಗಳನ್ನು ತಿರಸ್ಕಾರ ಮಾಡಿ ನೂರಾರು ಯುವಕರು ಬೀದಿ ಪಾಲಾಗಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು.

ಸರ್ಕಾರ ಕೂಡಲೇ ಇವರನ್ನು ಕೌನ್ಸೆಲಿಂಗ್ ಮಾಡಿ ಅವರನ್ನು ಮರು ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಬಡ ಯುವಕರಿಗೆ ಅನ್ಯಾಯವಾಗಬಾರದು. ಕೇಂದ್ರ ಸರ್ಕಾರ ತಾಂತ್ರಿಕ ಕಾರಣದಿಂದ ಸ್ಕಿಲ್ ಸರ್ಟಿಫಿಕೇಟ್‌ನಿಂದ ಮಾತ್ರ ಅವರನ್ನು ಹುದ್ದೆಯನ್ನು ವಜಾ ಮಾಡಬಾರದು ಎಂದು ಹೇಳಿದರು.

ಬೀದಿ ನಾಯಿ ದಾಳಿ: ಬಾಲಕನಿಗೆ ಗಂಭೀರ ಗಾಯ

ವಿಜಯಪುರ: ಪುಟ್ಟ ಬಾಲಕನ ಮೇಲೆ ಬೀದಿ ನಾಯಿ ದಾಳಿ ನಡೆಸಿ, ನೂರು ಅಡಿ ದೂರ ಎಳೆಯ್ದೊಯ್ದ ಹೃದಯ ವಿದ್ರಾವಕ ಘಟನೆ ನಗರದ ರಾಜಕುಮಾರ ಲೇಔಟ್‌ನಲ್ಲಿ ನಡೆದಿದೆ.

ಇಲ್ಲಿನ ವಿರಾಜ್ ಸಂತೋಷ ಬಿರಾದಾರ (3) ಬೀದಿ ನಾಯಿ ದಾಳಿಗೆ ತುತ್ತಾದ ಬಾಲಕ. ಮನೆ ಮುಂದೆ ಆಟವಾಡುತ್ತಿದ್ದ ವಿರಾಟ್ ಬಿರಾದಾರ ಎಂಬ ಪುಟ್ಟ ಬಾಲಕನ ಮೇಲೆ ನಾಯಿ ದಾಳಿ ಮಾಡಿ, ಬಾಯಿಯಲ್ಲಿ ಕಚ್ಚಿ ಎಳೆಯ್ದೊದಿದ್ದು, ಇದನ್ನು ಕಂಡ ಸ್ಥಳೀಯರು ಕೂಡಲೇ ತೆರಳಿ ಬಾಲಕನ ರಕ್ಷಣೆ ಮಾಡಿದ್ದಾರೆ.

ಬೀದಿನಾಯಿ ದಾಳಿಯ ಈ ಭೀಕರ ದೃಶ್ಯ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಭಯಾನಕ ಘಟನೆ ಕಂಡು ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ.

ಈ ದಾಳಿಯಿಂದ ಬಾಲಕನ ಬೆನ್ನು ತೊಡೆಗೆ ಗಂಭೀರ ಗಾಯವಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಬಾಲಕನಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಬಾಲಕನ ಪಾಲಕರು ಆತಂಕಗೊಳ್ಳುವಂತಾಗಿದೆ.

ಇಲ್ಲಿನ ಬೀದಿನಾಯಿಗಳ ಕಾಟಕ್ಕೆ ಜನರು ರೋಸಿ ಹೋಗಿದ್ದು, ಬೀದಿ ನಾಯಿಗಳ ನಿಯಂತ್ರಣ ಮಾಡದ ಅಽಕಾರಿಗಳ ವಿರುದ್ಧ



ಅಲೆಗಳ ಅಬ್ಬರಕ್ಕೆ ಇಬ್ಬರ ಸಾವು



ಭಟ್ಕಳ: ಇಲ್ಲಿಯ ಮುಂಡಳ್ಳಿಯ ನೆಸ್ತಾರ್ ಸಮುದ್ರದ ತೀರಕ್ಕೆ ಬುಧವಾರ ಸಂಜೆ ವಿಹಾರಕ್ಕೆ ಹೋದ ಇಬ್ಬರು ಅಲೆಗಳ ಅಬ್ಬರಕ್ಕೆ ಕೊಚ್ಚಿಹೋಗಿ ಮೃತಪಟ್ಟಿದ್ದಾರೆ.

ಮೃತರನ್ನು ಕಾನ್ಪುರ ನಿವಾಸಿಗಳಾದ ಅಫ್ರೋಜ್ (34) ಮತ್ತು ರಿಜ್ವಾನ್ (28) ಎಂದು ಗುರುತಿಸಲಾಗಿದೆ. ಇವರು ಭಟ್ಕಳ ಪಟ್ಟಣದ ಜವಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಇವರು ಬುಧವಾರ ಸಂಜೆ 4 ಗಂಟೆಯ ಸುಮಾರಿಗೆ ಕುಟುಂಬದವರು ಮತ್ತು ಸ್ನೇಹಿತರೊಂದಿಗೆ ವಿಹಾರಕ್ಕಾಗಿ ನೆಸ್ತಾರ ಬೀಚಿಗೆ ಹೋಗಿದ್ದರು. ಅವರಲ್ಲಿ ಮೂವರು ತೀರದಲ್ಲಿ ಕುಳಿತಿದ್ದಾಗ, ಉಳಿದ ನಾಲ್ವರು ಅಲೆಗಳನ್ನು ವೀಕ್ಷಿಸಲು ಪಕ್ಕದ ಕಲ್ಲಿನ ಬೆಟ್ಟವನ್ನು ಹತ್ತಿದ್ದರು.

ಈ ಸಂದರ್ಭದಲ್ಲಿ ಬಂದ ಭಾರೀ ಅಲೆಯೊಂದು ಮೇಲಕ್ಕೆ ಏರಿದ್ದರಿಂದ ಇಬ್ಬರನ್ನೂ ಎಳೆದುಕೊಂಡು ಹೋಗಿದೆ. ಘಟನೆ ತಿಳಿದ ಸ್ಥಳೀಯರು ತಕ್ಷಣ ಸಮುದ್ರಕ್ಕೆ ಇಳಿದಿದ್ದರೂ ಸಹ ಪ್ರಯೋಜಕಾರಿ ಆಗದೇ ಇಬ್ಬರೂ ಮೃತಪಟ್ಟಿದ್ದರು. ಡಿವೈಎಸ್ಪಿ ಗಿರೀಶ, ಗ್ರಾಮೀಣ ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟೇಶ್ ಮತ್ತು ಕರಾವಳಿ ಭದ್ರತಾ ಪೊಲೀಸರ ಸಿಬ್ಬಂದಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಅಗತ್ಯ ಕ್ರಮಗಳನ್ನು ಕೈಗೊಂಡರು.

ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಭಟ್ಕಳ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದೆ. ಈ ಕುರಿತು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ದಾಂಡೇಲಿ ಉಪ ವಿಭಾಗ ವ್ಯಾಪ್ತಿಯ11 ಕೆ.ವಿ ವಿದ್ಯುತ್ ಮಾರ್ಗದ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮೇ 7ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹಳಿಯಾಳ ರೋಡ್, ಅಂಬೇವಾಡಿ, ಬಾರ್ಚಿ ರೋಡ್, ನಿರ್ಮಲ್ ನಗರ, ಎಸ್‌ಆರ್‌ಟಿ-ಟಿಆರ್‌ಟಿ, ಹಸನಮಾಲ್, ಸುದರ್ಶನ ನಗರ, ಡಬ್ಲ್ಯುಸಿಪಿಎಂ ಕ್ವಾರ್ಟರ್ಸ್, ಕೆ.ಸಿ ಸರ್ಕಲ್, ಅಲೈಡ್ ಏರಿಯಾ, ವಿನಾಯಕ ನಗರ ಹಾಗೂ ಡಿನೆ ನಂಬರ್ ಗೇಟ್ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸುವಂತೆ ದಾಂಡೇಲಿ ಹೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 12ರಿಂದ ಅಷ್ಟಬಂಧ ಮಹೋತ್ಸವ

ಗೋಕರ್ಣ: ಐನಾದು ಗ್ರಾಮ ಅಡಿಗೋಣದ ಶ್ರೀ ಗೋಳಿಬೀರದೇವ ಹಾಗೂ ಪರಿವಾರ ದೇವರ ದೇವಸ್ಥಾನದ ನೂತನ ಶಿಖರ ಕಲಶ ಸ್ಥಾಪನೆ, ಪುನರ್‌ಪ್ರತಿಷ್ಠಾಪನಾ ಅಷ್ಟಬಂಧ ಮಹೋತ್ಸವ ಮೇ 12ರಿಂದ ಮೇ 15ರವರೆಗೆ ನಡೆಯಲಿದೆ. ಮೊದಲನೇ ದಿನ ಪುಣ್ಯಾಹ, ಹವನ ಕಂಕಣಬಂಧ ಮತ್ತಿತರ ದೈವಿಕ ಕಾರ್ಯಕ್ರಮ ನಡೆಯಲಿದ್ದು, ಮೇ 13ರಂದು ಪೀಠಶುದ್ಧಿ, ಹವನ ಕಲಶದ ಮನೆಯಲ್ಲಿರುವ ಬೆಳಸೆರ ಅಮ್ಮನವರ ಸಾನಿಧ್ಯದಲ್ಲಿ ಶುದ್ಧಿ ಹವನ ಮಧ್ಯಾಹ್ನ ಮೂರು ಗಂಟೆಗೆ ಬಂಕಿಕೊಡ್ಲ ಬಂಕನಾಥೇಶ್ವರ ದೇವಸ್ಥಾನದಿಂದ ಗೋಳಿದೇವಸ್ಥಾನಕ್ಕೆ ನೂತನ ಅಮ್ಮನವರ ವಿಗ್ರಹ ಮೆರವಣಿಗೆ ನಡೆಯಲಿದೆ.ಸಂಜೆ ವಿವಿಧ ದೈವಿಕ ಕಾರ್ಯಜರುಗಲಿದೆ. ಮೇ 14ರಂದು ಅಮ್ಮನವರ ವಿಗ್ರಹ ಸ್ಥಾಪನೆ, ಮೇ 15ರಂದು ನವಕಲಾಷಾಭಿಷೇಕ, ಪಂಚಾಮೃತಾಭಿಷೇಕ, ಅಲಂಕಾರ ಸೇವೆ ಮತ್ತಿತರ ಕಾರ್ಯ ನೇರವೇರಿದ ಬಳಿಕ ಸಾಮೂಹಿಕ ಪೂರ್ಣಾಹುತಿ, ಮಹಾಮಂಗಳಾರತಿ ಪ್ರಸಾದ ವಿತರಣೆ ನಡೆಯಲಿದೆ. ನಂತರ ಭಕ್ತರಿಗೆ ಮಹಾ ಅನ್ನಸಂತರ್ಪಣೆ. ಸಂಜೆ ಭಕ್ತವೃಂದದ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ವೈಯ್ಯಕ್ತಿಕವಾಗಿ ಪೂರ್ಣಾಹುತಿಗೆ ಭಾಗವಹಿಸುವ ಭಕ್ತರು ಬೆಳಗ್ಗೆ ಹತ್ತು ಗಂಟೆಯಿಂದ ತುಪ್ಪ, ಕಾಯಿ ವಸ್ತ್ರ ನೀಡಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ಕೃಪೆ ಪಾತ್ರರಾಗಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಜಾ ಮಾರಾಟ : ಓರ್ವನ ಬಂಧನ

ದಾಂಡೇಲಿ: ನಗರದ ಟಿ.ಆರ್.ಟಿ ಕ್ರಾಸ್ ಹತ್ತಿರದಲ್ಲಿರುವ ನೀರಿನ ಟ್ಯಾಂಕ್ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಓರ್ವನನ್ನು ಬಂಧಿಸಿ ಮಾಲನ್ನು ವಶಪಡಿಸಿದ ಘಟನೆ ನಡೆದಿದೆ.ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಸ್ಥಳೀಯ ಗಾಂಧಿನಗರದ ನಿವಾಸಿ ರಾಜೇಸಾಬ್ ಸಿದ್ದಿ ನಾಯ್ಕ (ವ.75) ಈತನನ್ನು ಬಂಧಿಸಿ, ಈತನಿಂದ 15,000/– ಮೌಲ್ಯದ 270 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡು ಈತನ ಮೇಲೆ ಪ್ರಕರಣ ದಾಖಲಿಸಲಾಗಿದೆ. ಡಿವೈಎಸ್ಪಿ ಶಿವಾನಂದ ಮದರಕಂಡಿ ಹಾಗೂ ಸಿಪಿಐ ಶಿವಾನಂದ ಅಂಬಿಗೇರ ಮಾರ್ಗದರ್ಶನದಲ್ಲಿ ಪಿಎಸ್ಐ ಕಿರಣ್ ಪಾಟೀಲ್ ನೇತೃತ್ವದ ಪೊಲೀಸರ ತಂಡ ದಾಳಿ ನಡೆಸಿತ್ತು.

ದಂಧೆಕೋರರ ಹೆಡೆಮುರಿ ಕಟ್ಟಲು ಮಾಸ್ಟರ್ ಪ್ಲಾನ್

ಮುಂಡಗೋಡ: ಜಮೀರ್ ಅಹ್ಮದ್ ದರ್ಗಾವಾಲೆ ಹತ್ಯೆಯ ಬೆನ್ನಲ್ಲೇ ತಾಲೂಕಿನಲ್ಲಿರುವ ಮೀಟರ್ ಬಡ್ಡಿ ದಂಧೆಕೋರರ ಹೆಡೆಮುರಿ ಕಟ್ಟಲು ಜಿಲ್ಲಾ ಎಸ್ಪಿ ದೀಪನ್ ಎಮ್.ಎನ್.ನೇತೃತ್ವದ ತಂಡ ಮಾಸ್ಟರ್ ಪ್ಲಾನ್ ಮಾಡಿದೆ. ಈಗಾಗಲೇ ಮೀಟರ್ ಬಡ್ಡಿ ದಂಧೆಕೋರರ ಯಾದಿಯನ್ನು ಸಿದ್ಧಪಡಿಸುತ್ತಿರುವುದಾಗಿ ಪೊಲೀಸ್ ಮೂಲಗಳಿಂದ ತಿಳಿದು ಬಂದಿದ್ದು ಇದೇ ವಾರದಲ್ಲಿ ಮೀಟರ್ ಬಡ್ಡಿ ದಂಧೆಕೋರರ ಗಡಿ ಪಾರಿಗೆ ಸಿದ್ಧತೆ ನಡೆಸಲಾಗಿದೆ ಎನ್ನಲಾಗಿದೆ. ಈ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಅಧಿಕೃತವಾಗಿ ಎಸ್ಪಿ ಆದೇಶಿಸಲಿದ್ದಾರೆ. ಅತೀ ಮುಖ್ಯವಾಗಿ ರೌಡಿ ಶೀಟರ್ ಮತ್ತು ಮೀಟರ್ ಬಡ್ಡಿ ದಂಧೆಕೊರರನ್ನೇ ಗುರಿಯಾಗಿಸಿ ಇಟ್ಟುಕೊಂಡು ಅವರ ಮಟ್ಟ ಹಾಕಲು ಸಜ್ಜಾಗಿದ್ದಾರೆ. ಮೀಟರ್ ಬಡ್ಡಿ ಕಿರುಕುಳ ನೀಡುತ್ತಿರುವವರ ಮೇಲೆ ಕಣ್ಣು ಇಟ್ಟಿದ್ದು ಅವರಿಂದ ಕಿರುಕೊಳಕ್ಕಾದವರು ಯಾವುದೇ ಭಯವಿಲ್ಲದೇ ನೇರವಾಗಿ ಎಸ್ಪಿಗೆ ಮಾಹಿತಿ ನೀಡುವಂತೆ ಮನವಿ ಮಾಡಿಕೊಂಡಿದ್ದು 9480805201 ಮೊಬೈಲ್ ನಂಬರ್‌ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಅವರು ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60099	72109
ಬಿಳಿಗೋಟು	21600	38229
ಕೆಂಪುಗೋಟು	24019	37099
ಬೆಟ್ಟೆ	42199	49989
ರಾಶಿ	50009	54699
ಚಾಲಿ	44600	48730
ಬಿ.ಕಾಳುಮೆಣಸು	88000	88000



ಶಿರಸಿ: ಶ್ರೀ ಮಠದ ಶ್ರೀ ರಾಜರಾಜೇಶ್ವರಿ ಸಂಸ್ಕೃತ ಮಹಾವಿದ್ಯಾಲಯದ ಆಶ್ರಯದಲ್ಲಿ ಆಯೋಜಿಸಿರುವ ಈ ಗೋಷ್ಠಿಗೆ ಮಠದ ಕಿರಿಯ ಶ್ರೀಗಳಾದ ಶ್ರೀಮದ್ ಆನಂದಬೋಧೇಂದ್ರ ಸರಸ್ವತೀ ಶ್ರೀಗಳು ಚಾಲನೆ ನೀಡಿದರು.

ಶಾಸ್ತ್ರಾರ್ಥಯನ ಗೋಷ್ಠಿಗೆ ಶ್ರೀಗಳು ಚಾಲನೆ

ಶಿರಸಿ: ತಾಲೂಕಿನ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಆಶ್ರಯದಲ್ಲಿ ನಡೆಯುತ್ತಿರುವ ಐದು ದಿನಗಳ 'ಶಾಸ್ತ್ರಾರ್ಥಯನ ಗೋಷ್ಠಿ -2026' ಕಾರ್ಯಕ್ರಮವು ಸಂಸ್ಕೃತ ಹಾಗೂ ಶಾಸ್ತ್ರಾಭ್ಯಾಸಿಗಳ ಗಮನ ಸೆಳೆಯುತ್ತಿದ್ದು, ನಾಡಿನ ವಿವಿಧ ಭಾಗಗಳಿಂದ ಆಗಮಿಸಿರುವ ವಿದ್ವಾಂಸರ ಸಾನ್ನಿಧ್ಯದಲ್ಲಿ ಗಂಭೀರ ಶಾಸ್ತ್ರ ಚರ್ಚೆಗಳು ಆರಂಭಗೊಂಡಿವೆ.ಶ್ರೀ ಮಠದ ಶ್ರೀ ರಾಜರಾಜೇಶ್ವರಿ ಸಂಸ್ಕೃತ ಮಹಾವಿದ್ಯಾಲಯದ ಆಶ್ರಯದಲ್ಲಿ ಆಯೋಜಿಸಿರುವ ಈ ಗೋಷ್ಠಿಗೆ ಮಠದ ಕಿರಿಯ ಶ್ರೀಗಳಾದ ಶ್ರೀಮದ್ ಆನಂದಬೋಧೇಂದ್ರ ಸರಸ್ವತೀ ಶ್ರೀಗಳು ಚಾಲನೆ ನೀಡಿದರು. ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಹಾಗೂ ಕಿರಿಯ ಶ್ರೀಗಳ ಸಾನ್ನಿಧ್ಯದಲ್ಲಿ ಚಿಂತನಾ ಗೋಷ್ಠಿಗಳು ನಡೆಯುತ್ತಿವೆ. ಪ ಗೋಷ್ಠಿಯಲ್ಲಿ ವ್ಯಾಕರಣ, ನ್ಯಾಯ, ಧರ್ಮಶಾಸ್ತ್ರ, ಯೋಗದರ್ಶನ, ಪೂರ್ವಮೀಮಾಂಸಾ, ಅಲಂಕಾರ, ಸೇರಿದಂತೆ ಒಂಬತ್ತು ಪ್ರಮುಖ ಶಾಸ್ತ್ರಗಳ ಕುರಿತಾಗಿ ಆಳವಾದ ಚರ್ಚೆಗಳು ಮತ್ತು ಪ್ರಬಂಧ ಮಂಡನೆಗಳು ನಡೆಯುತ್ತಿವೆ.ವಿದ್ವಾನ್ ಸೂರ್ಯನಾರಾಯಣ ಭಟ್ ಹಿಳ್ಳೆ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಗೋಷ್ಠಿಯಲ್ಲಿ ವಿದ್ವಾನ್ ಉಮಾಕಾಂತ ಭಟ್ ಕೆರೇಕೈ, ಡಾ. ಮಹಾಬಲೇಶ್ವರ ಭಟ್ ಚಿಟ್ಟೆಕಣ, ಡಾ.ಮಹೇಶ ಭಟ್ ಇಡಗುಂದಿ, ಡಾ.ಚಂದ್ರಶೇಖರ ಭಟ್ ಶೃಂಗೇರಿ ಸೇರಿದಂತೆ ನಾಡಿನ ಗಣ್ಯ ವಿದ್ವತ್ ಸಮೂಹ ಭಾಗವಹಿಸಿದೆ.ಮೇ 7ರವರೆಗೆ ನಡೆಯಲಿರುವ ಈ ಶಾಸ್ತ್ರಾರ್ಥಯನ ಗೋಷ್ಠಿಯು ಸಂಸ್ಕೃತ ಹಾಗೂ ಭಾರತೀಯ ಶಾಸ್ತ್ರ ಪರಂಪರೆಯ ಅಧ್ಯಯನಕ್ಕೆ ಉತ್ತೇಜನ ನೀಡುವ ಅಪೂರ್ವ ಜ್ಞಾನೋತ್ಸವವಾಗಿ ರೂಪುಗೊಂಡಿದೆ ಎಂಬುದು ವಿಶೇಷವಾಗಿದೆ.



ಮುಂಡಗೋಡ: ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ರಾಜ್ಯ ಪೊಲೀಸ್ ಇಲಾಖೆಯ 'ಆಸರೆ'ಸಮುದಾಯ ಪೊಲೀಸ್ ಯೋಜನೆಯಡಿ ಠಾಣಾ ವ್ಯಾಪ್ತಿಯಲ್ಲಿ ಒಂಟಿಯಾಗಿ ವಾಸಿಸುವ ಹಿರಿಯ ನಾಗರಿಕರ ಮನೆಗಳಿಗೆ ಭೇಟಿ ನೀಡಿ, ಅವರ ಯೋಗಕ್ಷೇಮ, ಸುರಕ್ಷತೆ ಹಾಗೂ ಕುಂದು-ಕೊರತೆಗಳನ್ನು ಆಲಿಸಿದರು.

ಮೇ 9ರ ಅಭಿಮಾನೋತ್ಸವಕ್ಕೆ ಜನೋತ್ಸವದ ಮೆರಗು

ಯಡಿಯೂರಪ್ಪ ಬಿಜೆಪಿಯ ಶಕ್ತಿ: ರೂಪಾಲಿ ನಾಯ್ಕ

ಅಂಕೋಲಾ: ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಅಪರೂಪದ ರಾಜಕಾರಣಿಯಾಗಿದ್ದು,ಅವರ ರಾಜಕೀಯ ಜೀವನದ 50ನೇ ವರ್ಷದ ಸಂದರ್ಭದಲ್ಲಿ ಅಭಿಮಾನೋತ್ಸವ ನಡೆಸಿ ಗೌರವಿಸಲಾಗುತ್ತಿದ್ದು, ಅಭಿಮಾನೋತ್ಸವವನ್ನು ಜನೋತ್ಸವವಾಗಿ ಯಶಸ್ವಿಯಾಗಿಸಬೇಕಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಹೇಳಿದರು.

ಅವರು ಬುಧವಾರ ಭಾರತೀಯ ಜನತಾ ಪಕ್ಷದ ಅಂಕೋಲಾ ಮಂಡಲದ ಸಭೆಯಲ್ಲಿ ಕಾರ್ಯಕಾರಿಣಿ ಸಮಿತಿಗೆ ಆಮಂತ್ರಣ ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಮಾತನಾಡಿದ ಅವರು ಮೇ 9ರಂದು ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಯಡಿಯೂರಪ್ಪ ಅವರ ಸಾರ್ಥಕ ಸೇವೆಯನ್ನು ಸ್ಮರಣೀಯವಾಗಿಸೋಣ ಎಂದರು.

ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಜೀವನ ಸ್ಫೂರ್ತಿದಾಯಕವಾಗಿದ್ದು ಸೈಕಲ್ ತುಳಿದು ಪಕ್ಷ ಸಂಘಟಿಸುತ್ತಲೇ ಛಲ ಬಿಡದ ಛಲಗಾರರಂತೆ ಬಿಜೆಪಿಯನ್ನು ಬೆಳೆಸಿ ಅಧಿಕಾರಕ್ಕೆ ತಂದಿದ್ದಾರೆ. ಅಧಿಕಾರದಲ್ಲಿದ್ದಾಗ ಅನೇಕ ಜನಪರ ಯೋಜನೆಗಳನ್ನು ಅವರು ನೀಡಿದ್ದರು. ಇಂದಿಗೂ ಜನರು ಇದನ್ನು ಸ್ಮರಿಸುತ್ತಾರೆ.

ಅಭಿಮಾನೋತ್ಸವ ಯಡಿಯೂರಪ್ಪ ಅವರ ಜನಪರ ಹೋರಾಟ, ಅಭಿವೃದ್ಧಿ ಪರ ಕಾರ್ಯಕ್ರಮಗಳು, ರೈತರಿಗೆ ನೀಡಿರುವ ಕೊಡುಗೆ ಸೇರಿದಂತೆ ಹಲವಾರು ಕೊಡುಗೆಗಳನ್ನು ಸ್ಮರಿಸುವ ವೇದಿಕೆಯಾಗಲಿದೆ ಎಂದರು.



ಅಭಿಮಾನ ಪೂರ್ವಕವಾಗಿ ಗೌರವಿಸಿ

ರಾಜ್ಯದಲ್ಲಿ ಹೋರಾಟ ಮತ್ತು ಪಕ್ಷ ಸಂಘಟನೆಯ ಮೂಲಕ ಭಾರತೀಯ ಜನತಾ ಪಕ್ಷವನ್ನು ಕಟ್ಟಿ ಬೆಳೆಸಿ ಅಧಿಕಾರಕ್ಕೆ ತಂದ ಯಡಿಯೂರಪ್ಪ ಅವರನ್ನು ಅಭಿಮಾನಪೂರ್ವಕವಾಗಿ ಗೌರವಿಸುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸರ್ವರೂ ಪಾಲ್ಗೊಳ್ಳಿ ಎಂದು ರೂಪಾಲಿ ನಾಯ್ಕ ಹೇಳಿದರು.

ನಮ್ಮದೇ ಸರ್ಕಾರ: ಪಶ್ಚಿಮ ಬಂಗಾಲದಲ್ಲಿ ಹಿಂದುಗಳು ಸಂಘಟಿತರಾಗಿ ತಮ್ಮ ಶಕ್ತಿಯನ್ನು ತೋರಿಸಿದ ಪರಿಣಾಮವಾಗಿ ಹಿಂದು ವಿರೋಧಿ ಮಮತಾ ಸರ್ಕಾರ ಬದಲಾಗಿದೆ. ಬಿಜೆಪಿ ಅಭೂತಪೂರ್ವ ಗೆಲುವು ದಾಖಲಿಸಿದೆ. ರಾಜ್ಯದಲ್ಲೂ ಹಿಂದು ವಿರೋಧಿ ಕಾಂಗ್ರೆಸ್ ಸರ್ಕಾರವಿದ್ದು, ಇಲ್ಲೂ ಜನತೆ ಕಾಂಗ್ರೆಸ್ ಆಡಳಿತದ ವಿರುದ್ಧ ಆಕ್ರೋಶಗೊಂಡಿದ್ದಾರೆ. ಮುಂಬರುವ ದಿನಗಳಲ್ಲಿ ರಾಜ್ಯದಲ್ಲೂ ಬಿಜೆಪಿ ಅಧಿಕಾರಕ್ಕೆ ಬರಲಿದ್ದು ಕಾರ್ಯಕರ್ತರ ತ್ಯಾಗಕ್ಕೆ ಗೌರವ ಸಿಗಲಿದೆ. ಪಕ್ಷ ಸಂಘಟನೆಯ ಜೊತೆಗೆ ಕಾರ್ಯಕರ್ತರು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡಬೇಕು ಎಂದರು.

ಬಿಜೆಪಿಯ ಪ್ರಮುಖ ಸಂಜಯ ನಾಯ್ಕ ಚಂದ್ರಕಾಂತ ನಾಯ್ಕ, ಶ್ರೀಧರ ನಾಯ್ಕ, ಜಯಾ ನಾಯ್ಕ, ತಾರಾ ನಾಯ್ಕ, ದಾಮೋದರ ರಾಯ್ಕರ್,ಮಂಗೇಶ ಆಗೇರ, ಚಂದ್ರಕಾಂತ ಪಿರನಕರ್ ಇದ್ದರು.

ಚಿರತೆ ಪ್ರತ್ಯಕ್ಷ: ಸ್ಥಳೀಯ ಜನರಲ್ಲಿ ಆತಂಕ



ಅಂಕೋಲಾ: ತಾಲೂಕಿನ ಜನವಸತಿ ಪ್ರದೇಶಗಳಲ್ಲಿ ಚಿರತೆಗಳ ಹಾವಳಿ ಮುಂದುವರಿದಿದ್ದು, ರಾಮನಗುಳಿ ವಲಯ ಅರಣ್ಯ ವ್ಯಾಪ್ತಿಯ ಹೆಬ್ಬುಳದಲ್ಲಿ ರಾತ್ರಿ ಸಮಯದಲ್ಲಿ ಚಿರತೆ ಓಡಾಟ ಸ್ಥಳೀಯ ಜನರಲ್ಲಿ ಆತಂಕ ಮೂಡಿಸಿದೆ. ಹೆಬ್ಬುಳ ಗ್ರಾಮದ ತಾರಿಮಡಿಯ ಮನೆಯೊಂದರ ಕೋಳಿ ಗೂಡಿನಿಂದ 18 ಕೋಳಿಗಳು ರಾತ್ರಿ ಕಳೆಯುವುದರೊಳಗೆ ನಾಪತ್ತೆಯಾಗಿದ್ದು ನಾಯಿಗಳು ಹಿಡಿದು ತಿಂದವೋ ಅಥವಾ ಕಾಡು ಬೆಕ್ಕಿನ ಕೆಲಸವೋ ಎಂದು ಯೋಚಿಸುತ್ತಿದ್ದವರಿಗೆ ಸಮೀಪದ ಮನೆಯೊಂದರ ಸಿ.ಸಿ ಟಿವಿ ದೃಶ್ಯಾವಳಿಯಲ್ಲಿ ಚಿರತೆಯೊಂದು ಕೋಳಿ ಎತ್ತಿಕೊಂಡು ಹೋಗುವ ದೃಶ್ಯ ಕಂಡು ಬಂದಿದ್ದು ಗ್ರಾಮಸ್ಥರು ದಿಗಿಲುಗೊಳ್ಳುವಂತಾಗಿದೆ.ಅದೇ ಗ್ರಾಮದ ನಿವಾಸಿಯೊಬ್ಬರ ಆಕಳನ್ನು ಸಹ ಚಿರತೆ ಎತ್ತಿಕೊಂಡುಹೋಗಿರುವುದಾಗಿ ತಿಳಿದು ಬಂದಿದೆ. ಈ ಭಾಗದಲ್ಲಿ ಈಗಾಗಲೇ ಹಲವಾರು ನಾಯಿಗಳನ್ನು ಚಿರತೆ ಹೊತ್ತೊಯ್ದಿರುವುದಾಗಿ ಜನರು ಆಡಿಕೊಳ್ಳುತ್ತಿದ್ದು ಇತ್ತೀಚಿನ ಕೆಲವುದಿನಗಳಿಂದ ಚಿರತೆ ಸುತ್ತ ಮುತ್ತಲಿನ ಪ್ರದೇಶಗಳಲ್ಲೇ ಸಂಚರಿಸುತ್ತಿದೆ ಎಂದು ಹೇಳಲಾಗುತ್ತಿದೆ.ಸಂಜೆ ಸೂರ್ಯ ಮುಳುಗಿದ ಸ್ವಲ್ಪ ಸಮಯದಲ್ಲೇ ಚಿರತೆ ಓಡಾಟ ಆರಂಭವಾಗುತ್ತದೆ ಇದರಿಂದಾಗಿಜನರು ಸಂಜೆಯ ನಂತರ ಮನೆಯಿಂದ ಹೊರಬರಲು ಭಯಪಡುವಂತಾಗಿದೆ. ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಆಗ್ರಹ ಕೇಳಿ ಬಂದಿದೆ.

ತಾಲೂಕಿನ ಅಗ್ರಗೋಣ,ತಳಗದ್ದೆ, ಬೆಳಸೆ, ಸಕಲಬೇಣ ಸುತ್ತ ಮುತ್ತಲಿನ ಜನವಸತಿ ಪ್ರದೇಶಗಳಲ್ಲಿ ಆಗಾಗ ಚಿರತೆಗಳ ಓಡಾಟದ ಕುರಿತಂತೆ ಸುದ್ದಿ ಕೇಳಿ ಬರುತ್ತಲೇ ಇದ್ದು ಅರಣ್ಯ ಪ್ರದೇಶಗಳಲ್ಲಿ ಆಹಾರದ ಕೊರತೆಯಿಂದ ಚಿರತೆಗಳು ಸಮೀಪದ ಜನವಸತಿ ಪ್ರದೇಶಗಳಿಗೆ ಬಂದು ದನ ಕರುಗಳು, ನಾಯಿಗಳನ್ನು ಹೊತ್ತು ಸಾಗುತ್ತಿವೆ.

ತಾಲೂಕಿನ ಗ್ರಾಮೀಣ ಪ್ರದೇಶದ ನಿರ್ಮಾಣ ಹಂತದ ಮನೆಯೊಂದರಲ್ಲಿ ಅವಿತಿದ್ದ ಚಿರತೆಯೊಂದು ಯುವಕನೋರ್ವನ ಮೇಲೆ ದಾಳಿ ಮಾಡಿ ಗಾಯಗೊಳಿಸಿದ ಘಟನೆ ಸಹ ನಡೆದಿತ್ತು ಜಿಲ್ಲೆಯಲ್ಲಿ ಮನುಷ್ಯರ ಮೇಲೆ ಚಿರತೆ ದಾಳಿ ನಡೆಸಿದ ಘಟನೆ ಇತ್ತೀಚೆಗೆ ನಡೆದಿದ್ದು ಹೆಬ್ಬುಳ ಸುತ್ತ ಮುತ್ತ ಚಿರತೆ ಸಂಚಾರಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಚಿರತೆ ಸೆರೆಗೆ ಕ್ರಮ ಕೈಗೊಳ್ಳಬೇಕಿದೆ.



ಗೋಕರ್ಣ: ದೇವಾಲಯದಲ್ಲಿ ಭಕ್ತರು ಬಿಟ್ಟು ಹೋದ ಮೊಬೈಲ್‌ನ ವಾರಸುದಾರರ ಪತ್ತೆ ಹಚ್ಚಿ ಮರಳಿಸಿದ ಘಟನೆ ಬುಧವಾರ ಸಂಜೆ ಇಲ್ಲಿನ ಮಹಾಬಲೇಶ್ವರ ಮಂದಿರದ ಪೊಲೀಸ್ ಹೊರ ಠಾಣೆಯಲ್ಲಿ ನಡೆದಿದೆ. ತಾಮ್ರಗೌರಿ ಮಂದಿರದಲ್ಲಿ ಸ್ಥಳೀಯ ಭಕ್ತರಿಗೆ ಮೊಬೈಲ್ ಸಿಕ್ಕಿದ್ದು, ಇದನ್ನ ಪೊಲೀಸ್ ಹೊರ ಠಾಣೆಗೆ ತಲುಪಿಸಿದ್ದಾರೆ. ಹವಾಲ್ದಾರ್ ಜಟ್ಟಪ್ಪ ನಾಯ್ಕ ವಾರಸುದಾರರ ಪತ್ತೆ ಹಚ್ಚಿ ಮರಳಿ ನೀಡಿದ್ದಾರೆ. ತಮಿಳುನಾಡಿನ ಮಧುರೆಯ ಮುತ್ತುಮಾರಿ ಎಂಬುವವರ ಮೊಬೈಲ್ ಆಗಿದ್ದು,ವಾಪಸ ನೀಡಿದ ಪೊಲೀಸ್ ಹಾಗೂ ಸ್ಥಳೀಯ ಭಕ್ತರಿಗೆ ಕೃತಜ್ಞತೆ ಸಲ್ಲಿಸಿ ತೆರಳಿದ್ದಾರೆ.

ಕಳಪೆ ಕಾಮಗಾರಿ: ಕ್ರಮ ಕೈಗೊಳ್ಳಲು ಒತ್ತಾಯ

ಹಳಿಯಾಳ: ತಾಲೂಕಿನ ಬಿ.ಕೆ.ಹಳ್ಳಿ ಗ್ರಾಮದ ಸಮಸ್ತ ನಾಗರೀಕರ ವೇದಿಕೆಯ ಮೂಲಕ ಮೇ 6ರಂದು ಜಲ ಜೀವನ್ ಮಿಷನ್ ಕಳಪೆ ಕಾಮಗಾರಿಯನ್ನು ವಿರೋಧಿಸಿ ಮತ್ತು ಸಂಪೂರ್ಣ ಪ್ರಮಾಣದ ಉನ್ನತ ಮಟ್ಟದ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಲು ಒತ್ತಾಯಿಸಿ ಹಳಿಯಾಳ ತಾಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಲಾಸ್ ರಾಜ ಹಾಗೂ ಹಳಿಯಾಳ ತಾಲೂಕಾಡಳಿತದ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿಯವರಿಗೆ ಹಾಗೂ ಜೆಜೆಎಮ್‌ನ ಎಇಇಗಳಿಗೆ ಮೌಖಿಕವಾಗಿಯೇ ಮನವಿ ಸಲ್ಲಿಸಲಾಯಿತು.

ಇತ್ತೀಚೆಗೆ ನಮ್ಮ ಪತ್ರಿಕೆಯು ಪ್ರಕಟಿಸಿದ ನಿರಂತರ ಕಾಳಜೀಪೂರ್ವಕ ವಿಶೇಷ ವರದಿಯ ಫಲವಾಗಿ ಗ್ರಾಮಸ್ಥರು ಈಗ ಎಲ್ಲ ಸ್ಥರದ ಮುಖಂಡರುಗಳಿಗೆ ಹಾಗೂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೂ ಪತ್ರ ಬರೆದು ಕಳಪೆ ಕಾಮಗಾರಿಯ ವಿರುದ್ಧ ಬಹು ದೊಡ್ಡ ಹೋರಾಟಕ್ಕೆ ಅಣಿಯಾಗಿದ್ದಾರೆ.

ಪತ್ರಿಕೆಯು ವಾಸ್ತವಾಂಶದ ಮೇಲೆ ಬೆಳಕು ಚೆಲ್ಲಿ ಜಿಲ್ಲೆಯಾದ್ಯಂತ ಜಾಗೃತಿ ಮೂಡಿಸಿದ್ದು ಇಂದು ಒಂದು ಗ್ರಾಪಂ ವ್ಯಾಪ್ತಿಯ ಜನತೆ ಹೋರಾಟಕ್ಕೆ ಇಳಿದಿರುವುದು ಮುಂದೆ ತಾಲೂಕಾದ್ಯಂತ ಮತ್ತು ಜಿಲ್ಲೆಯಾದ್ಯಂತ ಪ್ರತಿಭಟನೆ ಮತ್ತು ಹೋರಾಟಗಳು ಪ್ರಾರಂಭವಾದರೂ ಆಶ್ಚರ್ಯವಿಲ್ಲ.

ನೀರು ಜೀವ ಜಲವಾಗಿದ್ದು, ಕುಡಿಯುವ ನೀರಿನ ಯೋಜನೆಯಂತಹ ಅತೀ ಮಾನವೀಯ ಯೋಜನೆಗಳಲ್ಲೂ ಕಳಪೆ ಕಾಮಗಾರಿಯ ಮೂಲಕ ಸಾರ್ವಜನಿಕರಿಗೆ ಮೋಸ ಮಾಡುವ ಮನುಷ್ಯನ ಕೀಳು ಮಟ್ಟದ ಆಸೆಗೆ ವಿರೋಧ ವ್ಯಕ್ತವಾಗುತ್ತಿರುವುದು ಜನತೆಯಲ್ಲಿ ಬದಲಾವಣೆಯ ಗಾಳಿ ಬೀಸಿದಂತಾಗಿದೆ.

ಈ ಕೂಡಲೇ ಜಿಲ್ಲಾಡಳಿತ ಕುಡಿಯುವ ನೀರಿಗಾಗಿ ಈ ಬಾರಿಯೂ ಟ್ಯಾಂಕರ್‌ಗಳನ್ನು ಆಶ್ರಯಿಸುವಂತೆ ಮಾಡದೇ ಹಳಿಯಾಳಿಗರ ಕನಸಿನ ಕೂಸಾದ ಕಾಳಿನದಿ ಬಹುಗ್ರಾಮ ಶುದ್ಧ ಕುಡಿಯುವ ನೀರಿನ ಯೋಜನೆ ತಕ್ಷಣದಲ್ಲೇ ಅನುಷ್ಠಾನ ಗೊಳಿಸಿ ಜಲಕ್ಷಾಮ ನಿವಾರಿಸ ಬೇಕಾಗಿದೆ.ಇಂದಿನ ಮನವಿ ಕೊಡಲು ಗ್ರಾಮದ ಬಹು ಸಂಖ್ಯಾತ ಜನತೆ ಶಾಂತಿಯಿಂದ ಮತ್ತು ಸಂಯಮದಿಂದ ವರ್ತಿಸಿದ್ದು ಮಾದರಿಯಾಗಿದೆ.



ಸೇತುವೆ ಸರಿಪಡಿಸಲು ಒತ್ತಾಯ



ಗೋಕರ್ಣ: ರಾಜ್ಯ ಹೆದ್ದಾರಿ 143ರ ಮೂಲೆಕೇರಿ ಬಳಿಯ ಕಿರುಸೇತುವೆ ಶಿಥಿಲಗೊಂಡಿದ್ದು, ಕುಸಿದು ಬೀಳುವ ಅಪಾಯವಿದೆ.

ತೊರ್ಕೆ ಗ್ರಾಪಂ ಪಂಚಾಯತ ವ್ಯಾಪ್ತಿಯ ಜನವಸತಿ ಪ್ರದೇಶದ ಹತ್ತಿರವೇ ಹಾದು ಹೋದ ಮುಖ್ಯ ಮಾರ್ಗದ ಸೇತುವೆಯ ಪಿಚ್ಚಿಂಗ್ ಕಲ್ಲು ಕಿತ್ತು ಬಿದ್ದಿದ್ದು,ಅಲ್ಪ ಪ್ರಮಾಣದಲ್ಲಿ ಬಾಗಿದೆ. ನಿತ್ಯ ಸಾವಿರಾರು ವಾಹನಗಳು ತೆರಳುವ ಈ ಮಾರ್ಗದ ಸೇತುವೆ ಸರಿಪಡಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಇನ್ನೊಂದು ತಿಂಗಳಲ್ಲಿ ಮಳೆಗಾಲ ಬರಲಿದ್ದು, ಈ ಸಮಯದಲ್ಲಿ ಸೇತುವೆ ಕುಸಿದರೆ ವಾಹನಗಳ ಅವಘಡದ ಜೊತೆ ಇಲ್ಲಿನ ನೂರಾರು ಮನೆಗಳಿಗೆ ನೀರು ನುಗ್ಗಿ ಜಲಪ್ರವಾಹವಾಗುವ ಆತಂಕವಿದೆ. ಹತ್ತಿರದ ದನಕರುಗಳ ಕೊಟ್ಟಿಗೆ, ಗದ್ದೆಗಳಿದ್ದು, ಅಪಾರ ಪ್ರಮಾಣದಲ್ಲಿ ಹಾನಿಯಾಗುವ ಸಂಭವವಿದೆ. ತಕ್ಷಣ ಸಂಬಂಧಿಸಿದ ಇಲಾಖೆ ಎಚ್ಚೆತ್ತು ಕ್ರಮ ತೆಗೆದುಕೊಳ್ಳ ಬೇಕಿದೆ.

ಮನವಿಗೆ ಸ್ಪಂದಿಸದ ಅಧಿಕಾರಿಗಳು: ಮೂಲೆಕೇರಿ ನಿವಾಸಿಗಳು ನಾಲ್ಕು ವರ್ಷಗಳಿಂದ ಸೇತುವೆಯನ್ನ ಸರಿಪಡಿಸುವಂತೆ ಆಗ್ರಹಿಸುತ್ತಾ ಬಂದಿದ್ದು, ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಗ್ರಾಪಂ, ಸಂಬಂಧಿಸಿದ ಇಲಾಖೆ ಅಧಿಕಾರಿಗಳವರೆಗೆ ಮನವಿ ನೀಡಿದ್ದಾರೆ ಆದರೆ ಈವರೆಗೂ ನಿರ್ಲಕ್ಷಿಸಿದ್ದು ಪ್ರಸ್ತುತ ಸೇತುವೆ ತೀರಾ ಅಪಾಯದ ಸ್ಥಿತಿಯಲ್ಲಿದೆ.

> **ನಾವು ಹಲವು ವರ್ಷಗಳಿಂದ ಸಂಬಂಧಿಸಿದ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೂ ಮನವಿ ನೀಡಿ ಗಮನಕ್ಕೆ ತಂದಿದ್ದೇವೆ. ಆದರೆ ಸರಿಪಡಿಸಿದೇ ಬಿಟ್ಟ ಪರಿಣಾಮ ಪ್ರಸ್ತುತ ಸೇತುವೆ ಬೀಳುವ ಹಂತಕ್ಕೆ ತಲುಪಿದೆ. ಮಳೆಗಾಲದಲ್ಲಿ ನೀರು ತುಂಬುವ ಜಾಗ ಇದಾಗಿದ್ದು, ಸೇತುವೆ ಕುಸಿದರೆ ನೀರು ಮನೆಗಳಿಗೆ ನುಗ್ಗಿವ ಭೀತಿಯಿದ್ದು, ಮಳೆಗಾಲ ಪ್ರಾರಂಭವಾಗುವ ಮೊದಲು ಸರಿಪಡಿಸುವಂತೆ ಮತ್ತೊಮ್ಮೆ ಕೇಳಿಕೊಳ್ಳುತ್ತೇವೆ.**
> ■ ಬಲೀಂದ್ರ, ಗೌಡ,ಸ್ಥಳೀಯ ನಿವಾಸಿ

ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

ಹಳಿಯಾಳ: ಪಟ್ಟಣದ ಕೆಎಲ್ಎಸ್ ಪದವಿ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು.

ಕನ್ನಡಸಾಹಿತ್ಯ ಪರಿಷತ್ತು ಹಳಿಯಾಳ ತಾಲೂಕು ಘಟಕದ ವತಿಯಿಂದ ನಡೆದ ಈ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀನಿವಾಸ್ ಪ್ರಭು ಉದ್ಘಾಟಿಸಿದರು.

ಕನ್ನಡ ನಮ್ಮ ಮಾತೃ ಭಾಷೆ. ನಮ್ಮ ಅಸ್ಮಿತೆ ಎಂದು ಹೇಳಿದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಚಿಂತಕರಾದ ವಿಠ್ಠಲ ಕೊರ್ವೇಕರ ಕನ್ನಡ ನಾಡು, ನುಡಿ, ರಕ್ಷಣೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂಬ ವಿಷಯದ ಕುರಿತು ಮಾತನಾಡಿ, ಕನ್ನಡದ ಸ್ವಾಯತ್ತ ಸಂಸ್ಥೆ ಕಸಾಪ ಇಂದು ಹೆಮ್ಮರವಾಗಿ ಬೆಳೆದಿದೆ. ಕನ್ನಡಕ್ಕೆ ಸಮಸ್ಯೆ ಎದುರಾದಾಗ ಜನರು, ಸಂಘ, ಸಂಸ್ಥೆಗಳು ಕಾರ್ಯಪ್ರವತ್ತರಾಗಿ ಕನ್ನಡದ ಅಭಿವೃದ್ಧಿಗೆ ಸಹಕಾರಿಯಾಗಿವೆ ಎಂದಿದ್ದಾರೆ. ಇಂದಿನ ಯುವ ಯುವ ಜನತೆ ಕನ್ನಡಕ್ಕೆ ಕಂಕಣ ಬದ್ಧರಾಗಬೇಕು ಎಂದು ಹೇಳಿದರು.

ಜಾನಪದ ಸಂಶೋಧನಾ ಕೇಂದ್ರದ ಮುಖ್ಯಸ್ಥೆ ವಿಶ್ವೇಶ್ವರಿ ಬಸಲಿಂಗಯ್ಯ ಹಿರೇಮಠ್ ಅತಿಥಿಯಾಗಿ ಕನ್ನಡ ನಮ್ಮ ಜೀವ, ಭಾವ, ಸಂವೇದನೆಯ ಭಾಷೆ ಎಂದರು.

ಅಧ್ಯಕ್ಷತೆಯನ್ನು ಕಸಾಪ ಹಳಿಯಾಳ ಘಟಕದ ಅಧ್ಯಕ್ಷೆ ಸುಮಂಗಲ ಅಂಗಡಿ ವಹಿಸಿ ಮಾತನಾಡಿದರು. ಹಳಿಯಾಳ ಘಟಕದ ಕಸಾಪ ಕಾರ್ಯದರ್ಶಿ ಶಾಂತಾರಾಮ ಮಾ. ಚಿಬ್ಬುಲಕರ ಪ್ರಾಸ್ತಾವಿಕ ಮಾತನಾಡಿ, ಸ್ವಾಗತಿಸಿದರು. ಕಾರ್ಯದರ್ಶಿ ಬಸವರಾಜ ಇಟಗಿ ನಿರೂಪಿಸಿದರು. ಕಲ್ಪನಾ ಹುದ್ದಾರ ವಂದಿಸಿದರು. ಜಾನಪದ ಸಂಶೋಧನಾ ಕೇಂದ್ರ ತಂಡದವರಿಂದ ಕನ್ನಡ ಹಾಡುಗಳ ಗಾಯನ ನಡೆಯಿತು.

ಉಪನ್ಯಾಸಕಿ ಹನುಮಂತಿ ಮೋರೆ, ಪೂಜಾ ಪೇಡ್ನೆಕರ, ಸಿಬ್ಬಂದಿಗಳಾದ ಅಲ್ತಾಫ್ ನರಗುಂದ, ನಾಗೇಂದ್ರ ಖಂಡೇಕರ್,ಹರ್ಷದ್ ಮಿಂಡೋಲ್ಕರ, ಆದರ್ಶ ಕಲ್ಲೂರ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಗ್ರಾಮ ದೇವರುಗಳ ಬಂಡಿಹಬ್ಬ ಮೇ 16ರಿಂದ

ಅಂಕೋಲಾ: ಚಾರಿತ್ರಿಕ ಹಿನ್ನೆಲೆಯ ಬಾಸಗೋಡದ ಕೊಗ್ರೆಯ ಗ್ರಾಮ ದೇವರುಗಳ ಬಂಡಿಹಬ್ಬ ಮೇ 16 ರಂದು ನಡೆಯಲಿದ್ದು ಮೇ 17ರಂದು ಭಾನುವಾರ ವಿಶೇಷ ಹರಕೆಗಳನ್ನು ಸಲ್ಲಿಸುವ ಕಾರ್ಯಕ್ರಮ ನಡೆಯಲಿದೆ.

ಶ್ರೀಬೊಮ್ಮಯ್ಯ ದೇವರು, ಶ್ರೀಉಲಿ ಬೀರ, ಶ್ರೀಮಾಣಿಬೀರ ಮತ್ತು ಶ್ರೀಅಮ್ಮನವರು ಹೀಗೆ ನಾಲ್ಕು ದೇವರ ಕಳಸಗಳು ಇರುವ ಕೊಗ್ರೆ ಬಂಡಿಹಬ್ಬದ ಪ್ರಕ್ರಿಯೆಗಳು ಮೇ 9ರಂದು ಸಂಜೆ 5 ಗಂಟೆಗೆ ಸಾಸಿ ಹಾಕುವುದರೊಂದಿಗೆ ಆರಂಭವಾಗಲಿದ್ದು, ಮೇ 10ರಂದು ನಿಂತಲ್ಲಿ ಕಾಯಿ ಒಡೆಯುವುದು, ಮೇ 11ರಿಂದ ಆಡುಕಟ್ಟೆ ಕಾರ್ಯಕ್ರಮಗಳು, ಮೇ 13ರಂದು ದೇವರು ಕರೆಯಲು ಹಿಚ್ಕಡ ಗ್ರಾಮಕ್ಕೆ ಹೊರಡುವುದು, ಮೇ 15ರಂದು ಜಾಗ್ರ ಹಗರಣ, ಮೇ 16ರಂದು ಬಂಡಿಹಬ್ಬ ಮತ್ತು ಮೇ 17ರಂದು ಮಧ್ಯಾಹ್ನ 2 ಗಂಟೆಯಿಂದ ವಿಶೇಷ ಹರಕೆಗಳ ಸಲ್ಲಿಕೆ ನಡೆಯಲಿದೆ.

ಕ್ಷೇತ್ರ ಕೊಗ್ರೆಯ ಪ್ರಸಿದ್ಧ ಬಂಡಿಹಬ್ಬದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದೇವರ ಕೃಪೆಗೆ ಪಾತ್ರರಾಗುವಂತೆ ದೇವಾಲಯಗಳ ಆಡಳಿತಾಧಿಕಾರಿಗಳು, ವೈವಾಟಿ ಗಾಂವಕರರು ಮತ್ತು ಗಾಂವಕರರು, ಕಟಗಿದಾರರು, ಗುನಗರು, ಬಿಡಗುನಗರು, ದೇವಾಲಯದ ಗೌಡರು ಮತ್ತು ಪರಿವಾರ ಮತ್ತು ಗ್ರಾಮಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತರಬೇತಿಯ ಸದುಪಯೋಗ ಪಡಿಸಿಕೊಳ್ಳಿ



ಹಳಿಯಾಳ: ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟಿ ಹಳಿಯಾಳದಲ್ಲಿ 30 ದಿನಗಳ ಎಲೆಕ್ಟ್ರಿಕ್ ಮೋಟಾರ್ ರಿವೈಂಡಿಂಗ್, ರಿಪೇರಿ ಮತ್ತು ಸರ್ವಿಸಿಂಗ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ಯಶಸ್ವಿಯಾಗಿ ನೆರವೇರಿತು. ಗ್ರಾಮೀಣ ಯುವಕರಿಗೆ ತಾಂತ್ರಿಕ ಕೌಶಲ್ಯಗಳನ್ನು ನೀಡುವ ಮೂಲಕ ಸ್ವಯಂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಮುಖ್ಯ ಅತಿಥಿಗಳಾಗಿ ಕೆಪಿಸಿ ಗಣೇಶಗುಡಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಾಜೇಂದ್ರ ಘೋಷಣಟ್ಟಿ ಅವರು ತರಬೇತಿ ಪಡೆದವರಿಗೆ ಪ್ರೇರಣಾದಾಯಕ ಮಾತುಗಳನ್ನಾಡಿದರು. ತರಬೇತಿಯಲ್ಲಿ ಕಲಿತ ಕೌಶಲ್ಯಗಳನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿಗಳಾಗುವಂತೆ ಅವರು ಸಲಹೆ ನೀಡಿದರು. ಹಳೆಯ ಶಿಬಿರಾರ್ಥಿ ಹಾಗೂ ಯಶಸ್ವಿ ಉದ್ಯಮಿ ಆಕಾಶ್ ಪೋಕಲೆ ಅವರು ತಮ್ಮ ಅನುಭವ ಹಂಚಿಕೊಂಡರು. ಅಧ್ಯಕ್ಷತೆಯನ್ನು ಸಂಸ್ಥೆಯ ಯೋಜನಾ ಸಂಯೋಜಕರಾದ ವಿನಾಯಕ ಎ. ಚವ್ಹಾಣ ವಹಿಸಿ, ತರಬೇತಿ ಪಡೆದವರ ಪರಿಶ್ರಮವನ್ನು ಮೆಚ್ಚಿ, ತಮ್ಮ ಜೀವನದಲ್ಲಿ ಹೆಚ್ಚಿನ ಸಾಧನೆ ಮಾಡಲು ಉತ್ತೇಜಿಸಿದರು. ಸಂಸ್ಥೆಯು ಗುಣಮಟ್ಟದ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವಲ್ಲಿ ಹಾಗೂ ಸ್ವಯಂ ಉದ್ಯೋಗಕ್ಕೆ ನೆರವಾಗುವಲ್ಲಿ ಸದಾ ಬದ್ಧವಾಗಿದೆ ಎಂದರು. ಉಪನ್ಯಾಸಕ ಕೊಂಡು ಕೋಕರೆ ಸ್ವಾಗತಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ 25 ಶಿಬಿರಾರ್ಥಿಗಳು ಭಾಗವಹಿಸಿದರು. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಎಲ್ಲಾ ತರಬೇತಿ ಪಡೆದವರಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಸಂಸ್ಕೃತಿ ಸಂರಕ್ಷಣೆ ಕಸಾಪ ಮುಖ್ಯ ಗುರಿ

ಮುಂಡಗೋಡ: ಕನ್ನಡ ನಾಡಿನ ನುಡಿ, ಜಲ, ನೆಲ ಮತ್ತು ಸಂಸ್ಕೃತಿ ಇವುಗಳ ಸಂರಕ್ಷಣೆ ಕಸಾಪ ಮುಖ್ಯ ಉದ್ದೇಶ ಎಂದು ಸಾಹಿತಿ, ಚಿಂತಕ ಸುರೇಶ ಕಲ್ಲೊಳ್ಳಿ ಹೇಳಿದರು. ಪಟ್ಟಣದ ನಿವೃತ್ತ ನೌಕರರ ಭವನದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದರು. ಇದುವರೆಗೆ 88 ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ದೆಹಲಿ ಹೀಗೆ ನಾನಾ ಕಡೆ ನಡೆಸಿದ್ದು ಇವುಗಳಲ್ಲಿ ನಾಲ್ಕು ವಕೀಲ, ಭಾರತ ಸಾಹಿತ್ಯ ಸಮ್ಮೇಳನಕ್ಕೆ ಮಹಿಳಾ ಸಾಹಿತಿಗಳನ್ನು ಸರ್ವಾಧ್ಯಕ್ಷನಾಗಿ ಮಾಡಿ ಮಹಿಳೆಯರಿಗೂ ಪ್ರಾತಿನಿಧ್ಯ ನೀಡಿದ್ದು ಅಭಿನಂದನೀಯ ಎಂದರು.ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುಭಾಸ ಡೋರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪರಿಷತ್ತಿನ ಅಧ್ಯಕ್ಷ ವಸಂತ ಕೊಣಸಾಲಿ ಅಧ್ಯಕ್ಷತೆವಹಿಸಿದರು. ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್. ಕೆ. ಬೋರಕರ ಹಾಗೂ ಸಿ.ಎಂ. ಕೋಚಿಂಗ್ ಸಂಚಾಲಕ ಪ್ರವೀಣ ತಟ್ಟಿ ಮಾತನಾಡಿದರು. ಸುರೇಶ ಕಲ್ಲೊಳ್ಳಿ ಮತ್ತು ಪ್ರವೀಣ ತಟ್ಟಿ ಇವರನ್ನು ಸನ್ಮಾನಿಸಲಾಯಿತು.ಸಿ.ಎಂ. ಕೋಚಿಂಗ್ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಕೋಶಾಧ್ಯಕ್ಷ ನಾಗರಾಜ ಅರ್ಕಸಾಲಿ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ವಿನಾಯಕ ಶೇಟ್ ಕಾರ್ಯಕ್ರಮ ನಿರೂಪಿಸಿದರು. ಸುಭಾಸ ವಡ್ಡರ ವಂದಿಸಿದರು. ಗೌರವ ಕಾರ್ಯದರ್ಶಿ ಎಸ್.ಡಿ. ಮುಡೆಣ್ಣವರ, ಸಂಗಪ್ಪ ಕೋಳೂರ, ಎಸ್.ಬಿ.ಹೂಗಾರ, ಆನಂದ ಹೊಸೂರ, ಸಿ.ಎನ್. ಸುರಕೋಡ ಮತ್ತು ಮಂಜುನಾಥ ಕಂಬಿ ಇದ್ದರು.



ಪದಾಧಿಕಾರಿಗಳ ಆಯ್ಕೆ

ಕುಮಟಾ: ಇಲ್ಲಿಯ ಸೀನಿಯರ್ ಚೇಂಬರ್ ಇಂಟರ್ನ್ಯಾಶನಲ್ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಸೀನಿಯರ್ ಚೇಂಬರ್ ಕುಮಟಾ ಘಟಕ ಅಧ್ಯಕ್ಷ ಸೀನಿಯರ್ ಆರ್. ಜಿ. ಭಟ್ ಅವರ ಮನೆಯ ಸಭಾಭವನದಲ್ಲಿ ನಡೆದ ಸಭೆಯಲ್ಲಿ ನೆರವೇರಿತು.

ಸಭೆಯ ಅಧ್ಯಕ್ಷೆಯನ್ನುವಹಿಸಿದ್ದ ಚೇಂಬರ್ ಅಧ್ಯಕ್ಷರ ನೇತೃತ್ವದಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಗೆ ಚಾಲನೆ ದೊರೆಯಿತು.2026-27ನೇಸಾಲಿಗೆಅಧ್ಯಕ್ಷರಾಗಿಉದ್ಯಮಿ ಸೀನಿಯರ್ ವಸಂತ ರಾವ್, ನಿಕಟಪೂರ್ವ ಅಧ್ಯಕ್ಷ ಸೀನಿಯರ್ ಆರ್. ಜಿ. ಭಟ್, ಕಾರ್ಯದರ್ಶಿಯಾಗಿ ನಿವೃತ್ತ ಮುಖ್ಯಾಧ್ಯಾಪಕ ಹಾಗೂ ಲೇಖಕ ಸೀನಿಯರ್ ಎನ್. ಆರ್. ಗಜು, ಕೋಶಾಧ್ಯಕ್ಷರಾಗಿ ಆಶಾ ಆರ್. ಭಟ್, ಉಪಾಧ್ಯಕ್ಷರಾಗಿ ಸೀನಿಯರ್ ಸುನಿಲ್ ಭಟ್ ಹಾಗೂ ಸೀನಿಯರ್ ಜಿ. ಎಂ. ಭಟ್, ಸಹ ಕಾರ್ಯದರ್ಶಿಯಾಗಿ ನಿವೃತ್ತ ಬ್ಯಾಂಕ್ ಅಧಿಕಾರಿ ಸೀನಿಯರ್ ಸುರೇಶ್ ಭಟ್, ನಿರ್ದೇಶಕರಾಗಿ ಸೀನಿಯರ್ ಎಸ್. ವಿ. ಹೆಗಡೆ, ಸುಜಾತಾ ಕಾಮತ್, ಸೀನಿಯರ್ ಗಣೇಶ ಭಟ್, ಸೀನಿಯರ್ ಶ್ರೀಕಾಂತ ಭಟ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿ ಸುನಿಲ್ ಭಟ್ ಸ್ವಾಗತಿಸಿ ವರದಿ ವಾಚಿಸಿದರು. ಎನ್. ಆರ್. ಗಜು ವಂದಿಸಿದರು. ಮೇ ನಾಲ್ಕನೆಯ ವಾರದಲ್ಲಿ ಪದಗ್ರಹಣ ಸಮಾರಂಭವು ಏರ್ಪಡಲಿದೆಯೆಂದು ಸೀನಿಯರ್ ಚೇಂಬರ್ ಘಟಕವು ಪ್ರಕಟಣೆಯಲ್ಲಿ ತಿಳಿಸಿದೆ.

ಕಿರುಸುದ್ದಿ

ಅಭಿಮಾನೋತ್ಸವಕ್ಕೆ ಪೂಜ್ಯರಿಗೆ ಆಹ್ವಾನ

ಹಾನಗಲ್ಲ: ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಪೂಜ್ಯರನ್ನು ಆಹ್ವಾನಿಸಲು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಿಕಾರಿಪುರ ಶಾಸಕ ಬಿವೈ.ವಿಜಯೇಂದ್ರ ಅವರು ತಾಲೂಕಿನ ಅಕ್ಕಿ ಆಲೂರಿಗೆ ಆಗಮಸಿ ವಿರಕ್ತಮಠ ಮತ್ತು ಮುತ್ತಿನಕಂತಿ ಮಠಕ್ಕೆ ಭೇಟಿ ನೀಡಿ ಪೂಜ್ಯರನ್ನು ಸನ್ಮಾನಿಸಿ ಕಾರ್ಯಕ್ರಮಕ್ಕೆ ಆಮಂತ್ರಣ ನೀಡಿ ಆಹ್ವಾನಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ವಿರೂಪಾಕ್ಷಪ್ಪ ಬಳ್ಳಾರಿ, ಹಾನಗಲ್ ತಾಲೂಕಿನ ಬಿಜೆಪಿ ಅಧ್ಯಕ್ಷರಾದ ಮಹೇಶಕುಮಾರ ಕಮಡೊಳ್ಳಿ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಮುಖಂಡರಾದ ಭೋಜರಾಜ ಕರೂದಿ, ರಾಜಶೇಖರಗೌಡ ಕಟ್ಟೇಗೌಡ್ರ, ಕೃಷ್ಣ ಈಳಗೇರ, ರಾಜಣ್ಣ ಅಂಕಸಖಾನಿ, ಸಿದ್ದಲಿಂಗಪ್ಪ ಶಂಕ್ರಿಕೊಪ್ಪ, ಸಚಿನ ರಾಮಣ್ಣನವರ, ಮಾಲತೇಶ ಸೊಪ್ಪಿನ್, ಉದಯ ವಿರುಪಣ್ಣನವರ, ಕುಮಾರ ದೇಶಮುಕ. ಮತ್ತು ಪಕ್ಷದ ಪ್ರಮುಖರು ಕಾರ್ಯಕರ್ತರು ಉಪಸ್ಥಿತರಿದ್ದರು.

ಅಕ್ರಮ ಮದ್ಯ ಸಂಗ್ರಹ: ದೂರು ದಾಖಲು

ಹಾವೇರಿ: ಮನೆಯಲ್ಲಿ ಅನಧಿಕೃತವಾಗಿ ಅಕ್ರಮ ಮದ್ಯ ಸಂಗ್ರಹಿಸಿಕೊಂಡು ಮಾರಾಟ ಮಾಡುತ್ತಿದ್ದ ಆರೋಪದಡಿ ವ್ಯಕ್ತಿಯೊಬ್ಬರ ವಿರುದ್ಧ ದೂರು ದಾಖಲಾಗಿದೆ. ತಾಲೂಕಿನ ಕೋಣನತಂಬಿಗಿ ಗ್ರಾಮದ ರಮೇಶ ಯಮುನಪ್ಪ ಕಳ್ಳಿಮನಿ (35) ಎಂಬಾತನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿತರು ಅಕ್ರಮ ಮದ್ಯವನ್ನು ಸಂಗ್ರಹಿಸಿ ಇಟ್ಟುಕೊಂಡು, ಲೈಸೆನ್ಸ್ ಪಡೆದುಕೊಳ್ಳದೆ ಮಾರಾಟ ಮಾಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿದ ಕಾಲಕ್ಕೆ ಸಿಕ್ಕಿ ಬಿದ್ದಿದ್ದಾರೆ. ಆರೋಪಿತರಿಂದ 2,320 ರೂ.ಮೌಲ್ಯದ ಮದ್ಯದ ಪ್ಯಾಕೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧ ಕಾಣೆ

ಹಾವೇರಿ: ಕೆರಿಮತ್ತಿಹಳ್ಳಿ ಗ್ರಾಮದ 70 ವರ್ಷದ ವೃದ್ಧ ಮಹದೇವಪ್ಪ ಕಲ್ಲಪ್ಪ ಭಜಂತ್ರಿ ಏ.1 ರಂದು ಮನೆಯಿಂದ ಹೋದವನು ಮರಳಿ ಬಾರದೆ ಕಾಣೆಯಾಗಿರುವುದಾಗಿ ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಕಾಣೆಯಾದ ವ್ಯಕ್ತಿ 5.6 ಅಡಿ ಎತ್ತರ, ಕೋಲುಮುಖ, ಗೋದಿಕೆಂಪು ಮೈಬಣ್ಣ ತೆಳ್ಳನೆ ಮೈಕಟ್ಟು ಹೊಂದಿದ್ದು, ಬಿಳಿ ಬಣ್ಣದ ಅಂಗಿ, ನೀಲಿ ಬಣ್ಣದ ಚೆಕ್ಸ್ ಲುಂಗಿ ಧರಿಸಿದ್ದಾನೆ ಈ ವ್ಯಕ್ತಿಯ ಮಾಹಿತಿ ಲಭ್ಯವಾದಲ್ಲಿ ಹಾವೇರಿ ಪೊಲೀಸ್ ಕಂಟ್ರೋಲ್ ರೂಂ 08375-100, ಹಾವೇರಿ ಸಿಪಿಐ ಗ್ರಾಮೀಣ ವೃತ್ತ ದೂರವಾಣಿ ಸಂಖ್ಯೆ ಸಂಪರ್ಕಿಸಬಹುದೆಂದು ಹಾವೇರಿ ಗ್ರಾಮೀಣ ಪೊಲೀಸ್ ಠಾಣೆ ಠಾಣಾಧಿಕಾರಿಗಳು ತಿಳಿಸಿದ್ದಾರೆ.

ವ್ಯಕ್ತಿ ಶವ ಪತ್ತೆ

ಹಾವೇರಿ : ಧಾರವಾಡ ರೈಲು ನಿಲ್ದಾಣದ ವೇದಿಕೆ-1ರಲ್ಲಿ ರೈಲುಗಾಡಿ ಸಂಖ್ಯೆ 12725ರಲ್ಲಿ 60ರಿಂದ 65ವರ್ಷದ ಪುರುಷ ಶವ ಪತ್ತೆಯಾಗಿದ್ದು, ಮೃತ ಪುರುಷನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಮೃತ ವ್ಯಕ್ತಿ 5ಅಡಿ ಎತ್ತರ, ಗೋದಿ ಮೈಬಣ್ಣ, ಸದೃಢ ಮೈಕಟ್ಟು, ಮಂಡಮೂಗು ಹೊಂದಿದ್ದು, ಬಿಳಿ ಬಣ್ಣದ ನೆಹರು ಶರ್ಟ್, ಬಿಳಿ ಬಣ್ಣದ ಪ್ಯಾಂಟ್, ಕಪ್ಪು ಬಣ್ಣದ ಚಪ್ಪಲಿ ಧರಿಸಿದ್ದು, ಶರ್ಟಿನ ಕಿಸೆಯಲ್ಲಿ ಚಿಕ್ಕಮಂಗಳೂರಿಂದ ಕಡೂರಗೆ ತೆಗೆಸಿದ ಬಸ್ ಪ್ರಯಾಣದ ಟಿಕೇಟ ಇದೆ. ಮೃತನ ವಾರಸುದಾರರು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾನಗಲ್ಲ: ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಪೂಜ್ಯರನ್ನು ಆಹ್ವಾನಿಸಲು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಿಕಾರಿಪುರ ಶಾಸಕ ಬಿವೈ.ವಿಜಯೇಂದ್ರ ಅವರು ತಾಲೂಕಿನ ಅಕ್ಕಿ ಆಲೂರಿಗೆ ಆಗಮಸಿ, ವಿರಕ್ತ ಮಠ ಮತ್ತು ಮುತ್ತಿನಕಂತಿ ಮಠಕ್ಕೆ ಭೇಟಿ ನೀಡಿ ಪೂಜ್ಯರನ್ನು ಸನ್ಮಾನಿಸಿ ಕಾರ್ಯಕ್ರಮಕ್ಕೆ ಆಮಂತ್ರಣ ನೀಡಿ ಆಹ್ವಾನಿಸಿದರು.

ರಾಜ್ಯ ಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆ

ಹಾವೇರಿ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಯನ್ನು ಏರ್ಪಡಿಸಲು ಉದ್ದೇಶಿಸಿದೆ. 18ರಿಂದ 40ವರ್ಷ ವಯೋಮಿತಿಯುಳ್ಳವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಗೆ ಅಧ್ಯಯನ ಕೇಂದ್ರವು ನೀಡಿರುವ ವಿಷಯಗಳಲ್ಲಿ ಯಾವುದಾದರು ಒಂದು ವಿಷಯವನ್ನು ಆಯ್ಕೆ ಮಾಡಿ ವಿಮರ್ಶಾ ಲೇಖನವನ್ನು ರಚಿಸಿ ಸ್ಪರ್ಧೆಗೆ ಆಹ್ವಾನ ನೀಡಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಅಂದರೆ ಜೂ.5ರೊಳಗಾಗಿ ಭಾಗವಹಿಸುವ ಸ್ಪರ್ಧೆಯ ಅರ್ಜಿ ಮತ್ತು ವಿಮರ್ಶಾ ಲೇಖನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು. ಅರ್ಜಿಯನ್ನು ಮತ್ತು ಲೇಖನವನ್ನು ಅಂಚೆ/ಕೊರಿಯರ್/ಇಮೇಲ್ ಅಥವಾ ಖುದ್ದಾಗಿ ಸಲ್ಲಿಸಬಹುದು. ಅರ್ಜಿ ನಮೂನೆಯನ್ನು website: https://kanakadasaresearchcenter.karnataka.gov.in/ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ವೆಬ್‌ಸೈಟ್‌ನಲ್ಲಿ ಡೌನಲೋಡ್ ಮಾಡಿಕೊಳ್ಳಬಹುದು ಎಂದು ತತ್ವಪದಕಾರರ ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ : ಜಿಲ್ಲಾ ಬಿಜೆಪಿಗೆ ಸತತ ಎರಡನೇ ಬಾರಿಗೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನಂಜುಂಡೇಶ ಕಳ್ಳೇರ ಅವರನ್ನು ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರ ಸೂಚನೆ ಮೇರೆಗೆ ಜಿಲ್ಲಾಧ್ಯಕ್ಷರಾದ ವಿರೂಪಾಕ್ಷಪ್ಪ ಬಳ್ಳಾರಿ ಅವರು ಆದೇಶ ಪ್ರತಿ ನೀಡಿ ಶುಭಕೋರಿದರು. ಪಕ್ಷದ ಈ ಜವಾಬ್ದಾರಿಯನ್ನು ಸ್ವೀಕರಿಸಿ, ತತ್ವಸಿದ್ಧಾಂತಗಳಿಗೆ ಬದ್ಧರಾಗಿ ಅವುಗಳನ್ನು ಅಳವಡಿಸಿಕೊಂಡು 3 ವರ್ಷದ ಅವಧಿಗೆ ಪಕ್ಷದ ಸಂಘಟನೆಯತ್ತ ಹೆಚ್ಚು ಗಮನ ಹರಿಸಿ, ಕಾರ್ಯಕರ್ತರಿಗೆ ಸ್ಫೂರ್ತಿಯಾಗಿ, ರಾಜಕೀಯವಾಗಿ ಪಕ್ಷದ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಹಣ್ಣುಗಳ ರಾಜ ಮಾವು ಮಾರುಕಟ್ಟೆಗೆ ಲಗ್ಗೆ | ದರದಲ್ಲಿ ಹೆಚ್ಚಳ

ಇಳುವರಿ ಕುಂಠಿತ: ಜೇಬಿಗೆ ಕಂಟಕ

▸ ಕಿರಣ ಮಾಸಣಗಿ

ದಿಗಂತ ವಿಶೇಷ

ಹಾವೇರಿ: ಹಣ್ಣುಗಳ ರಾಜ ಮಾವಿನ ಹಣ್ಣು ಜಿಲ್ಲೆಯ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಮಾವು ಹಣ್ಣಿನ ಪರಿಮಳ ಮಾರುಕಟ್ಟೆಯನ್ನು ಆವರಿಸಿದೆ. ಪ್ರಸಕ್ತ ವರ್ಷ ಮಾವು ಇಳುವರಿ ಕುಂಠಿತವಾಗಿದ್ದರಿಂದ ದರದಲ್ಲಿ ಹೆಚ್ಚಳವಾಗಿದ್ದು, ಗ್ರಾಹಕರ ಜೇಬಿಗೆ ಬಿಸಿ ಮುಟ್ಟಿಸಿದೆ.

ಪ್ರಸಕ್ತ ವರ್ಷ ಜಿಲ್ಲೆಯಲ್ಲಿ ಚಳಿಗಾಲದ ಇಬ್ಬನಿ, ಅಕಾಲಿಕ ಆಲಿಕಲ್ಲು ಮಳೆ ಸೇರಿದಂತೆ ವಿವಿಧ ರೋಗಗಳಿಂದ ಈ ವರ್ಷವೂ ಮಾವಿನ ಇಳುವರಿ ಕುಂಠಿತಗೊಂಡು ನಿರೀಕ್ಷೆಯಷ್ಟು ಮಾವು ಮಾರುಕಟ್ಟೆಗೆ ಬಂದಿಲ್ಲ. ಏತನ್ಮಧ್ಯೆ ಕೆಲವೆಡೆ ಈಗಾಗಲೇ ವಿವಿಧ ತಳಿಯ ಮಾವಿನ ಹಣ್ಣುಗಳು ಮಾರುಕಟ್ಟೆ ಪ್ರವೇಶಿಸಿದ್ದು, ಗ್ರಾಹಕರನ್ನು ಸೆಳೆಯುತ್ತಿವೆ. ಇಳುವರಿ ಕುಂಠಿತಗೊಂಡ ಕಾರಣಕ್ಕೆ ದರವೂ ಕೂಡ ಜಾಸ್ತಿಯಾಗಿದೆ. ಬೇಸಿಗೆಯಲ್ಲಿ ಮಾವಿನ ಹಣ್ಣುಗಳನ್ನು ಸವಿಯಬೇಕೆನ್ನು ಮಾವು ಪ್ರಿಯರು ವ್ಯಾಪಾರಸ್ಥರ ಜತೆಗೆ ಚೌಕಾಸಿ ಮಾಡಿ ಹಣ್ಣುಗಳನ್ನು ಖರೀದಿಗೆ ಮುಂದಾಗಿದ್ದಾರೆ.

ತರಾವರಿ ಹಣ್ಣುಗಳು: ಸದ್ಯ ನಗರದ ಮಾರುಕಟ್ಟೆಯಲ್ಲಿ ರಸಪೂರಿ, ಆಪೂಸ್, ಬೇನಿಶಾ, ಜವಾರಿ, ಸಿಂಡೂಲಾ, ಕೇಸರ್ ತಳಿಯ ಮಾವಿನ ಹಣ್ಣುಗಳು ಲಗ್ಗೆ ಇಟ್ಟಿವೆ. ಇನ್ನೂ ಮುಂದಿನ ದಿನಗಳಲ್ಲಿ ಮಲ್ಲಿಕಾ, ಲಕ್ನೋ49, ನೀಲಂ, ಮಲಗೋಬಾ ಸೇರಿದಂತೆ ವಿವಿಧ ತಳಿಯ ಹಣ್ಣುಗಳು ಮಾರುಕಟ್ಟೆ ಬರುತ್ತವೆ ಎಂದು ಮಾವಿನ ಹಣ್ಣಿನ ವ್ಯಾಪಾರಸ್ಥರು ತಿಳಿಸುತ್ತಾರೆ.

ಎಲ್ಲೆಲ್ಲಿಂದ ಆವಕ?: ಪ್ರಸ್ತುತ ನಗರದ ಮಾರುಕಟ್ಟೆಗೆ ಜಿಲ್ಲೆಯ ಹಾನಗಲ್ಲ, ಹಿರೇಕೆರೂರ, ಶಿಗ್ಗಾಂವ, ಹಾವೇರಿ, ರಾಣೇಬೆನ್ನೂರಗಳಿಂದ ಮತ್ತು ನೆರೆಯ ಜಿಲ್ಲೆಗಳಾದ ಕೊಪ್ಪಳ, ಹುಬ್ಬಳ್ಳಿ, ದಾವಣಗೆರೆ ಸೇರಿದಂತೆ ಇತರೆ ಕಡೆಗಳಿಂದ ಮಾವಿನ ಹಣ್ಣು ಬರುತ್ತಿದೆ. ಸದ್ಯ ಜಿಲ್ಲೆಯ ಹಣ್ಣು ಹೆಚ್ಚು ಮಾರುಕಟ್ಟೆಗೆ ಬರುತ್ತಿದೆ ಎಂಬುದು ವ್ಯಾಪಾರಸ್ಥ ಅಭಿಪ್ರಾಯ



ಮಾವಿನ ಕಾಯಿಗಳಿಗೆ ನಾನಾ ರೀತಿಯ ಪೌಡರ್‌ಗಳನ್ನು ಬಳಕೆ ಮಾಡಿ ಹಣ್ಣುಗಳ ರುಚಿ ಹೆಚ್ಚಿಸಲಾಗುತ್ತದೆ. ಜತೆಗೆ ಕೆಲ ವ್ಯಾಪಾರಿಗಳು ಹುಲ್ಲಿನಲ್ಲಿ ಇಟ್ಟು ಹಣ್ಣು ಮಾಡಿ ಮಾರಾಟ ಮಾಡುತ್ತಾರೆ. ಆದರೆ ಇವೆರಡರಲ್ಲೂ ಹಣ್ಣಿನ ರುಚಿ ಬೇರೆ ಬೇರೆಯಾಗಿರುತ್ತದೆ. ಈ ನಡುವೆ ಗ್ರಾಹಕರು ಹಣ್ಣುಗಳ ವಾಸನೆ ನೋಡಿ ನ್ಯಾಚುರಲ್ ಆಗಿರುವ ಹಣ್ಣುಗಳನ್ನು ಖರೀದಿಸುವ ದೃಶ್ಯ ಸಾಮಾನ್ಯವಾಗಿದೆ.

ಸದ್ಯ ರಸಪೂರಿ ಮಾವಿನ ಹಣ್ಣು ಕೆಜಿಗೆ 180ರಿಂದ 200 ರೂ.ಗಳಿಗೆ ಮಾರಾಟವಾಗುತ್ತಿದೆ. ಅದೇ ರೀತಿ ಆಪೂಸ್ 200 ರಿಂದ 220 ರೂ., ಬೇನಿಶಾ 120ರಿಂದ 140ರೂ., ಜವಾರಿ 80ರಿಂದ 100ರೂ., ಸಿಂಡೂಲಾ 60ರಿಂದ 70 ರೂ., ಕೇಸರ್ 130 ರಿಂದ 140ರೂ.ಗೆ ಮಾರಾಟ ಮಾಡಲಾಗುತ್ತಿದೆ.

ದರ ಇಳಿಕೆ ಸಾಧ್ಯತೆ: ಮಾವಿನಸೀಜನ್ ಈಗಷ್ಟೇ ಪ್ರಾರಂಭಗೊಂಡಿರುವುದರಿಂದ ರೇಟ್ ಹೆಚ್ಚಾಗಿದೆ. ಮುಂಬರುವ ದಿನಗಳಲ್ಲಿ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಮಾವಿನ ದಾಸ್ತಾನು ಬಂದರೆ ಅಥವಾ ಮಳೆ ಬಂದರೆ ದರ ಕೂಡ ಇಳಿಕೆಯಾಗುವ ಸಾಧ್ಯತೆ ಹೆಚ್ಚಿದೆ.

> ಬೇಸಿಗೆಯ ಉರಿಬಿಸಿಲಿನ ತಾಪ ಜನರನ್ನು ಹೈರಾಣಾಗಿಸಿದೆ. ಕಳೆದೊಂದು ವಾರದಿಂದ ಮಾವಿನ ಹಣ್ಣಿನ ಸೀಜನ್ ಕೂಡ ಆರಂಭವಾಗಿದ್ದು, ದರವೂ ಹೆಚ್ಚಾಗಿದೆ. ಸದ್ಯಕ್ಕೆ ಮಾರುಕಟ್ಟೆಯಲ್ಲಿ ಹಣ್ಣಿನ ಆವಕದ ಪ್ರಮಾಣ ಕಡಿಮೆ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗಿದೆ. ಆದರೂ ನೋಡಿಕೊಂಡು ವ್ಯಾಪಾರಸ್ಥರ ಬಳಿ ಚೌಕಾಸಿ ಮಾಡಿ ಖರೀದಿ ಮಾಡುತ್ತೇವೆ.
> ■ ಶಿವಾನಂದ ಸವಣೂರು, ಗ್ರಾಹಕ

> ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಒಳ್ಳೆಯ ಮಳೆಯಾಗಿದ್ದರೂ ಕೂಡ ಬೇಸಿಗೆಯಲ್ಲಿ ಸುರಿದ ಅಕಾಲಿಕ ಆಲಿಕಲ್ಲು ಮಳೆ, ನಾನಾ ರೋಗಗಳ ಹೊಡೆತಕ್ಕೆ ಮಾವು ಇನ್ನೂ ಹೆಚ್ಚಾಗಿ ಮಾರುಕಟ್ಟೆಗೆ ಬಂದಿಲ್ಲ. ಕಳೆದ ವರ್ಷಕ್ಕಿಂತ ಈ ವರ್ಷ ಮಾವಿನ ಇಳುವರಿ ಕಡಿಮೆ ಇದ್ದು, ಮಾರುಕಟ್ಟೆಯಲ್ಲಿ ಹಣ್ಣುಗಳು ಸಹಜವಾಗಿ ದುಬಾರಿಯಾಗಿವೆ. ಈಗಷ್ಟೇ ಸೀಜನ್ ಆರಂಭಗೊಂಡಿದ್ದು ಪ್ರಸ್ತುತವಾಗಿ ಹಣ್ಣಿನ ವ್ಯಾಪಾರ ಚೆನ್ನಾಗಿ ನಡೆಯುತ್ತಿದೆ.
> ■ ಶಂಭುಲಿಂಗಪ್ಪ ಕುರುವತ್ತಿ, ಹಣ್ಣಿನ ವ್ಯಾಪಾರಿ

ಸಂಸ್ಕೃತಿ, ಸಂಸ್ಕಾರ ಉಳಿಸಿ-ಬೆಳೆಸಿ

ಹಾನಗಲ್ಲ: ವೈ ಮನಸ್ಸು, ತಾರತಮ್ಯದಿಂದ ಇಡೀ ವಾತಾವರಣ ಹದಗೆಡಲಿದ್ದು, ಪರಸ್ಪರ ಪ್ರೀತಿ, ವಿಶ್ವಾಸದಿಂದ ಅನ್ಯೋನ್ಯವಾಗಿ ಬದುಕುವ ಸಂಕಲ್ಪ ನಾವಿಂದು ಮಾಡಬೇಕಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹಿರೇಹುಲ್ಲಾಳ ಗ್ರಾಮದಲ್ಲಿ ಗ್ರಾಮದೇವಿ ದೇವಸ್ಥಾನದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಹಿನ್ನೆಲೆಯಲ್ಲಿ ನಡೆದ ಧರ್ಮಸಭೆಯಲ್ಲಿ ಅವರು ಮಾತನಾಡಿ, ಮೇಲು-ಕೀಳು ಭಾವನೆ ಸಮಾಜವನ್ನು ಇನ್ನಷ್ಟು ಕುಗ್ಗಿಸಲಿದೆ. ಎಲ್ಲರೂ ಒಂದಾಗಿ ಬದುಕಿದರೆ ಶಕ್ತಿ ಹೆಚ್ಚಲಿದೆ. ಜಾತಿ, ಮತ, ಪಂಥಗಳನ್ನು ಒಗ್ಗೂಡಿಸಿ ಮುನ್ನಡೆಸದಿದ್ದರೆ ಸಮಾಜ ಛಿದ್ರಗೊಳ್ಳುವ ಆತಂಕ ಹೆಚ್ಚಿದೆ. ಕುಟಿಲ ಸಾಮಾಜಿಕ ನೀತಿಗಳನ್ನು ಕೈಬಿಟ್ಟು ಸಮಾಜ ಕಟ್ಟುವ ಕಾಯಕದಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕಿದೆ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಅಕ್ಕಿಆಲೂರಿನ ವಿರಕ್ತಮಠದ ಶಿವಬಸವ ಸ್ವಾಮೀಜಿ, ಕೂಸನೂರಿನ ತಿಪಯ್ಯಸ್ವಾಮಿ ಆಶ್ರಮದ ಜ್ಯೋತಿರ್ಲಿಂಗಾನಂದ ಸ್ವಾಮೀಜಿ ಮಾತನಾಡಿ, ಅತ್ಯಾಚಾರ, ಅನಾಚಾರಗಳಿಗೆ ಲಗಾಮು ಹಾಕುವ ಅಗತ್ಯವಿದ್ದು, ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರವನ್ನು ಉಳಿಸಿ-ಬೆಳೆಸುವ ಕಾರ್ಯ ನಡೆಯಬೇಕಿದೆ. ಸಾಂಸಾರಿಕ ಮತ್ತು ವ್ಯವಹಾರಿಕ ಜಂಜಾಟಗಳು ಇಂದು ಪ್ರತಿಯೊಬ್ಬರ ಅಮೂಲ್ಯ ಜೀವನದಲ್ಲಿ ನೆಮ್ಮದಿ ದೂರ ಮಾಡಿವೆ. ಅಶಾಂತಿ, ಅಸಹನೆ, ಅಸಮಾಧಾನ ಎಲ್ಲರ ಮನೆ, ಮನಗಳಲ್ಲಿ ಮೂಡುತ್ತಿದ್ದು ಇಂತಹ ಆಂತರಿಕ ತೊಳಲಾಟಗಳಿಗೆ ಮುಕ್ತಿ ನೀಡಬೇಕಿದೆ ಎಂದರು.

ಜಿಪಂ ಮಾಜಿ ಸದಸ್ಯ ಮಹದೇವಪ್ಪ ಬಾಗಸರ, ಮುಖಂಡರಾದ ಮಧು ಪಾಣಿಗಟ್ಟಿ, ಶಿವಯೋಗಯ್ಯ ಹಿರೇಮಠ, ಕರೆಗೌಡ ಚನ್ನಗೌಡ್ರ, ಹವಳಪ್ಪ, ಆರ್.ಬಿ.ಪಾಟೀಲ, ಪುಟ್ಟನಗೌಡ ಮಾಳಗಿ, ಶ್ರೀಕಾಂತಗೌಡ ಪುಟ್ಟನಗೌಡ್ರ, ಮಾಲತೇಶ ಕೊಟ್ಟಣದ ದೇವಸ್ಥಾನ ಸಮಿತಿ ಸದಸ್ಯರು, ಸದ್ಭಕ್ತರು ಇದ್ದರು.



ಕಬ್ಬು ಬೆಳೆಗಾರರಿಗೆ ಕಹಿ ನೀಡಿದ ಕೇಂದ್ರ ಸರ್ಕಾರ: ಶಿಡ್ಲಾಪುರ

ಹಾವೇರಿ: ಕೇಂದ್ರ ಸಚಿವ ಸಂಪುಟದಲ್ಲಿ ನಿನ್ನೆ ತೀರ್ಮಾನಿಸಿ ಘೋಷಣೆ ಮಾಡಿರುವ 2026-27ನೇ ಸಾಲಿನ 10.25 ಸಕ್ಕರೆ ಇಳುವರಿ ಟನ್ ಕಬ್ಬಿಗೆ ರೂ.3650 ನಿಗದಿ ಮಾಡಿದೆ. ಇದು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿದೆ ಎಂದು ಹಾವೇರಿ ಜಿಲ್ಲಾ ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪುರ ಕಿಡಿಕಾರಿದ್ದಾರೆ.



ಇನ್ನು ಕರ್ನಾಟಕ ಸರ್ಕಾರ 4450 ರೂ. ನಿಗದಿ ಮಾಡಬೇಕೆಂದು ವರದಿ ನೀಡಿದೆ ಇದನ್ನು ಗಮನಹರಿಸಿ ಹೆಚ್ಚುವರಿ ಬೆಲೆ ನಿಗದಿ ಮಾಡಬೇಕಾಗಿತ್ತು. ಇದು ರೈತರನ್ನು ಕಬ್ಬು ಬೆಳೆಯಿಂದ ಒಕ್ಕಲೆಬ್ಬಿಸುವ ಕಾರ್ಯವಾಗಿದೆ ಕೂಡಲೇ ಕೇಂದ್ರ ಸರ್ಕಾರ ಎಫ್‌ಆರ್‌ಪಿ ದರವನ್ನು ಪುನರ್ ಪರಿಶೀಲಿಸಿ, ಒಂದು ಟನ್ ಕಬ್ಬಿಗೆ 4500 ರೂ.ನಿಗದಿಗೊಳಿಸಬೇಕು ಎಂದು ಹಾವೇರಿ ಜಿಲ್ಲಾ ಕಬ್ಬು ಬೆಳೆಗಾರರ ಸಂಘ ಆಗ್ರಹಿಸಿದೆ

ಕಬ್ಬಿನಿಂದ ಸಕ್ಕರೆ, ವಿದ್ಯುತ್, ಕಾಂಪೋಸ್ಟ್ ಗೊಬ್ಬರ, ಇನ್ನೂ ಇತರ ಉತ್ಪನ್ನಗಳನ್ನು ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ನಿರಂತರವಾಗಿ ವಂಚನೆ ಮಾಡುತ್ತಿವೆ. ಸರ್ಕಾರದ ಆದೇಶಗಳನ್ನು ವಾಮಮಾರ್ಗದಲ್ಲಿ ನಿರ್ಲಕ್ಷಿಸುತ್ತಿವೆ ಎಂದು ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪುರ ಆರೋಪಿಸಿದ್ದಾರೆ.

ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡಿ



> **ಅಧಿಕಾರಿಗಳಿಗೆ ಸೂಚನೆ**
> ಗರ್ಭಿಣಿ, ಬಾಣಂತಿಯರ ಮಾಹಿತಿಯನ್ನು ವಿಳಂಬ ಮಾಡದೇ ಪೋರ್ಟಲ್‌ನಲ್ಲಿ ನೋಂದಣಿ ಮಾಡಬೇಕು, ಗಂಭೀರ ಸಮಸ್ಯೆ ಇರುವ ಗರ್ಭಿಣಿಯರ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಹಾಗೂ ನಿರಂತರ ನಿಗಾವಹಿಸಬೇಕು. ಸಮಸ್ಯೆ ಇದ್ದರೆ ಆಸ್ಪತ್ರೆಯಲ್ಲಿ ಒಳರೋಗಿ ವಿಭಾಗಕ್ಕೆ ದಾಖಲಿಸಿಕೊಂಡು ಅಗತ್ಯ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು.

ಹಾವೇರಿ: ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡಬೇಕು. ಸ್ಥಳೀಯ ಮಟ್ಟದಲ್ಲೇ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗುವಂತಾಗಬೇಕು ಎಂದು ತಾಲೂಕಾ ಆರೋಗ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಅಭಿಯಾನದ ಪ್ರಗತಿ ಪರಿಶೀಲನಾ ಸಭೆ ಹಾಗೂ ಜಿಲ್ಲಾ ಕಣ್ಗಾವಲು ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿವಿಧ ತಾಲೂಕಾ ಆರೋಗ್ಯಾಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಗರ್ಭಿಣಿಯರು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ತಿಳುವಳಿಕೆ ನೀಡಬೇಕು ಎಂದು ತಿಳಿಸಿದರು.

ಸಣ್ಣಪುಟ್ಟ ಸಮಸ್ಯೆ ಬಗೆಹರಿಸಿಕೊಳ್ಳಿ: ತಾಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ಸಣ್ಣಪುಟ್ಟ ಸಮಸ್ಯೆಗಳನ್ನು ತಮ್ಮ ಹಂತದಲ್ಲೇ ಬಗೆಹರಿಸಿಕೊಳ್ಳಬೇಕು. ತಂತ್ರಜ್ಞಾನ ಬಹಳ ಬೆಳೆದಿದೆ, ಅಸಾಧ್ಯವಾಗದ ಕೆಲಸ ಯಾವುದೂ ಇಲ್ಲ. ಕೆಲಸ ಮಾಡುವ ಮನಸ್ಸು ಬೇಕು, ಕಾರಣ ಹೇಳುವುದು ಬಿಟ್ಟು ಕೆಲಸ ಮಾಡುವ ಮನೋಭಾವ ಬೆಳೆಸಿಕೊಳ್ಳಿ, ವೈದ್ಯಕೀಯ ಸೌಲಭ್ಯಗಳ ಸದ್ಬಳಕೆಯಾಗಬೇಕು ಎಂದು ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ, ಪ್ರಸವ ಪೂರ್ವ ಭ್ರೂಣ ಪತ್ತೆ ಕಾರ್ಯಕ್ರಮ, ಕ್ಷಯರೋಗ ಕಾರ್ಯಕ್ರಮದ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಯಾನಂದ ಅವರು ಮಾತನಾಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ.75 ರಷ್ಟು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಶೇ.25ರಷ್ಟು ಹೆರಿಗೆಗಳು ಆಗುತ್ತಿವೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಡಾ.ಚನ್ನಬಸಯ್ಯ ವಿರಕ್ತಮಠ, ಡಾ.ಸರಿತಾ, ಡಾ.ಜಗದೀಶ ಪಾಟೀಲ, ಡಾ. ನೀಲೇಶ, ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅತಿಥಿ ಶಿಕ್ಷಕರ, ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ, ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ-ಕಾಲೇಜುಗಳ, ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆ-ಕಾಲೇಜುಗಳಲ್ಲಿ ಹಾಗೂ ಹೊಸದಾಗಿ ಸೃಜನೆಯಾಗಿರುವ ಅಲ್ಪಸಂಖ್ಯಾತರ ಮಹಿಳಾ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರ ಹಾಗೂ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಈ ಶಾಲೆ ಮತ್ತು ಕಾಲೇಜುಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ ಕನ್ನಡ, ಇಂಗ್ಲೀಷ, ಹಿಂದಿ, ಉರ್ದು, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ ಜೀವಶಾಸ್ತ್ರ, ಗಣಿತ ಶಾಸ್ತ್ರ, ಲೆಕ್ಕಶಾಸ್ತ್ರ, ಅರ್ಥಶಾಸ್ತ್ರ ವ್ಯವಹಾರ ಅಧ್ಯಯನ, ಕಂಪ್ಯೂಟರ್ ಸೈನ್ಸ್, ಇತಿಹಾಸ, ರಾಜ್ಯಶಾಸ್ತ್ರ ಹಾಗೂ ಸಮಾಜಶಾಸ್ತ್ರ ವಿಷಯಗಳಿಗೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹ ಅಭ್ಯರ್ಥಿಗಳನ್ನು ಖಾಲಿ ಹುದ್ದೆಗೆ ಅವಶ್ಯಕತೆಗೆ ಅನುಸಾರವಾಗಿ ಆಯ್ಕೆ ಮಾಡಿಕೊಳ್ಳಲಾಗುವುದು. ಶಾಲಾ ಶಿಕ್ಷಕರ ಹುದ್ದೆಗೆ ಬಿಎಸ್ಸಿ ಬಿಎಡ್, ಬಿಎ ಬಿಎಡ್ ಹಾಗೂ ಕಾಲೇಜು ಉಪನ್ಯಾಸಕರ ಹುದ್ದೆಗೆ ಎಂಎಸ್ಸಿ ಬಿಎಡ್, ಎಂ.ಕಾಂ., ಬಿಎಡ್, ಎಂ.ಎ.ಬಿಎಡ್ ವಿದ್ಯಾರ್ಹತೆ ಹೊಂದಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.


ಅಗತ್ಯ ಮಾಹಿತಿಯೊಂದಿಗೆ ಭರ್ತಿಮಾಡಿದ ಅರ್ಜಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಮೇ 12ರೊಳಗಾಗಿ ಹಾವೇರಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಮಂಜುನಾಥಯ್ಯ ದೇವರಿಗೆ ಪಿಎಚ್‌ಡಿ ಪ್ರದಾನ

ಲಕ್ಷ್ಮೇಶ್ವರ: ಪಟ್ಟಣದ ಐತಿಹಾಸಿಕ ಮಠ ಕರೆವಾಡಿಮಠದ ಉತ್ತರಾಧಿಕಾರಿಯಾದ ಮಂಜುನಾಥಯ್ಯ ದೇವರು ಪ್ರೊ.ನೆಲ್ಲಿಕಟ್ಟೆ ಎಸ್. ಸಿದ್ದೇಶ ಮಾರ್ಗದರ್ಶನದಲ್ಲಿ ಶಕ್ತಿವಿಶಿಷ್ಟಾದ್ವೈತ ಮತ್ತು ಹೊನ್ನಾಳಿ ಹಿರೇಕಲ್ಮಠ ಎಂಬ ಸಂಶೋಧನಾ ಮಹಾಪ್ರಬಂಧ ಮಂಡಿಸಿದ್ದಕ್ಕಾಗಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದ 35ನೇ ಘಟಿಕೋತ್ಸವದಲ್ಲಿ ಕರ್ನಾಟಕ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದರು. ಪ್ರೊ.ನೆಲ್ಲಿಕಟ್ಟೆ ಎಸ್.ಸಿದ್ದೇಶ ಮಾರ್ಗದರ್ಶನ ಮಾಡಿದರು. ಕುಲಪತಿ ಪ್ರೊ.ಶರತ ಅನಂತಮೂರ್ತಿ ಸೇರಿದಂತೆ ಅನೇಕರಿದ್ದರು.

ಡೆಂಘೀ ತಡೆಗೆ ಮುಂಜಾಗ್ರತಾ ಕ್ರಮಗಳ ಜಾಗೃತಿ ಮೂಡಿಸಿ: ಡಿಸಿ

ಹಾವೇರಿ: ನಿಂತ ನೀರಿನಲ್ಲಿ ಈಡೀಸ್ ಈಜಿಪ್ಟಿ ಸೊಳ್ಳೆ ಉತ್ಪಾದನೆಯಿಂದ ಡೆಂಘೀ ಹರಡುವ ಸಾಧ್ಯತೆ ಇದ್ದು, ಡೆಂಘೀ ತಡೆಗೆ ಮುಂಜಾಗ್ರತಾ ಕ್ರಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಹಾಗೂ ಜಿಲ್ಲೆಯಲ್ಲಿ ಡೆಂಘೀ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ಜೊತೆಗೆ ಎಲ್ಲ ಇಲಾಖೆಗಳು 'ಸಮನ್ವಯದಿಂದ' ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿಮಾಡಬೇಕು ಹಾಗೂ ಗಟಾರುಗಳಲ್ಲಿ ನೀರು ಸರಿಯಾಗಿ ಹರಿದು ಹೋಗುವಂತೆ ಕ್ರಮವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಜಗದೀಶ ಪಾಟೀಲ ಮಾತನಾಡಿ, ಜನವರಿಯಿಂದ ಮಾರ್ಚ್ ಮಾಹೆವರೆಗೆ ಜಿಲ್ಲೆಯಲ್ಲಿ ಆರು ಡೆಂಘೀ ಪ್ರಕರಣಗಳು ಹಾಗೂ ಮೂರು ಚಿಕುನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. ಡೆಂಘೀ ಈಡೀಸ್ ಈಜಿಪ್ಟಿ ಸೊಳ್ಳೆ ಹಗಲು ಹೊತ್ತು ಕಚ್ಚುವುದರಿಂದ ಡೆಂಘೀ ಜ್ವರ ಬರುತ್ತದೆ. ಇದು ಸಂಗ್ರಹಿಸಿದ ಸ್ವಚ್ಛ ನೀರಿನಲ್ಲಿ ಉತ್ಪತ್ತಿಯಾಗುತ್ತದೆ. ಹಾಗಾಗಿ ಸಾರ್ವಜನಿಕ ಸ್ಥಳಗಳು, ಕಚೇರಿ ಹಾಗೂ ಮನೆ ಸುತ್ತಮುತ್ತ ನೀರು ನಿಲ್ಲದಂತೆ ಕ್ರಮವಹಿಸಬೇಕು. ಮನೆಗಳಲ್ಲಿ ಡ್ರಮ್ಮು, ಬ್ಯಾರಲ್, ಸಿಮೆಂಟ್ ತೊಟ್ಟಿ, ಕಲ್ಲುಬಾನಿ, ಟೈಯರ್, ತೆಂಗಿನ ಚಿಪ್ಪು ಹಾಗೂ ಇತರೆ ಘನ ತ್ಯಾಜ್ಯ ವಸ್ತುಗಳಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಜಿಲ್ಲೆಯಲ್ಲಿರುವ ಕೆರೆ, ಹೊಂಡ, ಬಾವಿ ಹಳ್ಳ ಮುಂತಾದ ನೀರಿನ ಮೂಲಗಳಿಗೆ ಡೆಂಘೀ ಲಾರ್ವಾಹಾರಿ ಗಪ್ಪಿ ಮತ್ತು ಗಂಬೂಸಿಯಾ ಮೀನುಗಳನ್ನು ಬಿಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೊಲ, ಗದ್ದೆ, ಕಟ್ಟಡ, ನಿರ್ಮಾಣ ಪ್ರದೇಶ ಮತ್ತು ಇತರೆ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರಿಗೆ, ಅಂಗನವಾಡಿ ಹಾಗೂ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯ ಆರೋಗ್ಯ ಶಿಕ್ಷಣ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಯಾನಂದ, ಡಾ.ಚನ್ನಬಸಯ್ಯ ವಿರಕ್ತಮಠ, ಡಾ.ಸರಿತಾ, ಡಾ. ನೀಲೇಶ, ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

> ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಮೇಲ್ಛಾವಣಿ, ಕಲ್ಲು ಗಣಿಗಾರಿಕೆ ಮತ್ತು ಕೃಷಿ ಹೊಂಡಗಳಲ್ಲಿ, ಕೆಎಸ್‌ಆರ್‌ಟಿಸಿ ಡಿಪೋಗಳಲ್ಲಿನ ಟೈಯರ್‌ನಲ್ಲಿ ನೀರು ನಿಂತು ಅಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಡೆಂಘೀ ತಡೆಗೆ ಆರೋಗ್ಯ ಇಲಾಖೆಯೊಂದಿಗೆ ಸಾರಿಗೆ ಇಲಾಖೆ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೀನುಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಕೈಜೋಡಿಸಬೇಕು.
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಡಿಸಿ ಹಾವೇರಿ

ಕನಕದಾಸರ ಮೂರ್ತಿ ಪ್ರತಿಷ್ಠಾಪನೆಗೆ ಸಹಕಾರ ನೀಡಿ: ಗಾಜೀಗೌಡ್ರ

ಹಾವೇರಿ: ಜಿಲ್ಲಾ ಕೇಂದ್ರವಾಗಿರುವ ಹಾವೇರಿ ನಗರದ ಕಾಗಿನೆಲೆ ವೃತ್ತದಲ್ಲಿ ತಿಂಗಳ ಒಳಗಾಗಿ ಕನಕದಾಸರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು. ಇದಕ್ಕೆ ಸಮುದಾಯದ ಜನರು ಒಗ್ಗಟ್ಟಿನಿಂದ ಸಹಕಾರ ನೀಡಬೇಕು ಎಂದು ಕುರುಬ ಸಮುದಾಯದ ಮುಖಂಡರೂ ಆಗಿರುವ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜೀಗೌಡ್ರ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಕುರುಬ ಸಮುದಾಯದ ಸಭೆಯಲ್ಲಿ ಮಾತನಾಡಿದ ಅವರು, 'ಮೂರ್ತಿ ಪ್ರತಿಷ್ಠಾಪಿಸುವ ಅವಕಾಶ ಬಂದಿದೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ. ಕಾಗಿನೆಲೆ ಗುರುಪೀಠದಲ್ಲಿ ಈ ಬಾರಿ ಕನಕ ಜಯಂತಿ ಆಚರಿಸುವ ಜವಾಬ್ದಾರಿಯನ್ನು ಹಾವೇರಿ ತಾಲೂಕಿಗೆ ನೀಡಲಾಗಿದೆ. ಕಳೆದ ಬಾರಿ ರಾಣೇಬೆನ್ನೂರಿನವರು ಅದ್ದೂರಿ ಆಚರಣೆ ಮಾಡಿದ್ದರು. ಈ ಬಾರಿ ನಾವೆಲ್ಲರೂ ದೇಣಿಗೆ ಸಂಗ್ರಹಿಸಿ ಅಭೂತಪೂರ್ವ ಆಚರಣೆ ಮಾಡೋಣ' ಎಂದರು.



ಕುರುಬ ಸಮುದಾಯದ ಮುಖಂಡರೂ ಆಗಿರುವ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಮಾತನಾಡಿ, 'ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ಪುಣ್ಯಕ್ಷೇತ್ರ ತಿರುಪತಿಯಲ್ಲಿ ಇತ್ತೀಚೆಗೆ ಭಕ್ತಶ್ರೇಷ್ಠ ಕನಕದಾಸರ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಅದೇ ಮಾದರಿಯಲ್ಲಿ ಹಾವೇರಿಯ ಕಾಗಿನೆಲೆ ವೃತ್ತದಲ್ಲಿಯೂ ಕನಕದಾಸ ಮೂರ್ತಿ ಪ್ರತಿಷ್ಠಾಪನೆ ಮಾಡಲು ತೀರ್ಮಾನಿಸಲಾಗಿದೆ' ಎಂದು ಹೇಳಿದರು.

'ಭಕ್ತಿಯ ಮೂಲಕ ಸಮಾಜದ ಸುಧಾರಣೆಗೆ ಶ್ರಮಿಸಿದ ಕನಕದಾಸರನ್ನು, ಇಡೀ ದೇಶವೇ ಕೊಂಡಾಡುತ್ತದೆ. ಕನಕದಾಸರು ಹುಟ್ಟಿ ಬೆಳೆದ ಹಾವೇರಿ ಜಿಲ್ಲೆಯಲ್ಲಿಯೂ ಅವರ ಹೆಸರನ್ನು ಮತ್ತಷ್ಟು ಅಜರಾಮರವಾಗಿಸಬೇಕಿದೆ. ಹಲವು ಕಡೆಗಳಲ್ಲಿ ಈಗಾಗಲೇ ಅವರ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಜಿಲ್ಲಾ ಕೇಂದ್ರದಲ್ಲಿಯೂ ಮೂರ್ತಿ ಬೇಕೆಂಬ ಕೂಗು ಈಗ ನನಸಾಗುತ್ತಿದೆ' ಎಂದರು.

'ಕಾಗಿನೆಲೆ ವೃತ್ತದಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಅಪಘಾತಗಳು ಆಗುತ್ತಿವೆ. ಮಧ್ಯದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಕಷ್ಟವಾಗುತ್ತದೆ. ಹೀಗಾಗಿ, ಕನಕ ಕುರಿ ಮತ್ತು ಉಣ್ಣೆ ನೇಕಾರರ ಸಹಕಾರಿ ಸಂಘಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಮೂರ್ತಿ ಇರಿಸಲಾಗುವುದು. ಮೂರ್ತಿ ಸಿದ್ಧಪಡಿಸಲು 10 ಲಕ್ಷ ರೂ.ಖರ್ಚಾಗಲಿದೆ. ವೃತ್ತದ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರವು 25 ಲಕ್ಷ ರೂ.ನೀಡಿದೆ. ಉಳಿದ ಕೆಲಸಗಳಿಗೆ 10-15 ಲಕ್ಷ ರೂ.ಬೇಕಾಗಬಹುದು. ನಾನೂ 1 ಲಕ್ಷ ಕೊಡುತ್ತೇನೆ. ಎಲ್ಲರೂ ಕೈಲಾದಷ್ಟು ದೇಣಿಗೆ ನೀಡಿ, ಮೂರ್ತಿ ಪ್ರತಿಷ್ಠಾಪಿಸೋಣ ಎಂದರು.

ಸಮುದಾಯದ ಮುಖಂಡರಾದ ಮಹದೇವಗೌಡ ಗಾಜೀಗೌಡ್ರ, ಸಮಾಜದ ಜಿಲ್ಲಾಧ್ಯಕ್ಷ ನಾಗರಾಜ ಅನ್ವೇರಿ, ಅಶೋಕ ಬಣಕಾರ, ಹನುಮಂತಗೌಡ್ರ ಗಾಜೀಗೌಡ್ರ, ಬಸಣ್ಣ ಕಂಬಳಿ, ಅಶೋಕ ಮುದಕಣ್ಣನವರ, ವಿಜಯಕುಮಾರ ಮುದಕಣ್ಣನವರ, ಬಸವರಾಜ ಕೋಟಿ ಹಾಗೂ ತಾಲೂಕಾ ಅಧ್ಯಕ್ಷ ವಿರುಪಾಕ್ಷ ಹುಲ್ಲೂರ, ನಿಂಗಪ್ಪ ತುಕ್ಕಣ್ಣನವರ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಚನ್ನಮ್ಮನ ಕಿತ್ತೂರ : ಸಮೀಪದ ಬೈಲೂರ ಗ್ರಾಮದಲ್ಲಿ ಶಾಸಕ ಬಾಬಾಸಾಹೇಬ ಪಾಟೀಲ ವಿವಿಧ ರಸ್ತೆ ಕಾಮಗಾರಿಗಳಿಗೆ ಈಚೆಗೆ ಭೂಮಿ ಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕಲ್ಲಪ್ಪ ಹಟ್ಟಿಹೊಳಿ, ಕಾಂಗ್ರೆಸ್ ಯುವ ಮುಖಂಡ ಮಯೂರ ಗಿರಿಯಾಲ, ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರ ಮುಳಕುರ, ನಾಗೇಶ ಮರೆಪ್ಪಗೋಳ, ಹಣಮಂತ ಗುಂಡಗಾವಿ, ಮಹಾಂತೇಶ ಇಟಗಿ, ಕುಮಾರ ಹೊಸಮನಿ, ನಿಜಗುಣಿ ಬಾಗೇವಾಡಿ ಹಾಗೂ ಇತರರು ಇದ್ದರು.

ಕ್ರಿಕೆಟ್ ಪಂದ್ಯಾವಳಿಗಳಿಗೆ ಚಾಲನೆ

ಗೋಕಾಕ: ನಗರದ ಮಹರ್ಷಿ ವಾಲ್ಮೀಕಿ ಕ್ರೀಡಾಂಗಣದಲ್ಲಿ ಬುಧವಾರ ರಾಹುಲ್ ಟ್ರೋಫಿ – ಸೀಜನ್ 3 ಜಿಲ್ಲಾ ಮತ್ತು ರಾಷ್ಟ್ರ ಮಟ್ಟದ ಹೊನಲು-ಬೆಳಕಿನ ಕ್ರಿಕೆಟ್ ಪಂದ್ಯಾವಳಿಗಳಿಗೆತಹಶೀಲ್ದಾರ ಡಾ.ಮೋಹನ ಭಸ್ಮೆ ಅವರು ಚಾಲನೆ ನೀಡಿದರು. ಮೆ 6 ರಿಂದ 9ರವರೆಗೆ ಜಿಲ್ಲಾ ಮಟ್ಟದ ಮಟ್ಟದ ಪಂದ್ಯಾವಳಿಗಳು ನಡೆಯಲಿದ್ದು, ಈ ಪಂದ್ಯಾವಳಿಯಲ್ಲಿ ಒಟ್ಟು 26 ತಂಡಗಳು ಭಾಗವಹಿಸಿದ್ದು, ವಿಜೇತ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 1 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ರೂಪದಲ್ಲಿ 50 ಸಾವಿರ ರೂ ನಗದು ಮತ್ತು ಆಕರ್ಷಕ ಟ್ರೋಫಿ ಪಡೆಯಲಿದ್ದಾರೆ. ಮೇ 10 ರಿಂದ 14ರವರೆಗೆ ರಾಷ್ಟ್ರ ಮಟ್ಟದ ರಾಹುಲ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗಳು ಜರುಗಲಿದ್ದು, ಈ ಪಂದ್ಯಾವಳಿಯಲ್ಲಿ ಗುಜರಾತ್, ಮಹಾರಾಷ್ಟ್ರ, ಗೋವಾ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಿಂದ ಒಟ್ಟು 16 ತಂಡಗಳು ಭಾಗವಹಿಸಲ್ಲಿದ್ದು, ವಿಜೇತ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 3 ಲಕ್ಷ ರೂ ನಗದು ,ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನದ ರೂಪದಲ್ಲಿ 2 ಲಕ್ಷ ರೂ ನಗದು ಮತ್ತು ಆಕರ್ಷಕ ಟ್ರೋಫಿ ಪಡೆಯಲಿದ್ದಾರೆ. ಎರಡು ಪಂದ್ಯಾವಳಿಯಲ್ಲಿ ಪಂದ್ಯ ಪುರುಷ, ಪಂದ್ಯಶ್ರೇಷ್ಠ ಸೇರಿದಂತೆ ಅನೇಕ ವೈಯಕ್ತಿಕ ಬಹುಮಾನಗಳನ್ನು ಕೊಡಲಾಗುವುದು. ಈ ಸಂದರ್ಭದಲ್ಲಿ ಪಿಎಸ್‌ಐ ಕಿರಣ ಮೋಹಿತೆ, ಸಂಘಟಕ ರಿಯಾಜ ಚೌಗಲಾ, ಸಂತೋಷ ಭಟ್, ಹನೀಫ ಶಾಬಾಶಖಾನ, ಮಂಜುನಾಥ್ ಗಂಗಣ್ಣವರ, ಜುಬೇರ ಮಿರ್ಜಾಬಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗೋಕಾಕ: ನಗರದ ಮಹರ್ಷಿ ವಾಲ್ಮೀಕಿ ಕ್ರೀಡಾಂಗಣದಲ್ಲಿ ಬುಧವಾರ ರಾಹುಲ್ ಟ್ರೋಫಿ - ಸೀಜನ್ 3 ಜಿಲ್ಲಾ ಮತ್ತು ರಾಷ್ಟ್ರ ಮಟ್ಟದ ಹೊನಲು-ಬೆಳಕಿನ ಕ್ರಿಕೆಟ್ ಪಂದ್ಯಾವಳಿಗಳಿಗೆ ತಹಶೀಲ್ದಾರ ಡಾ.ಮೋಹನ ಭಸ್ಮೆ ಅವರು ಚಾಲನೆ ನೀಡಿದರು.

ಕಿರುಸುದ್ದಿ

ರಿಯಾಯತಿ ಸೌಲಭ್ಯ ಅವಧಿ ವಿಸ್ತರಣೆ

ಬೈಲಹೊಂಗಲ: ನಗರಸಭೆ ವ್ಯಾಪ್ತಿಯ ಸಾರ್ವಜನಿಕರು ಹಾಗೂ ಆಸ್ತಿ ಮಾಲೀಕರಿಗೆ 2026–27ನೇ ಸಾಲಿನ ಆಸ್ತಿ ತೆರಿಗೆ ಪೂರ್ಣವಾಗಿ ಪಾವತಿಸುವವರಿಗೆ ನೀಡಲಾಗುತ್ತಿರುವ ಶೇ 5 ರಿಯಾಯಿತಿ ಸೌಲಭ್ಯದ ಅವಧಿಯನ್ನು ಮೇ 31, 2026ರವರೆಗೆ ವಿಸ್ತರಿಸಲಾಗಿದೆ. ಈ ಕುರಿತು ಸರ್ಕಾರ ಆದೇಶ ಹೊರಡಿಸಿದ್ದು, ಮೊದಲೇ ನಿಗದಿಪಡಿಸಿದ್ದ ಅವಧಿಯನ್ನು ಇನ್ನಷ್ಟು ದಿನಗಳವರೆಗೆ ಮುಂದೂಡಲಾಗಿದೆ. ಇದರಿಂದ ನಗರಸಭೆ ವ್ಯಾಪ್ತಿಯ ತೆರಿಗೆದಾರರಿಗೆ ಅನುಕೂಲವಾಗಲಿದೆ. ನಗರಸಭೆಯ ಪೌರಾಯುಕ್ತರಾದ ಭಾಗ್ಯಶ್ರೀ ಹುಗ್ಗಿ ಅವರು ಪ್ರಕಟಣೆ ನೀಡಿ, ಸಾರ್ವಜನಿಕರು ಈ ವಿಸ್ತರಿತ ಅವಧಿಯನ್ನು ಸದುಪಯೋಗಪಡಿಸಿಕೊಂಡು ನಿಗದಿತ ಸಮಯದೊಳಗೆ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ಮನವಿ ಮಾಡಿದ್ದಾರೆ. ತೆರಿಗೆ ಪಾವತಿ ಮೂಲಕ ನಗರ ಅಭಿವೃದ್ಧಿಗೆ ಸಹಕರಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ

ಇರಾನ್ ಪೈಲ್ವಾನ್ ಮಿರ್ಜಾಗೆ ಗೆಲುವು

ಬೆಳಗಾವಿ: ತಾಲೂಕಿನ ಬಿ.ಕೆ. ಕಂಗ್ರಾಳಿ ಗ್ರಾಮದಲ್ಲಿ 43 ವರ್ಷಗಳ ಸುದೀರ್ಘ ಕಾಲದ ನಂತರ ಗ್ರಾಮದೇವಿ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ ಸಡಗರದಿಂದ ನಡೆಯುತ್ತಿದೆ. ಈ ಐತಿಹಾಸಿಕ ಸಂದರ್ಭದ ಅಂಗವಾಗಿ ಏರ್ಪಡಿಸಲಾಗಿದ್ದ ಅಂತರಾಷ್ಟ್ರೀಯ ಕುಸ್ತಿ ಮೈದಾನದಲ್ಲಿ ಇರಾನ್ ಮೂಲದ ಪೈಲ್ವಾನ್ ಮಿರ್ಜಾ ಅವರು ಪಾಯಿಂಟ್ಸ್ ಆಧಾರದ ಮೇಲೆ ಜಯಭೇರಿ ಬಾರಿಸಿದ್ದಾರೆ. ಗ್ರಾಮದೇವಿಯ ಜಾತ್ರೆಯ ಅಂಗವಾಗಿ ನಡೆದ ಈ ಕುಸ್ತಿ ಪಂದ್ಯಾವಳಿಯು ಇಡೀ ಜಿಲ್ಲೆಯ ಗಮನ ಸೆಳೆದಿತ್ತು. ಅತ್ಯಂತ ಕುತೂಹಲ ಕೆರಳಿಸಿದ ಮೊದಲನೇ ಕ್ರಮಾಂಕದ ಕುಸ್ತಿಯಲ್ಲಿ ಇರಾನ್ ಮಿರ್ಜಾ ಮತ್ತು ಪಂಜಾಬ್ ಕೇಸರಿ ಭೂಪೇಂದ್ರ ಅಜನಾಲಾ ಮುಖಾಮುಖಿಯಾಗಿದ್ದರು. ಇಬ್ಬರೂ ಘಟಾನುಘಟಿ ಪೈಲ್ವಾನ್‌ರು ಅಖಾಡದಲ್ಲಿ ಪರಸ್ಪರ ಪಟ್ಟುಗಳನ್ನು ಹಾಕುತ್ತಾ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು. ಪಂಜಾಬ್‌ನ ಭೂಪೇಂದ್ರ ಅವರು ಇರಾನ್ ಪೈಲ್ವಾನ್‌ನಿಗೆ ಅತ್ಯಂತ ಕಠಿಣ ಸವಾಲು ನೀಡಿದರಾದರೂ ನಿಗದಿತ ಸಮಯದಲ್ಲಿ ಸ್ಪಷ್ಟ ಫಲಿತಾಂಶ ಹೊರಬರದ ಕಾರಣ ಅಂತಿಮವಾಗಿ ಪಾಯಿಂಟ್‌ಗಳ ಆಧಾರದ ಮೇಲೆ ಮಿರ್ಜಾ ಅವರನ್ನು ವಿಜಯಿ ಎಂದು ಘೋಷಿಸಲಾಯಿತು. ಕುಸ್ತಿ ಪಂದ್ಯಾವಳಿಯನ್ನು ನೋಡಲು ಸುತ್ತಮುತ್ತಲಿನ ಸಾವಿರಾರು ಕುಸ್ತಿ ಅಭಿಮಾನಿಗಳು ಮೈದಾನದಲ್ಲಿ ಜಮಾಯಿಸಿದ್ದರು. ಅಂತಾರಾಷ್ಟ್ರೀಯ ಮಟ್ಟದ ಕುಸ್ತಿಪಟುಗಳ ಪ್ರದರ್ಶನ ಕಂಡು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಹಬ್ಬದ ಸಂಭ್ರಮಕ್ಕೆ ಈ ಕ್ರೀಡಾಕೂಟವು ಕಳೆ ತಂದಿದೆ.

ಪಾಯಿಂಟ್ಸ್ ಆಧಾರದ ಮೇಲೆ ಜಯಭೇರಿ

ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆ

ಬೆಳಗಾವಿ : ಬೆಳಗಾವಿ ತಾಲೂಕಿನ ಪಿರಣವಾಡಿ ಗ್ರಾಮದ ಜಾಂಬೋಟಿ ರಸ್ತೆ ಬದಿಯಲ್ಲಿರುವ ರಾಜಲಕ್ಷ್ಮೀ ಹೋಟಲ್ ಹಿಂದೆ ಇರುವ ಪ್ರದೇಶದಲ್ಲಿ ಮೇ 5 ರಂದು ಅಪರಿಚಿತ ವ್ಯಕ್ತಿಯ ಮೃತ ದೇಹ ಪತ್ತೆಯಾಗಿದ್ದು ಮೃತನ ದೇಹ ಗುರುತು ಸಿಗುವ ಸ್ಥಿತಿಯಲ್ಲಿ ಇಲ್ಲ, 5.3 ಎತ್ತರ 25–30 ವಯಸ್ಸಿನ ಪುರುಷನೆಂದು ಗುರುತಿಸಲಾಗಿದ್ದು, ಮೃತನ ಎಡಗಾಲಿಗೆ,ಎಡಗೈಗೆ ಹಾಗೂ ನಡದಲ್ಲಿ ಕಪ್ಪು ಬಣ್ಣದ ದಾರ ಕಟ್ಟಿರುತ್ತಾನೆ. ಈ ಕುರಿತು ಬೆಳಗಾವಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ಪೊಲೀಸ್ ಆಯುಕ್ತರು ಬೆಳಗಾವಿ ನಗರ ಅಥವಾ ಪೊಲೀಸ ಇನ್ಸಪೆಕ್ಟರ್ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ, ಪೊಲೀಸ್ ಕಂಟ್ರೋಲ್ ರೂಂ, ಪಿಐ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆ ಸಂಪರ್ಕಿಸಬಹುದು.

ನಿಧನ ಸುದ್ದಿ

ರಾಜಶ್ರೀ ಕಾಳೆ



ಮೂಡಲಗಿ : ಸಮೀಪದ ಕೌಜಲಗಿ ಗ್ರಾಮದ ನಿವಾಸಿ ರಾಜಶ್ರೀ ಸುಂದರನಾಯಕ ಕಾಳೆ (60) ಮಂಗಳವಾರ ನಿಧನರಾಗಿದ್ದಾರೆ. ಮೃತರು ನಾಲ್ವರು ಅಣ್ಣಂದಿರು, ಇಬ್ಬರು ಅಕ್ಕಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಸಾಲಪ್ಪ ಹೇಳಿಕೆ

ಪೌರಕಾರ್ಮಿಕರ ಕಾಯಂ ಶೀಘ್ರ

ಬೆಳಗಾವಿ: ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಪೌರ ಕಾರ್ಮಿಕರಿಗೆ ಭರವಸೆ ನೀಡಿರುವಂತೆ ಈಗಾಗಲೇ 20000 ಕಾರ್ಮಿಕರನ್ನು ಕಾಯಂಗೊಳಿಸಿದ್ದು, ಇನ್ನುಳಿದವರನ್ನೂ ಹಂತ ಹಂತವಾಗಿ ಕಾಯಂಗೊಳಿಸಲು ಸರ್ಕಾರ ಮುಂದಾಗಲಿದೆ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಹೇಳಿದರು.

ಬುಧವಾರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ಬೆಳಗಾವಿ ಮಹಾನಗರ ಪಾಲಿಕೆ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿರುವ ಕುಮಾರ ಗಂಧರ್ವ ರಂಗಮಂದಿರದಲ್ಲಿ ನಡೆದ ನೇರ ಪಾವತಿ, ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮಾ ಕಾರ್ಡ್ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪೌರಕಾರ್ಮಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ರೂ 5 ಲಕ್ಷದವರೆಗೆ ನಗದು ರಹಿತ ಆರೋಗ್ಯ ವಿಮಾ ಸೌಲಭ್ಯವನ್ನು ಸರ್ಕಾರ ಪೌರ ಕಾರ್ಮಿಕರಿಗೆ ನೀಡುತ್ತಿದೆ. ನಿವೃತ್ತಿಯವರೆಗೂ ಕಾರ್ಡ್ ಬಳಸಿ ಆರೋಗ್ಯ ಚಿಕಿತ್ಸೆ ಪಡೆಯಬಹುದು. ಸಾಲಪ್ಪ ವರದಿಯಂತೆ 56 ಅಂಶಗಳಲ್ಲಿ 34 ಬೇಡಿಕೆಗಳನ್ನು ಈಗಾಗಲೇ ಈಡೇರಿಸಿದ್ದು, ಪೌರಕಾರ್ಮಿಕರ ಹಿತ ಕಾಪಾಡಲು ಸರ್ಕಾರ ಸದಾ ಬದ್ಧವಾಗಿದೆ ಎಂದು ಹೇಳಿದರು.

ಪಾಲಿಕೆ ಆಯುಕ್ತ ಕಾರ್ತಿಕ್ ಎಂ ಮಾತನಾಡಿ, ವಿಮಾ ಯೋಜನೆಯಿಂದ ಪೌರಕಾರ್ಮಿಕರಿಗೆ ಪ್ರಯೋಜನವಾಗಲಿದೆ. ಪಾಲಿಕೆಯಿಂದಲೂ ಕಾರ್ಮಿಕರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಗೋ ಡಿಜಿಟ್ ವಿಮಾ ಕಂಪನಿಯ ಸಂಯೋಜಕ ಟಿ.ಎಲ್. ಕೃಷ್ಣಮೂರ್ತಿ ಮಾತನಾಡಿದರು.

ನಿಗಮದ ಎಂ.ಡಿ. ಟಿ. ಕುಮಾರ ಪ್ರಾಸ್ತಾವಿಕ ಮಾತನಾಡಿದರು. ನಗರಸೇವಕ ಬಾಬಾಜಾನ್ ಮುತವಾಲೆ, ನಿಗಮದ ಪದಾಧಿಕಾರಿಗಳಾದ ರಾಜು ಸಾಖೆ, ಎ. ಎ. ಯರಝುರವಿ ಇತರರು ವೇದಿಕೆಯಲ್ಲಿದ್ದರು. ಮಹಾನಗರ ಪಾಲಿಕೆಯ 155 ಪೌರ ಕಾರ್ಮಿಕರಿಗೆ ಅತಿಥಿಗಳು ವಿಮಾ ಕಾರ್ಡ್ ವಿತರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಪಣೆ ಮಾಡಲಾಯಿತು.

ಇದಕ್ಕೂ ಮೊದಲು ನಡೆದ ಶಿಬಿರದಲ್ಲಿ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಲಾಯಿತು ಅಭಿಯಂತರ ಹಣಮಂತ ಕಲಾದಗಿ ಸ್ವಾಗತಿಸಿ ನಿರೂಪಿಸಿದರು.



ಆರೋಗ್ಯ ರಕ್ಷಣೆ

ನಗರದ ಜನತೆಯ ಆರೋಗ್ಯ ಕಾಪಾಡುವ ಕಾರ್ಮಿಕರ ಆರೋಗ್ಯ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸರ್ಕಾರದ ವಿಮಾ ಯೋಜನೆಯ ಜೊತೆಗೆ ಪಾಲಿಕೆಯಿಂದಲೂ ಎಲ್ಲ ಸೌಲಭ್ಯ ಒದಗಿಸಲಾಗುವುದೆಂದು ಮೇಯರ್ ಪ್ರೀತಿ ಕಾಮಕರ ಹೇಳಿದರು.

> **ಪಾಲಿಕೆಯಿಂದ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದಿಂದ ನಿಯಮಿತವಾಗಿ ಅನುದಾನ ಬರಬೇಕು ಈ ಹಿನ್ನೆಲೆಯಲ್ಲಿ ಸರ್ಕಾರವನ್ನು ಒತ್ತಾಯಿಸಲಾಗುವುದು. ಗುತ್ತಿಗೆದಾರರಿಂದ ಪೌರಕಾರ್ಮಿಕರಿಗೆ ಕಳಪೆ ಉಪಹಾರ ನೀಡಲಾಗುತ್ತಿದೆ ಎಂಬ ಆರೋಪಗಳಿದ್ದು, ಆದರ ಬದಲಾಗಿ ಉಪಹಾರಕ್ಕಾಗಿ ಕಾರ್ಮಿಕರ ಖಾತೆಗಳಿಗೆ ಹಣ ಜಮೆ ಮಾಡುವುದು ಸೂಕ್ತ.**
> ■ **ಹಣಮಂತ ಕೊಂಗಾಲಿ, ಉಪ ಮಹಾಪೌರ**

ಆರಂಭಿಕ ಪತ್ತೆಯೇ ಕ್ಯಾನ್ಸರ್ ಗೆಲುವಿನ ಮೊದಲ ಹೆಜ್ಜೆ

ಯಮಕನಮರಡಿ: ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡಿ ಅದಕ್ಕೆ ಪೂರಕವಾದ ಚಿಕಿತ್ಸೆ ನೀಡಿದರೆ.

ಕ್ಯಾನ್ಸರ್‌ನಿಂದಗುಣಮುಖವಾಗಬಹುದು ಎಂದು ಪಾಶ್ಚಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಶಾಂಕ್ ಪಾಟೀಲ ಅಭಿಪ್ರಾಯಪಟ್ಟರು.

ಹಿಂಡಾಲ್ಕೋ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಕೆ ಎಲ್ ಇ ಸಂಸ್ಥೆಯ ಸಂಪತ್ ಕುಮಾರ್ ಎಸ್ ಶಿವಣಗಿ ಆಸ್ಪತ್ರೆ ಕ್ಯಾನ್ಸರ್ ಆಸ್ಪತ್ರೆ ಸಹಕಾರದಲ್ಲಿ ಪಾಶ್ಚಾಪುರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸನಾ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಇಂತಹ ಆರೋಗ್ಯ ತಪಾಸಣೆಗಳನ್ನು ಕೈಗೊಳ್ಳುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯ ಪಟ್ಟರು.

ಶಿಬಿರದಲ್ಲಿ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾಂತೀಯ ವ್ಯವಸ್ಥಾಪಕರಾದ ಸಂತಾನಿ ದಂಡಿನ ಶಿಬಿರಕ್ಕೆ ಆಗಮಿಸಿದ ಜನರಿಗೆ ಕ್ಯಾನ್ಸರ್ ಹೇಗೆ ಬರುತ್ತದೆ. ಕ್ಯಾನ್ಸರ್ ಗುಣ ಲಕ್ಷಣಗಳು, ಕ್ಯಾನ್ಸರ್ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳು ಹಾಗೂ ಕ್ಯಾನ್ಸರ್ ಬಂದ ನಂತರ ಆದಕ್ಕೆ ಪರಿಹಾರ ಉಪಾಯಗಳನ್ನು ತಿಳಿಸಿದರು.

ಕೆ ಎಲ್ ಇ ಆಸ್ಪತ್ರೆಯ ವೈದ್ಯರಾದ ಡಾ.ಶ್ರೀಧರ ಡಾ ಶೃತಿ ಹಾಗೂ ನುರಿತ ತಜ್ಞರಿಂದ ಬಾಯಿ, ಸ್ತನ ಹಾಗೂ ಗರ್ಭಕಂಠಕ್ಯಾನ್ಸರ್ ತಪಾಸಣೆ ಜರುಗಿತು. ಶಿಬಿರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಕಿರಣ್ ಚೌಗಲಾ,ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಸುಮಾರು 156 ಕ್ಕೂ ಹೆಚ್ಚು ಜನರು ಆಗಮಿಸಿ ಆರೋಗ್ಯ ತಪಾಸಣೆಯ ಸದುಪಯೋಗ ಪಡೆದುಕೊಂಡರು.



ಕನ್ನಡ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ

ಯರಗಟ್ಟಿ: ಪ್ರತಿಯೊಂದು ಭಾಷೆಯು ತನ್ನದೇ ಆದ ಸಂಸ್ಕೃತಿ ಪರಂಪರೆ ಇತಿಹಾಸವನ್ನು ಹೊಂದಿರುತ್ತದೆ ಅದರಲ್ಲಿ ಎರಡು ಸಾವಿರ ವರ್ಷಗಳಿಗೂ ಸುದೀರ್ಘ ಇತಿಹಾಸವನ್ನು ಹೊಂದಿರುವ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಮನೋಹರ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಯರಗಟ್ಟಿ ತಾಲೂಕು ಘಟಕದ ವತಿಯಿಂದ ನಿರ್ಮಲ ಕೋಚಿಂಗ್ ಸೆಂಟರ್ ಸಭಾಭವನದಲ್ಲಿ ಆಯೋಜಿಸಿದ 112ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಚಟುವಟಿಕೆಗಳು ನಮಗೆ ಪ್ರೇರಣೆಯಾಗಬೇಕು ಎಂದು ಪ್ರತಿಪಾದಿಸಿದರು.

ಮುಗಳಿಹಾಳದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ವೀರಯ್ಯ ಸುಬ್ಬಾಪುರಮಠ ಅವರು ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ಬಗೆಯನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು.

ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪರಿಷತ್ತಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ತಮ್ಮಣ್ಣ ಕಾಮಣ್ಣವರ ಅವರು ಮಾತನಾಡಿದರು. ರೈನಾಪುರ ಶ್ರದ್ಧಾನಂದ ಆಶ್ರಮದ ಮಾತೋಶ್ರೀ ಮುದ್ದಮ್ಮ ತಾಯಿಯವರು ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು.

ಆರ್.ಎಲ್. ಜೂಗನವರ, ಎಸ್. ಎಸ್. ಕುರುಬಗಟ್ಟಿಮಠ, ಶಂಕರಗೌಡ ಪಾಟೀಲ, ಡಾ. ವಿಶ್ವನಾಥ್ ತಾಂವಸಿ, ಡಾ. ರಾಜಶೇಖರ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶಿವಕುಮಾರ ಜಕಾತಿ ನಿರೂಪಿಸಿದರು, ಬಸನಗೌಡ ಅಣ್ಣಿಗೇರಿ ಸ್ವಾಗತಿಸಿದರು, ದೇವೇಂದ್ರ ಕಮ್ಮಾರ ವಂದಿಸಿದರು.



ಧೂಮಪಾನ ಮಾಡುತ್ತಿದ್ದ 48 ಜನರಿಗೆ ದಂಡ

ಬೆಳಗಾವಿ: ನಗರದ ಶಹಾಪುರ ಪ್ರದೇಶದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ಪೊಲೀಸ್ ಇಲಾಖೆ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರು ಹಾಗೂ ನಿಯಮ ಮೀರಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿದ್ದವರ ಮೇಲೆ ಕೋಟ್ಪಾ ಕಾಯ್ದೆಯಡಿ ದಾಳಿ ನಡೆಸಿ ದಂಡ ವಿಧಿಸಲಾಯಿತು.

ಬೆಳಗಾವಿ ಜಿಲ್ಲಾತಂಬಾಕು ನಿಯಂತ್ರಣಕೋಶ ಮತ್ತು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ನಗರದ ಶಹಾಪುರ ವ್ಯಾಪ್ತಿಯಲ್ಲಿ 'ಕೋಟ್ಪಾ-2003' ಕಾಯ್ದೆಯಡಿ ವಿಶೇಷ ಜಾಗೃತಿ ಹಾಗೂ ದಾಳಿ ಹಮ್ಮಿಕೊಳ್ಳಲಾಯಿತು. ಜಿಲ್ಲಾ ಜಾರಿ ಅಧಿಕಾರಿಗಳ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರು ಮತ್ತು ಶೈಕ್ಷಣಿಕ ಸಂಸ್ಥೆಗಳ 100 ಮೀಟರ್ ಅಂತರದೊಳಗೆ ತಂಬಾಕು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ಮಾಡಲಾಯಿತು. ಕಾರ್ಯಾಚರಣೆಯ ವೇಳೆ ಒಟ್ಟು 48 ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಿ ಮಾಡಲಾಯಿತು. ಕೇವಲ ದಂಡ ವಿಧಿಸುವುದು ಮಾತ್ರವಲ್ಲದೆ, ತಂಬಾಕು ಸೇವನೆಯಿಂದ ಉಂಟಾಗುವ ಕ್ಯಾನ್ಸರ್‌ನಂತಹ ಭೀಕರ ಕಾಯಿಲೆಗಳ ಬಗ್ಗೆ, ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಈ ದಾಳಿಯಲ್ಲಿ ರಾಜ್ಯ ತಂಬಾಕು ನಿಯಂತ್ರಣ ಘಟಕದ ವಿಭಾಗೀಯ ಸಂಯೋಜಕರಾದ ಮಹಾಂತೇಶ ಉಳ್ಳಾಗಡ್ಡಿ ಸಮಾಜ ಸೇವಕಿ ಕವಿತಾ ರಾಜಣ್ಣವರ, ಆರೋಗ್ಯ ಕೇಂದ್ರದ ಸತೀಶ ಸಜ್ಜನ ಹಾಗೂ ಪೊಲೀಸ್ ಅಧಿಕಾರಿ ವಿಠಲ ಬಿದರಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ಕನ್ನಡ ನಾಡು, ನುಡಿ ಸಂಸ್ಕೃತಿ ಗೌರವಿಸೋಣ

ಗೋಕಾಕ: ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ನಾವೆಲ್ಲರೂ ಗೌರವಿಸಬೇಕು ಎಂದು ಗೋಸಬಾಳಿನ ಸರ್ಕಾರಿ ಶಾಲೆಯ ಶಿಕ್ಷಕ ಬಾಳೇಶ ಫಕಿರಪ್ಪನವರ ಹೇಳಿದರು.

ಮಂಗಳವಾರದಂದು ನಗರದ ಬಸವ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಗೋಕಾಕ ತಾಲೂಕು ಘಟಕದವರು ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್‌ನ 112ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

2ಸಾವಿರ ವರ್ಷದ ಇತಿಹಾಸ ಇರುವ ಕನ್ನಡ ನಾಡಿನಲ್ಲಿ ಹುಟ್ಟಿದ ನಾವೇ ಪುಣ್ಯವಂತರು.ಕನ್ನಡ ನಾಡ ನುಡಿಯಾಗಿದೆ. ನಾವೆಲ್ಲರೂ ಕನ್ನಡ ಭಾಷೆಯನ್ನು ಬಳಸಬೇಕು. ವಚನಕಾರರು ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಇಂದಿನ ಮಕ್ಕಳು ಹಾಗೂ ಯುವ ಪಿಳಿಗೆಯಲ್ಲಿ ಕನ್ನಡಾಭಿಮಾನವನ್ನು ಬೆಳೆಸಬೇಕಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಹಾಗೂ ಭಾಷೆಯನ್ನು ಶ್ರೀಮಂತ ಗೊಳಿಸೋಣ ಎಂದು ಹೇಳಿದರು.



ವೇದಿಕೆಯಲ್ಲಿ ಕಸಾಪ ತಾಲೂಕು ಅಧ್ಯಕ್ಷೆ ಭಾರತಿ ಮದಭಾವಿ, ನಿಕಟಪೂರ್ವ ಅಧ್ಯಕ್ಷ ಮಹಾಂತೇಶ ತಾವಂಶಿ, ಸಾಹಿತಿ ಚಂದ್ರಶೇಖರ್ ಅಕ್ಕಿ ಇದ್ದರು.

ವಿಶ್ವ ಬೌದ್ಧಿಕ ಆಸ್ತಿ ದಿನ ಆಚರಣೆ

ಬೆಳಗಾವಿ: ಇಲ್ಲಿನ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸರ್ ಸಿ.ವಿ. ರಾಮನ್ ಸಭಾಂಗಣದಲ್ಲಿ ವಿಶ್ವ ಬೌದ್ಧಿಕ ಆಸ್ತಿ ದಿನದ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ಆಯೋಜಿಸಿತ್ತು.

ಪೇಟೆಂಟ್ ಏಜೆಂಟ್ ಮತ್ತು ಸಲಹೆಗಾರರಾದ ನಾಗಾರ್ಜುನ್ ಎಂ.ಜಿ. ಅವರು ತಂತ್ರಜ್ಞಾನ, ಸಾಫ್ಟ್‌ವೇರ್ ಅಭಿವೃದ್ಧಿ ಕಲೆ ಮತ್ತು ವಿನ್ಯಾಸದಂತಹ ಕ್ಷೇತ್ರಗಳಲ್ಲಿ ಬೌದ್ಧಿಕ ಆಸ್ತಿಯ ಮಹತ್ವದ ಕುರಿತು ವಿವರಿಸಿದರು. ಕಂಪ್ಯೂಟರ್ ವಿಜ್ಞಾನದಲ್ಲಿನ ನಾವೀನ್ಯತೆಗಳು ಸ್ವಯಂಚಾಲಿತ ನಿರ್ಧಾರ ತೆಗೆದುಕೊಳ್ಳುವ ವ್ಯವಸ್ಥೆಗಳು, ನಿಖರವಾದ ಫಲಿತಾಂಶ ಸಂಸ್ಕರಣೆ ಮತ್ತು ಕಾರ್ಯಕ್ಷಮತೆಯ ವಿಶ್ಲೇಷಣೆಯಲ್ಲಿ ಪ್ರಗತಿಗೆ ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ಅವರು ವಿವರಿಸಿದರು.



ಪ್ರಾಚಾರ್ಯರಾದಡಾ.ಜೆ.ಎಸ್. ಕವಳೇಕರ ಅತಿಥಿಯನ್ನು ಸ್ವಾಗತಿಸಿ ಸನ್ಮಾನಿಸಿದರು. 80 ಕ್ಕೂ ಹೆಚ್ಚು ಯುವ ಪದವಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ (ಐಪಿಆರ್) ಮಹತ್ವವನ್ನು ಒತ್ತಿ ಹೇಳಿದರು. ಡಾ. ಪ್ರವೀಣ್ ದೇವಾಂಗದ ಅತಿಥಿಯನ್ನು ಪರಿಚಯಿಸಿದರು. ಮಿಸ್ ಬುಭ್ರಾ ಸೌದಾಗರ್ ಅವರು ಧನ್ಯವಾದ ಸಲ್ಲಿಸಿದರು. ಕಾರ್ಯಕ್ರಮವನ್ನು ಮಿಸ್ ಪ್ರಾಚಿ ಭೋಯಿಟೆ ನಿರೂಪಿಸಿದರು. ಈ ವೇಳೆ ಕಾಲೇಜಿನ ಉಪನ್ಯಾಸಕರು, ಕಾಲೇಜಿನ ಆಡಳಿತ ಮಂಡಳಿ ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.

ಒಂದೇ ವಾರದಲ್ಲಿ ಎರಡು ಬಾಲ್ಯ ವಿವಾಹ ತಡೆದ ಅಕ್ಕ ಪಡೆ

ಬೆಳಗಾವಿ : ನಗರದ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹದ ವಿರುದ್ಧ ಮಹಿಳಾ ಪೊಲೀಸ್ ಪಡೆಯಲ್ಲಿನ 'ಅಕ್ಕ ಪಡೆ' ಸಮರ ಸಾರಿದೆ. ಕೇವಲ ಒಂದೇ ವಾರದಲ್ಲಿ ಎರಡು ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಅಕ್ಕ ಪಡೆಯ ತಂಡ, 13 ಮತ್ತು 17 ವರ್ಷದ ಇಬ್ಬರು ಅಪ್ರಾಪ್ತ ಬಾಲಕಿಯರನ್ನು ಮದುವೆಯೆಂಬ ಸಂಕೋಲೆಯಿಂದ ಮುಕ್ತಗೊಳಿಸಿದೆ.

ಪೋಷಕರ ವಿರೋಧದ ನಡುವೆಯೂ ಯಶಸ್ವಿ ಕಾರ್ಯಾಚರಣೆ ನಡೆಸಿದ ಮಹಿಳಾ ಸಿಬ್ಬಂದಿಗಳ ಕಾರ್ಯಕ್ಕೆ ಈಗ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಬೆಳಗಾವಿ ನಗರದ ವಂಟಮೂರಿ ಕಾಲೋನಿ ಮತ್ತು ಶಹಾಪುರದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಎರಡು ಬಾಲ್ಯ ವಿವಾಹಗಳನ್ನು ತಡೆಯುವಲ್ಲಿ ಅಕ್ಕ ಪಡೆ ಯಶಸ್ವಿಯಾಗಿದೆ.



ದೇಶದ ಅಭಿವೃದ್ಧಿಗೆ ಗುಣಮಟ್ಟದ ಸಂಶೋಧನೆ ಅವಶ್ಯ

ಚಿಕ್ಕೋಡಿ: ದೇಶದ ಅಭಿವೃದ್ಧಿಗೆ ಗುಣಮಟ್ಟದ ಸಂಶೋಧನೆ ಹಾಗೂ ಪಾರದರ್ಶಕತೆಅವಶ್ಯವಾಗಿದೆ.ದೇಶದ ಎಲ್ಲ ಕ್ಷೇತ್ರಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಶೋಧನಾ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ ಎಂದು ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಗ್ರಂಥಾಲಯ ವಿಭಾಗದ ಪ್ರೊ ಗವಿಸಿದ್ದಪ್ಪ ಆನಂದಹಳ್ಳಿ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಬಸಪ್ರಭು ಕೋರೆ ಪದವಿ ಮಹಾವಿದ್ಯಾಲಯದಲ್ಲಿ ಸಮಾಜ ವಿಜ್ಞಾನ ವಿಭಾಗದಿಂದ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನಾ ಕ್ಷೇತ್ರದಲ್ಲಿ ಮೊದಲು ವಿಷಯ ಆಯ್ಕೆ, ಉದ್ದೇಶ, ಗುರಿ, ಸಾಹಿತ್ಯ ವಿಮರ್ಶೆ ಜ್ಞಾನ ಹೊಂದಿರಬೇಕು. ದಾಖಲೆಗಳ ವಿಶ್ಲೇಷಣೆ ಮೂಲಕ ಉದ್ದೇಶಿತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಬಿ.ಜಿ. ಕುಲಕರ್ಣಿ ಮಾತನಾಡಿ, ಸಾಂಪ್ರದಾಯಿಕ ಸಂಶೋಧನಾ ವಿಧಾನಗಳು ಇಂದಿನ ಸಂಕೀರ್ಣ ಜಾಗತಿಕ ಸವಾಲುಗಳನ್ನು ಎದುರಿಸಲು ಸಾಕಾಗುವುದಿಲ್ಲ, ಹೊಸ ವಿಧಾನಗಳಾದ ಡಿಜಿಟಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ ಮತ್ತು ಸಹಕಾರಾಧಾರಿತ ಕಲಿಕಾ ವಿಧಾನಗಳನ್ನು ಸಂಶೋಧನಾ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯ ಪ್ರೊ ಸುಧೀರ ಕೋರಿವಾಲೆ, ಐಕ್ಯೂಎಸಿ ಸಂಯೋಜಕ ವಿನಾಯಕ ಮಂಜಲಾಪೂರ, ಬಸವರಾಜ ಎಚ್, ಸದಾಶಿವ ಹಾದಿಮನಿ, ಸಿದ್ದಣ್ಣಾ ನಾಯಕ ಇತರರು ಇದ್ದರು. ಜಗದೀಶ ಬಾರಂಗಿ ಸ್ವಾಗತಿಸಿ, ಜಿ ಜಿ ದೊಡ್ಡಮನಿ ನಿರೂಪಿಸಿ, ಸುವರ್ಣಾ ಮಾದರ ವಂದಿಸಿದರು.



» ಕಾರ್ಯಾಗಾರ
» ಪ್ರೊ ಗವಿಸಿದ್ದಪ್ಪ ಆನಂದಹಳ್ಳಿ ಹೇಳಿಕೆ

ಕಿರುಸುದ್ದಿ

ಸಂಭ್ರಮದ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ

ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದ ಐತಿಹಾಸಿಕ ಹಿನ್ನೆಲೆ ಹೊಂದಿರುವ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ಸಂಭ್ರಮದಿಂದ ನಡೆಯಿತು. ಶ್ರೀ ಶಿವಲಿಂಗೇಶ್ವರ ಕರ್ತೃ ಗದ್ದುಗೆಗೆ ಬೆಳಿಗ್ಗೆ ಅಭಿಷೇಕ, ವಿಶೇಷ ಪೂಜೆ, ನೈವೇದ್ಯ ಸಲ್ಲಿಸಿದರು. ಮಧ್ಯಾಹ್ನ ಮಹಾಪ್ರಸಾದ, ಸಂಜೆ 6 ಗಂಟೆಗೆ ಪಲ್ಲಕ್ಕಿ ಉತ್ಸವದೊಂದಿಗೆ ರಥೋತ್ಸವ ಜರುಗಿತು. ಯುವಕರ ಸಂಘಗಳಿಂದ ಜಾಂಜ್ ಪಥಕ, ವಿವಿಧ ವಾದ್ಯಮೇಳಗಳು ಜಾತ್ರೆಗೆ ವಿಶೇಷವಾಗಿ ಆಕರ್ಷಕವಾಗಿ ಸದ್ದು ಗೊಂಡಿತ್ತು. ರಥೋತ್ಸವದ ಮೆರವಣಿಗೆ ಉದ್ದಕ್ಕೂ ಭಕ್ತರ ಜಯ ಘೋಷದೊಂದಿಗೆ ನೃತ್ಯ, ಡೊಳ್ಳಿನ ಕೈ ಪಟ್ಟ, ಮ್ಯೂಸಿಕಲ್ ಬ್ಯಾಂಜ್, ಕರಡಿ ಮಜಲು, ಸೇರಿದಂತೆ ಜನಪದ ಕಲೆ, ಆಟ, ವಾದ್ಯಗಳು ಮೆರವಣಿಗೆಗೆ ಕಳೇ ಬಂದಿತ್ತು. ನೋಡಗರ ಸದ್ಭಕ್ತರ ಕಣ್ಮನ ಸೆಳೆಯಿತು. ಈ ವರ್ಷ ಸಹಸ್ರಾರು ಭಕ್ತರಿಂದ ಕೂಡಿದ ಜಾತ್ರೆಯಲ್ಲಿ ಭಕ್ತರ ಮಂದಹಾಸ ಮೂಡಿತ್ತು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಮುಖಂಡರು, ಸಂಘ ಸಂಸ್ಥೆಯ ಪದಾಧಿಕಾರಿಗಳು, ಸಂಘಟಕರು, ಜಾತ್ರಾ ಸಮಿತಿಯ ಕಾರ್ಯಕರ್ತರು, ದೇವಸ್ಥಾನದ ಅರ್ಚಕರು, ಖಾನಟ್ಟಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಪಾಲ್ಗೊಂಡಿದ್ದರು.

ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಿ: ಡಾ. ಕಂಬಾರ



ಮೂಡಲಗಿ : ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು ಯುಜಿಸಿ ನಿಯಮಾವಳಿಯಂತೆ ಕೆಲಸದಿಂದ ತೆಗೆದು ಹಾಕಿದ್ದ ಸರ್ಕಾರ, ಈಗ ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಕ ಮಾಡಲು ನಿರ್ಧರಿಸಿರುವುದು ಸ್ವಾಗತಾರ್ಹವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಬೇಕೆಂದು ರಾಜ್ಯ ಅತಿಥಿ ಉಪನ್ಯಾಸಕರ ಮುಖಂಡ ಡಾ. ರಾಜು ಕಂಬಾರ್ ಹೇಳಿದರು. ಪಟ್ಟಣದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು, 2025– 26 ನೇ ಸಾಲಿನಲ್ಲಿ ಯುಜಿಸಿ ನಿಮಾವಳಿಯಂತೆ ನೆಟ್‌ಸೆಟ್, ಪಿಎಚ್. ಡಿ ವಿದ್ಯಾರ್ಹತೆ ಇಲ್ಲದ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿತ್ತು. ಕಳೆದ ಒಂದು ವರ್ಷದಿಂದ ಅವರು ಉದ್ಯೋಗ ಕಳೆದುಕೊಂಡು ಸಮಾಜದಲ್ಲಿ ಅಧೋಗತಿಗೆ ಇಳಿದಿದ್ದರು. ಇಂಥವರ ನೆರವಿಗೆ ಕೊನೆಗೂ ಸರ್ಕಾರ ಎಚ್ಚೆತ್ತುಕೊಂಡು ಶೈಕ್ಷಣಿಕ ಸಂಯೋಜಕರನ್ನಾಗಿ ಮೂರು ವರ್ಷಗಳ ಕಾಲ ತಾತ್ಕಾಲಿಕವಾಗಿ 3800 ಮೇಲ್ಪಟ್ಟ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿರುವುದು ಹಸಿದವರಿಗೆ ಅನ್ನ ನೀಡಿದಷ್ಟೇ ಸಂತೃಪ್ತಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಕೇವಲ ಮೂರು ವರ್ಷಗಳ ಕಾಲ ಮಾತ್ರ ತಾತ್ಕಾಲಿಕವಾಗಿ ಇವರನ್ನು ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಕ ಮಾಡದೆ, ಇವರಲ್ಲಿ ಬಹುತೇಕರು ವಯೋಮಿತಿ ಮೀರಿದವರಾದುದರಿಂದ 60 ವರ್ಷ ವಯಸ್ಸು ಆಗುವವರೆಗೂ ನಿರಂತರವಾಗಿ ಮುಂದುವರಿಸಬೇಕು. ಅಷ್ಟೇ ಅಲ್ಲದೆ ಈಗ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ 5 ಲಕ್ಷ ಇಡಗಂಟನ್ನು ಶೈಕ್ಷಣಿಕ ಸಂಯೋಜಕರಿಗೂ ಮುಂದುವರಿಸುವ ವಿಷಯ ತಿಳಿಸಿದ ಸರ್ಕಾರ, ಇದನ್ನು ಎಲ್ಲರಿಗೂ 25 ಲಕ್ಷ ಅವರಿಗೆ ಹೆಚ್ಚಿಸಬೇಕೆಂದರು. 2023ರ ಚುನಾವಣೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ –ಕಾಯಮಾತಿ ನೀಡುವ ಕುರಿತು ತಿಳಿಸಿದೆ ಅದರಂತೆ, ಶೀಘ್ರದಲ್ಲಿ ಸರ್ಕಾರ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಸೂಕ್ತ ನಿರ್ಧಾರಗಳನ್ನುತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಲ್ಲಿನಿಂದ ಜಜ್ಜಿ ವ್ಯಕ್ತಿ ಕೊಲೆ

ಚನ್ನಮ್ಮನ ಕಿತ್ತೂರು: ಸಮೀಪದ ದೇವಗಾಂವ ಗ್ರಾಮದ ಮೃತ ವ್ಯಕ್ತಿ ಮಹಾಂತೇಶ ನಿಂಗಪ್ಪ ಹುಚ್ಚನ್ನವರ (52) ಇತನು ಇದೇ ಗ್ರಾಮದ ಆರೋಪಿಯಾದ ಪ್ರಕಾಶ ಕಲ್ಲಪ್ಪ ಕಾಳಾರ ಇತನ ಖುಲ್ಲಾ ಮನೆಯಲ್ಲಿ ಮೃತ ವ್ಯಕ್ತಿ ಮಹಾಂತೇಶ ಆ ಮನೆಯಲ್ಲಿ ರಾತ್ರಿ ಬಂದು ಮಲಗಿಕೊಂಡಿದ್ದು ನಂತರ ಆ ಮನೆಗೆ ಪ್ರಕಾಶ ರಾತ್ರಿ ಮಲಗಿಕೊಳ್ಳಲು ಬರುತ್ತಾನೆ ಇಲ್ಲಿದ್ದ ಮಹಾಂತೇಶನನ್ನು ಇಲ್ಲಿ ಯಾಕೆ ಮಲಗಿದ್ದೀಯಾ ಎಂದು ಎಬ್ಬಿಸಲು ಹೋಗುತ್ತಾನೆ ಆ ಸಮಯದಲ್ಲಿ ಇಬ್ಬರಿಗೂ ಮಾತಿಗೆ ಮಾತು ಬೆಳೆದು ಜಗಳ ಪ್ರಾರಂಭವಾಗಿ ಪ್ರಕಾಶ ಇತನು ಮಹಾಂತೇಶನನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದು ಈ ಘಟನೆ ಬುಧವಾರ ಬೆಳಿಗ್ಗೆ ಸುಮಾರು 2 ಘಂಟೆಗೆ ನಡೆದಿದೆ. ಘಟನಾ ಸ್ಥಳಕ್ಕೆ ಪೋಲಿಸ್ ವರಿಷ್ಠಾಧಿಕಾರಿ ಕೆ ರಾಮರಾಜನ್, ಡಿ ಎಸ್ ಪಿ ಡಾ. ವೀರಯ್ಯ ಹಿರೇಮಠ, ಸಿಪಿಆಯ್ ಶಿವಾನಂದ ಗುಡಗನಟ್ಟಿ, ಪಿ ಎಸ್ ಆಯ್ ಪ್ರವೀಣ ಗಂಗೋಳ ಸೇರಿದಂತೆ ಸಿಬ್ಬಂದಿಗಳು ಬೇಟಿ ನೀಡಿ ಪರೀಶಿಸಿದ್ದಾರೆ. ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದ ಐತಿಹಾಸಿಕ ಹಿನ್ನೆಲೆ ಹೊಂದಿರುವ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ಸಂಭ್ರಮದಿಂದ ನಡೆಯಿತು. ಶ್ರೀ ಶಿವಲಿಂಗೇಶ್ವರ ಕರ್ತೃ ಗದ್ದುಗೆಗೆ ಬೆಳಿಗ್ಗೆ ಅಭಿಷೇಕ, ವಿಶೇಷ ಪೂಜೆ, ನೈವೇದ್ಯ ಸಲ್ಲಿಸಿದರು.

ಮೇ 10ರಂದು ಶ್ರೀ ಭಗೀರಥ ಜಯಂತಿ ಉತ್ಸವ

ಬೆಳಗಾವಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಶ್ರೀ ಭಗೀರಥ ಜಯಂತಿ ಉತ್ಸವ ಕಾರ್ಯಕ್ರಮ ಮೇ10ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಕುಮಾರ ಗಂಧರ್ವ ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ. ಚಿನ್ಮೂಲಾದ್ರಿ ಶಿಲಾಪೂರ ಸೂರ್ಯಸಿಂಹಾಸನ ಭಗೀರಥ ಪೀಠ ಹೊಸದುರ್ಗ ಡಾ. ಪುರುಷೋತ್ತಮಾನಂದಪೂರಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಚಿವ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಉಮಾ ಉಪ್ಪಾರ ಮತ್ತು ಹೇಮಾ ಇಡಗಲ್ಲ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ, ಅಧ್ಯಕ್ಷರು ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿ., ಭರಮಣ್ಣ ಉಪ್ಪಾರ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.



ಬೆಳಗಾವಿ: ತಾಲೂಕಿನ ಬಿ.ಕೆ. ಕಂಗ್ರಾಳಿ ಗ್ರಾಮದಲ್ಲಿ 43 ವರ್ಷಗಳ ಸುದೀರ್ಘ ಕಾಲದ ನಂತರ ಗ್ರಾಮದೇವಿ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ ಸಡಗರದಿಂದ ನಡೆಯುತ್ತಿದೆ. ಈ ಐತಿಹಾಸಿಕ ಸಂದರ್ಭದ ಅಂಗವಾಗಿ ಏರ್ಪಡಿಸಲಾಗಿದ್ದ ಅಂತರಾಷ್ಟ್ರೀಯ ಕುಸ್ತಿ ಮೈದಾನದಲ್ಲಿ ಇರಾನ್ ಮೂಲದ ಪೈಲ್ವಾನ್ ಮಿರ್ಜಾ ಅವರು ಪಾಯಿಂಟ್ಸ್ ಆಧಾರದ ಮೇಲೆ ಜಯಭೇರಿ ಬಾರಿಸಿದ್ದಾರೆ.

ಸತ್ಯದರ್ಶನ ಮಾಡಿಸಿದ ಮಹಾತ್ಮರು

ಬೆಳಗಾವಿ: ಬಸವಣ್ಣ ಮತ್ತು ಕನಕದಾಸರು ಸ್ಥಗಿತವಾದ ಸಮಾಜವನ್ನು ಚಲನಶೀಲಗೊಳಿಸಿ, ತಮ್ಮ ಅರಿವಿನ ಬೆಳಕಿನಲ್ಲಿ ಬದುಕಿನ ಸತ್ಯ ದರ್ಶನ ಮಾಡಿಸಿದರು ಎಂದು ಬೆಂಗಳೂರಿನ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರು ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣ ಅವರು ಅಭಿಪ್ರಾಯಪಟ್ಟರು.

ಬುಧವಾರ ನಗರದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರು ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ

ಬಸವಣ್ಣ ಮತ್ತು ಕನಕದಾಸರು, ಸಾಂಸ್ಕೃತಿಕ ನಾಯಕತ್ವ ಎಂಬ ವಿಷಯದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕದಾಸರಲ್ಲಿ ಭಕ್ತಿಯೇ ಸ್ಥಾಯಿಭಾವವಾಗಿದ್ದರೂ ಕೂಡ ಅವರಲ್ಲಿ ಸಮಾಜದ ಚಿಂತನೆ ಮತ್ತು ಜ್ಞಾನೋಪಾಸನೆಯ ತುಡಿತವಿತ್ತು. ಬಸವಣ್ಣ ಹೆಚ್ಚು ಕ್ರಾಂತಿಕಾರಿ ಚಿಂತನೆಗಳನ್ನು ಮುಂದಿಟ್ಟರೆ, ಕನಕದಾಸರು ಭಕ್ತಿಯ ಮೂಲಕ ಸಮಾಜದ ಬದಲಾವಣೆಗೆ ಮುಂದಾಗಿ, ಸಮಾಜ ಬದಲಾವಣೆಯ ಬತ್ತಿಗೆ ತೈಲವಾದವರು. ಇಬ್ಬರು ಹಚ್ಚಿದ ದೀಪ ಕರುಣೆ ಮತ್ತು ಪ್ರೀತಿ. ಇದು ಮನುಷ್ಯನನ್ನು ಗಾಢವಾಗಿ ಗಟ್ಟಿಗೊಳಿಸುತ್ತದೆ. ಸಮಕಾಲೀನ ಸಂದರ್ಭದ ಮಬ್ಬಿನ ದಾರಿಗೆ ಆ ಇಬ್ಬರೂ ಮಹನೀಯರ ತತ್ವ ಚಿಂತನೆಗಳು ನಮ್ಮನ್ನು ಬೆಳಕಿನೆಡೆಗೆ ಸಾಗಿಸಬಲ್ಲದು. ವಿನಯ ಮತ್ತು ವಿಶ್ವಾಸ ಅವರ ಬದುಕಿನ ದಾರಿಯ ದೀಪವಾಗಿದ್ದವು.



ಹಾಗಾಗಿ ಅವರ ಬದುಕು ಅಷ್ಟು ಪ್ರಖರವಾಗಿತ್ತು.

ಉಳ್ಳವರು , ಬಲ್ಲವರು ಜಾತಿ ಮತ್ತು ಧರ್ಮದ ಮೂಲಕ ಚರಿತ್ರೆ ಕಟ್ಟಿದರು. ಕೆಳವರ್ಗದವರಿಗೊಂದು ಸಾಂಸ್ಕೃತಿಕ ಚರಿತ್ರೆಯಿತ್ತೆಂಬುದನ್ನು ಮರೆತಿದ್ದರು. ಅದನ್ನು ಕಟ್ಟುವ ರಾಜಕೀಯ ಶಕ್ತಿಯೂ ಅವರಲ್ಲಿ ಇಲ್ಲವಾಗಿತ್ತು. ಬಸವಣ್ಣ ಮತ್ತು ಕನಕದಾಸರು ತಳಸಮುದಾಯಗಳ ಚರಿತ್ರೆಯನ್ನು ಭಾಷೆ ಮತ್ತು ಸಂಸ್ಕೃತಿಯ ಮೂಲಕ ಕಟ್ಟಿದರು. ಇದು ನಾಡಿನ ಚರಿತ್ರೆಯಲ್ಲಿ ಆದ ಮಹಾಪಲ್ಲಟ ಎಂದರು.

ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಪ್ರೊ. ಎಸ್. ಎಂ. ಗಂಗಾಧರಯ್ಯ ಮಾತನಾಡಿ, ಹನ್ನೆರಡನೆ ಶತಮಾನದಲ್ಲಿ ಆದ ಸಮಾಜದ ಜಾಗೃತಿ ಮತ್ತು ವೈಚಾರಿಕ ಪ್ರಜ್ಞೆಯನ್ನು ಕನಕದಾಸರು ಅದನ್ನು ಇನ್ನೊಂದು ಆಯಾಮಕ್ಕೆ ಒಯ್ದರು. ಮಧ್ಯಕಾಲದಲ್ಲಿ ಭಾರತಕ್ಕೆ ಪ್ರವೇಶ ಪಡೆದ ವಿದೇಶಿ ಸಂಸ್ಕೃತಿ ಮತ್ತು ಧರ್ಮದ ಪ್ರತಿರೋಧದ ನೆಲೆಯಲ್ಲಿ ಭಕ್ತಿ ಆಂದೋಲನವು ಪ್ರಖರವಾಗಿ ಬೆಳೆಯಿತು. ಈ ನೆಲದ ಸಂಸ್ಕೃತಿ ಮತ್ತು ಚರಿತ್ರೆಯನ್ನು ಶ್ರೀಮಂತಗೊಳಿಸುವಲ್ಲಿ ಬಸವಣ್ಣ ಮತ್ತು ಕನಕದಾಸರ ಪಾತ್ರ ದೊಡ್ಡದು.

ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್. ಸಿ. ಪಾಟೀಲ್ ಅವರು ಅಧ್ಯಕ್ಷತೆ ವಹಿಸಿದ್ದರು.

> **ಬಸವಣ್ಣನವರು, ಕನಕದಸರು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿ, ಕದಡಿದ ಸಮಾಜವನ್ನು ತಿಳಿಗೊಳಿಸುವ, ಸಮಾಜವನ್ನು ಶುದ್ಧೀಕರಿಸುವ ಬಹುದೊಡ್ಡ ಕಾರ್ಯಕ್ಕೆ ಕೈ ಹಾಕಿದರು. ಇಬ್ಬರೂ ಶ್ರೇಷ್ಠ ತತ್ವಜ್ಞಾನಿಗಳು.**
> **■ ಪ್ರೊ. ಎಸ್. ಎಂ. ಗಂಗಾಧರಯ್ಯ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥ**

ವಿಚಾರ ಸಂಕಿರಣದ ಸಂಚಾಲಕ ಮತ್ತು ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಪಿ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ. ಜೋಗಿನಕಟ್ಟಿ ಪ್ರಿಯಾಂಕ ನಿರೂಪಿಸಿದರು, ಡಾ. ನಾರಾಯಣ ನಾಯ್ಕ ಪರಿಚಯಿಸಿದರು. ಧಾರವಾಡದ ವಿಶ್ವನಾಥ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಮಹಾಂತೇಶ ದುರಗಣ್ಣವರ ವಂದಿಸಿದರು. ವಿಶ್ವವಿದ್ಯಾಲಯ ಮತ್ತು ಹಾವಿದ್ಯಾಲಯದ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಭಕ್ತಿ ಭಂಡಾರದ ದೇವಿಯ ಹೊನ್ನಾಟ

ಖಾನಾಪುರ: ತಾಲೂಕಿನ ಬೈಲೂರು ಗ್ರಾಮದಲ್ಲಿ ಬುಧವಾರ ಬೈಲೂರು, ಬಾಕನೂರು, ಮೊರಬ ಮತ್ತು ದೇವಾಚಿಹಟ್ಟಿ ಗ್ರಾಮಗಳ ಗ್ರಾಮದೇವಿಯ ಜಾತ್ರಾ ಮಹೋತ್ಸವ ಸೂರ್ಯೋದಯದ ಮುಹೂರ್ತದಲ್ಲಿ ದೇವಿಯ ಅಕ್ಷತಾರೋಪಣದೊಂದಿಗೆ ಆರಂಭಗೊಂಡಿತು. ಜಾತ್ರಾ ಮಹೋತ್ಸವದಲ್ಲಿ ಬೈಲೂರು ಹಾಗೂ ಅಕ್ಕಪಕ್ಕದ ಗ್ರಾಮಗಳ ಅಸಂಖ್ಯಾತ ಭಕ್ತರು ಭಾಗಿಯಾಗಿ ಭಕ್ತಿ ಭಂಡಾರದಲ್ಲಿ ಮಿಂದೆದ್ದರು.

ಬೈಲೂರು ಗ್ರಾಮದ ಗ್ರಾಮದೇವಿ ಆಲಯದ ಮುಂಭಾಗದಲ್ಲಿ ಮುಂಜಾನೆ ದೇವಿಯರ ವಿವಾಹ ಮಹೋತ್ಸವ ಜರುಗಿತು. ವಿವಾಹದ ಬಳಿಕ ದೇವಾಲಯದ ಆವರಣದಲ್ಲಿ ಜಾತ್ರೆಯ ಧಾರ್ಮಿಕ ವಿಧಿ ವಿಧಾನಗಳು ಸಂಪನ್ನಗೊಂಡವು. ನಂತರ ಇಡೀ ದಿನ ನಾಲ್ಕೂ ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ದೇವಿಯ ಹೊನ್ನಾಟ ನಡೆಯಿತು. ಪೂರ್ವನಿರ್ಧರಿತ ಮಾರ್ಗದ ಮೂಲಕ ಸಾಗಿದ ದೇವಿಯ ಮೆರವಣಿಗೆ ಸಂಜೆ ಗದ್ದಿಗೆಯನ್ನು ತಲುಪಿದ ಬಳಿಕ ನಾಲ್ಕೂ ಊರುಗಳ ಹಕ್ಕುದಾರರ ಸಮ್ಮುಖದಲ್ಲಿ ದೇವಿಯನ್ನು ಗದ್ದಿಗೆಯಲ್ಲಿ ಪ್ರತಿಷ್ಠಾಪಿಸಲಾಯಿತು.

ದೇವಿಯ ಮೆರವಣಿಯ ಸಂದರ್ಭದಲ್ಲಿ ದೇವಾಲಯದ ಅರ್ಚಕರು, ಊರಿನ ಹಕ್ಕುದಾರರು, ವತನದಾರರು ಮತ್ತು ಹಿರಿಯರು ಭಾಗವಹಿಸಿದ್ದರು. ಗದ್ದಿಗೆಯಲ್ಲಿ ವಿರಾಜಮಾನಳಾದ ದೇವಿಗೆ ಪ್ರಮುಖರು ಉಡಿಯನ್ನು ತುಂಬಿದರು. ಹೊನ್ನಾಟ ಮತ್ತು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಭಂಡಾರವನ್ನು ಎರಚಿ ದೇವಿಗೆ ಜಯಘೋಷದ ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು. ಜಾತ್ರೆಯ ಅಂಗವಾಗಿ ನಾಲ್ಕೂ ಗ್ರಾಮಗಳ ಪ್ರಮುಖ ಬೀದಿಗಳು, ರಸ್ತೆಗಳು, ದೇವಾಲಯಗಳು ಸಂಪೂರ್ಣ ಭಂಡಾರಮಯವಾಗಿ ಕಂಗೊಳಿಸಿದವು.

ಜಾತ್ರಾ ಮಹೋತ್ಸವದಲ್ಲಿ ಶಾಸಕ ವಿಠ್ಠಲ ಹಲಗೇಕರ, ಮಾಜಿ ಶಾಸಕ ಅರವಿಂದ ಪಾಟೀಲ, ಬೈಲೂರು ಗ್ರಾಮದ ಇನಾಮದಾರ ಕರಣಸಿಂಗ್ ಸರ್‌ದೇಸಾಯಿ ಸೇರಿದಂತೆ ಜಾತ್ರಾ ಕಮಿಟಿಯವರು, ನಾಲ್ಕೂ ಗ್ರಾಮಗಳ ಹಿರಿಯರು, ತಾಲೂಕಿನ ವಿವಿಧ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಮುಖಂಡರು, ಭಕ್ತರು ಭಾಗವಹಿಸಿದ್ದರು.



ನ್ಯಾ. ಬಸವರಾಜ ನಾಯಕರಿಗೆ ಬೀಳ್ಕೊಡುಗೆ

ಬೈಲಹೊಂಗಲ: ನಗರದನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಹೆಚ್ಚುವರಿ ದಿವಾಣಿ ನ್ಯಾಯಾಧೀಶ ಬಸವರಾಜ ನಾಯಕ ಅವರು ಬ್ಯಾಡಗಿ ನ್ಯಾಯಾಲಯಕ್ಕೆ ವರ್ಗಾವಣೆಯಾದ ಹಿನ್ನೆಲೆಯಲ್ಲಿ, ಸ್ಥಳೀಯ ನ್ಯಾಯವಾದಿಗಳ ಸಂಘದ ವತಿಯಿಂದ ಆತ್ಮೀಯ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಹಿರಿಯ ದಿವಾಣಿ ನ್ಯಾಯಾಧೀಶ ರವಿ ಚವ್ಹಾಣ ಮಾತನಾಡಿ, ಬಸವರಾಜ ನಾಯಕ ಅವರು ತಮ್ಮ ಸೇವಾವಧಿಯಲ್ಲಿ ಎಲ್ಲರೊಂದಿಗೆ ಉತ್ತಮ ಒಡನಾಟ ಹೊಂದಿ ನ್ಯಾಯಾಂಗ ಕ್ಷೇತ್ರದಲ್ಲಿಮಾದರಿಯಾಗಿದ್ದಾರೆಎಂದರು. ಲೋಕ ಅದಾಲತ್ ಸೇರಿದಂತೆ ವಿವಿಧ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವ ಮೂಲಕ ಜನರಿಗೆ ನ್ಯಾಯವನ್ನು ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ ಎಂದು ಪ್ರಶಂಸಿಸಿದರು. ಅವರ ಸೇವಾ ನಿಷ್ಠೆ ಮತ್ತು ಕರ್ತವ್ಯನಿಷ್ಠೆ ಶ್ಲಾಘನೀಯವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಹುದ್ದೆಗಳನ್ನು ಅಲಂಕರಿಸಿ ಕೀರ್ತಿ ಗಳಿಸಲಿ ಎಂದು ಹಾರೈಸಿದರು.

ಪ್ರಧಾನ ದಿವಾಣಿ ನ್ಯಾಯಾಧೀಶೆ ರೋಹಿಣಿ ಬಸಾಪುರ ಮಾತನಾಡಿ, ಬಸವರಾಜ ನಾಯಕ ಅವರು ಸಹೋದ್ಯೋಗಿಗಳೊಂದಿಗೆ ಸದಾ ಸಹಕಾರ ಮನೋಭಾವದಿಂದ ನಡೆದುಕೊಂಡು, ನ್ಯಾಯಾಲಯದ ಕಾರ್ಯನಿರ್ವಹಣೆಗೆ ಉತ್ತಮ ಕೊಡುಗೆ ನೀಡಿದ್ದಾರೆ ಎಂದರು. ಅವರ ಸರಳ ಸ್ವಭಾವ ಹಾಗೂ ಕೇಸುಗಳ ತ್ವರಿತ ನಿರ್ವಹಣೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಿದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಂ.ಆರ್. ಮೆಳವಂಕಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ಬಸವರಾಜ ನಾಯಕ ಅವರು ಮಾತನಾಡಿ, ತಮ್ಮ ಸೇವಾ ಅವಧಿಯಲ್ಲಿ ನೀಡಿದ ಸಹಕಾರಕ್ಕೆ ನ್ಯಾಯವಾದಿಗಳು ಹಾಗೂ ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಎ.ಎಂ. ಸಿದ್ರಾಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನಕಾರ್ಯದರ್ಶಿ ವಿ.ಜಿ. ಕಟದಾಳ ಸ್ವಾಗತಿಸಿದರು. ಲಕ್ಷ್ಮೀ ಭಾಂವಿಹಾಳ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಅಪರ ಸರ್ಕಾರಿ ವಕೀಲ ರಮೇಶ ಕೋಲಕಾರ, ಹಿರಿಯ ವಕೀಲರಾದ ರಝು. ಎ. ಗೋಕಾಕ, ಎಸ್ ಬಿ ಅನಿಗೋಳ, ಅರುಣ ಯಲಿಗಾರ, ಸಂಘದ ಸಹ ಕಾರ್ಯದರ್ಶಿ ವಿ.ಸಿ. ಪೂಜೇರ, ಎ ಎಫ್ ಪಟ್ಟಿಹಾಳ, ಕೆ ಎಸ್ ಕುಲಕರ್ಣಿ ನ್ಯಾಯವಾದಿಗಳ ಸಂಘದ ಸರ್ವ ಸದಸ್ಯರು, ನ್ಯಾಯಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಸಾವಯವ ಕೃಷಿಯಿಂದ ಭೂಮಿ ರಕ್ಷಣೆ

ಯರಗಟ್ಟಿ: ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಮತ್ತು ಭೂಮಿತಾಯಿ ರಕ್ಷಣಾ ಕಣ್ಗಾವಲು ಸಭೆಯನ್ನು ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಆಯೋಜಿಸಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಸಹಾಯಕ ಕೃಷಿ ನಿರ್ದೇಶಕ ಶಿವಪ್ರಕಾಶ ಪಾಟೀಲ ಮಾತಾನಾಡಿ, ರೈತರು ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿ ತನ್ನ ಫಲವತ್ತತೆ ಕಳೆದುಕೊಳ್ಳುತ್ತಿದ್ದು ಆದಷ್ಟು ರೈತರು ಸಾವಯವ ಪದ್ಧತಿ ಕೃಷಿ ಅಳವಡಿಸಿ ಭೂಮಿ ತಾಯಿಯನ್ನು ರಕ್ಷಿಸಬೇಕು, ರೈತ ಬಾಂಧವರು ಕೇವಲ ಬೆಳೆಯ ಇಳುವರಿಯನ್ನು ಮಾತ್ರ ಹೆಚ್ಚಿಸದೇ ಬೆಳೆ ಬೆಳೆಯುವಾಗ ತಗಲುವ ಖರ್ಚನ್ನು ಕೂಡ ಕಡಿಮೆ ಮಾಡುವುದರಿಂದ ಕೃಷಿಯನ್ನು ಲಾಭದಾಯಕವಾಗಿಸಬಹುದು ಮತ್ತು ಅತಿಯಾದ ಯುರಿಯಾ ಬಳಕೆ ಆಗುತ್ತಿರುವುದರಿಂದ ಪ್ರತಿ ರೈತರಿಗೆ ಪ್ರತಿ ಎಕರೆಗೆ ಒಂದು ಚೀಲ ಯೂರಿಯಾ ಗೊಬ್ಬರವನ್ನು ಕೆ ಕಿಸಾನ್ ಯೂರಿಯಾ ವಿತರಣಾ ತಂತ್ರಾಂಶದ ಮೂಲಕವೇ ವಿತರಣೆ ಮಾಡಲಾಗುತ್ತಿದೆ ಮತ್ತು ಗೊಬ್ಬರ ಖರೀದಿಸಲು ಎಫ್‌ಐಡಿ ಕಡ್ಡಾಯವಾಗಿ ಹೊಂದಿರಬೇಕು. ಒಂದು ವೇಳೆ ಎಫ್ .ಆಯ್.ಡಿ. ಇಲ್ಲವಾದಲ್ಲಿ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಎಫ್ .ಆಯ್.ಡಿ. ಮಾಡಿಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು. ಕೆವಿಕೆ ಮತ್ತಿಕೊಪ್ಪದ ಬೇಸಾಯ ಶಾಸ್ತ್ರ ವಿಭಾಗದ ವಿಜ್ಞಾನಿ ಜಿ. ಬಿ. ವಿಶ್ವನಾಥ ಅವರು ಮಾತನಾಡಿದರು. ಕೃಷಿ ಅಧಿಕಾರಿಗಳಾದ ಎಸ್. ಎಲ್. ದೇಸಾಯಿ, ಎಂ. ಜಿ. ಕಳಸಪ್ಪನವರ, ಆತ್ಮ ಸಿಬ್ಬಂದಿ ಉಮೇಶ್ ಯರಗಟ್ಟಿ, ಕೃಷಿ ಸಂಜೀವಿನಿ ಸಿಬ್ಬಂದಿ ಶ್ರವಣ ಶಿವಪೂಜಿ, ಮಂಜುನಾಥ ಮುಂಡೇಶಿ, ಮಹಾಂತೇಶ ಮಾಗುಂಡನವರ, ಪ್ರಗತಿ ಪರ ರೈತರು, ರೈತ ಮಹಿಳೆಯರು ಹಾಗೂ ಕೃಷಿ ಸಖಿಯರು ಹಾಜರಿದ್ದರು.



ವಿದ್ಯಾರ್ಥಿಗಳು ಮೊಬೈಲ್ ಸದ್ಬಳಕೆ ಮಾಡಿಕೊಳ್ಳಿ: ಧನ್ಯಕುಮಾರ

ಕುಡಚಿ: ಶಿಕ್ಷಕರು ನೀಡುವ ಉಪನ್ಯಾಸದಿಂದ ವಿದ್ಯಾರ್ಥಿಗಳು ಪ್ರೇರಣೆಯಾಗಿ ತೆಗೆದುಕೊಂಡು ಜೀವನವನ್ನು ಉಜ್ವಲ ಮಾಡಿಕೊಳ್ಳಬೇಕು ಎಂದು ಸೊಲಾಪೂರದ ಪುಣ್ಯಶ್ಲೋಕ ಅಹಿಲ್ಯಾದೇವಿ ಹೋಳ್ಕರ್ ವಿಶ್ವವಿದ್ಯಾಲಯ ಸೆನೆಟ ಸದಸ್ಯ ಧನ್ಯಕುಮಾರ ಬಿರಾದಾರ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ.ಶಂಕರಾನಂದ ಪದವಿ ಮಹಾವಿದ್ಯಾಲಯದಲ್ಲಿ ಹಿಂದಿ ಭಾಷೆಯ ಆಧುನಿಕ ಭಾರತೀಯ ಸಾಹಿತ್ಯ ಹಾಗೂ ಸಾಮಾಜಿಕ ಜಾಲತಾಣ ಕುರಿತು ಹಮ್ಮಿಕೊಂಡ ಒಂದು ದಿನದ ಕಾರ್ಯಾಗಾರವನ್ನು ದೀಪ ಪ್ರಜ್ವಲನೆ ಮಾಡುವ ಮೂಲಕ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ದುಡ್ಡಿಗೆ ಹೆಚ್ಚಿನ ಮಹತ್ವ ನೀಡುವ ಇವತ್ತಿನ ಆಧುನಿಕ ಯುಗದಲ್ಲಿ ವಾಣಿಜ್ಯ ವಿದ್ಯಾರ್ಥಿಗಳು ಅಂದರೆ ದುಡ್ಡು ಏನಿಸುವವರು. ಮನುಷ್ಯನ ಹತ್ತಿರ ಎಲ್ಲಿಯವರೆಗೆ ದುಡ್ಡಿದೆಯೋ ಅಲ್ಲಿಯವರೆಗೆ ಅವರನ್ನು ಜನ ಮಾತನಾಡಿಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಭಾಷೆ ಹಾಗೂ ಸಾಹಿತ್ಯದ ಸಮಗ್ರ ಅಧ್ಯಯನ ಮಾಡ್ತಿದ್ವಿ ಅಂದ್ರೆ ಅದನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದೆ ಆದರೆ ಯಶಸ್ವಿ ಜೀವನ ಸಾಗಿಸಲು ಸಾಧ್ಯ ಎಂದರು. ಕಾರ್ಯಾಗಾರದಲ್ಲಿ ನಿಪ್ಪಾಣಿ, ಚಿಕ್ಕೋಡಿ, ಅಂಕಲಿ, ಹಾರೂಗೇರಿ, ರಾಯಬಾಗ ಹಾಗೂ ಶೇಡಬಾಳ ಕಾಲೇಜುಗಳಿಂದ 90 ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಪ್ರೊ.ಧನ್ಯಕುಮಾರ ಬಿರಾಜದಾರ ಗಿಲಿಗಡು, ಭಾಷಾ ಹಾಗೂ ಸಾಮಾಜಿಕ ಜಾಲತಾಣ ಕುರಿತು, ಪ್ರೊ.ಸೋಹೆಲ ಸತೆಕರ ಆಧುನಿಕ ಹಿಂದಿ ಕಾವ್ಯ ವೈಭವ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಎ.ಎಸ್.ಕಾಂಬಳೆ, ಡಾ. ಎಸ್.ಎ.ಬೆಳಗಲಿ, ಡಾ. ಎಸ್.ಬಿ.ಕಲ್ಲೋಳ್ಕರ, ಅಫ್ತಾಬ್ ಪಿನಿತೋಡ, ವಿವಿಧ ಕಾಲೇಜುಗಳ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಶ್ರೀ ವೇಮನ್ ಕೋ.ಆಪ್ ಕ್ರೆಡಿಟ್ ಸೊಸೈಟಿಗೆ ರೂ. 3.06 ಕೋಟಿ ಲಾಭ

ಮೂಡಲಗಿ : ಇಲ್ಲಿಯ ಶ್ರೀ ವೇಮನ್ ಕೋ.ಆಪ್ ಕ್ರೆಡಿಟ್ ಸೊಸೈಟಿಯು 2022ರ ಮಾರ್ಚ ಅಂತ್ಯಕ್ಕೆ ರೂ.3.06 ಕೋಟಿ ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಸೊಸೈಟಿಯ ಅಧ್ಯಕ್ಷ ಸಂತೋಷ ಸೋನವಾಲಕರ ತಿಳಿಸಿದರು.

ಬುಧವಾರ ಸೊಸೈಟಿಯ ಪ್ರಗತಿ ಕುರಿತು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸೊಸೈಟಿಯು ಸದ್ಯ ರೂ. 3.57 ಕೋಟಿ ಶೇರು ಬಂಡವಾಳ, ರೂ. 12.30 ಕೋಟಿ ನಿಧಿಗಳು, ರೂ183.62 ಕೋಟಿ ಠೇವುಗಳು, 78.13 ಕೋಟಿ ವಿವಿಧ ಬ್ಯಾಂಕ್‌ಗಳಲ್ಲಿ ಗುಂತಾವಣೆಗಳು ಮತ್ತು ರೂ. 7.57 ಕೋಟಿ ವಿವಿಧ ಬ್ಯಾಂಕ್‌ಗಳ ಖಾತೆಗಳಲ್ಲಿ ಠೇವು ಇರುವವು. ರೂ. 208.96 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದ್ದು ರೂ.946.14 ಕೋಟಿ ವಾರ್ಷಿಕ ವಹಿವಾಟು ಮಾಡಿದ್ದು, 114.24 ಕೋಟಿ ಸಾಲ ವಿತರಣೆ ಮಾಡಿದ್ದು ರಾಜ್ಯ ಮಟ್ಟದ ಉತ್ತಮ ಸಹಕಾರಿ ಸಂಘ ಪ್ರಶಸ್ತಿ ಪಡೆದ ಸಂಸ್ಥೆಯಾಗಿದೆ ಎಂದರು,

ಸೊಸೈಟಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಒಟ್ಟು 161 ಜನರಿಗೆ ಪ್ರತಿಯೊಬ್ಬರಿಗೆ ರೂ. 5 ಲಕ್ಷ ಮೌಲ್ಯದ ಆರೋಗ್ಯ ವಿಮೆ ಮಾಡಿಸಿದ್ದು, ಈಗಾಗಲೇ ಸಾಕಷ್ಟು ಸಿಬ್ಬಂದಿಯವರು ವಿಮೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ ಎಂದರು.

ಸೊಸೈಟಿಯ ಉಪಾಧ್ಯಕ್ಷಹಣಮಂತಪ್ಯಾಟಿಗೌಡರ ಮಾತನಾಡಿ ಸೊಸೈಟಿಯು ಸದ್ಯ 8 ಶಾಖೆಗಳನ್ನು ಹೊಂದಿದ್ದು ಎಲ್ಲ ಶಾಖೆಗಳು ಪ್ರಗತಿಯಲ್ಲಿವೆ. ಇನ್ನು ಲೋಕಾಪೂರ ಹಾಗೂ ಕಾಕತಿಯಲ್ಲಿ ಶಾಖೆಗಳನ್ನು ತೆರೆಯುವ ಮೂಲಕ ಸೊಸೈಟಿಯ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ವಿಜಯಕುಮಾರ ಸೋನವಾಲ್ಕರ, ಪಾಂಡಪ್ಪ ಸೋನವಾಲ್ಕರ್, ತಮ್ಮಣ್ಣ ಝುಂಡೇಕುರಬರ, ಹಣಮಂತ ದಂಡಪ್ಪನವರ, ಸಿದ್ದಪ್ಪ ಪೂಜೇರಿ, ಸಚಿನ ಸೋನವಾಲ್ಕರ್, ವಿಠಲ್ ಸಂತಿ, ಲತಾ ಸತರಡಿ, ಲಕ್ಷ್ಮೀಬಾಯಿ ಮಂಟನ್ನವರ, ರಾಮಪ್ಪ ಹಾದಿಮನಿ ಹಾಗೂ ಪ್ರಧಾನ ವ್ಯವಸ್ಥಾಪಕ ಪರಶುರಾಮ ಕುಟರಟ್ಟಿ, ಸಹಾಯಕ ಕಾರ್ಯದರ್ಶಿ ಬಾಹುಬಲಿ ಜೋಕಿ, ಮಾರಾಟಾಧಿಕಾರಿ ಸಂಗಪ್ಪ ಪೊಲೀಸ ಇದ್ದರು.



- ಹಿರಿಯ ನಾಗರಿಕರಿಗೆ 0.50 ಹೆಚ್ಚಿಗೆ ಬಡ್ಡಿ,
- ವಿವಾಹ ವಾರ್ಷಿಕೋತ್ಸವ ಹಾಗೂ ಜನ್ಮದಿನದಂದು ಮಾಡಿದ ಠೇವಣಿಗೆ ಶೇ 1 ರಷ್ಟು ಹೆಚ್ಚುವರಿ ಬಡ್ಡಿ,
- ಲೋಕಾಪೂರ,ಕಾಕತಿಯಲ್ಲಿ ನೂತನ ಶಾಖೆಗಳು

ಜಾನಪದ ಬದುಕಿನ ದಾರಿದೀಪ: ಬೆಟಗೇರಿ

ಅಥಣಿ: ಜಾನಪದವು ಕೇವಲ ಕಲೆಯಲ್ಲ, ಅದು ನಮ್ಮ ಬದುಕಿನ ದಾರಿದೀಪವಾಗಿದೆ. ಹಳ್ಳಿಯ ಜನರ ಬೆವರಿನ ಹನಿಗಳಲ್ಲಿ ಹುಟ್ಟಿದ ಈ ಕಲೆಗಳು ಇಂದು ಆಧುನಿಕತೆ ಹಾಗೂ ನಗರದ ವ್ಯಾಮೋಹಕ್ಕೆ ಬಲಿಯಾಗುತ್ತಿವೆ ಎಂದು ಗೋಕಾಕದ ಹಿರಿಯ ಕಲಾವಿದ ಹಾಗೂ ಸಾಹಿತಿ ಈಶ್ವರಚಂದ್ರ ಬೆಟಗೇರಿ ಕಳವಳ ವ್ಯಕ್ತಪಡಿಸಿದರು.

ಅವರು ಇಲ್ಲಿನ ಕೆ ಎಲ್ ಈ ಸಂಸ್ಥೆಯ ಎಸ್ ಎಸ್ ಎಮ್ ಎಸ್ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದಿಂದ ಹಮ್ಮಿಕೊಳ್ಳಲಾಗಿದ್ದ ಜಾನಪದ ಜಾತ್ರೆ –2026 ಅದ್ದೂರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದಿನ ಆಧುನಿಕತೆಯ ಅಬ್ಬರದಲ್ಲಿ ಮರೆಯಾಗುತ್ತಿರುವ ನಮ್ಮ ಮಣ್ಣಿನ ಅಮೂಲ್ಯವಾದ ಜನಪದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಪರಿಚಯಿಸುವುದು ಅಗತ್ಯವಾಗಿದೆ.



ಈ ನಿಟ್ಟಿನಲ್ಲಿ ಮಹಾವಿದ್ಯಾಲಯವು ವಿದ್ಯಾರ್ಥಿಗಳಲ್ಲಿ ಜಾನಪದ ಪ್ರಜ್ಞೆ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಡಾ. ಮಲ್ಲಿಕಾರ್ಜುನ ಹಂಜಿ ಮಾತನಾಡಿ ಭಾರತೀಯ ಪರಂಪರೆಯಲ್ಲಿ ನಶಿಸುತ್ತಿರುವ ಜನಪದ ಸಂಸ್ಕೃತಿಗಳನ್ನು ಜೀವಂತವಾಗಿಸುವ ಸಂಕಲ್ಪದಿಂದ ಶಾಲಾ ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಜಾನಪದ ಜಾತ್ರೆಯು ನಮ್ಮ ಮಹಾವಿದ್ಯಾಲಯದ ಆವರಣದಲ್ಲಿ ಹಬ್ಬದ ಕಳೆಯನ್ನು ತಂದಿದೆ. ಕೆ.ಎಲ್.ಇ ಸಂಸ್ಥೆಯು ಕೇವಲ ಅಕ್ಷರ ಜ್ಞಾನವನ್ನಷ್ಟೇ ಅಲ್ಲದೆ, ಸಾಂಸ್ಕೃತಿಕ ಮೌಲ್ಯಗಳನ್ನೂ ವಿದ್ಯಾರ್ಥಿಗಳಲ್ಲಿ ಬಿತ್ತುತ್ತಿದೆ. ಜನಪದ ಜಾತ್ರೆಯ ಮೂಲಕ ವಿದ್ಯಾರ್ಥಿಗಳು ತಮ್ಮ ಬೇರುಗಳನ್ನು ಹುಡುಕುವ ಪ್ರಯತ್ನ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಭಾರತಿ ಎಸ್. ಗದ್ದಿ ಪ್ರಾಸ್ತಾವಿಕವಾಗಿ ಮಾತನಾಡಿ ಜಾನಪದ ಸಾಹಿತ್ಯ ಮತ್ತು ಮೌಖಿಕ ಪರಂಪರೆಯನ್ನು ಸಂರಕ್ಷಿಸುವಲ್ಲಿ ಇಂದಿನ ಯುವಜನತೆಯ ಪಾತ್ರ ದೊಡ್ಡದಿದೆ. ಶಾಲಾ ಕಾಲೇಜು ಹಂತಗಳಲ್ಲಿ ಇಂತಹ ಜಾತ್ರೆ ಮತ್ತು ಉತ್ಸವಗಳನ್ನ ನಡೆಸುವುದರಿಂದ ಮುಂದಿನ ಪೀಳಿಗೆಗೆ ಕಲೆಯನ್ನು ಪರಿಚಯಿಸಲು ಸಹಕಾರಿಯಾಗುತ್ತದೆ ಎಂದರು.

ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಾಂಪ್ರದಾಯಿಕ ಉಡುಪುಗಳು, ಹಳ್ಳಿ ಸೊಗಡಿನ ಊಟದ ವ್ಯವಸ್ಥೆ, ಜಾನಪದ ಕಲೆಗಳ ಅನಾವರಣ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದವು. ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಪ್ರಶಾಂತ ಮಗದುಮ್ಮ, ಸಂಗಮೇಶ ತಳವಾರ, ಐ.ಜಿ. ಮುಲ್ಲಾ, ಲಕ್ಷ್ಮಿ ಎಲ್. ಪೂಜಾರಿ, ಸಂಗಪ್ಪ ಪಟ್ಟೇದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಶಾಂತ ಮಗದುಮ್ಮ ಸ್ವಾಗತಿಸಿದರು. ಸಂಗಮೇಶ ತಳವಾರ ವಂದಿಸಿದರು.

ಕಿರುಸುದ್ದಿ

ರಸಗೊಬ್ಬರ ಖರೀದಿಗೆ ಎಫ್‌ಐಡಿ ಕಡ್ಡಾಯ

ಬಾದಾಮಿ: ಪ್ರಸಕ್ತ ಮುಂಗಾರಿನಿಂದ ರಸಗೊಬ್ಬರ ಖರೀದಿಸಲು ರೈತರು ಕಡ್ಡಾಯವಾಗಿ ಫಾರ್ಮರ ಐಡಿ ಕೆ-ಕಿಸಾನ್ ಮೂಲಕ ತಂತ್ರಾಂಶದ ಮೂಲಕ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಗೊಬ್ಬರ ವಿತರಿಸಲಾಗುತ್ತದೆ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಅಶೋಕ ತಿರಕಣ್ಣವರ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು ಪಾರದರ್ಶಕತೆಯನ್ನು ತರಲು ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ರೈತರು ಪಡೆದ ಗೊಬ್ಬರವನ್ನು ಕೆ-ಕಿಸಾನ ತಂತ್ರಾಂಶದಲ್ಲಿ ನಮೂದಿಸಲಾಗುತ್ತದೆ. ರೈತರಿಗೆ ತಮ್ಮ ಕ್ಷೇತ್ರದ ಅಗತ್ಯಕ್ಕೆ ಅನುಗುಣವಾಗಿ ರಸಗೊಬ್ಬರವನ್ನು ವಿತರಣೆ ಮಾಡಲು ರಸಗೊಬ್ಬರದ ವ್ಯಾಪಾರಸ್ಥರಿಗೆ ನಿರ್ದೇಶಿಸಲಾಗಿದೆ. ಎಫ್ ಐಡಿ ಹೊಂದಿರದ ರೈತರು ಬ್ಯಾಂಕ್ ಪಾಸ್‌ಬುಕ್, ಆಧಾರ ಕಾರ್ಡ್, ಪಹಣಿಯನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ ಹಾಗು ಸಾಮಾನ್ಯ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಎಫ್ ಐಡಿ ಮಾಡಿಸಿಕೊಳ್ಳಬೇಕು. ಫಾರ್ಮರ ಐಡಿ ಹೊಂದಿರುವ ರೈತರು ತಮ್ಮ ಸರ್ವೆ ನಂಬರ ಜೋಡಣೆಗೆ ಅವಕಾಶವನ್ನು ಕಲ್ಪಿಸಲಾಗಿದೆ ರೈತರು ಇದರ ಸದುಪಯೋಗವನ್ನು ಪಡಿಸಿಕೊಳ್ಳಬೇಕೆಂದರು. ವ್ಯಾಪಾರಸ್ಥರು ಕಡ್ಡಾಯವಾಗಿ ಕೆ-ಕಿಸಾನ್ ತಂತ್ರಾಂಶದಲ್ಲಿ ರೈತರ ಫಾರ್ಮರ್ ಐಡಿ ನಮೂದಿಸಿ ಗೊಬ್ಬರ ಮಾರಾಟ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ಇಲಾಖೆ ಅಧಿಕಾರಿಗಳು ತರಬೇತಿ ಹಾಗೂ ಮಾಹಿತಿ ನೀಡಲಾಗಿದೆ. ರಸಗೊಬ್ಬರ ಮಾರಾಟಗಾರರು ತಮ್ಮ ಎಲ್ಲ ಓ ಫಾರ್ಮ್ ನವೀಕರಣಗೊಳಿಸಿ ಕೊಳ್ಳಬೇಕು. ಒಂದು ವೇಳೆ ಮಾರಾಟಗಾರರು ಓ ಫಾರ್ಮ್ ನೋಂದಣಿ ಇಲ್ಲದೆ ಮಾರಾಟ ಮಾಡಿದರೆ ಅಥವಾ ಕೃಷಿಯೇತರ ಉದ್ದೇಶಕ್ಕೆ ಗೊಬ್ಬರ ನೀಡಿದರೆ ಅಂತಹ ಮಾರಾಟಗಾರರ ಪರವಾನಗಿ ರದ್ದುಗೊಳಿಸಲಾಗುವುದು ಎಂದು ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಇಂದು ಭೂಮಿಪೂಜೆ

ಬೀಳಗಿ: ತಾಲೂಕಿನ ಸುನಗ ತಾಂಡಾ-2ರಲ್ಲಿ ಮೇ 7ರಂದು ಸಂಜೆ 5 ಗಂಟೆಗೆ ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಬೆಂಗಳೂರು ಇವರ ವತಿಯಿಂದ ಅಂದಾಜು 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಶ್ರಮಿಕ ವಸತಿ ಶಾಲೆ, ಸುನಗ ಇದರ ಭೂಮಿ ಪೂಜೆಯನ್ನು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು, ಶಾಸಕರಾದ ಜೆ. ಟಿ. ಪಾಟೀಲ ಅವರಿಂದ ನೆರವೇರಲಿದೆ ಎಂದು ಶಾಸಕರ ಆಪ್ತ ಕಾರ್ಯದರ್ಶಿ ವೆಂಕಟೇಶ ಜಂಬಗಿ ತಿಳಿಸಿದ್ದಾರೆ.

ಜಗದೀಶ ಹಿರೇಮನಿ ನಿಧನ: ದುಃಖಕರ ಸಂಗತಿ

ಬಾಗಲಕೋಟೆ: ರಾಜ್ಯ ಬಿಜೆಪಿ ನಿಕಟಪೂರ್ವ ಕಾರ್ಯದರ್ಶಿ ಹಾಗೂ ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ ಹಿರೇಮನಿ ಬುಧವಾರ ಹೃದಯಾಘಾತದಿಂದ ನಿಧನರಾದ ಸುದ್ದಿ ಕೇಳಿ ದು:ಖ ತಂದಿದೆ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ತಿಳಿಸಿದ್ದಾರೆ. ಮೂಲತ: ಬಾಗಲಕೋಟೆಯವರಾಗಿರುವ ಜಗದೀಶ ಹಿರೇಮನಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ವಿದ್ಯಾರ್ಥಿ ದಿಸೆಯಲ್ಲಿಯೇ ಸಾರ್ವಜನಿಕ ಜೀವನ ಪ್ರವೇಶಿಸಿದರು. ಬಿಜೆಪಿ ಪಕ್ಷದ ಸಂಘಟನೆಯಲ್ಲಿ ಸದಾ ಸಕ್ರೀಯರಾಗುತ್ತಿದ್ದರು. ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ನಯ ವಿನಯದಿಂದ ಅವರು ಮಾತನಾಡುತ್ತಿದ್ದರು. ಪಕ್ಷದಲ್ಲಿ ಎಲ್ಲರೂ ಮೆಚ್ಚುಗೆಯನ್ನು ಅವರು ಗಳಿಸಿದ್ದು ಅವರ ನಿಧನ ತುಂಬಾ ದು:ಖ ತಂದಿದೆ ಎಂದು ಹೇಳಿದ್ದಾರೆ. ಜಗದೀಶ ಹಿರೇಮನಿಯವರ ನಿಧನದಿಂದ ಅವರ ಕುಟುಂಬಕ್ಕೆ ದು:ಖವನ್ನು ಸಹಿಸುವ ಶಕ್ತಿಯನ್ನು ಆ ಭಗವಂತ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಬಾಗಲಕೋಟೆ: ಆತ್ಮೀಯರಾದ ಜಗದೀಶ ಹಿರೇಮನಿ ಅವರ ನಿಧನದ ಸುದ್ದಿ ಅತ್ಯಂತ ದುಃಖಕರವಾಗಿದೆ. ಸಾಮಾಜಿಕ ಹಾಗೂ ಸಾರ್ವಜನಿಕ ಬದುಕಿನಲ್ಲಿ ಅವರು ಸಲ್ಲಿಸಿದ ಸೇವೆ ಸದಾ ಸ್ಮರಣೀಯವಾಗಿರುತ್ತದೆ.ಅವರ ಅಗಲಿಕೆಯಿಂದ ಕುಟುಂಬದವರಿಗೆ, ಬಂಧುಬಳಗಕ್ಕೆ ಹಾಗೂ ಅಪಾರ ಅಭಿಮಾನಿಗಳಿಗೆ ಉಂಟಾದ ದುಃಖದಲ್ಲಿ ನಾವೂ ಭಾಗಿಯಾಗಿದ್ದೇವೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಪಾರ್ವತೆಮ್ಮ ಕುದರಿ



ಕೆರೂರ: ಪಟ್ಟಣದ ಹೊಸಪೇಟೆ ಬಡಾವಣೆಯ ದೇವಾಂಗ ಸಮಾಜದ ಹಿರಿಯರಾದ ಪಾರ್ವತೇಮ್ಮ ರಾಮಚಂದ್ರಪ್ಪ ಕುದರಿ (90) ನಿಧನ ಹೊಂದಿದರು, ಮೃತರಿಗೆ ಇಬ್ಬರೂ ಪುತ್ರರು,ಓರ್ವ ಪುತ್ರಿ ಇದ್ದಾರೆ.




ರಬಕವಿ-ಬನಹಟ್ಟಿ: ಬುಧವಾರ ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಬನಹಟ್ಟಿಯ ಕೆಎಂಎಫ್‌ಡಿಡಿಎಲ್‌ನ ಡೆಂಪೋಡೇರಿ ಆವರಣದಲ್ಲಿ ಕಾನೂನು ಅರಿವು-ನೆರವು ಕಾರ್ಯಕ್ರಮ ನಡೆಯಿತು. ಹಿರಿಯ ನ್ಯಾಯಾಧೀಶ ಆಶಪ್ಪ ಸಣಮನಿ, ವಕೀಲರ ಸಂಘದ ಅಧ್ಯಕ್ಷ ಸಾಗರ ಕುಲಕರ್ಣಿ, ಕೆಎಂಎಫ್‌ಡಿಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಸಿದ್ಧೇಗೌಡ, ವಕೀಲರ ಸಂಘದ ಕಾರ್ಯದರ್ಶಿ ರವೀಂದ್ರ ಸಂಪಗಾಂವಿ, ಆರ್.ಜೆ.ಶಹಾ, ವರ್ಧಮಾನ ಕೋರಿ, ನ್ಯಾಯವಾದಿಗಳಾದ ಹರ್ಷವರ್ಧನ ಪಟವರ್ಧನ, ಕೆ.ಜಿ.ಸಾಲಗುಡೆ, ವಿ.ಬಿ.ಖೇಮನ್ನವರ, ಎಂ.ಬಿ.ದರೂರ, ಎಸ್.ಬಿ.ಜೆಡ್ಡಿಮನಿ, ಕೆ.ಎಸ್.ನ್ಯಾಮಗೌಡ, ಬಿ.ಆರ್.ಮದರಖಂಡಿ, ರಮೇಶ ವಾಂಗಿ, ಅಶ್ವಿನಿ ಹಾರೂಗೇರಿ, ಪ್ರಸನ್ನ ಬಾಣಕಾರ ಸೇರಿದಂತೆ ಅನೇಕರಿದ್ದರು.

ಕೆಎಲ್‌ಇಯಿಂದ 115 ವಿದ್ಯಾರ್ಥಿಗಳಿಗೆ ಸನ್ಮಾನ

ಮಹಾಲಿಂಗಪುರ: ಇಲ್ಲಿನ ಕೆಎಲ್‌ಇ ಸಂಸ್ಥೆಯ ಪದವಿ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಸಾಕ್ಷಾತ್ ಪ್ರತಿಭಾವಂತರ ಜಾತ್ರೆಯಂತಾಗಿ ಕಂಗೊಳಿಸಿತು. ಶೈಕ್ಷಣಿಕ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಸಾಧಕ ವಿದ್ಯಾರ್ಥಿಳಿಗೆ ಸನ್ಮಾನ ನಡೆಯಿತು.

ಕಾರ್ಯಕ್ರಮದಲ್ಲಿ 13 ಜನ ಕಾಲೇಜು ಸಂಸತ್ತಿನ ಸದಸ್ಯರು, ಶೇ.100 ಅಂಕ ಪಡೆದ 23 ವಿದ್ಯಾರ್ಥಿಗಳು, ಕ್ರೀಡೆಯಲ್ಲಿ ಯುನಿವರ್ಸಿಟಿ ಬ್ಲೂ ಆಗಿ ಹೊರಹೊಮ್ಮಿದ 12 ಕ್ರೀಡಾರ್ಥಿಗಳು, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ 30 ಪ್ರತಿಭಾವಂತರು ಸೇರಿದಂತೆ 115 ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ ಮಾಡಿ, 74 ಸಾವಿರ ರೂ. ನಗದು ಪುರಸ್ಕಾರ ನೀಡಲಾಯಿತು. ಈ ಬಹುಮಾನಗಳಿಗೆ ಕಾಲೇಜಿನ ಶೈಕ್ಷಣಿಕ ಕುಟುಂಬವೆನಿಸಿದ ಹಳೆಯ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು, ಅಧ್ಯಾಪಕರು ಕೈಜೋಡಿಸಿದ್ದು ವಿಶೇಷವಾಗಿತ್ತು. ವಿದ್ಯಾರ್ಥಿ ಕಲಾವಿದ ವಿನಾಯಕ ಭಜಂತ್ರಿ ನಾದಮಯ ಎಂಬ ಪ್ರಾರ್ಥನಾಗೀತೆ ಹಾಡಿ ಎಲ್ಲರೂ ತಲೆದೂಗುವಂತೆ ಮಾಡಿದರು. ಪದವಿಯ 3 ವರ್ಷದಲ್ಲಿ 1157 ವಿದ್ಯಾರ್ಥಿಗಳು, 96 ವಾರ, 720 ದಿನ ನಡೆದ ತರಗತಿಗೆ ಹಾಜರಾಗಿ, 90 ಕಿರು ಪರೀಕ್ಷೆ ಎದುರಿಸಿ, 45 ಸೆಮಿಸ್ಟರ್ ಕೊನೆಯ ಪರೀಕ್ಷೆ ಬರೆದು ಹೊರಹೋಗುವ ಆರೋಹಣ ಕಾರ್ಯಕ್ರಮ ಭಾವನಾತ್ಮಕ ಬಂಧಕ್ಕೆ ಗಂಧ ತೀಡಿದಂತೆ ಇತ್ತು. ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎಸ್.ಬಿ.ಮಾಟೋಳಿ, ವಿಶೇಷ ಆಮಂತ್ರಿತರಾಗಿ ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಪ್ರಾಚಾರ್ಯ ಎಲ್.ಬಿ.ತುಪ್ಪದ, ಉಪಪ್ರಾಂಶುಪಾಲ ಬಿ.ಎನ್. ಅರಕೇರಿ ಇದ್ದರು. ಪದವಿ ಪ್ರಾಚಾರ್ಯ ಎನ್.ಬಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು.



ಮಹಾಲಿಂಗಪುರ: ಇಲ್ಲಿನ ಕೆಎಲ್‌ಇ ಸಂಸ್ಥೆಯ ಪದವಿ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಸಾಕ್ಷಾತ್ ಪ್ರತಿಭಾವಂತರ ಜಾತ್ರೆಯಂತಾಗಿ ಕಂಗೊಳಿಸಿತು. ಶೈಕ್ಷಣಿಕ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಸಾಧಕ ವಿದ್ಯಾರ್ಥಿಳಿಗೆ ಸನ್ಮಾನ ನಡೆಯಿತು. ಡಾ.ಸುನಂದಾ ಸೋರಗಾಂವಿ, ಜೆ.ಆರ್.ಪಾಟೀಲ, ಎಸ್.ಎ.ಪಾಟೀಲ, ಎಂ.ಬಿ.ಧರಿಗೌಡ, ಪಿ.ಎಸ್.ಹಿಪ್ಪರಗಿ, ಚಂದ್ರಿಕಾ ಇಟ್ನಾಳ, ಟಿ.ಡಿ.ಡಂಗಿ, ಪಿ.ಎಂ.ಮುತ್ನಾಳಿ, ಎಸ್.ಎಸ್.ಕೋಳಿ ಇದ್ದರು.

ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮೆ ಯೋಜನೆ

ಪರಿಣಾಮಕಾರಿಯಾಗಿ ಯೋಜನೆ ಅನುಷ್ಠಾನಗೊಳಿಸಿ: ಜಿಲ್ಲಾಧಿಕಾರಿ

ಬಾಗಲಕೋಟೆ: ಅನಾನುಕೂಲಕರ ಹವಾಮಾನದಿಂದ ಉಂಟಾಗುವ ಬೆಳೆ ನಷ್ಟದಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತರಲಾದ ಹವಾಮಾನ ಆಧಾರಿತ ವಿಮೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮೆ ಯೋಜನೆ ಕುರಿತು ಜರುಗಿದ ಜಿಲ್ಲಾ ಮಟ್ಟ ತಾಂತ್ರಿಕ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹವಾಮಾನ ಆಧಾರಿತ ವಿಮೆ ಯೋಜನೆಯ ಮರು ವಿನ್ಯಾಸದ ಪ್ರಮುಖ ಅಂಶಗಳನ್ನು ವಿವರವಾಗಿ ಚರ್ಚಿಸಿದರು. ಇದು ಮಳೆ ತಾಪಮಾನ ಮತ್ತು ತೇವಾಂಶದಂತಹ ಪ್ರತಿಕೂಲ ಹವಾಮಾನ ವೈಪರಿತ್ಯಗಳಿಂದ ಉಂಟಾಗುವ ತೋಟಗಾರಿಕೆ ಮತ್ತು ವಾಣಿಜ್ಯ ಬೆಳೆಗಳಾದ ದಾಳಿಂಬೆ ಮತ್ತು ದ್ರಾಕ್ಷಿ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸುವ ಯೋಜನೆಯಾಗಿದೆ ಎಂದು ತಿಳಿಸಿದರು.

ಈ ಯೋಜನೆಯಡಿ ಮುಖ್ಯವಾಗಿ ಬೆಳೆ ಕಟಾವು ಪರಿಶೀಲನೆಗೆ ಬದಲಾಗಿ ಹವಾಮಾನ ಕೇಂದ್ರಗಳ ದತ್ತಾಂಶಗಳ ಆಧರಿಸಿ ಪರಿಹಾರ ನೀಡಲಾಗುತ್ತದೆ. ಅಲ್ಲದೇ ಬೆಳೆ ಬೆಳವಣಿಗೆಯ ಹಂತಗಳನ್ನು ಗಮನಿಸಿ ವಿಮಾ ಮೊತ್ತ ನಿಗದಿಪಡಿಸಲಾಗುತ್ತದೆ. ಹವಾಮಾನ ಸೂಚ್ಯಂಕಗಳ ಆಧಾರದ ಮೇಲೆ ಸ್ವಯಂ ಚಾಲಿತವಾಗಿ ಪರಿಹಾರ ಬಿಡುಗಡೆ ಮಾಡಲಾಗುತ್ತದೆ, ಬೆಳೆ ಹಾನಿಯ ಸಂದರ್ಭದಲ್ಲಿ ನೇರ ವಿಮಾ ಪಾವತಿಯನ್ನು ಬೆಳೆ ಸಾಲ ಪಡೆದ ಮತ್ತುಸಾಲ ಪಡೆಯದ ರೈತರಿಗೆ ಒದಗಿಸಲಾಗುತ್ತದೆ.

ಈ ಯೋಜನೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಜೊತೆ ಜಾರಿಯಲ್ಲಿರುತ್ತದೆ ಎಂದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಹವಾಮಾನ ವೈಪರಿತ್ಯಗಳಿಂದ ರೈತರಿಗೆ ಆಗುವ ನಷ್ಟವನ್ನು ತಗ್ಗಿಸಲು ಈ ಯೋಜನೆ ಸಹಾಯಕವಾಗಿದ್ದು, ಇದರ ಬಗ್ಗೆ ರೈತರಲ್ಲಿ ಹೆಚ್ಚಿನ ತಿಳುವಳಿಕೆ ನೀಡುವ ಕೆಲಸವಾಗಬೇಕು ಎಂದು ತಿಳಿಸಿದರು. ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಯೋಜನೆಯ ಲಾಭ ರೈತರಿಗೆ ಮುಟ್ಟಿಸುವ ಕೆಲಸವಾಗಬೇಕು. ರೈತರು ಈ ಯೋಜನೆಯ ಬಗ್ಗೆ ತಾಲೂಕಾ ಮತ್ತು ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದರು.

ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ರಾಜಕುಮಾರ ಹೂಗಾರ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಗೌರಮ್ಮ ಸುಂಕದ ಸೇರಿದಂತೆ ತೋಟಗಾರಿಕೆ ವಿವಿಯ ಸಂಶೋಧನಾ ನಿರ್ದೇಶಕರು, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು, ಎಲ್ಲ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ವಿಮಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಂಸ್ಕೃತಿ ಉಳಿವಿಗೆ ಪ್ರತಿಯೊಬ್ಬರೂ ಶ್ರಮಿಸಲಿ: ವಿಶ್ವಪ್ರಸನ್ನ ತೀರ್ಥರು

ಜಮಖಂಡಿ: ಸನಾತನ ಸಂಸ್ಕೃತಿಯ ಉಳಿವಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು. ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ನಮ್ಮ ಸಂಸ್ಕಾರವೇ ನಮ್ಮೆಲ್ಲರ ಉನ್ನತಿಗೆ ಕಾರಣವಾಗಿದೆ ಅನ್ಯ ಸಮಾಜದೊಂದಿಗೆ ಸಹಬಾಳ್ವೆ ನಡೆಸುವದೇ ಸನಾತನದ ಧ್ಯೇಯವಾಕ್ಯವಾಗಿದೆ ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನ ತೀರ್ಥರು ತಿಳಿಸಿದರು.



ನಗರದ ಹೊಕ್ಕಳ ಬಾವಿ ಮೈದಾನದಲ್ಲಿ ಏರ್ಪಡಿಸಿದ್ದ ಸಆಮೂಹಿಕ ಉಪನಯನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಪುರಾತನ ಋಷಿ ಮುನಿಗಳ ಹೆಸರನ್ನು ಗೋತ್ರವನ್ನು ಹೇಳುವಾಗ ಹೇಳುತ್ತೇವೆ. ಅವರು ಸಾವಿರಾರು ವರ್ಷಗಳ ತಪಸ್ಸನ್ನು ಆಚರಿಸಿ ಅದರ ಫಲವನ್ನು ನಮಗೆ ನೀಡಿದ್ದಾರೆ ಅದರ ಋಣ ವನ್ನು ತೀರಿಸಲು ಗಾಯತ್ರಿ ಮಂತ್ರದ ಅನುಷ್ಠಾನ ಶಾಸ್ತ್ರಗಳ ಅಧ್ಯಯನ ನಿರಂತರವಾಗಿ ನಡೆಸಿ ಮುಂದಿನ ಪೀಳಿಗೆಗೆ ತಿಳಿಸಿ ಕೊಟ್ಟರೇ ಋಷಿಗಳ ಋಣ ತೀರಿಸಿದಂತಾಗುತ್ತದೆ ಎಂದರು.

ಹೆಣ್ಣು ಮಕ್ಕಳಿಗೆ ಲಕ್ಷ್ಮೀ ಸೋಬಾನ ಪದ, ಹರಿಕಥಾಮೃತ ಸಾರ ಮುಂದಾವುಗಳ ಅಧ್ಯಯನ ಪಾರಾಯಣವನ್ನು ಶಾಸ್ತ್ರದಲ್ಲಿ ಹೇಳಲಾಗಿದೆ. ಗಂಡು ಮಕ್ಕಳಿಗೆ ಆತ್ಮ ಉದ್ಧಾರಕ್ಕಾಗಿ ವೇದಾಧ್ಯಯನ, ದೇಹ ಪೋಷಣೆಗೆ ಲೌಕಿಕ ವಿದ್ಯೆ ಎರಡನ್ನೂ ಚನ್ನಾಗಿ ಕಲಿತು ಸನಾತನ ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸ ವಾಗಬೇಕು ಎಂದು ತಿಳಿಸಿದರು.

ಸನಾತನ ಸಂಸ್ಕೃತಿಯ ಬಗ್ಗೆ ತಿಳಿ ಪಡಿಸಲು ಶಿಬಿರಗಳನ್ನು ಏರ್ಪಡಿಸಬೇಕು ಪ್ರತಿಯೊಬ್ಬರೂ ಧರ್ಮಮಾರ್ಗದಲ್ಲಿರ ಬೇಕು ಎಂದು ಹೇಳಿದರು.

ಸುಮಾರು 20ಕ್ಕೂ ಅಧೀಕವಟುಗಳಿಗೆ ಶ್ರೀಗಳಿಂದ ಬ್ರಹ್ಮೋಪದೇಶವನ್ನು ನಿಡಿಸಲಾಯಿತು. ರಾಜೇಂದ್ರ ಹುಲ್ಯಾಳಕರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಶುಭಶ್ರೀ ತಂಡದವರು ಪ್ರಾರ್ಥನಾ ಗೀತೆ ಹಾಡಿದರು. ಮೈಗೂರ ಆಚಾರ ಅನಿಸಿಕೆ ಹಂಚಿ ಕೊಂಡರು. ಎಸ್.ಎಲ್ ಕುಲಕರ್ಣಿ ನಿರೂಪಿಸಿದರು. ಪ್ರವೀಣ ಕುಲಕರ್ಣಿ ವಂದಿಸಿದರು.

ಸಂಸ್ಕೃತಿ ಬೆಳೆಸುವುದು ಇಂದಿನ ಅಗತ್ಯತೆ

ಮುಧೋಳ: ಆಧುನಿಕ ತಂತ್ರಜ್ಞಾನದ ಹಾವಳಿಯಲ್ಲಿ ಹಳೆಯ ಸಂಪ್ರದಾಯ ಹಾಗೂ ಸಂಸ್ಕೃತಿ ಮಾಸುತ್ತಿರುವ ಇಂದಿನ ದಿನಗಳಲ್ಲಿ ಆಧ್ಯಾತ್ಮಿಕ ನಾಟಕಗಳ ಮೂಲಕ ಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುತ್ತಿರುವುದು ಶ್ಲಾಘನೀಯ ಸಂಗತಿ ಎಂದು ಕಾಂಗ್ರೆಸ್ ಮುಖಂಡ ಶಂಕರ ತಿಮ್ಮಾಪುರ ಹೇಳಿದರು.

ತಾಲೂಕಿನ ಉತ್ತೂರ ಗ್ರಾಮದ ಬಸವೇಶ್ವರ ಮಹಾರಾಥೋತ್ಸವ, ಮಾರುತೇಶ್ವರ ಓಕುಳಿ ಹಾಗೂ ಗ್ರಾಮದೇವತೆಯ ಭಂಡಾರ ಜಾತ್ರೆ ನಿಮಿತ್ತ ಗದಗದ ಪಂಡಿತ ಪಂಚಾಕ್ಷರ ಗವಾಯಿಗಳ ನಾಟ್ಯ ಸಂಘದ ವತಿಯಿಂದ ಆಯೋಜಿಸಿದ್ದ 'ಅಜಾತ ನಾಗಲಿಂಗ' ನಾಟಕ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಹಿತಿ ಡಾ.ವೆಂಕಟೇಶ ಗುಡಪ್ಪನವರ ಮಾತನಾಡಿ, ಹಳೆಯ ಸಂಪ್ರದಾಯ ಹಾಗೂ ಸಂಸ್ಕೃತಿ ಉಳಿಸಿಕೊಳ್ಳಲು ಜಾತ್ರೆ ಮತ್ತು ನಾಟಕಗಳು ಪೂರಕವಾಗಿವೆ.

ಅಜಿತ್ ಗೌಡ ಪಾಟೀಲ್ ಮಾತನಾಡಿ, ಕಲೆ ಮತ್ತು ಕಲಾವಿದರನ್ನು ಬೆಳೆಸುವ ನಿಟ್ಟಿನಲ್ಲಿ ಉತ್ತೂರು ಗ್ರಾಮವು ಸದಾ ಮುಂಚೂಣಿಯಲ್ಲಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿಯಿಂದಾಗಿ ನಾಟಕ ಕಲೆ ಮರೆಯಾಗುತ್ತಿರುವ ಸಂದರ್ಭದಲ್ಲಿ, ಗದಗದ ಕುಮಾರೇಶ್ವರ ಕೃಪಾ ಪೋಷಿತ ನಾಟ್ಯ ಸಂಘದ ಕಲಾವಿದರಿಗೆ ವೇದಿಕೆ ಕಲ್ಪಿಸಿಕೊಟ್ಟಿರುವುದು ಶ್ಲಾಘನೀಯ. ಇಂತಹ ಧಾರ್ಮಿಕ ಮತ್ತು ಸಾಮಾಜಿಕ ನಾಟಕಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ. ಆರು ದಿನಗಳ ಕಾಲ ನಡೆಯುವ ಈ ವೈಭವದ ಜಾತ್ರೆಯು ಗ್ರಾಮದ ಅಭಿವೃದ್ಧಿ ಮತ್ತು ಶಾಂತಿಗೆ ಸಾಕ್ಷಿಯಾಗಲಿ ಎಂದು ಆಶಿಸಿದರು.

ಗ್ರಾಮದ ಶೇಖರಯ್ಯ ಶ್ರೀಗಳು, ಶಾಂತವೀರಯ್ಯ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸತ್ಯಪ್ಪ ಕಾತರಕಿ, ಪಿಡಿಒ ಹನುಮಂತ ಭಜಂತ್ರಿ, ಸತ್ಯಪ್ಪ ರಾಮಪ್ಪ ಕಾತರಕಿ, ಮಾರುತಿ ಶಿಂಗಾಡಿ, ಅಜಿತ್ ಗೌಡ ಪಾಟೀಲ, ಮಲ್ಲು ಗಾಣಗಿ, ರಾಮಜಿ ಘಾಟಗೆ, ಜಯಸಿಂಗ್ ಬೋಸ್ಲೆ, ವಿಠ್ಠಲ್ ಇಮ್ಮಡಿ, ಬಸು ಬಡಿಗೇರ್, ಕಾಳಪ್ಪ ಬಡಿಗೇರ್, ದೀಪುಗೌಡ ಪಾಟೀಲ್, ರಾಚಪ್ಪ ಮಳಲಿ, ಧೋಂಡಿಬಾ ಘಾಟಗೆ, ದರೆಪ್ಪ ಗಾಣಗಿ, ಸುಭಾಷ್ ಬಂಡಿವಡ್ಡರ ಹಾಗೂ ಮಂಜುನಾಥ ನಿಂಬಾಳಕರ, ಸದಾಶಿವ ಕಗಲಗೊಂಬ, ಉಮೇಶ ಅಂಬಿ, ಗೋಪಾಲ ಮಳಲಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



7.22 ಲಕ್ಷ ರೂ. ಪುರಸಭೆ ಉಳಿತಾಯ ಬಜೆಟ್ ಮಂಡನೆ

ಗುಳೇದಗುಡ್ಡ: ಪುರಸಭೆಯ 2026-27ನೇ ಸಾಲಿನ ಬಜೆಟ್‌ನಲ್ಲಿ ಎಲ್ಲಾ ಮೂಲಗಳಿಂದ ರೂ. 31.11 ಕೋಟಿ ಆದಾಯ ಮತ್ತು ರೂ.31.04 ಕೋಟಿ ವೆಚ್ಚವನ್ನು ಅಳವಡಿಸಿಕೊಂಡು ಒಟ್ಟು 7.22 ಲಕ್ಷ ರೂ. ನಿರೀಕ್ಷಿತ ಉಳಿತಾಯ ಹೊಂದಿದೆ ಬಜೆಟ್‌ಗೆ ಪುರಸಭೆ ಆಡಳಿತಾಧಿಕಾರಿ ಸಂತೋಷ ಜಗಲಾಸರ ಅನುಮೋದನೆ ನೀಡಿದ್ದು, ಚುನಾವಣೆ ನೀತಿ ಸಂಹಿತೆ ಹಿನ್ನಲೆಯಲ್ಲಿ ಬಜೆಟ್ ಪ್ರಕಟಣೆ ನೀಡಿರಲಿಲ್ಲ ಎಂದು ಪುರಸಭೆ ಮುಖ್ಯಾಧಿಕಾರಿ ಅಸ್ಲಂ ಮುಜಾವರ ತಿಳಿಸಿದ್ದಾರೆ.



ಇದರಲ್ಲಿ ಪ್ರಮುಖವಾಗಿ ಕಟ್ಟಡ ಆಸ್ತಿ ತೆರಿಗೆಯ ಮೂಲಕ ರೂ.1ಕೋಟಿ 20 ಲಕ್ಷ, ಅಂಗಡಿ ಮಳಿಗೆಗಳ ಬಾಡಿಗೆಯಿಂದ ರೂ.60 ಲಕ್ಷ, ಘನತ್ಯಾಜ್ಯ ನಿರ್ವಹಣಾ ಶುಲ್ಕದಿಂದ ರೂ.22 ಲಕ್ಷ, ನೀರಿನ ಶುಲ್ಕದಿಂದ ಆದಾಯ ರೂ.80 ಲಕ್ಷ, ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳ ಅನುದಾನ 4 ಕೋಟಿ ರೂ, ಸರ್ಕಾರದಿಂದ ಎಸ್. ಎಫ್.ಸಿ. ವೇತನ ರೂ.3 ಕೋಟಿ, 25 ಲಕ್ಷ ರೂ, ವಿದ್ಯುತ್ ಅನುದಾನ 2ಕೋಟಿ 63 ಲಕ್ಷ ರೂ, 16ನೇ ಹಣಕಾಸು ಯೋಜನೆಯಿಂದ ರೂ.2 ಕೋಟಿ 90 ಲಕ್ಷ, ಸ್ವಚ್ಛ ಭಾರತ ಮಿಷನ್ 1ಕೋಟಿ 50 ಲಕ್ಷ ರೂ. ಹೀಗೆ ಒಟ್ಟು 31.11 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಇದರಲ್ಲಿ ನಗರದ ರಸ್ತೆಗಳ ನಿರ್ಮಾಣ ಕಾಮಗಾರಿಗೆ 3ಕೋಟಿ 5 ಲಕ್ಷ ರೂ., ಒಳಚರಂಡಿ ,ರಸ್ತೆಗಳ ದುರಸ್ತಿ ಕಾಮಗಾರಿಗೆ 12 ಲಕ್ಷ ರೂ, ಒಳಚರಂಡಿ ನಿರ್ಮಾಣ ಕಾಮಗಾರಿಗೆ 1.5ಕೋಟಿ ರೂ, ಪೌರಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣಕ್ಕೆ 20 ಲಕ್ಷ ರೂ, ಹೊಸಪೇಟೆ ವೃತ್ತ, ಬನ್ನಿಕಟ್ಟಿಯಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ 1 ಕೋಟಿ ರೂ, ನೀರು ಸರಬರಾಜು ಹೊರಗುತ್ತಿಗೆ ಕಾರ್ಮಿಕರ ವೇತನ 80 ಲಕ್ಷ ರೂ.ಪಟ್ಟಣ ಬೀದಿದೀಪಗಳು, ನೀರು ಸರಬರಾಜು ವಿದ್ಯುತ್ ವೆಚ್ಚ 4.58 ಕೋಟಿ ಹೀಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ.31.04 ಕೋಟಿ ವೆಚ್ಚ ಅಳವಡಿಸಿಕೊಂಡು ರೂ. 7.22 ಲಕ್ಷ ರೂ. ಉಳಿತಾಯ ನಿರೀಕ್ಷಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಭಿಮಾನೋತ್ಸವ: ತೇರದಾಳ ಕ್ಷೇತ್ರದಿಂದ 5 ಸಾವಿರ ಜನ ಭಾಗಿ

ರಬಕವಿ-ಬನಹಟ್ಟಿ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭಕ್ಕೆ ತೇರದಾಳ ವಿಧಾನಸಭಾ ಕ್ಷೇತ್ರದ 5 ಸಾವಿರ ಅಭಿಮಾನಿಗಳು ಸ್ವಯಂಪ್ರೇರಿತವಾಗಿ ಹೊರಟ್ಟಿದ್ದಾರೆಂದು ಶಾಸಕ ಸಿದ್ದು ಸವದಿ ಹೇಳಿದರು.



ಇಲ್ಲಿನ ಶಾಸಕರ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಕ್ಷಿಣ ಭಾರತದಲ್ಲಿ ಕಮಲವನ್ನು ಅರಳಿಸಿದ ಧೀಮಂತ, ರೈತ ಹಾಗೂ ನೇಕಾರ ನಾಯಕ ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ 50 ವರ್ಷ ತುಂಬಿದ ಹಿನ್ನಲೆಯಲ್ಲಿ ಸಂಸದ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆಯೋಜಿಸಿದೆ. ತೇರದಾಳ ಕ್ಷೇತ್ರದಿಂದ 5 ಸಾವಿರ ಜನ ಭಾಗವಹಿಸಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿವಿಧ ರಾಜ್ಯಗಳ ನಾಯಕರು ಹಾಗೂ ಮಠಾಧೀಶರು ಭಾಗವಹಿಸಲಿದ್ದಾರೆಂದು ತಿಳಿಸಿದರು. ಯಡಿಯೂರಪ್ಪ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ರೈತರ ಬದುಕು ಸುಧಾರಣೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆಂದು ಶ್ಲಾಘಿಸಿದರು. ನಗರ ಬ್ಲಾಕ್ ಅಧ್ಯಕ್ಷ ಶ್ರೀಶೈಲ ಬೀಳಗಿ, ಪ್ರವೀಣ ನಾಡಗೌಡ, ಸುರೇಶ ಅಕ್ಕಿವಾಟ, ಬಾಬಾಗೌಡ ಪಾಟೀಲ, ರಾಮಣ್ಣ ಹಿಡಕಲ್, ಪ್ರಭು ಪೂಜಾರಿ, ನಂದು ಗಾಯಕವಾಡ, ಸಂಜಯ ತೆಗ್ಗಿ, ಸವಿತಾ ಹೊಸೂರ, ಸುವರ್ಣಾ ಕೊಪ್ಪದ, ವಿದ್ಯಾ ಪ್ರವೀಣ ದಭಾಡಿ, ಲಿಂಗರಾಜ ನಾಯಕ, ಮಹಾವೀರ ಕೊಕಟನೂರ, ಪಿ.ಜಿ. ಕಾಖಂಡಕಿ, ಅಶೋಕ ರಾವಳ, ಶಿವು ಕಾಗಿ, ಶಿವಾನಂದ ಬುದ್ನಿ, ಪ್ರಭಾಕರ ಮೊಳೇದ, ಈಶ್ವರ ಕಾಡದೇವರ, ಈರಯ್ಯ ಪರಾಳಮಠ ಇದ್ದರು.

ವಿಶಿಷ್ಟಚೇತನರಿಗೆ ಪ್ರೋತ್ಸಾಹ ಅಗತ್ಯ

ಗುಳೇದಗುಡ್ಡ: ಸಾಮಾನ್ಯ ಮಕ್ಕಳ ಜೊತೆಗೆ ವಿಕಲಚೇತನ ಮಕ್ಕಳು ಹೆಚ್ಚಿನ ಅಂಕ ಪಡೆಯುವ ಮೂಲಕ ಸಾಧನೆ ಮಾಡಿದ್ದು, ಇತರರಿಗೆ ಮಾದರಿಯಾಗಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಹೇಳಿದರು.

ಅವರು ಬುಧವಾರ ನಗರದ ಬಾಲಕೀಯರ ಪ.ಪೂ.ಕಾಲೇಜದಲ್ಲಿ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿಕಲಚೇತನ ಮಕ್ಕಳಿಗೆ ಸನ್ಮಾನ ಮಾಡಿ ಮಾತನಾಡಿದರು.ವಿಕಲಚೇತನ ಮಕ್ಕಳಾದ ತೆರೆಸಾ ಮಳ್ಳಿ(ದೈಹಿಕ ವಿಕಲತೆ) ಶೇ92.48, ಮಲ್ಲವ್ವ ಮುಶಿಗೇರಿ (ಅಲ್ಪದೃಷ್ಟಿದೋಷ) ಶೇ72.96, ಇಂದುಮತಿ ಗಡೇದಗೌಡರ (ಅಲ್ಪದೃಷ್ಟಿದೋಷ) ಶೇ72.92, ಪ್ರಿಯಾಂಕ ಮಾದರ (ಬಹುವಿಕಲತೆ) ಶೇ65.48 ಇವರನ್ನು ಸಿಹಿ ಹಂಚಿ, ಸನ್ಮಾನಿಸಿ, ಗೌರವಿಸಲಾಯಿತು. ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ. ದೊಡ್ಡಪ್ಪನ್ನವರ ಪ್ರಾಸ್ತಾವಿಕವಾಗಿ ಮಾತನಾಡಿ ವಿಕಲಚೇತನ ಮಕ್ಕಳಿಗೆ ಇರುವ ಸೌಲಭ್ಯಗಳನ್ನು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್. ಹಳಗೇರಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಬಿ. ಮಡಿವಾಳರ, ಸ್ಥಳೀಯ ಕಾಲೇಜಿನ ಉಪಪ್ರಾಚಾರ್ಯ ಎಂ.ಪಿ.ಮಾಗಿ, ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಕೆ. ಗುಡೂರ, ಎಸ್.ಎಸ್.ಯಲಿಗಾರ, ಎನ್.ಡಿ. ಬೀಳಗಿ, ಎಸ್.ಎಸ್.ಚೌಕದ, ಎಚ್.ಆರ್.ಕಡಿವಾಲ, ವಿ.ಎಚ್.ಮಡಿವಾಳರ, ಸಮೂಹ ಸಂಪನ್ಮೂಲ ವ್ಯಕ್ತಿ ಜಗದೀಶ ಬುಳ್ಳಾ ಸೇರಿದಂತೆ ಪಾಲಕರು, ವಿಕಲಚೇತನ ಮಕ್ಕಳು ಹಾಜರಿದ್ದರು.



ಶಿಕ್ಷಣಕ್ಕೆ ಯುವನಿಧಿ ನೀಡಿದ ಕಲ್ಮೇಶ ನಾವಿ



ಗಲಗಲಿ: ಗ್ರಾಮೀಣ ಪ್ರದೇಶದ ಯುವ ಪ್ರತಿಭೆ ಕಲ್ಮೇಶ ನಾವಿ ನಿರುದ್ಯೋಗಿ ಯುವಕರಿಗೆ ನೆರವಾಗುವ 'ಯುವನಿಧಿ' ಹಣ ಕಾಲೇಜು ಕಲಿಯುತ್ತಿರುವ ವಿದ್ಯಾರ್ಥಿಗಳ ಶಿಕ್ಷಣದ ಸಲುವಾಗಿ ವಿನಿಯೋಗಿಸಲು ಸಂಕಲ್ಪ ಮಾಡಿ ಗಮನ ಸೆಳೆದಿದ್ದಾರೆ. ಗಲಗಲಿಯ ಕಲ್ಮೇಶ ಬಸಪ್ಪ ನಾವಿ ಸದ್ದಿಲ್ಲದೇ ಇಂಥ ಜನಪರ ಕೆಲಸ ಮಾಡಿದ್ದು, ಅವರ ಕಾರ್ಯ ಪ್ರಶಂಸೆಗೆ ಪಾತ್ರವಾಗಿದೆ.ಎಂ.ಎ ಬಿಎಡ್ ಕಲಿತು ಕಳೆದ ಕೆಲ ವರ್ಷಗಳಿಂದ ತಾನು ಕಲಿತ ಶಿಕ್ಷಣಕ್ಕೆ ಸರಿ ಸಮಾನವಾದ ಉದ್ಯೋಗ ಸಿಗದೇ ಇದ್ದರೂ ಖಾಲಿ ಕುಳಿತುಕೊಳ್ಳದೇ ತಮ್ಮ ಕುಟುಂಬವರು ನಡೆಸಿಕೊಂಡು ಬಂದ ಸೆಲೂನ್‌ನಲ್ಲಿ ಕೆಲಸ ಮಾಡುತ್ತ ನೌಕರಿ ಅರಸುತ್ತಿರುವಾಗ ಸರ್ಕಾರದ ಗ್ಯಾರಂಟಿಗಳಲ್ಲೊಂದಾದ 'ಯುವನಿಧಿ'ಯ ಹಣ ಮೂರು ಸಾವಿರ ರೂ. ಇವರಿಗೆ ಪ್ರತಿ ತಿಂಗಳು ಜಮಾ ಆಗುತ್ತಿತ್ತು. ಆ ಹಣಕ್ಕೆ ಇನ್ನೂ ಸ್ವಲ್ಪ ಹಣ ಸೇರಿಸಿ ಒಟ್ಟು ಮೂವತ್ತು ಸಾವಿರ ರೂ.ಗಳನ್ನು ಪದವಿ ಕಲಿಯುತ್ತಿರುವವರ ಶಿಕ್ಷಣಕ್ಕಾಗಿ ನೀಡಿದ್ದಾರೆ.ತಾವು ಕಲಿತ ಗಾಲವ ಶಿಕ್ಷಣ ಸಂಸ್ಥೆಯವರಿಗೆ ಈ ಒಟ್ಟು ಹಣ ಬ್ಯಾಂಕಿನಲ್ಲಿ ಠೇವಣಿ ಇರಿಸಿ ಪ್ರತಿ ವರ್ಷಕ್ಕೆ ಬರುವ ಬಡ್ಡಿಯ ಹಣವನ್ನು ಬಳಸಲು ಕೇಳಿಕೊಂಡಿದ್ದಾರೆ. ಅವರಿಚ್ಛೆಯಂತೆ ಕಾಲೇಜಿನ ಪದವಿಯ ಅಂತಿಮ ವರ್ಷದಲ್ಲಿ ಇತಿಹಾಸ ವಿಷಯದಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗೆ ಈ ಹಣ ಬಹುಮಾನವಾಗಿ ನೀಡಲು ವಿನಂತಿಸಿದ್ದಾರೆ. ಇವರ ಕಾರ್ಯ ಮೆಚ್ಚುವಂತಹದು.

ಕ್ಯಾಂಪಸ್ ಸಂದರ್ಶನ ಯಶಸ್ವಿ

ಜಮಖಂಡಿ: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಉದ್ಯೋಗ ಭರವಸಾಕೋಶ, ಐಕ್ಯೂಎಸಿ, ಮ್ಯಾಗ್ನೆಸ್ ಇಂಟರ್ ನ್ಯಾಶನಲ್ ಪ್ರೈವೇಟ್ ಲಿಮಿಟೆಡ್ ಹಾಗೂ ಪೋರ್ಟಲ್ ಎಚ್. ಆರ್. ಕನ್ಸಲ್ಟನ್ಸಿ ಸರ್ವಿಸಸ್ ಅವರ ಸಹಯೋಗದೊಂದಿಗೆ ಕ್ಯಾಂಪಸ್ ಸಂದರ್ಶನ ಏರ್ಪಡಿಸಿದ್ದರು.

ಮ್ಯಾಗ್ನೆಸ್ ಇಂಟರ್‌ನ್ಯಾಶನಲ್ ಪ್ರೈವೇಟ್ ಲಿಮಿಟೆಡ್‌ನ ಹೆಚ್. ಆರ್. ಸುಹಾಸಜೆ. ಇವರು ಹಾಗೂ ಪೋರ್ಟಲ್ ಎಚ್.ಆರ್. ಕನ್ಸಲ್ಟನ್ಸಿ ಸರ್ವಿಸಸ್‌ನ ಹೆಚ್.ಆರ್. ಪೂಜಾ, ಕಾವ್ಯಾ ಇವರು ವಿದ್ಯಾರ್ಥಿನಿಯರಿಗೆ ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಿ, ಸಂದರ್ಶನದಲ್ಲಿ ಯಶಸ್ವಿಯಾಗಲು ಅಗತ್ಯವಾದ ಕೌಶಲ್ಯಗಳು, ಆತ್ಮವಿಶ್ವಾಸ, ಸಂವಹನ ಕೌಶಲ್ಯ ಹಾಗೂ ವ್ಯಕ್ತಿತ್ವ ವಿಕಾಸದ ಮಹತ್ವ ವಿವರಿಸಿದರು.

ಪ್ರಾಂಶುಪಾಲ ಡಾ.ಸುನಂದಾ ಎಸ್. ಶಿರೂರ ಮಾತನಾಡಿದರು. ಅಮ್ಮಣ್ಣ ಕುರುಂದವಾಡ, ಶಿವಲೀಲಾ ಎಚ್., ಡಾ.ಬಿ.ಎಂ. ಕೊರಬು, ಪ್ರಭು ಅವರಾದಿ, ಅನಸೂಯಾ ವಾಯ್. ಮಬ್ರುಮಕರ, ಎಸ್.ಬಿ.ತೇರದಾಳ, ವಿನಾಯಕ ಹಿಮಕರ ಇದ್ದರು.



ಜಗದೀಶ ಹಿರೇಮನಿ ನಿಧನ: ಚರಂತಿಮಠ ಸಂತಾಪ

ಬಾಗಲಕೋಟೆ: ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ ಹಿರೇಮನಿ ಅವರ ನಿಧನವು ತೀವ್ರ ದುಃಖ ತಂದಿದೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಸಂತಾಪ ಸೂಚಿಸಿದ್ದಾರೆ.



ಎಬಿವಿಪಿ ಪೂರ್ಣಾವಧಿ ಕಾರ್ಯಕರ್ತರು, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯರೂ ಆದ ಅವರು ಎಸ್‌ಐಆರ್ ರಾಜ್ಯ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದರು. ಪಕ್ಷಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಸದಾ ಕ್ರಿಯಾಶೀಲವಾಗಿ ಇರುತ್ತಿದ್ದರು, ಅವರಿಗೆ ಒಳ್ಳೆಯ ಭವಿಷ್ಯವಿತ್ತು, ಬಾಗಲಕೋಟೆ ಉಪ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಗೆಲುವಿಗಾಗಿ ಶ್ರಮಿಸಿದ್ದರು ಎಂದು ತಿಳಿಸಿದ್ದಾರೆ. ಜಗದೀಶ ಹಿರೇಮನಿಯವರ ನಿಧನದಿಂದ ಅವರ ಕುಟುಂಬ ಹಾಗೂ ಬಂಧುಗಳಿಗೆ ಈ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಇಂದು ಕಸಾಪ ಸಂಸ್ಥಾಪನಾ ದಿನಾಚರಣೆ

ಬಸವನಬಾಗೇವಾಡಿ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕು ಘಟಕಗಳ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನಾಚರಣೆ ಮೇ 7ರಂದು ಸಂಜೆ 4.30ಕ್ಕೆ ಬಸವೇಶ್ವರ ದೇವಾಲಯದ ಉದ್ಯಾನವನದಲ್ಲಿ ನಡೆಯಲಿದೆ. ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಡೋಣೂರ ಅಧ್ಯಕ್ಷತೆ ವಹಿಸುವರು, ವಿಶ್ರಾಂತ ಮುಖ್ಯ ಅಧ್ಯಾಪಕ ಸಿ.ಎಲ್. ಮುರಾಳ ಉದ್ಘಾಟಿಸುವರು. ಮಹಿಳಾ ಪ್ರತಿನಿಧಿ ಮಹಾದೇವಿ ಬಿರಾದಾರ ಉಪನ್ಯಾಸ ನೀಡುವರು. ಎಸ್.ಕೆ.ಸೋಮನಕಟ್ಟಿ, ಎಂ.ಎನ್.ಅಂಗಡಗೇರಿ, ಎಸ್.ಬಿ.ಅಂಕದ, ಕೋಶಾಧ್ಯಕ್ಷ ಬಸವರಾಜ ಮೇಟಿ, ಮಾಧ್ಯಮ ಪ್ರತಿನಿಧಿ ವಾಸುದೇವ ಮ್ಯಾಗೇರಿ ಉಪಸ್ಥಿತರಿರುವರು ಎಂದು ಕಸಾಪ ಕಾರ್ಯದರ್ಶಿ ಶಿವು ಮಡಿಕೇಶ್ವರ ತಿಳಿಸಿದ್ದಾರೆ.

ಮೇ 16ರಿಂದ ಜಾತ್ರೋತ್ಸವ

ಬಸವನಬಾಗೇವಾಡಿ: ತಾಲೂಕಿನ ಡೋಣೂರ ಕಟ್ಟಿಮನಿ ಹಿರೇಮಠದ ಗುರು ಮರುಳಸಿದ್ದೇಶ್ವರ ಜಾತ್ರಾ ಮಹೋತ್ಸವ, ರಥೋತ್ಸವ, ಹಜರತ್ ಸುಲೇಮಾನ ಉರುಸು ಹಾಗೂ ಚೌಡಮ್ಮದೇವಿ ಜಾತ್ರಾ ಮಹೋತ್ಸವ ಮೇ 16, 17ರ ವರೆಗೆ ಜರುಗಲಿದ್ದು, ಮೇ 16ರಂದು ಷಟ್ ಸ್ಥಲ ಧ್ವಜಾರೋಹಣ, ಕುಂಭೋತ್ಸವ, ಸಂಗಮೇಶ್ವರ ದೀಪಸ್ತಂಬದ ದೀಪಾರಾಧನೆ, ಮದ್ದು ಸುಡುವುದು, ಅಗ್ನಿ ಪುಟುಮಾಡುವುದು, ಭಾರ ಎತ್ತುವ ಸ್ಪರ್ಧೆ ಸೇರಿ ಗ್ರಾಮೀಣ ಕ್ರೀಡೆಗಳು ಜರುಗಲಿವೆ. ಮೇ 17ರಂದು ಶಿವದೀಕ್ಷಾ, ಸಾಮೂಹಿಕ ವಿವಾಹ, ಅಗ್ನಿಸ್ಪರ್ಶ ಸಂಜೆ 4ಗಂಟೆಗೆ ರಥೋತ್ಸವ ಜರುಗಲಿದೆ. ಸಾಮೂಹಿಕ ವಿವಾಹಕ್ಕೆ ಹೆಸರು ನೋಂದಾಯಿಸುವವರು ಮೇ 12ಕೊನೆಯ ದಿನವಾಗಿದೆ ಎಂದು ಕಟ್ಟಿಮನಿ ಹಿರೇಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಮೇ 11ರಿಂದ ಶಿಬಿರ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಅಲರ್ಜಿ, ಅಸ್ತಮಾ, ಕೆಮ್ಮು, ದಮ್ಮು ಹಾಗೂ ದೀರ್ಘಕಾಲದ ಉಸಿರಾಟ ಇಂತಹ ಸಮಸ್ಯೆ ಕುರಿತು ಉಚಿತ ತಪಾಸಣೆ ಶಿಬಿರ ಮೇ 11ರಿಂದ ಮೇ 14ರ ವರೆಗೆ ನಡೆಯಲಿದೆ. ಸೋಮವಾರದಿಂದ ಗುರವಾರದ ವರೆಗೆ ನಾಲ್ಕು ದಿನ ನಡೆಯಲಿರುವ ಈ ಶಿಬಿರವನ್ನು ಸಮಸ್ಯೆ ಎದುರಿಸುತ್ತಿರುವ ಸಾರ್ವಜನಿಕರು ಸದುಪಯೋಗವನ್ನು ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ (ಮೊ. 9513397413) ಸಂಪರ್ಕಿಸಬಹುದಾಗಿದೆ ಎಂದ ಬಿಎಲ್‌ಡಿಇ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ರೇಖಾ ಬಿರಾದಾರಗೆ ಪಿಎಚ್‌ಡಿ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ರೇಖಾ ಬಿರಾದಾರ ಅವರು ಸಲ್ಲಿಸಿದ್ದ ಇಮೇಜ್ ಕಂಪ್ರೆಷನ್ ಟೆಕ್ನಿಕ್ಸ್ ವಿತ್ ಅಪ್ಲಿಕೇಷನ್ ಟು 3ಡಿ ಮೆಡಿಕಲ್ ಇಮೇಜಸ್ ಕುರಿತ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ರೇಖಾ ಬಿರಾದಾರ ಅವರು ಗಣಕ ವಿಜ್ಞಾನ ವಿಭಾಗದ ಪ್ರೊ. ಅಜೀಜ್ ಮಕಾಂದಾರ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ರೇಖಾ ಬಿರಾದಾರ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ದಿ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ

ಬಾದಾಮಿ: ಕಾಂಚನೇಶ್ವರಿ ವಿದ್ಯಾವರ್ಧಕ ಸಂಸ್ಥೆ ಕಟಗೇರಿ ಅಡಿಯಲ್ಲಿ ನಡೆಯುತ್ತಿರುವ ಪಟ್ಟಣದ ದಿ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ ನೀಡಿದೆ ಎಂದು ಸಂಸ್ಥೆಯ ಅಧ್ಯಕ್ಷೆ ರೇಣುಕಾ ಗುಡ್ಡದ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು ಶಾಲೆಯ ಎಲ್ಲ ಸೌಕರ್ಯ, ಮೂಲ ಸೌಲಭ್ಯಗಳನ್ನು ಪರಿಶೀಲನೆ ಮಾಡಿ ನವದೆಹಲಿಯಿಂದ ಸಿ.ಬಿ.ಎಸ್.ಸಿ.ನಂ:831761 ಮಾನ್ಯತೆ ನೀಡಿದೆ. ಶಾಲೆಯಲ್ಲಿ ನರ್ಸರಿಯಿಂದ ಎಲ್.ಕೆ.ಜಿ, ಯು.ಕೆ.ಜಿ ಯಿಂದ ಹತ್ತನೇ ವರೆಗೆ ಪ್ರವೇಶಕ್ಕೆ ಅವಕಾಶ ಇದ್ದು, ನುರಿತ ಸಿಬ್ಬಂದಿ, ಎಲ್ಲ ಆಧುನಿಕ ಕಲಿಕೋಪಕರಣ, ಗಣಕಯಂತ್ರ, ಪ್ರಯೋಗಾಲಯ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಹೊಂದಿದ್ದು, ನಗರ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ಪಾಲಕರು ತಮ್ಮ ಉತ್ತಮ ಭವಿಷ್ಯಕ್ಕಾಗಿ ಮಕ್ಕಳನ್ನು ದಾಖಲಾತಿ ಮಾಡುವ ಮೂಲಕ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪಟ್ಟಣದ ದಿ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆ ಆನಂದನಗರ ಬಾದಾಮಿ ಇಲ್ಲಿ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಅಧ್ಯಕ್ಷೆ ರೇಣುಕಾ ಗುಡ್ಡದ ಸಂಸ್ಥಾಪಕ ಅಧ್ಯಕ್ಷ ವೈ.ಎಸ್.ಗುಡ್ಡದ ಜಂಟಿ ಪ್ರಕಟಣೆ ಮೂಲಕ ಪಾಲಕರಲ್ಲಿ ಮನವಿ ಮಾಡಿದ್ದಾರೆ.



ಬಸವನಬಾಗೇವಾಡಿ: ಬಳ್ಳಾವೂರ ಗ್ರಾಮದಲ್ಲಿ ಗಾಳಿ ಮಳೆಗೆ ವಿದ್ಯುತ್ ಪರಿವರ್ತಕ (ಟಿಸಿ) ವಿತರಿಸಲು ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ, ಅವಳಿ ಜಿಲ್ಲಾ ಉಸ್ತುವಾರಿ ಅಶೋಕ ಹಾರಿವಾಳ ಅವರ ನೇತೃತ್ವದಲ್ಲಿ ಹೆಸ್ಕಾಂ ಇಲಾಖೆಗೆ ಭೇಟಿ ನೀಡಿ ಹೆಸ್ಕಾಂ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೇ ರೈತರ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು. ರೈತರ ಯಾವುದೇ ಟಿಸಿ ಸುಟ್ಟರೆ ಸುಟ್ಟ ಟಿಸಿ ತೆಗೆದುಕೊಂಡು ಮತ್ತೊಂದು ಟಿಸಿ ಕೊಡಿಸದೆ ಹೋದರೆ ಕರವೇ ಹೆಸ್ಕಾಂ ಇಲಾಖೆಗೆ ಬೀಗ ಜಡೆದು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಂದೇ ಭಾರತ ರೈಲ್ವೆ ಸಂಚಾರ ವಿಳಂಬ

ವಿಜಯಪುರ: ಸೊಲ್ಲಾಪುರ, ವಿಜಯಪುರ, ಗದಗ, ಹುಬ್ಬಳ್ಳಿ ರೈಲ್ವೆ ಮಾರ್ಗದ ಕಾಮಗಾರಿ ನಡೆಯುತ್ತಿರುವುದರಿಂದ ವಂದೇ ಭಾರತ ರೈಲು ಓಡುತ್ತಿಲ್ಲ, ಈ ಕಾಮಗಾರಿ ಪೂರ್ಣಗೊಂಡ ಬಳಿಕ ಈ ರೈಲು ಓಡಲಿದೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಒಂದೇ ಭಾರತ ರೈಲ್ವೆ ಸಂಚಾರ ವಿಜಯಪುರದಲ್ಲಿ ಸಂಚರಿಸಲು ಜಿಲ್ಲೆಯ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದು, ಕಲಬುರಗಿ, ಹುಬ್ಬಳ್ಳಿ, ಬೆಳಗಾವಿಯಲ್ಲಿ ಸದ್ಯ ರೈಲ್ವೆ ಸಂಚರಿಸುತ್ತಿದೆ. ಆದರೆ ವಸ್ತುಸ್ಥಿತಿ ಸಾರ್ವಜನಿಕರು ಅರ್ಥ ಮಾಡಿಕೊಳ್ಳಬೇಕು.

ಸೊಲ್ಲಾಪುರ, ವಿಜಯಪುರ, ಗದಗ, ಹುಬ್ಬಳ್ಳಿಯವರೆಗೆ ರೈಲ್ವೆ ಮಾರ್ಗ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದ್ಯ ಓಡುತ್ತಿರುವ ರೈಲಿನ ವೇಗವು 92ರಿಂದ 100ರ ವರೆಗೆ ಇರುತ್ತದೆ. ಆದರೆ ಒಂದೇ ಭಾರತ ರೈಲಿನ ವೇಗ 110 ರಿಂದ 140ರ ವೇಗವಾಗಿದೆ. ಆದ ಕಾರಣ ರೈಲಿನ ಮಾರ್ಗ ಕಾಮಗಾರಿಯಲ್ಲಿದ್ದು, ಈ ರೈಲು ಚಾಲನೆಯಾದರೆ ಏನಾದರೂ ಸಮಸ್ಯೆಯಾಗಬಾರದೆಂಬ ಹಿನ್ನೆಲೆ ಒಂದೇ ಭಾರತ ರೈಲು ಸಂಚಾರ ಮಾಡುವುದು ವಿಳಂಬವಾಗುತ್ತಿದೆ. ರೈಲು ಮಾರ್ಗ ಎರಡ್ಮೂರು ತಿಂಗಳಲ್ಲಿ ಪೂರ್ಣಪ್ರಮಾಣದಲ್ಲಿ ಮುಗಿದ ನಂತರ ಈ ರೈಲು ಸಂಚರಿಸಲು ಚಾಲನೆಯಾಗುತ್ತದೆ. ವಿದ್ಯಾವಂತರು ಇದನ್ನು ಅರಿತುಕೊಳ್ಳಬೇಕು. ಯಾವುದೇ ರೀತಿಯ ದ್ವಂಧಕ್ಕೆ ಅಂಟಿಕೊಳ್ಳದೇ ರೈಲಿನ ಕುರಿತ ಅಪಪ್ರಚಾರ ಮಾಡಬಾರದು ಎಂದು ತಿಳಿಸಿದ್ದಾರೆ.



ಬಾದಾಮಿ: ಸಿಇಐಆರ್ ಪ್ರೋರ್ಟಲ್ ಆ್ಯಪ್ ಮೂಲಕ ಕಳೆದುಹೋದ ಮೊಬೈಲ್ ಫೋನಗಳನ್ನು ಪತ್ತೆ ಹಚ್ಚಿ ವಾರಸುದಾರರಿಗೆ ಮರಳಿಸಲಾಯಿತು. ಬಾದಾಮಿ ಸಿಪಿಐ ಕರೆಪ್ಪ ಬನ್ನೆ ಮತ್ತು ಪಿಎಸ್ಐ ಹನಮಂತ ನೆರಳೆ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಠಾಣಾ ಸಿಬ್ಬಂದಿಗಳಾದ ಎ.ಎಸ್.ಚವ್ಹಾಣ, ಎಸ್.ಬಿ.ಮುತ್ತಲಗೇರಿ, ಬಿ.ಎ.ವಾಲಿಕಾರ, ವೈ.ಎನ್.ಲಮಾಣಿ ವೈ.ಜಿ.ಕುರುಬರ ಅವರು ಸಿಇಐಆರ್ ಪೋರ್ಟಲ್ ಮೂಲಕ ಸಾರ್ವಜನಿಕರು ಕಳೆದುಕೊಂಡ ಅಂದಾಜು 2,50,000 ರೂ. ಮೌಲ್ಯದ ಒಟ್ಟು 25 ಮೊಬೈಲ್ ಫೋಗಳನ್ನು ಪತ್ತೆ ಮಾಡಿದ್ದು ಅದರ ವಾರಸುದಾರರಿಗೆ ಹಿಂತಿರುಗಿಸಲಾಯಿತು.

ಹೋರಾಟಕ್ಕೆ ಇನ್ನೊಂದು ಹೆಸರೇ ಯಡಿಯೂರಪ್ಪ| ಶ್ರೀಕಾಂತ ಕುಲಕರ್ಣಿ

ಕಾರ್ಯಕರ್ತರನ್ನು ಬೆಳೆಸಿದ ಬಿಎಸ್‌ವೈ

ವಿಜಯಪುರ: ರಾಜ್ಯದಲ್ಲಿ ಹೋರಾಟಕ್ಕೆ ಇನ್ನೊಂದು ಹೆಸರೇ ಬಿ.ಎಸ್.ಯಡಿಯೂರಪ್ಪ ಎಂದು ಜಮಖಂಡಿಯ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ತಳಮಟ್ಟದಿಂದ ಕಟ್ಟಿದಂಥ ಹುಟ್ಟು ಹೋರಾಟಗಾರ ಬಿ.ಎಸ್.ಯಡಿಯೂರಪ್ಪನವರ 50 ವರ್ಷದ ತಪಸ್ಸು ಹಾಗೂ ಪರಿಶ್ರಮಕ್ಕಾಗಿ ಚಿತ್ರದುರ್ಗದಲ್ಲಿ ನಡೆಯುವ ಅಭಿನಂದನಾ ಸಮಾರಂಭ ಶ್ಲಾಘನೀಯ. ಅವರು ನಮ್ಮಂಥ ನೂರಾರು ಕಾರ್ಯಕರ್ತರನ್ನು ಬೆಳೆಸಿದ್ದು, ಬಿಜೆಪಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯಲು ಅವರು ಕಾರಣೀಭೂತರೆಂದು ಈ ಸಂದರ್ಭದಲ್ಲಿ ಅವರನ್ನು ಹಾರ್ದಿಕವಾಗಿ ಅಭಿನಂದಿಸುವೆ ಎಂದರು.

ಅಖಂಡ ವಿಜಯಪುರ ಜಿಲ್ಲೆಗೂ ಯಡಿಯೂರಪ್ಪನವರಿಗೂ ಒಂದು ಅವಿನಾಭಾವ ಸಂಬಂಧವಿದೆ. ರೈತರ ಕಷ್ಟಗಳನ್ನು ಅರ್ಥಮಾಡಿಕೊಂಡು ಹಳ್ಳಿ ಹಳ್ಳಿಗೆ ಪ್ರವಾಸ ಮಾಡಿ ರೈತರನ್ನು ಬಡಿದೆಬ್ಬಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ರೈತರ ಸಾಲ ಮನ್ನಾಕ್ಕಾಗಿ ಆಗ್ರಹಿಸಿ ಬಾಗೇವಾಡಿ, ಬನವಾಸಿ ಹಾಗೂ ಬೀದರಗಳಿಂದ 3 ಬಾರಿ ರೈತರ ಸಾಲ ಮನ್ನಾಕ್ಕಾಗಿ ಅವರು ಮಾಡಿದ ರೈತಯಾತ್ರೆ ಮರೆಯಲಿಕ್ಕಾಗದು ಎಂದರು.

ಪ್ರತಿಯೊಬ್ಬರಿಗೆ ರಾಜಕೀಯದಲ್ಲಿ ಒಬ್ಬ ಕಿಂಗ್ ಮೇಕರ್ (ಗುರು) ಅಂತಾ ಇರುತ್ತಾರೆ. ಆದರೆ ನನಗೆ ಇಬ್ಬರು ಕಿಂಗ್ ಮೇಕರ್‌ಗಳು. ಒಬ್ಬರು ಯಡಿಯೂರಪ್ಪ ಇನ್ನೊಬ್ಬರು ಅನಂತಕುಮಾರ್. 1987ರಲ್ಲಿ ಹೆಗಡೆರವರ ಮಂಡಲ ಪಂಚಾಯತಿ, ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನಾನು ಜಮಖಂಡಿ ತಾಲೂಕಿನ ಬಿದರಿ ಕೇತ್ರದಿಂದ ಸ್ಪರ್ಧಿಸಿ ಕೇವಲ 164 ಮತಗಳ ಅಂತರದಿಂದ ಸೋತಾಗ ಶಾಸಕರಾಗಿದ್ದ ಯಡಿಯೂರಪ್ಪನವರು ನನ್ನನ್ನು ಭೇಟಿಯಾಗಿ ಹುರಿದುಂಬಿಸಲು ವಿಜಯಪುರ ಮೂಲಕ ಜಮಖಂಡಿಗೆ ಬಂದು ನನ್ನನ್ನು ಸಂಪರ್ಕಿಸಿ ಮಂಡಲ ಪಂಚಾಯಿತಕ್ಕೆ ಸಂಬಂಧಿಸಿದ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿದ್ದ ಆದೇಶವನ್ನು ರದ್ದುಪಡಿಸಿ, ನನ್ನನ್ನು ತೊದಲಬಾಗಿ ಮಂಡಲ ಪ್ರಧಾನ ಮಾಡಿದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಹಂತ ಹಂತವಾಗಿ ನನ್ನನ್ನು ಬೆಳೆಸಿ ಶಾಸಕರನ್ನಾಗಿ ಮಾಡಿದ್ದು ಅವರೇ ಅಂತಾ ಅಭಿಮಾನದಿಂದ ಹೇಳುತ್ತೇನೆ ಎಂದರು.

ಸಂಘಟನೆಗಾಗಿ ಅವರು ನಮ್ಮ ಅಖಂಡ ಜಿಲ್ಲೆಯಲ್ಲಿ ಶಿವಮೊಗ್ಗಕ್ಕಿಂತ ಹೆಚ್ಚು ಪ್ರವಾಸ ಮಾಡಿ 2008ರ ಚುನಾವಣೆಯಲ್ಲಿ 15 ರಲ್ಲಿ 12 ಸ್ಥಾನದಲ್ಲಿ ನಾವೇ ಗೆದ್ದಿರುವುದು. ಅದಕ್ಕೆ ಕಾರಣೀಕರ್ತರು ಯಡಿಯೂರಪ್ಪ ಮತ್ತು ಅನಂತಕುಮಾರ. ಯಡಿಯೂರಪ್ಪನವರು ರೈತರ ಬಗ್ಗೆ ವಿಶೇಷ ಬಜೆಟ್ ಮಂಡಿಸಿ ಒಂದು ದಾಖಲೆ ನಿರ್ಮಿಸಿದರು. ಕಡು ಬಡವರು, ಹೆಣ್ಣುಮಕ್ಕಳು ಹಾಗೂ ಸಮಾಜದ ಕಟ್ಟಕಡೆಯ ಬಡವರಿಗೆ ಅನೇಕ ಯೋಜನೆಗಳನ್ನು ತಂದವರು. ಅವರ ಕಠಿಣ ಪರಿಶ್ರಮ, ನಿರಂತರ ಪ್ರವಾಸ, ಅನ್ಯಾಯದ ವಿರುದ್ಧ ಸದನದ ಒಳಗೆ ಹೊರಗೆ ಮಾಡಿದ ಹೋರಾಟ ನಮ್ಮೆಲ್ಲರಿಗೆ ಒಂದು ಆದರ್ಶ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈರಣ್ಣ ರಾವೂರ, ಮಲ್ಲು ಕಲಾದಗಿ, ವಿಜಯ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ರಾಜ್ಯಮಟ್ಟದ ರೈತ ಸಮಾವೇಶ ನಾಳೆ

ಕೊಲ್ಹಾರ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮೇ 8ರಂದು ವಿಜಯಪುರದಲ್ಲಿ ನಡೆಯಲಿರುವ ರಾಜ್ಯಮಟ್ಟದ 4ನೇ ಬೃಹತ್ ರೈತ ಜಾಗೃತಿ ಸಮಾವೇಶಕ್ಕೆ ಕೊಲ್ಹಾರ ತಾಲ್ಲೂಕಿನಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು, ಯುವಕರು ಹಾಗೂ ಮಹಿಳೆಯರು ಭಾಗವಹಿಸಬೇಕೆಂದು ರಾಜ್ಯಾಧ್ಯಕ್ಷ ಚೂನಪ್ಪ ಪೂಜೇರಿ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಬಹುದಿನಗಳ ಬೇಡಿಕೆಯಾದ ಆಲಮಟ್ಟಿ ಜಲಾಶಯದ ಎತ್ತರವನ್ನು 524.256 ಮೀಟರ್‌ಗೆ ಏರಿಸುವ ಕುರಿತು ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಸರ್ಕಾರ ಇದುವರೆಗೆ ಯಾವುದೇ ಕಾರ್ಯರೂಪಕ್ಕೆ ತಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಮಾವೇಶಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳು ಆಗಮಿಸಲಿದ್ದು, ರೈತರ ಜ್ವಲಂತ ಸಮಸ್ಯೆಗಳು ಚರ್ಚೆಗೆ ಬರಲಿವೆ. ರಾಜ್ಯದ 31 ಜಿಲ್ಲೆಗಳಿಂದ ನಾಯಕರು ಹಾಗೂ ಸಾವಿರಾರು ರೈತರು ಭಾಗವಹಿಸುವ ನಿರೀಕ್ಷೆ ಇದೆ. ವಿಜಯಪುರ ಜಿಲ್ಲೆಯ 13 ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಬೇಕೆಂದು ಅವರು ಮನವಿ ಮಾಡಿದರು.

ಸಮಾವೇಶದಲ್ಲಿ ಮುಗಳಖೋಡದ ಡಾ. ಮುರಘರಾಜೇಂದ್ರ ಶ್ರೀಗಳು, ಹುಕ್ಕೇರಿಯ ಚಂದ್ರಶೇಖರ ಶ್ರೀಗಳು, ಇಂಚಗೇರಿ ಮಠದ ಶಶಿಕಾಂತ ಗುರೂಜಿ ಸೇರಿದಂತೆ ಅನೇಕ ಮಠಾಧೀಶರು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ, ತಾಲ್ಲೂಕು ಅಧ್ಯಕ್ಷ ಸೋಮು ಬಿರಾದಾರ, ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ ಬಬಲೇಶ್ವರ ತಾಲ್ಲೂಕಾಧ್ಯಕ್ಷ ಸುರೇಶ ಕಿರಸೂರ, ರೈತ ಮುಖಂಡರಾದ ಶಶಿಕಾಂತ ಬಿರಾದಾರ, ರಮೇಶ ಬೀಳಗಿ, ಕಲ್ಲಪ್ಪ ಗಿಡ್ಡಪ್ಪಗೋಳ, ಸತ್ಯಪ್ಪ ಕುಳ್ಳೊಳ್ಳಿ, ಸುನೀಲ ಹಿರೇಮಠ, ಲಕ್ಷ್ಮೀ ಬಿರಾದಾರ, ನೀಲಾಂಬಿಕಾ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗ್ಯಾರಂಟಿ ಅನುಷ್ಠಾನದಲ್ಲಿ ಬಬಲೇಶ್ವರ ಮೊದಲ ಸ್ಥಾನ

ವಿಜಯಪುರ: ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಬಬಲೇಶ್ವರ ಮತಕ್ಷೇತ್ರ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಜಿಲ್ಲೆಯ ತಿಕೋಟಾ ತಾಲೂಕಿನ ಮಲಕನದೇವರಹಟ್ಟಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 100 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸೋಮದೇವರಹಟ್ಟಿ- ಮಲಕನದೇವರಹಟ್ಟಿ ವರೆಗೆ ಮೂಲಸೌಕರ್ಯ ಅಭಿವೃದ್ಧಿ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳನ್ನು ಎಲ್ಲ ಫಲಾನುಭವಿಗಳಿಗೆ ತಲುಪಿಸಲಾಗಿದೆ ಎಂದರು.

ನೀರಾವರಿ ಮತ್ತು ಕೋಟಿ ವೃಕ್ಷ ಅಭಿಯಾನದ ಪರಿಣಾಮ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಬಾರಿ ವಿಜಯಪುರ ಜಿಲ್ಲೆಯಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿಲ್ಲ. ಮಲಕನದೇವರಹಟ್ಟಿ ಗ್ರಾಮದ ಎರಡು ಕೆರೆಗಳ ಕಾಮಗಾರಿ ಪೂರ್ಣಗೊಂಡಿದೆ. ಮುಂಬರುವ ದಿನಗಳಲ್ಲಿ ನೀರು ತುಂಬಿಸಲಾಗುವುದು. ಬಾಬಾನಗರ ಬಳಿ ಸುಮಾರು ಒಂದು ಟಿಎಂಸಿ ಸಾಮರ್ಥ್ಯದ ಡ್ಯಾಂ ನಿರ್ಮಿಸಲಾಗುತ್ತಿದ್ದು, ಮೂರ್ನಾಲ್ಕು ತಿಂಗಳಲ್ಲಿ ಡಿಪಿಆರ್ ಮತ್ತು ಟೆಂಡರ್ ಪ್ರಕ್ರಿಯೆ ಮುಗಿಯಲಿದೆ ಎಂದರು. ಡ್ಯಾಂ ಕಾಮಗಾರಿ ಪ್ರಾರಂಭವಾಗಿ ನಿಗದಿತ ಸಮಯದಲ್ಲಿ ಪೂರ್ಣವಾಗಲಿದೆ. ಇದರಿಂದ ಬೇಸಿಗೆಯಲ್ಲಿ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ. ಈಗ ಭೂಮಿಪೂಜೆ ನೆರವೇರಿಸಲಾದ ರಸ್ತೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು. ಸಮುದಾಯ ಭವನಕ್ಕೆ ಅನುದಾನ ಒದಗಿಸಲಾಗುವುದು ಎಂದರು.

ಜಿಪಂ ಮಾಜಿ ಅಧ್ಯಕ್ಷ ಸೋಮನಾಥ ಬಾಗಲಕೋಟ ಮಾತನಾಡಿ, ಎಂ.ಬಿ.ಪಾಟೀಲ ಅವರು ಈ ಭಾಗದಲ್ಲಿ ರಸ್ತೆ ಮತ್ತು ನೀರಾವರಿ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದಾರೆ ಎಂದರು.

ವಿದ್ಯಾಧರ ಶರಣಯ್ಯ ಹಿರೇಮಠ, ದಯಾನಂದ ಹಿರೇಮಠ, ಸಿದ್ದು ಗೌಡನವರ, ಜಗದೀಶ ವಳಸಂಗ, ಚನ್ನಪ್ಪ ದಯಗೊಂಡ, ರಮೇಶ ಜಂಬಗಿ, ಮಲ್ಲಪ್ಪ ರಾಮೋಜಿ, ರವಿ ಹಿರೇಮಠ, ನಿಂಗವ್ವ ನಿಡೋಣಿ, ಭೀಮವ್ವ ಜಂಬಗಿ, ನೀರಾವರಿ ನಿಗಮದ ಎಇಇ ಅಂಬಣ್ಣ ಹರಳಯ್ಯ, ಲೋಕೋಪಯೋಗಿ ಇಲಾಖೆ ಎಇಇ ಪ್ರಮೋದ ಹಟ್ಟಿ ಇದ್ದರು.



ಬೀದಿನಾಯಿ ಹಾವಳಿ ತಡೆಗೆ ಪಾಲಿಕೆ ಅಧಿಕಾರಿಗಳಿಗೆ ಡಿಸಿ ಸೂಚನೆ

ವಿಜಯಪುರ: ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 35ರ ಫೇವರಚಂದ ಕಾಲೋನಿಯ ರಾಜಕುಮಾರ ಲೇಔಟ್ ನಲ್ಲಿ ನಾಯಿ ಕಡಿತಕ್ಕೊಳಗಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗುವನ್ನು ಭೇಟಿ ಮಾಡಿ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಮಗುವಿನ ಆರೋಗ್ಯ ವಿಚಾರಿಸಿ, ಸೂಕ್ತ ಚಿಕಿತ್ಸೆ ನೀಡಲು ವೈದ್ಯರಿಗೆ ಸಲಹೆ ಮಾಡಿದರು.

ರಾಜಕುಮಾರ ಲೇಔಟ್ ನಿವಾಸಿಯಾಗಿರುವ 3 ವರ್ಷದ ಬಾಲಕ ವಿರಾಜ್ ಸಂತೋಷ ಬಿರಾದಾರ ಮಂಗಳವಾರ ನಾಯಿ ಕಡಿತಕ್ಕೊಳಗಾಗಿದ್ದರಿಂದ ಆತನನ್ನು ಪೋಷಕರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು.

ಸುದ್ದಿ ತಿಳಿದ ಜಿಲ್ಲಾಧಿಕಾರಿಗಳು, ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ, ನಾಯಿ ಕಡಿತಕ್ಕೊಳಗಾದ ಮಗುವಿನ ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿದ ಅವರು, ಮಗು ಔಷಧಿಗೆ ಸ್ಪಂದಿಸುತ್ತಿದ್ದು, ಚೇತರಿಸಿಕೊಂಡು ಮಾತನಾಡುತ್ತಿದ್ದಾನೆ. ಹಾಗಾಗಿ ಪೋಷಕರ ಆತಂಕಕ್ಕೊಳಗಾಗಬೇಕಿಲ್ಲ ಎಂದರು. ಜೊತೆಗೆ ಬಾಲಕನಿಗೆ ರೇಬೀಸ್ ವಿರೋಧಿ ಲಸಿಕೆಗಳನ್ನು ನೀಡಲಾಗುತ್ತದೆ. ಜಿಲ್ಲಾಸ್ಪತ್ರೆಯಿಂದಲೂ ಸೂಕ್ತ ಲಸಿಕೆ ಪಡೆಯಲಾಗುತ್ತಿದೆ ಎಂದರು.



ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದಿಂದ ಆಸ್ಪತ್ರೆಗೆ ಭೇಟಿ ನೀಡಿ ಸಮರ್ಪಕ ಸ್ಪಂದಿಸಲಾಗಿದೆ ಎಂದರು. ರಾಜ್ ಕುಮಾರ ಬಡಾವಣೆಯಲ್ಲಿ ಬೀದಿ ನಾಯಿಗಳ ಹಾವಳಿ ಅಧಿಕವಾಗಿದ್ದು, ನಾಯಿಗಳನ್ನು ಹಿಡಿದು ಪುನರ್ ವ್ಯವಸ್ಥೆ (ಡಾಗ್ ಶೆಲ್ಟರ್) ಪಾಲಿಕೆಯಿಂದ ವ್ಯವಸ್ಥೆ ಮಾಡಲಾಗುವುದು. ಈ ಕುರಿತು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಪಾಲಿಕೆ ಸದಸ್ಯ ರಾಜು ಕುರಿಯವರ, ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ ಸೇರಿದಂತೆ ಖಾಸಗಿ ಆಸ್ಪತ್ರೆ ವೈದ್ಯರು, ಸಿಬ್ಬಂದಿ, ಪಾಲಿಕೆ ಸಿಬ್ಬಂದಿ ಇದ್ದರು.

ವಾಣಿಜ್ಯ ಗ್ಯಾಸ್ ಸಿಲಿಂಡರ್, ಆಟೋ ಎಲ್‌ಪಿಜಿ ದರ ಏರಿಕೆಗೆ ಖಂಡನೆ

ವಿಜಯಪುರ: ವಾಣಿಜ್ಯ ಗ್ಯಾಸ್ ಸಿಲಿಂಡರ್ ಹಾಗೂ ಆಟೋ ಎಲ್‌ಪಿಜಿ ದರ ಏರಿಕೆ ಖಂಡಿಸಿ ಆಮ್ ಆದ್ಮಿ ಪಾರ್ಟಿ ಪದಾಧಿಕಾರಿಗಳು ನಗರದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರಿಗೆ ಮನವಿ ಸಲ್ಲಿಸಿದರು.

ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್ ಮಾತನಾಡಿ, ಕೇಂದ್ರ ಸರ್ಕಾರವು ವಾಣಿಜ್ಯ ಗ್ಯಾಸ್ ಸಿಲಿಂಡರ್ ಹಾಗೂ ಆಟೋ ಎಲ್‌ಪಿಜಿ ದರಗಳನ್ನು ನಿರಂತರವಾಗಿ ಹೆಚ್ಚಿಸುತ್ತಿರುವುದು ಖಂಡನೀಯ. ಈ ಅನ್ಯಾಯಕರ ದರ ಏರಿಕೆ ಪಂಚ ರಾಜ್ಯಗಳ ಚುನಾವಣೆ ಮುಗಿದ ಮರುದಿನವೇ ಕೇಂದ್ರ ಸರ್ಕಾರ ಬಡ ಜನರ ಮೇಲೆ ಚಾಟಿ ಏಟು ಬೀಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾಮಾನ್ಯ ಜನರ ಬದುಕಿನ ಮೇಲೆ ಭಾರೀ ಹೊರೆ ಹಾಕಿದ್ದು, ಸಣ್ಣ ವ್ಯಾಪಾರಿಗಳು, ಹೋಟೆಲ್ ಉದ್ಯಮಿಗಳು ಹಾಗೂ ಆಟೋ ಚಾಲಕರನ್ನು ಸಂಕಷ್ಟದ ಅಂಚಿಗೆ ತಳ್ಳಿದೆ ಎಂದು ಹೇಳಿದರು.

ಈಗಾಗಲೇ ದುಬಾರಿ ಬದುಕಿನ ಹೊರೆ ಹೊತ್ತಿರುವ ಜನರಿಗೆ ಈ ದರ ಏರಿಕೆ ಮತ್ತಷ್ಟು ಸಂಕಷ್ಟ ತಂದೊಡ್ಡಿದೆ. ಆಟೋ ಚಾಲಕರು ದಿನನಿತ್ಯದ ಆದಾಯದಿಂದಲೇ ಜೀವನ ಸಾಗಿಸುವ ಪರಿಸ್ಥಿತಿಯಲ್ಲಿ ಇಂತಹ ದರ ಏರಿಕೆ ಅವರ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ ಎಂದರು.



ಹೋಟೆಲ್ ಮತ್ತು ಸಣ್ಣ ಉದ್ಯಮಗಳು ನಷ್ಟದ ದಾರಿಯಲ್ಲಿ ಸಾಗುತ್ತಿದ್ದು, ಉದ್ಯೋಗ ಕಳೆದುಕೊಳ್ಳುವ ಭೀತಿ ಹೆಚ್ಚುತ್ತಿದೆ ಎಂದು ದೂರಿದರು. ಜಿಲ್ಲಾ ಮಾಧ್ಯಮ ಉಸ್ತುವಾರಿ ಸಂಜು ಶೆಟಗಾರ, ಯುವ ಮುಖಂಡ ಪ್ರಕಾಶ ಸಬರದ, ಕಿರಣ ಮೇಲಿನಕೇರಿ, ಮಹಿಳಾ ಮುಖಂಡರಾದ ಸುಶೀಲಾ ಮಿಣಜಗಿ, ಜ್ಯೋತಿ ಮಿಣಜಗಿ ಇದ್ದರು.

ಮೊಬೈಲ್ ಗೀಳಿನಿಂದ ಮಕ್ಕಳು ಹೊರಬರಲಿ: ಜಯರಾಜ

ಸಿಂದಗಿ: ಇಂದಿನ ಮಕ್ಕಳ ಸ್ಥಿತಿ ಏನಾಗಿದೆ ಎಂದರೆ ಮನೆಗೆ ಬಂದ ಅತಿಥಿಗಳಿಗಿಂತ, ಪಾಲಕರಿಗಿಂತ ಮೊಬೈಲ್ ಮೇಲೆಯೇ ಹೆಚ್ಚು ಪ್ರೀತಿ. ಇದರಿಂದ ರಕ್ತ ಸಂಬಂಧಗಳು ನಶಿಸಿ ಹೋಗುತ್ತಿವೆ ಎಂದು ವಿಜಯಪುರದ ಬಿಎಲ್‌ಡಿಇ ಸ್ವಾಯತ್ತ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ವೈ.ಎಂ.ಜಯರಾಜ ವಿಷಾದ ವ್ಯಕ್ತಪಡಿಸಿದರು.



ನಗರದ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ, ಸಾರಂಗ ಮಠದ ಜಿ.ಪಿ.ಪೋರವಾಲ ಕಲಾ ವಾಣಿಜ್ಯ ಮತ್ತು ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯದಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯಾವುದೇ ಕ್ಷೇತ್ರವಿರಲಿ ಅಲ್ಲಿ ಶ್ರದ್ಧೆ ಮತ್ತು ಗಣನೀಯವಾಗಿ ಸೇವೆ ಮಾಡಿ ಸಾಧನೆ ಮಾಡಬೇಕು. ಇಂದು ಹೃದಯವಂತಿಕೆ ಮಾತುಗಳಿಗಿಂತ ಒಣ ಮಾತುಗಳೇ ಹೆಚ್ಚಾಗುತ್ತಿವೆ. ಇದರ ಬಗ್ಗೆ ವಿದ್ಯಾರ್ಥಿಗಳು ತಲೆಕೆಡಿಸಿಕೊಳ್ಳದೆ ಮುನ್ನುಗ್ಗಬೇಕು ಎಂದರು.

ಸ್ಥಳೀಯ ಸಾರಂಗಮಠದ ಪೀಠಾಧಿಪತಿ, ಸಂಸ್ಥೆಯ ಅಧ್ಯಕ್ಷ ಡಾ. ಪ್ರಭುಸಾರಂಗದೇವ ಶಿವಾಚಾರ್ಯರು ಸಾನಿಧ್ಯ ವಹಿಸಿ ಮಾತನಾಡಿ, ಇಂದಿನ ಯುವ ಜನಾಂಗ ಎಷ್ಟೇ ಓದಿದರು ದೊಡ್ಡ ಸ್ಥಾನಕ್ಕೆ ಏರಿದರು ವಿದ್ಯೆಯ ಜೊತೆಗೆ ವಿನಮ್ರತೆ ಇರಬೇಕು. ಸೌಜನ್ಯವೇ ಮಾನವನಿಗೆ ಭೂಷಣ ಅದನ್ನು ಅಳವಡಿಸಿಕೊಳ್ಳಬೇಕು ಎಂದರು.

ಸಾರಂಗಮಠದ ಉತ್ತರಾಧಿಕಾರಿ ಡಾ. ವಿಶ್ವಪ್ರಭುದೇವ ಶಿವಾಚಾರ್ಯರು ಮಾತನಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಿ.ಎಮ್.ಸರಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಧ್ಯಾಪಕ ಬಿ.ಆರ್. ಮಹಾಜನಶೆಟ್ಟಿ, ಪ್ರತಿಕಾ ತಳವಾರ, ವಿದ್ಯಾರ್ಥಿ ಪ್ರತಿನಿಧಿ ಬೀರಲಿಂಗ ಗುಂಡಮನಿ, ಸಂಸ್ಥೆಯ ಸಹ-ಕಾರ್ಯದರ್ಶಿ ಅಶೋಕ ವಾರದ, ಪ್ರಾಧ್ಯಾಪಕ ಮಹಾದೇವ ಸಂಕಪಾಲ, ಡಾ.ರವಿ ಲಮಾಣಿ, ಡಾ.ಪ್ರಕಾಶ ರಾಠೋಡ, ಎಂ.ಐ.ಮಿಂಚ, ಪಿ.ಆರ್.ಪಾಟೀಲ, ಪಿ.ಎ.ಪಾಂಡೆ, ಭೀಮಾಶಂಕರ ಅರಳಗುಂಡಗಿ, ಡಾ.ಎಸ್.ಆಯ್.ಭಂಡಾರಿ, ಡಾ.ಸುಮಾ ನಿರಣಿ, ಎಸ್.ಎಸ್.ಮಂಗಳೂರ, ಡಾ.ರವಿ ಗೋಲಾ, ಡಾ.ನಾಗರಾಜ ಮುರಗೋಡ, ಮಹೇಶ ರೂಡಗಿ ಇದ್ದರು.

ಮಹಿಳೆಯರು ಕಾನೂನಿನ ಜ್ಞಾನ ಪಡೆಯಲಿ

ಬಸವನಬಾಗೇವಾಡಿ: ಇತ್ತೀಚಿನ ದಿನಗಳಲ್ಲಿ ಎನ್‌ಆರ್‌ಎಲ್ ಎಂನಲ್ಲಿ ಹಣಕಾಸಿನ ಅವ್ಯವಹಾರ ಬೆಳಕಿಗೆ ಬರುತ್ತಿವೆ ಇದರಲ್ಲಿ ಅಧಿಕಾರಿಗಳು ಹಾಗೂ ಎಂಬಿಕೆಗಳು ಭಾಗಿಯಾಗಿರುವುದು ಕಂಡು ಬರುತ್ತಿದೆ ಇದನ್ನು ಗಮನಿಸಿದಾಗ ಮಹಿಳೆಯರಿಗೆ ಕಾನೂನಿನ ಅರಿವು ಇಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತಿದೆ.



ಎನ್‌ಆರ್‌ಎಲ್ ಎಂ ನಲ್ಲಿರುವ ಎಲ್ಲ ಮಹಿಳೆಯರು ಕಾನೂನಿನ ಜ್ಞಾನ ಪಡೆಯಬೇಕು, ನಾವೆಲ್ಲಾ ಗ್ರಾಮಾಂತರ ಮಹಿಳೆಯರು ಆಗಿದ್ದರಿಂದ ಕಾನೂನಿನ ಜ್ಞಾನ ಅಗತ್ಯವಾಗಿದೆ. ಎಲ್ಲಾ ಸಿಬ್ಬಂದಿಗಳು ಕಾಯಕವೇ ಕೈಲಾಸ ಎಂಬ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸಲು ಕಂಕಣಬದ್ಧರಾಗೋಣ ಯಾವುದೇ ಕಾರಣಕ್ಕೂ ಅಧಿಕಾರಿಗಳ ಒತ್ತಡ ಆಸೆ ಆಮೀಷಗಳಿಗೆ ಬಲಿಯಾಗದೇ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಶಕ್ತಿ ತುಂಬುವ ಕಾರ್ಯದಲ್ಲಿ ನಾವು ನಮ್ಮನ್ನು ತೊಡಗಿಸಿಕೊಳ್ಳೋಣ. ಆರ್ಥಿಕ ಅವ್ಯವಹಾರಗಳಲ್ಲಿ ಸಿಲುಕಿ ಮಾನಸಿಕ ಸಾಮಾಜಿಕ ಹಾಗೂ ಆರೋಗ್ಯದ ಸಮಸ್ಯೆಗಳಿಗೆ ಬಲಿಯಾಗದಿರಲಿ. ಅವ್ಯವಹಾರಗಳಿಗೆ ತಿಲಾಂಜಲಿ ಆಡಿ ಸಮಾಜದಲ್ಲಿ ನಾವೆಲ್ಲ ಮಹಿಳೆಯರ ಘನತೆ ಗೌರವಗಳನ್ನು ಎತ್ತಿ ಹಿಡಿಯುವ ಕಾರ್ಯ ಮಾಡಲು ಮುಂದಾಗಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಎಂಬಿಕೆ ಮತ್ತು ಎಲ್ಸಿಆರ್ಪಿ ಸಖಿಯರ ಮಹಾಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಹೇಮಾ ದಳವಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಡಿ ತುಂಬುವುದು ಭಾರತೀಯ ಸಂಸ್ಕೃತಿಯ ಪ್ರತೀಕ

ದೇವರಹಿಪ್ಪರಗಿ: ಉಡಿ ತುಂಬುವ ಪದ್ಧತಿ ಭಾರತೀಯ ಸಂಸ್ಕೃತಿಯ ಪ್ರತೀಕ. ಇಂತಹ ಸಂಪ್ರದಾಯವನ್ನು ಇಂದಿಗೂ ಪಾಲಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ತಾಯಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ನೈತಿಕತೆ ಮೈಗೂಡಿಸಿಕೊಂಡರೆ ಅತ್ಯುತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಸಿಂದಗಿ ಖ್ಯಾತ ವೈದ್ಯ ಡಾ.ಸಂಧ್ಯಾ ಶಾಂತವೀರ ಮನಗೂಳಿ ಹೇಳಿದರು.

ತಾಲೂಕಿನ ಕೊಂಡಗೂಳಿ ಗ್ರಾಮದ ಸಿದ್ಧಾರೂಢರ ಜಾತ್ರಾ ಮಹೋತ್ಸವ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಮೂಲಕ ನಮ್ಮ ಸಂಪ್ರದಾಯ ಹಾಗೂ ಅದರ ಮಹತ್ವದ ಬಗ್ಗೆ ಮಹಿಳೆಯರಿಗೆ ಅರಿವು, ಜಾಗೃತಿ ಮೂಡಿಸುವ ಕೆಲಸ ಉತ್ತಮವಾಗಿದೆ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಬೀದರ ಹಾಗೂ ಕೊಂಡಗೂಳಿ ಸಿದ್ಧಾರೂಢ ಮಠದ ಶಂಕ್ರಾನಂದ ಶ್ರೀಗಳು ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನ ನೀಡಲಾಗಿದೆ. ನಮ್ಮ ದೇಶದಲ್ಲಿರುವಷ್ಟು ಮಹಿಳಾ ಪ್ರಧಾನ (ದೇವತೆಗಳ) ದೇವಾಲಯಗಳು ವಿಶ್ವದ ಯಾವುದೇ ರಾಷ್ಟ್ರಗಳಲ್ಲಿಲ್ಲ ಎಂದರು.

ಕೊಕಟನೂರ ಗದ್ದುಗಿ ಮಠದ ಮಡಿವಾಳೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಉಡಿ ತುಂಬುವ ಕಾರ್ಯಕ್ರಮವನ್ನು ವೇ.ಮು ಮಹಾಂತಯ್ಯ ಹಿರೇಮಠ ಅವರು ನೆರವೇರಿಸಿದರು. ಚಿಕ್ಕರೂಗಿ ಗ್ರಾಮದ ಈರಣ್ಣ ಶಾಸ್ತ್ರಿ ಮಾತನಾಡಿದರು. ಗ್ರಾಮದ ಪ್ರಮುಖರು, ಗಣ್ಯರು ಹಾಗೂ ಭಕ್ತರು ಉಪಸ್ಥಿತರಿದ್ದರು.



ದೇವರಹಿಪ್ಪರಗಿ ತಾಲೂಕಿನ ಕೊಂಡಗೂಳಿ ಗ್ರಾಮದಲ್ಲಿ ನಡೆಯುವ ಜಾತ್ರೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗುತ್ತದೆ. ಸಿದ್ಧಾರೂಢರ ಮಠದ ಜಾತ್ರೆಯನ್ನ ಮಹಿಳೆಯರು ಮಾಡುತ್ತಾರೆ. ಇಲ್ಲಿ ಪುರುಷರಿಗೆ ಅವಕಾಶವೇ ಇರುವುದಿಲ್ಲ. ಸುಮಾರು 10 ವರ್ಷಗಳಿಂದಲೂ ಜಾತ್ರೆಯಲ್ಲಿ ಮಹಿಳೆಯರೆ ರಥ ಎಳೆಯುವವರು. ಅಜ್ಜನ ಜಾತ್ರೆಯಲ್ಲಿ ಮಹಿಳೆಯರು ರಥೋತ್ಸವವನ್ನು ಸಂಭ್ರಮದಿಂದ ಎಳೆಯುವ ಮೂಲಕ ತಮ್ಮ ಇಷ್ಟಾರ್ಥಗಳು ಬೇಗ ಸಿದ್ದಿಸಲಿ ಎಂದು ವಿಶೇಷ ಪೂಜೆ ಸಲ್ಲಿಸುತ್ತಾರೆ.

ಕಿರುಸುದ್ದಿ

ಕೇಂದ್ರ ಸರ್ಕಾರದಿಂದ ಬಂಪರ್ ಕೊಡುಗೆ: ಜಾಧವ್

ಕಲಬುರಗಿ: ಗುಂತಕಲ್-ವಾಡಿ ನಡುವೆ 230 ಕಿ.ಮೀ ಉದ್ದದ ಎರಡು ಮತ್ತು ಮೂರನೇ ನೂತನ ರೈಲು ಹಳಿ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿ ಮೋದಿ ಈ ಭಾಗಕ್ಕೆ ಬಾರಿ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಲೋಕಸಭಾ ಸದಸ್ಯರಾದ ಡಾ.ಉಮೇಶ್ ಜಾಧವ್ ಅಭಿನಂದನೆ ಸಲ್ಲಿಸಿದ್ದಾರೆ.



ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ರೈಲು ಸಂಚಾರದ ಹಳಿಗಳ ಬಲಪಡಿಸುವಿಕೆ ಯೋಜನೆಯಡಿ ಮೂರು ಮತ್ತು ನಾಲ್ಕನೆಯ ರೈಲು ಹಳಿ ಮಾರ್ಗ ನಿರ್ಮಾಣ ಮಾಡಲು ಮಂಜೂರಾತಿ ನೀಡಿರುವುದರಿಂದ ಅಭಿವೃದ್ಧಿಗೆ ಪೂರಕವಾಗಲಿದೆ. ವಿಕಾಸದ ಸಂಕಲ್ಪ ಹೊಂದಿದ ಪ್ರಧಾನಮಂತ್ರಿ ಮೋದಿ ಕರ್ನಾಟಕ ,ತೆಲಂಗಾಣ, ಆಂಧ್ರಕ್ಕೆ ಪ್ರಯೋಜನವಾಗುವ ನೂತನ ಹಳಿ ನಿರ್ಮಾಣ ಕಾರ್ಯದಿಂದ ಈ ಭಾಗಕ್ಕೆ ದೊಡ್ಡ ಕೊಡುಗೆಯಾಗಲಿದೆ ಎಂದರು. ನೂತನ ರೈಲು ಹಳಿ ನಿರ್ಮಾಣಗೊಂಡರೆ ವಾರ್ಷಿಕವಾಗಿ 17.4 ದಶಲಕ್ಷ ಟನ್ ಸರಕು ಸಾಗಣೆಗೆ ನೆರವಾಗಲಿದೆ. 1.4 ಕೋಟಿ ಗಿಡಗಳನ್ನು ನೆಡುವ ಮೂಲಕ ಸುಮಾರು 36 ಕೋಟಿ ಕಿಲೋದಷ್ಟು ಕಾರ್ಬನ್ ಡೈ ಆಕ್ಸೈಡ್ ಕಡಿಮೆಯಾಗಿ ಪರಿಸರಕ್ಕೆ ಪೂರಕವಾಗಲಿದೆ. ಜೊತೆಗೆ 156 ಲಕ್ಷ ಮಾನವ ಸಂಪನ್ಮೂಲ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಜಾಧವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿಮಾನೋತ್ಸವಕ್ಕೆ 15 ಸಾವಿರ ಜನ ಭಾಗಿ ನಿರೀಕ್ಷೆ



ಕುಕನೂರ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಎಲ್ಲ ವಿಧಾನಸಭೆ ಕ್ಷೇತ್ರಗಳಿಂದ ಸುಮಾರು 40 ಸಾವಿರದಷ್ಟು ಕಾರ್ಯಕರ್ತರು, ಅಭಿಮಾನಿಗಳು ಭಾಗಿಯಾಗಲಿದ್ದಾರೆ ಎಂದು ಭಾಜಪ ಜಿಲ್ಲಾಧ್ಯಕ್ಷ ನವೀನಕುಮಾರ್ ಗುಳಗಣ್ಣವರ್ ಎಂದು ಹೇಳಿದರು.

ತಾಲೂಕಿನ ಇಟಗಿ ಗ್ರಾಮದಲ್ಲಿ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ ಐವತ್ತು ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಕೊಡುಗೆಗಳನ್ನು ಸ್ಮರಿಸುವ ಹಾಗೂ ಅವರಿಗೆ ಅಭಿನಂದನೆ ಹೇಳುವ ಸಲುವಾಗಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದೇವೆ. ಕರ್ನಾಟಕ ಎಲ್ಲಾ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಯಡಿಯೂರಪ್ಪ ಕೊಡುಗೆ ಅಪಾರವಾಗಿದೆ. ಅಂತವರನ್ನು ಸ್ಮರಿಸುವುದು ಅತ್ಯಾವಶಕವಾಗಿದೆ ಮತ್ತು ಇಂದಿನ ಸೋಮನಗೌಡ ಯುವ ಪೀಳಿಗೆಗೆ ಅವರ ಕಾರ್ಯವೈಖರಿ ಮಾದರಿಯಾಗಿದೆ. ಅದಕ್ಕಾಗಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಿಂದಾ ಸುಮಾರು 10ರಿಂದಾ 15 ಸಾವಿರ ಜನರನ್ನು ಕರೆದೋಯ್ಯುವ ಉದ್ದೇಶವಿದೆ ಈ ಕಾರ್ಯಕ್ರಮಕ್ಕೆ ಅಖಂಡ ಯಲಬುರ್ಗಾ ತಾಲೂಕಿನ ಯಡಿಯೂರಪ್ಪನವರ್ ಅಭಿಮಾನಿಗಳು ಭಾಗಿಯಾಗಲು ಮುಂದಾಗಬೇಕು ಪಕ್ಷಭೇದಬಾವ ಬಿಟ್ಟು ಎಂದು ಹೇಳಿದರು. ಸೋಮನಗೌಡ, ವಿಜಯ್ ತಾಳಕೇರಿ, ವೀರಪಾಕ್ಷಪ್ಪ ಹುರಳಿ, ಮಂಜು ಕೋವಿ ಇತರರಿದ್ದರು.

ಅಧಿಕಾರ ಸ್ವೀಕರಿಸಿದ ನೂತನ ಡಿಸಿ ಪೂವಿತಾ

ರಾಯಚೂರು: ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಪೂವಿತಾ ಎಸ್. ಅಧಿಕಾರ ಸ್ವೀಕರಿಸಿದರು. ನೂತನ ಜಿಲ್ಲಾಧಿಕಾರಿಗೆ ನಿರ್ಗಮಿತ ಡಿಸಿ ನಿತೀಶ್ ಕೆ. ಅಧಿಕಾರ ಹಸ್ತಾಂತರಿಸಿ ಶುಭ ಕೋರಿದರು. ಜಿಲ್ಲಾಧಿಕಾರಿ ಪೂವಿತಾ.ಎಸ್ ಮೂಲತಃ ತಮಿಳುನಾಡಿ ರಾಜ್ಯದವರಾಗಿದ್ದು, 2016 ಕರ್ನಾಟಕ ಬ್ಯಾಚನ ಐಎಎಸ್ ಅಧಿಕಾರಿಯಾಗಿದ್ದು ಪ್ರೊಬೇಷನರಿ ಅವಧಿಯನ್ನು ಉಡುಪಿಯಲ್ಲಿ ಮುಗಿಸಿ. ನಂತರ ತಿಪಟೂರಿನಲ್ಲಿ ಸಹಾಯಕ ಆಯುಕ್ತರಾಗಿ. ಚಿಕ್ಕಮಗಳೂರು ಜಿಲ್ಲೆಯ ಜಿಪಂ ಸಿಇಓ ಹಾಗೂ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ಜಂಟಿ ನಿರ್ದೇಶಕರಾಗಿ. ಚಾಮರಾಜನಗರ ಜಿಲ್ಲೆಯ ಜಿಪಂ ಸಿಇಓ ಮತ್ತು ಕೆಯುಐಡಿಎಫ್‌ಸಿ ಬೆಂಗಳೂರಿನಲ್ಲಿ ಮ್ಯಾನೇಜಿಂಗ್ ಡ್ಯಾರೆಕ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. ಎಡಿಸಿ ಶಿವಾನಂದ. ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ. ರಾಯಚೂರು ತಾಲೂಕು ತಹಶೀಲ್ದಾರ್ ಸುರೇಶ ವರ್ಮಾ ಇತರರಿದ್ದರು.



ಕುಕನೂರು: ತಾಲೂಕು ಶಿರೂರು ಗ್ರಾಮದ ಆರಾಧ್ಯ ದೈವಗಳಾದ ಶ್ರೀದುರ್ಗಾದೇವಿ ಹಾಗೂ ಶ್ರೀಮಲೆಯಮ್ಮ ದೇವಿಯ ಜಾತ್ರಾ ಮಹೋತ್ಸವವು ಮಂಗಳವಾರ ಅತ್ಯಂತ ಸಡಗರ-ಸಂಭ್ರಮ ಹಾಗೂ ಸಕಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಮಲೆಯಮ್ಮ ದೇವಿ ಜಾತ್ರಾ ಮಹೋತ್ಸವ

ಕುಕನೂರು: ತಾಲೂಕು ಶಿರೂರು ಗ್ರಾಮದ ಆರಾಧ್ಯ ದೈವಗಳಾದ ಶ್ರೀದುರ್ಗಾದೇವಿ ಹಾಗೂ ಶ್ರೀಮಲೆಯಮ್ಮ ದೇವಿಯ ಜಾತ್ರಾ ಮಹೋತ್ಸವವು ಮಂಗಳವಾರ ಅತ್ಯಂತ ಸಡಗರ-ಸಂಭ್ರಮ ಹಾಗೂ ಸಕಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಧಾರ್ಮಿಕ ವಿಧಿವಿಧಾನಗಳ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಮುಂಜಾನೆ 4 ಗಂಟೆಯ ಬ್ರಾಹ್ಮಿ ಮುಹೂರ್ತದಲ್ಲಿ ದೇವಿಯರಿಗೆ ವಿಶೇಷ ಪೂಜೆ ಹಾಗೂ ಅಲಂಕಾರಗಳನ್ನು ಮಾಡಲಾಗಿತ್ತು. ಸಂಪ್ರದಾಯದಂತೆ ಗ್ರಾಮದ ಹಿರಿಯರಾದ ಶೇಖರ ಗೌಡ ಮಾಲಿ ಪಾಟೀಲ ಅವರ ಕುಟುಂಬ ಹಾಗೂ ರಾಜೇಂದ್ರ ಗೌಡ ಪೊಲೀಸ್ ಪಾಟೀಲ್ ಅವರ ಕುಟುಂಬದ ವತಿಯಿಂದ ದೇವಿಗೆ ಮಂಗಳ ದ್ರವ್ಯಗಳೊಂದಿಗೆ ಮಾಲೆಯನ್ನು ತರುವ ಕಾರ್ಯಕ್ರಮ ಶ್ರದ್ಧಾಭಕ್ತಿಯಿಂದ ಜರುಗಿತು.

ನಂತರ ದೇವಿಯು ಪಲ್ಲಕ್ಕಿಯಲ್ಲಿ ಕುಳಿತು ವಳಿಗೆ ಹೋಗುವ' ವಿಶೇಷ ಕಾರ್ಯಕ್ರಮ ನಡೆಯಿತು. ಈ ವಿಶಿಷ್ಟ ಆಚರಣೆಯ ನಂತರ ದೇವಿಯ ಅಗ್ನಿ ಪ್ರವೇಶದ ದೃಶ್ಯವು ಭಕ್ತರಲ್ಲಿ ರೋಮಾಂಚನ ಮೂಡಿಸಿತು. ಭಕ್ತರು ದೇವಿಯ ನಾಮಸ್ಮರಣೆ ಮಾಡುತ್ತಾ ಪುನೀತರಾದರು. ಪ್ರತಿ ವರ್ಷದಂತೆ ಈ ವರ್ಷವೂ ಸಹ 11 ಜೋಡಿಗಳ ಸಾಮೂಹಿಕ ವಿವಾಹವನ್ನು ಆಯೋಜಿಸಲಾಗಿತ್ತು. ಈ ಬಾರಿ ಒಂದು ಜೋಡಿಯು ದಾಂಪತ್ಯ ಜೀವನಕ್ಕೆ ಕಾಲಿರಿಸಿತು. ವಿವಾಹ ಮಹೋತ್ಸವದ ನಂತರ ಸಕಲ ಭಕ್ತಾದಿಗಳಿಗೆ ಅನ್ನದಾನ (ಅನ್ನ-ತರ್ಪಣೆ) ವ್ಯವಸ್ಥೆ ಮಾಡಲಾಗಿತ್ತು.



ರಾಯಚೂರು: ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಪರಿಷತ್ತಿನ 112ನೇಯ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮವನ್ನು ವೈದ್ಯ ಡಾ.ರವಿ ರಾಜೇಶ್ವರಿ ಉದ್ಘಾಟಿಸಿದರು. ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷ ಬಾವಸಲಿ, ಪ್ರಗತಿಪರ ಹೋರಾಟಗಾರ ಮಲ್ಲಪ್ಪ ಪಾಟೀಲ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷ ಬಿ.ವಿಜಯರಾಜೇಂದ್ರ ಹಾಗೂ ಇತರರಿದ್ದರು.

ಜಿಲ್ಲಾಧಿಕಾರಿ ಡಾ.ಸುರೇಶ ಬಿ ಇಟ್ನಾಳ ಅಧಿಕಾರಿಗಳಿಗೆ ಸೂಚನೆ
ಕನಕಗಿರಿ ಉತ್ಸವದ ಸಿದ್ಧತೆ ವೇಗಗೊಳಿಸಿ

ಕನಕಗಿರಿ: ಕನಕಗಿರಿ ಉತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ಡಾ.ಸುರೇಶ ಬಿ ಇಟ್ನಾಳ ಕನಕಗಿರಿ ಪಟ್ಟಣಕ್ಕೆ ಭೇಟಿ ನೀಡಿ ಉತ್ಸವ ಸ್ಥಳ ವಿಕ್ಷೀಸಿ ಬಳಿಕ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಉತ್ಸವ ಆಚರಣಾ ಸಮಿತಿಗಳೊಂದಿಗೆ ಮೂರನೆ ಸಭೆ ನಡೆಸಲಾಗುತ್ತಿದೆ. ಅಧಿಕಾರಿಗಳಿಗೆ ಆಯಾ ಕಾರ್ಯಗಳ ಬಗ್ಗೆ ಪುನಃಪುನಃ ನೆನಪು ಮಾಡಿ ಕಾರ್ಯ ನಿರ್ವಹಣೆಯನ್ನು ವೇಗಗೊಳಿಸಲಾಗುತ್ತಿದೆ. ಅಧಿಕಾರಿಗಳು ತಮಗೆ ವಹಿಸಿದ ಕಾರ್ಯಗಳ ಬಗ್ಗೆ ಅರಿತು ಗೊಂದಲಕ್ಕೆ ಅವಕಾಶವಿಲ್ಲದಂತೆ ಕಾರ್ಯ ನಿರ್ವಹಿಸಬೇಕು. ಎಂದು ಸೂಚನೆ ನೀಡಿದರು.

ಸಮಿತಿವಾರು ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಅತಿಥಿಗಳ ಸ್ವಾಗತ, ವಸತಿ, ಊಟ, ಸಾರಿಗೆ, ಗಣ್ಯರಿಗೆ ಕಲಾವಿದರಿಗೆ ಸನ್ಮಾನ ಸಾಮಗ್ರಿ ಹಾಗು ಶಿಷ್ಟಾಚಾರದ ಬಗ್ಗೆ ಗಮನ ಹರಿಸಲು ಸಹಾಯಕ ಆಯುಕ್ತರ ಅಧ್ಯಕ್ಷತೆಯ ಸ್ವಾಗತ ಸಮಿತಿಗೆ ಸೂಚನೆ ನೀಡಿದರು.ಆಯ್ಕೆ ಆಗುವ ಕಲಾವಿದರಿಗೆ ಗೊಂದಲಕ್ಕೆ ಅವಕಾಶವಿಲ್ಲದಂತೆ ಸಂಭಾವಣೆ ಪಾವತಿಗೆ ಕ್ರಮ ವಹಿಸಲು ಸಾಂಸ್ಕೃತಿಕ ಸಮಿತಿಗೆ ಸೂಚನೆ ನೀಡಿ. ಜನಸಂದಣಿ ನಿಯಂತ್ರಣದ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ಶಿಸ್ತುಬದ್ಧ ಬ್ಯಾರಿಕೆಡಿಂಗ್ ವ್ಯವಸ್ಥೆ ಮಾಡಲು ವೇದಿಕೆ ಸಮಿತಿಗೆ ಸೂಚನೆ ನೀಡಿದರು.ಆಹಾರ ತಯಾರಿಕೆ ಸ್ಥಳದಲ್ಲಿ ಶುಚಿತ್ವ ಇರಬೇಕು. ಆಹಾರ ಶುಚಿ ಮತ್ತು ರುಚಿಯ ಬಗ್ಗೆ ಗಮನ ಕೊಡಬೇಕು. ಸ್ಥಳೀಯ ಸಂಸ್ಥೆಗಳ ಸಹಕಾರ ಪಡೆದು ತಂಡಗಳ ರಚಿಸಿ ಆಹಾರ ಪೂರೈಕೆಗೆ ಕ್ರಮ ವಹಿಸಲು ಆಹಾರ ಸಮಿತಿಗೆ ಸೂಚನೆ ನೀಡಿದರು.



> ಕನಕಗಿರಿ ಗ್ರಾಮದಲ್ಲಿ ಸ್ವಚ್ಛತೆ ಮತ್ತು ವೇದಿಕೆ ಪ್ರದೇಶದಲ್ಲಿ ಮರಮ ಹಾಕಿಸಲು, ಕನಕಗಿರಿ ಉತ್ಸವ ಸ್ಥಳ ಸಂಪರ್ಕ ರಸ್ತೆ ದುರಸ್ತಿ ಮಾಡಲು, ಸಾರ್ವಜನಿಕರಿಗೆ ನೀರಿಗಾಗಿ ನಳಗಳ ಮತ್ತು ತಾತ್ಕಾಲಿಕ ಶೌಚಾಲಯಗಳ ನಿರ್ಮಾಣಕ್ಕೆ ಮತ್ತು ವೇದಿಕೆಯ ಸ್ಥಳ ಲೆವೆಲ್ ಮಾಡಲು ಮೂಲಭೂತ ಸೌಕರ್ಯ ಸಮಿತಿಗೆ ಸೂಚನೆ ನೀಡಲಾಗಿದೆ.
> ■ ಡಾ.ಸುರೇಶ ಇಟ್ನಾಳ, ಡಿಸಿ

ಆಯಾ ಕ್ರೀಡಾ ತಂಡಗಳ ವಿವರ, ಪಾವತಿಸಬೇಕಾದ ಸಂಭಾವಣೆ ಎಲ್ಲವೂ ಪಾರದರ್ಶಕವಾಗಿರಬೇಕು ಎಂದು ಕ್ರೀಡಾ ಸಮಿತಿಗೆ ಸೂಚನೆ ನೀಡಿದರು.

ಕಲಾವಿದರು, ಕ್ರೀಡಾಪಟುಗಳು ಹಾಗೂ ಪತ್ರಕರ್ತರಿಗೆ ರೂಮು ಕಾಯ್ದಿರಿಸುವ ಎಲ್ಲಾ ಕಡೆಗೆ ನೋಡಲ್ ಅಧಿಕಾರಿಗಳನ್ನು ಹಾಕಬೇಕು ಎಂದು ವಸತಿ ಸಮಿತಿಗೆ ನಿರ್ದೇಶನ ನೀಡಿದರು.

ಅಚ್ಚುಕಟ್ಟಾಗಿ ವಾಹನಗಳ ಅಧಿಗ್ರಹಣ ಮತ್ತು ಇಂಧನ ವ್ಯವಸ್ಥೆ ಮಾಡಲು ಸಾರಿಗೆ ಸಮಿತಿಗೆ ಸೂಚನೆ ನೀಡಿದರು. ಪ್ರಚಾರ ಸಾಮಗ್ರಿ ಬ್ಯಾನರ್ ಪೋಸ್ಟರಗಳನ್ನು ಪಡೆದು ವ್ಯಾಪಕ ಪ್ರಚಾರ ಕಾರ್ಯ ನಡೆಸಲು ಪ್ರಚಾರ ಸಮಿತಿಗೆ ಸೂಚನೆ ನೀಡಿದರು. ಹೆಲಿಕ್ಯಾಪ್ಟರ್ ರೈಡಿಂಗ್ ಕಾರ್ಯವು ಸುರಕ್ಷಿತ ಕ್ರಮಗಳೊಂದಿಗೆ ನಡೆಸಲು ಭದ್ರತಾ ಸಮಿತಿ ಮತ್ತು ಖಾಸಗಿ ಎಜೆನ್ಸಿಗೆ ಸೂಚನೆ ನೀಡಿದರು.

ಪಪಂ ಅಧ್ಯಕ್ಷೆ ತನುಶ್ರೀ ಟಿ.ಜೆ.ರಾಮಚಂದ್ರ, ಉಪಾಧ್ಯಕ್ಷ ಕಂಠಿರಂಗಪ್ಪ ನಾಯಕ, ಎಸ್ಪಿ ಡಾ.ರಾಮ್ ಎಲ್ ಅರಸಿದ್ದಿ, ಎಡಿಸಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಡಿವೈಎಸ್ಪಿ ಸಿದ್ದಲಿಂಗಪ್ಪಗೌಡ ಪಾಟೀಲ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಕನಕಗಿರಿ ತಹಶೀಲ್ದಾರ್ ವಿಶ್ವನಾಥ ಮುರಡಿ, ತಾಪಂ ಇಓ ಕೆ.ರಾಜಶೇಖರ, ಪಪಂ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ ಇತತರಿದ್ದರು.

ಪಂಚಮಸಾಲಿ 2ಎಗೆ ಸೇರಿಸಲು ಹೋರಾಡುವೆ

ಕುಷ್ಟಗಿ: ಪಂಚಮಸಾಲಿ ಸಮಾಜಕ್ಕೆ 2ಎ ಸೌಲಭ್ಯ ದೊರೆಯುವರೆಗೂ ಸದಾ ಹೋರಾಟ ಮಾಡಲಾಗವುದು ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಹೇಳಿದರು.

ತಾಲೂಕಿನ ಎಂ.ಗುಡದೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತ ಹಾಗೂ ಪುತ್ಥಳಿ ಅನಾವರಣಗೊಳಿಸಿ ಬುಧವಾರ ಮಾತನಾಡಿದರು. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸುಳ್ಳು ಆಶ್ವಾಸನೆ ಮೂಲಕ ನಾಟಕ ಕಂಪನಿ ಶುರುವಾಗಿದೆ. ಸಮಾಜಕ್ಕೆ ನ್ಯಾಯ ದೊರೆಕಿಸುವುದು ನ್ಯಾಯಯುತವಾಗಿ ಹೋರಾಡವುದೇ ನಮ್ಮ ಹಕ್ಕು. ಸಮಾಜಕ್ಕೆ ಶ್ರಮಿಸದೇ ಕೆಲವರು ಐಪಿಎಲ್ ನೋಡಲು ಟಿಕೆಟ್ ಕೇಳಿದ್ದಾರೆ. ಪಂಚಮಸಾಲಿ ಸಮಾಜದ ಓಟಿಗಾಗಿ ಮಾತ್ರ ಬಳಸಿಕೊಳ್ಳಲಾಗಿದೆ. ಬರುವ ದಿನದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಕಣಕ್ಕಿ ಇಳಿಯುವುದು ಸತ್ಯ. ಸಮಾಜಕ್ಕೆ ಯಾವತ್ತು ಒಳ್ಳೆಯ ಕೆಲಸ ಮಾಡಲಾಗವುದು. 2ಎಗೆ ಸೇರಿಸಿ ಕೇಂದ್ರ ಸರಕಾರ ಶಿಫಾರಸ್ಸುಗೆ ಪ್ರಯತ್ನಿಸುವೆ ಪ್ರಾಮಾಣಿಕ ಪ್ರಯತ್ನಿಸುವೆ ಎಂದರು.

ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಮಾತನಾಡಿ, ಪಂಚಮಸಾಲಿ ಸಮಾಜದವರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಸಮಾಜದ ಒಳಿತಾಗಿ ಶ್ರಮಿಸುವಂತಹ ಕೆಲಸವಾಗಲಿ ಎಂದರು.

ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿದರು.

ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ದೇವೇಂದ್ರಪ್ಪ ಬಳೂಟಗಿ ಅಧ್ಯಕ್ಷತೆ ವಹಿಸಿದ್ದರು. ಕೂಡಲಸಂಗಮದ ಲಿಂಗಾಯತ ಪಂಚಮಸಾಲಿಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಟೆಂಗುಂಟಿ ಭೀಮಪ್ಪಯ್ಯ ಗ್ಯಾನಪ್ಪಯ್ಯ, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರು, ಜಿಪಂ ಮಾಜಿ ಕೆ.ಮಹೇಶ್, ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ್, ನ್ಯಾಯವಾದಿ ಬಿಎಸ್ ಪಾಟೀಲ, ಲಿಂಗಾಯತ ವೀರಶೈವ ಪಂಚಮಸಾಲಿ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್, ಮುಖಂಡರಾದ ಉಮೇಶ ಮಂಗಳೂರು, ಸಂಗಪ್ಪ ಬಿಜಕಲ್, ಸಂಗನಗೌಡ, ಅಶೋಕ ಬಳೂಟಗಿ, ಬಸವರಾಜ ಕ್ಯಾವಟರ್, ಚಂದ್ರಶೇಖರ್ ನಾಲತ್ವಾಡ್, ಮಲ್ಲಣ್ಣ ಪಲ್ಲೇದ್, ಸಂಗನಗೌಡ ಜೈನರ್, ಬಸವರಾಜ ಹಳ್ಳೂರು, ಸಿಪಿಐ ವಿಶ್ವನಾಥ ಹಿರೇಗೌಡ್ರ, ಪಿಎಸ್ಸೈ ಚಂದ್ರಪ್ಪ ಎಚ್. ಇತರರಿದ್ದರು.



ನಾಡು-ನುಡಿಗೆ ಅನ್ಯಾಯವಾದರೆ ಸಹಿಸಲ್ಲ

ಲಿಂಗಸುಗೂರು: ಕನ್ನಡ ನಾಡು-ನುಡಿಗೆ ಅನ್ಯಾಯವಾದರೆ ಕನ್ನಡ ಸಾಹಿತ್ಯ ಪರಿಷತ್ತು ಸಹಿಸಲ್ಲ. ತೀವ್ರವಾಗಿ ಪ್ರತಿರೋಧಿಸುತ್ತದೆ ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ ಪ್ರೊ.ಜಿ.ವ್ಹಿ. ಕೆಂಚನಗುಡ್ಡ ಆಕ್ರೋಶ ವ್ಯಕ್ತಪಡಿಸಿದರು.

ಸಾಹಿತ್ಯ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ದಿನಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯವೂ ದಕ್ಕಿರಲಿಲ್ಲ ಕನ್ನಡ ನಾಡು ಏಕೀಕರಣ ಹೊಂದಿರಲಿಲ್ಲ. ಅಂತಹ ಸಂದರ್ಭದಲ್ಲಿ, ಮೈಸೂರು ಅರಸರ ದೂರದೃಷ್ಟಿಯಿಂದ ಪರಿಷತ್ತು ಸ್ಥಾಪಿತವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಸರ್ ಎಂ.ವಿಶ್ವೇಶ್ವರಯ್ಯ, ಎಚ್.ವಿ.ನಂಜುಂಡಯ್ಯ ಬಿ.ಎಂ.ಶ್ರೀಕಂಠಯ್ಯ ಮೊದಲಾದವರು ತಾತ್ವಕ ಆಶಯಗಳೊಂದಿಗೆ ಪರಿಷತ್ತಿಗೆ ನೀರೆರಿದರು. ಇಂದು ಪರಿಷತ್ ಹೆಮ್ಮರವಾಗಿ ಬೆಳದಿದೆ. ಹರಿದು ಹಂಚಿ ಹೋದ ಕರ್ನಾಟಕ ಭಾಷೆ ಜನ ನೆಲವನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಪರಿಷತ್ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಕೆಲಸ ಮಾಡಿತು.

ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ಕನ್ನಡ ಅಧ್ಯಾಪಕ ಬಸವರಾಜ ಖರವಾಡಗಿ ಪರಿಷತ್ತಿನ ಪರಂಪರೆ ಕುರಿತು ಉಪನ್ಯಾಸ ನೀಡಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಪರಿಷತ್ತಿಗೆ ದುಡಿದ ಮುದಗಲ್ಲನ ಯಮನೂರ ನದಾಫ್ ಅವರ ಅಗಲಿಕೆಗೆ ಪರಿಷತ್ ಕಂಬನಿ ಮಿಡಿದು ಮೌನಾಚರಣೆಯಿಂದ ನುಡಿನಮನ ಸಲ್ಲಿಸಿತು. ಕಸಾಪ ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಕಾಮಿನ್ ಅಧ್ಯಕ್ಷತೆ ವಹಿಸಿದ್ದ ಕಸಾಪ ತಾಲೂಕ ಅಧ್ಯಕ್ಷ ಡಾ.ಮಹಾದೇವಪ್ಪ ನಾಗರಾಳ ಮಾತನಾಡಿದರು.

ಪರಿಷತ್ತಿಗೆ ಸಲ್ಲಿಸಿದ ಅನುಪಮ ಸೇವೆಯನ್ನು ಸ್ಮರಿಸಿ ಸಾಹಿತಿ ಡಾ.ಕೆ.ಶಶಿಕಾಂತ ಹಾಗೂ ಕಸಾಪ ನಿಕಟಪೂರ್ವ ಅಧ್ಯಕ್ಷ ಮಲ್ಲಿಕಾರ್ಜುನ ಗೌಡರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಗೌರವ ಕೋಶಾಧ್ಯಕ್ಷ ಅನಿಕುಮಾರ ಮಿಶ್ರ, ಗೌರವ ಕಾರ್ಯದರ್ಶಿಗಳಾದ ಶರಣಬಸವ ಹೂಗಾರ ಗಂಗಾಧರ ಪತ್ತಾರ ಸಹಕಾರ್ಯದರ್ಶಿ ಶಂಕರರೆಡ್ಡಿ ಸದಸ್ಯ ಅಹ್ಮದ್ ಖಾದರಬಾಷಾ ಸಾಹಿತಿ ಪವಾಡೆಪ್ಪ ನಾಯಕ ಚುಸಾಪ ಅಧ್ಯಕ್ಷ ದುರ್ಗಾಸಿಂಗ್ ಶ್ರೀಕಾಂತಯ್ಯ ಮಠ ಸಹಾಯಕ ಪ್ರಾಧ್ಯಾಪಕ ಬಾಲಪ್ಪ ವಾಂಕಡೋತ್ ಡಾ.ಪಂಪಾಪತಿ ನಾಯಕ ಮೌನೇಶಗೌಡ ಸುಣಕಲ್ಲ ಶರಬಣ್ಣ ನಿರುಪಾದಿ ಖರವಾಡಗಿ ಸಿದ್ಧಾರೂಢ ಇತರರು ಇದ್ದರು.



ರೈತ ಮಹಿಳೆಯರಿಗೆ 'ರೈತ ಸೇವಾ ಶ್ರೀ' ಪ್ರಶಸ್ತಿ ಪ್ರದಾನ

ಕಲಬುರಗಿ: ನಗರದ ಸುವರ್ಣ ಭವನ (ಕನ್ನಡ ಭವನ)ದಲ್ಲಿ ಬುಧವಾರ ಶ್ರೀದಾನೇಶ್ವರಿ ಸೇವಾ ಸಂಸ್ಥೆ ವತಿಯಿಂದ ಸಂಸ್ಥೆಯ 11ನೇ ವಾರ್ಷಿಕೋತ್ಸವ ಅಂಗವಾಗಿ ಪ್ಲಾಸ್ಟಿಕ್ ನಿಷೇಧ ಜಾಗೃತಿ ಕಾರ್ಯಕ್ರಮ, ರೈತ ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ, ಉಚಿತ ಟೈಲರಿಂಗ್ ತರಬೇತಿ ಉದ್ಘಾಟನಾ ಸಮಾರಂಭ ಹಾಗೂ 5 ಜನ ಪ್ರಗತಿಪರ ರೈತ ಮಹಿಳೆಯರಿಗೆ 'ರೈತ ಸೇವಾ ಶ್ರೀ' ಪ್ರಶಸ್ತಿಯನ್ನು ವಿತರಣೆ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಜ್ಯೋತಿ ಆರ್.ಹಿರೇಮಠ ಅವರ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ವಿಶೇಷವಾಗಿ ರೈತ ಮಹಿಳೆಯರ ಸಾಧನೆಯನ್ನು ಗುರುತಿಸಿ ರೈತ ಮಹಿಳೆಯರಿಗೆ 'ರೈತ ಸೇವಾ ಶ್ರೀ' ಪ್ರಶಸ್ತಿ ಪ್ರದಾನ ನೀಡಲಾಯಿತು.

ಮಾಜಿಶಾಸಕ ದತ್ತಾತ್ರೇಯ ಸಿ.ಪಾಟೀಲರೇವೂರ, ಡಾ.ಸುಧಾ ಹಾಲಕಾಯಿ, ವಿಜಯಕುಮಾರ ಪಾಟೀಲ ತೆಗಲತಿಪ್ಪಿ, ಜ್ಯೋತಿ ಎಂ.ಮರಗೋಳ, ಬಾಬುರಾವ ಪಾಟೀಲ, ವೀರಸ್ವಾಮಿ, ರಾಚೂಟಯ್ಯ ಹಿರೇಮಠ, ವಿಶ್ವನಾಥ ಸಾಲಿಮಠ, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರಾದ ಸುಧಾಕರ ಎಂ.ಇಟಗಿ, ನಾಗಮ್ಮ ಸಿ.ಮಠಪತಿ, ನೀಲಮ್ಮ ಬಿ.ಹಿರೇಮಠ ಸೇರಿದಂತೆ ಸದಸ್ಯರು ಇದ್ದರು.



ವಿಜೃಂಭಣೆಯಿಂದ ನಡೆದ 'ಉಡಿ ತುಂಬುವ' ಕಾರ್ಯಕ್ರಮ

ಹನುಮಸಾಗರ: ಪಟ್ಟಣದಲ್ಲಿದಲ್ಲಿ ಐದು ದಿನಗಳ ಕಾಲ ನಡೆದ ಗ್ರಾಮದೇವತೆ ಅಂಕಿ ಆಚರಣೆ ಮಂಗಳವಾರ ಭಕ್ತಿಭಾವ ಮತ್ತು ಸಂಭ್ರಮದ ವಾತಾವರಣದಲ್ಲಿ ವಿಜೃಂಭಣೆಯಿಂದ ನಡೆಯುವ 'ಉಡಿ ತುಂಬುವ' ಕಾರ್ಯಕ್ರಮದೊಂದಿಗೆ ಸಮಾರೋಪಗೊಂಡಿತು. ಅಂಕಿ ಆಚರಣೆಯ ಐದನೇ ದಿನವಾದ ಮಂಗಳವಾರ ಬೆಳಿಗ್ಗೆಯಿಂದಲೇ ಗ್ರಾಮದೇವತೆ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನೆರವೇರಿದವು. ನಂತರ ಗ್ರಾಮದೇವತೆ ಮೂರ್ತಿಗೆ ಪೂಜೆ ಸಲ್ಲಿಸಿ, ಊರಿನ ಎಲ್ಲಾ ಪ್ರಮುಖ ದೇವಸ್ಥಾನಗಳಿಗೆ 'ಉಡಿ ತುಂಬುವ' ವಿಧಿಯನ್ನು ಶ್ರದ್ಧಾಭಕ್ತಿಯಿಂದ ಆರಂಭಿಸಲಾಯಿತು. ಡೊಳ್ಳು, ಬಾಜಾ ಹಾಗೂ ಭಜಂತ್ರಿಗಳ ನಾದದ ನಡುವೆ ಮುತ್ತೈದೆಯರು, ಊರಿನ ಹಿರಿಯರು ಮತ್ತು ಪ್ರಮುಖರು ಮೆರವಣಿಗೆಯಲ್ಲಿ ಭಾಗವಹಿಸಿದರು. ದೇವಸ್ಥಾನದಿಂದ ದೇವಸ್ಥಾನಕ್ಕೆ ತೆರಳಿ ಪ್ರತಿಯೊಂದು ದೇವಾಲಯದಲ್ಲೂ ಪೂಜೆ ಸಲ್ಲಿಸಿ, ಕಾಯಿ, ಕರ್ಪೂರ ಹಾಗೂ ಉಡಿಯನ್ನು ಸಮರ್ಪಿಸಲಾಯಿತು. ಈ ವೇಳೆ ಗ್ರಾಮಸ್ಥರು ಭಕ್ತಿಭಾವದಿಂದ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

ಮಹಿಳೆಯರು ಸಂಪ್ರದಾಯಬದ್ಧ ಉಡುಗೆಯಲ್ಲಿ ಭಾಗವಹಿಸಿ ಪೂಜಾ ವಿಧಿಗಳನ್ನು ನೆರವೇರಿಸಿದ್ದು, ಊರಿನ ಸಾಂಸ್ಕೃತಿಕ ವೈಭವವನ್ನು ಮತ್ತಷ್ಟು ಮೆರೆದಿತು. ಗ್ರಾಮದೆಲ್ಲೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಎಲ್ಲ ಸಮುದಾಯದ ಜನರು ಏಕತೆಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ಪಟ್ಟಣದ ವಿವಿಧ ಸಮಾಜದ ಮುಖಂಡರಾದ ವಿಶ್ವನಾಥ ಕನ್ನೂರ, ಹನುಮಂತಪ್ಪ ಬಿಂಗಿ, ಬಸವರಾಜ ಹಳ್ಳೂರ, ಸೂಚಪ್ಪ ದೇವರಮನಿ, ರುದ್ರಗೌಡ ಗೌಡಪ್ಪನವರ, ಮರೇಗೌಡ ಬೋದೂರು, ಅಂಬಸಾ ರಂಗ್ರೇಜ್, ತಿಮ್ಮನಗೌಡ ಪೊಲೀಸ್ ಪಾಟೀಲ್, ಬಸವರಾಜ ದ್ಯಾವಣ್ಣನವರ, ಬಸಪ್ಪ ದೋಟಿಹಾಳ, ಮೌನೇಶ ಪತ್ತಾರ, ಬಿ.ಎಲ್.ಬಿಂಗಿ, ಶ್ರೀಶೈಲ್ ಮೋಟಗಿ, ಭೀಮಣ್ಣ ಕಮ್ಮಾರದ್ಯಾಮಣ್ಣ ತಳವಾರ, ಸಕ್ರಪ್ಪ ಬಿಂಗಿ, ಪರಸಪ್ಪ ಬಿಂಗಿ, ದ್ಯಾಮಣ್ಣ ಬಿಂಗಿ, ರಾಮಣ್ಣ ಬಂಡಿವಡ್ಡರ, ಪರಸಪ್ಪ ಹೊಸಮನಿ, ನಾಗರಾಜ ಸೇಬಿನಕಟ್ಟಿ, ಮೌನೇಶ ಕಮ್ಮಾರ ಇದ್ದರು.

ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಿ

ಮಸ್ಕಿ: ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು,ನೀರಿನ ತೊಟ್ಟಿ,ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಬೇಕು ಎಂದು ಖಾದಿ ಮತ್ತು ಗ್ರಾಮಾದ್ಯೋಗ ಮಂಡಳಿಯ ಅಧ್ಯಕ್ಷ ಮತ್ತು ಶಾಸಕ ಆರ್.ಬಸನಗೌಡ ತುರ್ವಿಹಾಳ ಸೂಚನೆ ನೀಡಿದರು.

ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕುಡಿಯುವ ನೀರಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕ್ಷೇತ್ರದ ಎಲ್ಲ ಕೆರೆಗಳನ್ನು ಕಳೆದ ತಿಂಗಳು ಭರ್ತಿಗೊಳಿಸಿದ್ದು, ಸಮರ್ಪಕವಾಗಿ ನೀರು ಪೂರೈಸಬೇಕು, ಪೈಪ್‌ಲೈನ್ ಒಡೆದರೆ ತಕ್ಷಣ ರಿಪೇರಿ ಕೈಗೊಂಡು ನೀರು ಪೋಲಾಗುವುದನ್ನು ತಡೆಯಬೇಕು. ನೀರಿನ ತೊಟ್ಟಿಗಳನ್ನು ಪ್ರತಿವಾರ ಶುಚಿಗೊಳಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಬೇಕು ಎಂದರು.

ಮಸ್ಕಿ ತಾಪಂ ಆಡಳಿತ ಅಧಿಕಾರಿಗಳು ಮತ್ತು ಜಿಪಂ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮಸ್ಕಿ ತಾಪಂನಲ್ಲಿ ಆರಂಭಿಸಿದ ಸಹಾಯವಾಣಿ 08537-270122 ಬೆಳಗ್ಗೆ 8.30ರಿಂದ ಸಂಜೆ 5.30ರವರೆಗೆ ಸಂಪರ್ಕಿಸಬಹುದು.

ಟಾಸ್ಕ್ ಫೋರ್ಸ್ ಸಭೆಗಳನ್ನು ನಿರಂತರವಾಗಿ ಏರ್ಪಡಿಸಿ,ಕುಡಿಯುವ ನೀರಿನ ಸಮಸ್ಯೆಯಾಗದಂತೆ ನಿಗಾ ವಹಿಸಲಾಗುತ್ತಿದೆ ಎಂದರು. ತದ ನಂತರ ಪ್ರತಿ ಗ್ರಾಮ ಪಂಚಾಯತಿವಾರು ಕುಡಿಯುವ ನೀರಿನ ಪೂರೈಕೆ ಕುರಿತು ಮಾಹಿತಿ ಪಡೆದರು.



ಕೆರೆಯಲ್ಲಿ ಲಭ್ಯವಿರುವ ನೀರಿನ ಪ್ರಮಾಣ ಕುರಿತು ಮಾಹಿತಿ ಪಡೆದರು ಹಾಗೂ ಲಭ್ಯವಿರುವ ಬೋರ್ ವೆಲ್ ಗಳಿಂದ ನೀರು ಪೂರೈಸಬೇಕು,ಒಂದು ವೇಳೆ ಸಮಸ್ಯೆಯಾದರೆ ಬಾಡಿಗೆ ಬೋರ್ ವೆಲ್ ಪಡೆಯಬೇಕು. ಕಡ್ಡಾಯವಾಗಿ ನೀರಿನ ತೊಟ್ಟಿಗಳನ್ನು ಶುಚಿಗೊಳಿಸಬೇಕು,ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಗಮನಹರಿಸಬೇಕು ಎಂದರು.

ಈ ವೇಳೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ್, ತಹಶೀಲ್ದಾರ್ ಮಂಜುನಾಥ ಭೋಗಾವತಿ, ಮಾನ್ವಿ ಸಿಡಿಪಿಓ ಅಧಿಕಾರಿಗಳಾದ ನಾಗತರತ್ನ, ಲಿಂಗಸುಗುರು, ಸಿಂಧನೂರು, ಲಿಂಗಸುಗೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಎಂಜಿನಿಯರ್‌ಗಳು, ವಿವಿಧ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಮೂಲ ಸೌಕರ್ಯ ಒದಗಿಸಲು ಪ್ರಸಾದ ಅಬ್ಬಯ್ಯಗೆ ಮನವಿ

ಸಿಂಧನೂರು: ನಗರದ ಘೋಷಿತ ಕೊಳಚೆ ಪ್ರದೇಶವಾದ ಗಂಗಾನಗರದ ನಿವಾಸಿಗಳಿಗೆ ಯಾವುದೇ ಮೂಲಭೂತ ಸೌಕರ್ಯವಿಲ್ಲದೆ ವಂಚಿತರಾಗಿದ್ದು,ಆದ್ದರಿಂದ ಇಲ್ಲಿ ವಾಸಿಸುವ ಜನರಿಗೆ ಸಿಸಿ ರಸ್ತೆ ಮತ್ತು ಒಳಚರಂಡಿ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಅತೀ ಅವಶ್ಯಕತೆ ಇರುವುದರಿಂದ 2026-27 ಸಾಲಿನಲ್ಲಿ 5 ಕೋಟಿ ಮಂಜೂರು ಮಾಡುವಂತೆ ಶಾಸಕರು ಹಾಗೂ ಕೊಳಗೇರಿ ಮಂಡಳಿಯ ಅಧ್ಯಕ್ಷರಾದ ಪ್ರಸಾದ ಅಬ್ಬಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ವೇಳೆ ಮುಖಂಡರಾದ ರಾಜುಗೌಡ ಬಾದರ್ಲಿ ಹಾಗೂ ಹಾರುಣ್ ಸಾಹೇಬ್ ಜಾಗಿರ್ದಾರ ಸೇರಿದಂತೆ ಅನೇಕ ಮುಖಂಡರು ಭಾಗಿಯಾಗಿದ್ದರು.



ಕಸಾಪ ಕೊಡುಗೆ ಅಪಾರ: ಡಾ.ರವಿ ರಾಜೇಶ್ವರಿ

ರಾಯಚೂರು: ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ ನಂತರದಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅಪಾರವಾಗಿದೆ ಕೊಡುಗೆಯನ್ನು ನೀಡಿದೆ. ಪರಿಷತ್ 1915ರಲ್ಲಿ ಸ್ಥಾಪನೆಯ ನಂತರದಲ್ಲಿ ಅನೇಕ ಸವಾಲುಗಳ ನಡುವೆಯೂ ಕನ್ನಡದ ಅಭಿವೃದ್ಧಿಗೆ ತನ್ನದೆ ಆದಂತಹ ಕೊಡುಗೆಯನ್ನು ನೀಡುತ್ತಿದೆ ಎಂದು ವೈದ್ಯ ಡಾ.ರವಿ ರಾಜೇಶ್ವರಿ ತಿಳಿಸಿದರು. ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಪರಿಷತ್ತಿನ 112ನೇಯ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪರಿಷತ್ತಿನಡಿಯಲ್ಲಿ ಕನ್ನಡ ನೆಲ, ಜಲ, ಭಾಷೆಯ ಉಳುವಿಗಾಗಿ ಕನ್ನಡ ವಿದ್ವಾಂಸರ, ಕವಿಗಳ, ಸಾಹಿತಿಗಳ ಕೊಡುಗೆ ಅಮೂಲ್ಯವಾಗಿದೆ ಎಂದರು.

ಶಿಕ್ಷಕಿ ವೈಶಾಲಿ ಪಾಟೀಲ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ನೂರಾರು ಸವಾಲುಗಳು, ಸಮಸ್ಯೆಗಳ ಮಧ್ಯೆಯೂ ಶತಮಾನಗಳನ್ನು ದಾಡಿ ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಆದರೆ ಪ್ರಸ್ತುತ ಸಾಹಿತ್ಯ ಚಟುವಟಿಕೆಗಳನ್ನು ಆಯೋಜಿಸುವುದು ಎಷ್ಟು ಸುಲಭವೋ ಇಂತಹ ಕಾರ್ಯಕ್ರಮಗಳಿಗೆ ಜನರನ್ನು ಕರೆ ತರುವುದೇ ದೊಡ್ಡ ಸವಾಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಪರಿಷತ್ ಯುವ ಜನತೆಗಾಗಿ ಕೆಲ ಕಾರ್ಯಚಟುವಟಿಕೆಗಳನ್ನು ಆಯೋಜನೆ ಮಾಡುವುರತ್ತ ಗಮನಕೊಡಬೇಕು. ಪರಿಷತ್‌ನಲ್ಲಿ ಸದಸ್ಯತ್ವ ಇನ್ನಷ್ಟು ಹೆಚ್ಚಿಸಬೇಕು. ಸಾಹಿತ್ಯ ಚಟುವಟಿಕೆಗಳು ಹಳ್ಳಿಗಳಿಗೂ ತಲುಪುವಂತಾಗಬೇಕು. ಹಳ್ಳಿಯ ಜನರಲ್ಲಿ ಸಾಹಿತ್ಯದ ಪ್ರಾಪಂಚಿಕ ಜ್ಞಾನ ಇರುತ್ತದೆ. ಅವರನ್ನು ಸಾಹಿತ್ಯದ ಮಡಿಲಿಗೆ ತರುವ ಕೆಲಸ ಆಗಬೇಕು ಎಂದರು. ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಉಳಿಸುವ ಕೆಲಸ ಮಾಡಬೇಕು. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಕನ್ನಡ ಕಾರ್ಯಕ್ರಮ ಆಯೋಜಿಸಬೇಕು. ಕನ್ನಡ ಓದಿದರೆ ಕೆಲಸ ಸಿಗುವುದಿಲ್ಲ ಎಂಬ ಭಾವನೆ ಇಂದಿನ ಜನರಲ್ಲಿದೆ. ಅದನ್ನು ಬದಲಾಯಿಸಿ ಶೈಕ್ಷಣಿಕ ಬಿಕ್ಕಟ್ಟು ನಿವಾರಣೆ ಮಾಡಬೇಕು ಎಂದು ಹೇಳಿದರು. ಇತ್ತೀಚೆಗೆ ಪರಿಷತ್‌ನಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚುತ್ತಿದ್ದು, ಅದನ್ನು ನಿವಾರಣೆ ಮಾಡುವ ಕೆಲಸ ಆಗಬೇಕು. ಪುಸ್ತಕ ಮೇಳ, ಪುಸ್ತಕ ಮಾರಾಟದ ಮೂಲಕ ಓದುಗರು ಹಾಗೂ ಲೇಖಕರ ನಡುವೆ ಸಾಹಿತ್ಯ ಹತ್ತಿರವಾಗಲಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಮಾತನಾಡಿದರು. ಚಿತ್ರ ಕಲಾವಿದೆ ಹೇಮರೆಡ್ಡಿ.ಎಂ., ಹಿರಿಯ ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ ಅವರಿಗೆ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

ರಾಮಣ್ಣ ಬೋಯರ್ ನಿರೂಪಿಸಿದರು. ಪ್ರತಿಭಾ ಗೋನಾಳ ಪ್ರಾರ್ಥಿಸಿದರು. ದಂಡಪ್ಪ ಬಿರಾದಾರ ಸ್ವಾಗತಿಸಿದರೆ ರಾವುತರ ಬರೂರ ವಂದಿಸಿದರು.

ಕಿರುಸುದ್ದಿ

ಪೌರಾಯುಕ್ತ ಕೆ.ಗಂಗಾಧರಗೆ ಸನ್ಮಾನ

ಸಿರುಗುಪ್ಪ: ಜನಗಣತಿ ಕಾರ್ಯದಲ್ಲಿ ಗಣತಿದಾರರ ಮತ್ತು ಮೇಲ್ವಿಚಾರಕರ, ಸಿಬ್ಬಂದಿ ಹಾಗೂ ಸಾರ್ವಜನಿಕರ ಮಧ್ಯ ಉತ್ತಮ ಸಮನ್ವಯತೆಯಿಂದ ಉತ್ತಮ ಕಾರ್ಯದಿಂದ ಯಶಸ್ವಿಯಾಗಿ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ನಗರಸಭೆಯ ಪೌರಾಯುಕ್ತ ಕೆ.ಗಂಗಾಧರ ಅವರನ್ನು ಸನ್ಮಾನಿಸಲಾಯಿತು.

ಈ ಕುರಿತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಕಾರ್ಯದರ್ಶಿ ಡಾ.ಕೆ.ಎಂ.ಚಂದ್ರಕಾಂತ ಅವರು ಮಾತನಾಡಿ, ಜನಗಣತಿ ಕಾರ್ಯದಲ್ಲಿ ಗಣತಿದಾರರ ಮತ್ತು ಮೇಲ್ವಿಚಾರಕರ, ಸಿಬ್ಬಂದಿಗಳು ಹಾಗೂ ಸಾರ್ವಜನಿಕರ ಮಧ್ಯ ಉತ್ತಮ ಸಮನ್ವಯತೆಯಿಂದ ಉತ್ತಮ ಕಾರ್ಯ ಮಾಡಿ ಯಶಸ್ವಿಯಾಗಿ ಸಾಧನೆ ಮಾಡಿದ ನಗರಸಭೆಯ ಪೌರಾಯುಕ್ತ ಕೆ.ಗಂಗಾಧರ ಅವರನ್ನು ಕಚೇರಿಯಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಬರುವ ದಿನಗಳಲ್ಲಿ ತಮ್ಮ ವೃತ್ತಿ ಬದುಕಿನಲ್ಲಿ ಅಪಾರ ಸಾಧನೆ ಮಾಡಿ ಇತರರಿಗೆ ಮಾದರಿಯಾಗಲಿ ಎಂದರು.

ಟಿ.ಎಚ್.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಜಿ.ಕೊಟ್ರಪ್ಪ, ಸಹಾಯಕ ಪ್ರಾಧ್ಯಾಪಕ ಕೃಷ್ಣಪ್ಪ, ಗ್ರಂಥಪಾಲಕ ಯಮನೂರಪ್ಪ ಹಾಗೂ ನಗರಸಭೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ಬಾಲ್ಯ ವಿವಾಹ ತಡೆದ ಅಧಿಕಾರಿಗಳು

ಸಿರುಗುಪ್ಪ: ತಾಲೂಕಿನ ಶ್ರೀಧರಗಡ್ಡೆ ಗ್ರಾಮದಲ್ಲಿ ನಡೆಯಲಿದ್ದ ಬಾಲ್ಯವನ್ನು ಅಧಿಕಾರಿಗಳು ಬುಧವಾರ ಕಾರ್ಯಾಚರಣೆ ನಡೆಸಿ ತಡೆದಿದ್ದಾರೆ. ಮಕ್ಕಳ ಸಹಾಯವಾಣಿ 1098ಗೆ ಬಂದ ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆಯಲ್ಲಿ ಮೇ 13ರಂದು ಸಿಂಧನೂರು ತಾಲೂಕಿನಲ್ಲಿ ನಡೆಯಲು ನಿಶ್ಚಯವಾಗಿತ್ತು. ಬಾಲಕಿಗೆ 15 ವರ್ಷ 8 ತಿಂಗಳು ವಯಸ್ಸಾಗಿತ್ತು. ಈ ಬಾಲ್ಯ ವಿವಾಹ ತಡೆಯುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದು ತಾಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರದೀಪ್ ಜಿ. ಹೇಳಿದರು. ಮೇಲ್ವಿಚಾರಕಿ ರೇಖಾ ರಾಣಿ, ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮತ್ತೆ 'ಕೈ' ಹಿಡಿದ ಅಹಿಂದ

ವಿಜಯನಗರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಓಟ ಮುಂದುವರಿಸಿದೆ ಎಂದು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್. ಮೊಹಮ್ಮದ್ ಇಮಾಮ್ ನಿಯಾಜಿ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ಬಾರಿ ಉಪಚುನಾವಣೆ ಸಂದರ್ಭದಲ್ಲಿ ವಿಪಕ್ಷಗಳು ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟಲು ನಡೆಸಿದ ಪ್ರಯತ್ನಗಳು ಫಲಿಸಲಿಲ್ಲ. ದೇಶದ ಇತಿಹಾಸದುದ್ದಕ್ಕೂ ಕಾಂಗ್ರೆಸ್ ಪರವಾಗಿರುವ ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಾಂಪ್ರದಾಯಿಕ ಮತಗಳು ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದು, ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬ ಸ್ಪಷ್ಟ ಸಂದೇಶ ಸಾರಿದ್ದಾರೆ ಎಂದಿದ್ದಾರೆ.



ಜೋಡೆತ್ತಿನ ಗೆಲುವು

ವಿಜಯನಗರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಕೆಪಿಸಿಸಿ ಪದವಿಧರ ಘಟಕ ರಾಜ್ಯ ಉಪಾಧ್ಯಕ್ಷ ಕೆ.ಬಿ.ಶ್ರೀನಿವಾಸ ರೆಡ್ಡಿ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೋಡೆತ್ತಿನಂತೆ ರಾಜ್ಯದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಮುಂಬರುವ ಜಿ.ಪಂ., ತಾ.ಪಂ. ಹಾಗೂ ವಿಧಾನ ಪರಿಷತ್‌ನ ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲೂ ಮತದಾರರು ಕಾಂಗ್ರೆಸ್ ಪಕ್ಷವನ್ನು ಕೈಹಿಡಿಯಲಿದ್ದಾರೆ ಎಂಬುದಕ್ಕೆ ಉಪಚುನಾವಣೆ ಫಲಿತಾಂಶ ಸಾಕ್ಷಿಯಾಗಿದೆ ಎಂದಿದ್ದಾರೆ.





ಸಿರುಗುಪ್ಪ: ಜನಗಣತಿ ಕಾರ್ಯದಲ್ಲಿ ಗಣತಿದಾರರ ಮತ್ತು ಮೇಲ್ವಿಚಾರಕರ, ಸಿಬ್ಬಂದಿ ಹಾಗೂ ಸಾರ್ವಜನಿಕರ ಮಧ್ಯ ಉತ್ತಮ ಸಮನ್ವಯತೆಯಿಂದ ಉತ್ತಮ ಕಾರ್ಯದಿಂದ ಯಶಸ್ವಿಯಾಗಿ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ನಗರಸಭೆಯ ಪೌರಾಯುಕ್ತ ಕೆ.ಗಂಗಾಧರ ಅವರನ್ನು ಸನ್ಮಾನಿಸಲಾಯಿತು.

ನಾಲ್ವರು ವಿದ್ಯಾರ್ಥಿಗಳು ಆಯ್ಕೆ

ಬಳ್ಳಾರಿ: ಮಲೇಷಿಯಾದಲ್ಲಿ ನಡೆಯಲಿರುವ 22ನೇ ಅಂತಾರಾಷ್ಟ್ರೀಯ ಮುಕ್ತ ಕರಾಟೆ ಸ್ಪರ್ಧೆಗೆ ಶ್ರೀಪಂಚಾಕ್ಷರಿ ಮಾರ್ಷಲ್ ಆರ್ಟ್ಸ್ ಟ್ರಸ್ಟ್‌ನ ನಾಲ್ವರು ವಿದ್ಯಾರ್ಥಿಗಳು ಆಯ್ಕೆ ಆಯ್ಕೆಯಾಗುವ ಮೂಲಕ ಗಮನಸೆಳೆದಿದ್ದಾರೆ. ಈ ಕುರಿತು ಟ್ರಸ್ಟ್‌ನ ಅಧ್ಯಕ್ಷ, ಹಿರಿಯ ಅನುಭವಿ ಕರಾಟೆ ಶಿಕ್ಷಕ, ನ್ಯಾಯವಾದಿ ಬ್ಯಾಂಡ್ರಾಳ ಮೃತ್ಯುಂಜಯ ಸ್ವಾಮಿ ಅವರು ಮಾತನಾಡಿ, ನಮ್ಮ ಟ್ರಸ್ಟ್‌ನ ನಾಲ್ವರು ವಿದ್ಯಾರ್ಥಿಗಳು ಮಲೇಷಿಯಾದಲ್ಲಿ ನಡೆಯಲಿರುವ 22ನೇ ಅಂತರಾಷ್ಟ್ರೀಯ ಮುಕ್ತ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿರುವುದು ಅತ್ಯಂತ ಸಂತಸ ಮೂಡಿಸಿದೆ. ನಮ್ಮ ಟ್ರಸ್ಟ್‌ನ ವಿದ್ಯಾರ್ಥಿಗಳಾದ ನಯೋನಿಕ ಮಂಗಳಂ, ನಕ್ಷತ್ರ ವರ್ಣ ಮಂಗಳಂ ಅವರು, 15 ವರ್ಷದೊಳಗಿನ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ. ಪ್ರಜ್ವಲ್ ಗಣೇಶ್ ಹಾಗೂ ದೇವಗನ್ ಶ್ರೀವತ್ಸ ಅವರು, 15 ವರ್ಷ ಮೇಲ್ಪಟ್ಟ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ. ಮೇ 8ರಿಂದ ಮೂರು ದಿನಗಳ ಕಾಲ ಮಲೇಷಿಯಾದಲ್ಲಿ ನಡೆಯುವ ಅಂತಾರಾಷ್ಟ್ರೀಯ ಓಕಿನವ ಗುಜರಾಯ ಇಫನ್ ಸಿಟಿ ಮುಕ್ತ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಈ ಸರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಳೆದ 6 ವರ್ಷಗಳಿಂದ ತರಬೇತಿ ಪಡೆಯುತ್ತಿದ್ದಾರೆ ಎಂದರು. ತರಬೇತಿ ಪಡೆದ ಅನೇಕ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲದೆ ಶ್ರೀಲಂಕಾ, ಮಲೇಷಿಯಾ, ಇಂಡೋನೇಷಿಯಾ, ಸಿಂಗಾಪುರ, ಜಪಾನ್ ಸೇರಿದಂತೆ ವಿವಿಧ ದೇಶಗಳಲ್ಲಿ ನಡೆದ ಅಂತಾರಾಷ್ಟ್ರೀಯ ಕರಾಟೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ ಎಂದರು.



ಹಗರಿಬೊಮ್ಮನಹಳ್ಳಿ: ಮೇ 9ರಂದು ನಡೆಯುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದ ಡಾ.ಮಹೇಶ್ವರ ಸ್ವಾಮೀಜಿ ಅವರಿಗೆ ಬಿಜೆಪಿ ಜಿಲ್ಲಾ ಅಧ್ಯಕ್ಷ ಸಂಜೀವ್ ರಡ್ಡಿ ಅವರ ನೇತೃತ್ವದಲ್ಲಿ ವಿಶೇಷವಾಗಿ ಆಹ್ವಾನಿಸಲಾಯಿತು. ಜಿಲ್ಲಾ ಉಪಾಧ್ಯಕ್ಷ ಬಿಜೆಪಿ ಪರಾಜಿತ ಅಭ್ಯರ್ಥಿ ಬಲ್ಲಾಹುಣಿಸಿ ರಾಮಣ್ಣ, ಜಿಲ್ಲಾ ಕಾರ್ಯದರ್ಶಿ ಕನಕಪ್ಪ, ಹಗರಿಬೊಮ್ಮನಹಳ್ಳಿ ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ಇತರರಿದ್ದರು.

ಕೆಎಂಇಆರ್‌ಸಿ ಅಡಿ 1146 ಕೋಟಿ ರೂ. ವೆಚ್ಚದ ಬೃಹತ್ ಯೋಜನೆ

1,183 ಕುಟುಂಬಗಳಿಗೆ ವಸತಿ ಭಾಗ್ಯ

ವಿಜಯನಗರ: ಗಣಿ ಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ಅಲ್ಲಿನ ನಿವಾಸಿಗಳ ಪುನಶ್ಚೇತನಕ್ಕಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ)ದಿಂದ ಸುಮಾರು 1,146 ಕೋಟಿ ರೂ. ವೆಚ್ಚದಲ್ಲಿ ಅರ್ಹ ಫಲಾನುಭವಿಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ವಸತಿ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ವಿ.ಸಿ.ಹಾಲ್‌ನಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (Hphwe) ಯೋಜನೆಯಡಿ ಗಣಿಭಾದಿತ ಪ್ರದೇಶಗಳ ಅಭಿವೃದ್ಧಿ ಕುರಿತ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

1146 ಕೋಟಿ ರೂ. ಬೃಹತ್ ಮೊತ್ತದ ಯೋಜನೆಯಾಗಿದ್ದರಿಂದ ಪ್ರತಿ ಹಂತದಲ್ಲೂ ಕಾಮಗಾರಿಯ ಗುಣಮಟ್ಟ ಪರಿಶೀಲಿಸಬೇಕು. ಕೇವಲ ಮನೆ ಕಟ್ಟುವುದಷ್ಟೇ ನಮ್ಮ ಗುರಿಯಲ್ಲ. ಮನೆಗಳು ವಾಸಕ್ಕೆ ಸಿದ್ಧವಾಗುವ ಮುನ್ನವೇ ಕುಡಿಯುವ ನೀರು, ಒಳಚರಂಡಿ ಮತ್ತು ವಿದ್ಯುತ್ ವ್ಯವಸ್ಥೆ ಸಂಪೂರ್ಣವಾಗಿ ಸಿದ್ಧವಿರಬೇಕು.

1183 ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಬಾರದು. ಅರ್ಹ ಗಣಿಬಾಧಿತ ಕುಟುಂಬಗಳಿಗೆ ಮಾತ್ರ ಈ ಸೌಲಭ್ಯ ತಲುಪುವಂತೆ ಹಾಗೂ ಯಾವೊಬ್ಬ ಅರ್ಹ ಫಲಾನುಭವಿಯೂ ಯೋಜನೆಯಿಂದ ಹೊರಗುಳಿಯಬಾರದು. ಗಣಿ ಬಾಧಿತ ಪ್ರದೇಶಗಳ ಪುನಶ್ಚೇತನ ಯೋಜನೆಯು ಅತ್ಯಂತ ಮಹತ್ವದ್ದಾಗಿದ್ದು, ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ, ವಿಳಂಬ, ಇಲಾಖೆಗಳ ಮಧ್ಯೆ ಸಮನ್ವಯತೆಯ ಕೊರತೆಯನ್ನು ಸಹಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.



ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್ ಮಾತನಾಡಿ, ಈ ಯೋಜನೆಗೆ ಸಂಬಂಧಪಟ್ಟಂತೆ ಸಂಪೂರ್ಣ ನೀಲನಕ್ಷೆ (ಡಿಪಿಆರ್) ಈಗಾಗಲೇ ಸಿದ್ಧವಾಗಿದೆ. ಸಂಬಂಧಿಸಿದ ಇಲಾಖೆಗಳಿಂದ ಅಧಿಕೃತ ಅನುಮೋದನೆ ಸಹ ದೊರೆತಿದೆ. ಜಿಲ್ಲೆಯ ಗಣಿ ಬಾಧಿತ ಪ್ರದೇಶಗಳಾದ ಜಂಬುನಾಥ ಹಳ್ಳಿ ಕ್ಯಾಂಪ್‌ನಲ್ಲಿ 52 ಕುಟುಂಬ, ಕೆ.ಎಂ.ಎಂ.ಐ ಕ್ಯಾಂಪ್‌ನಲ್ಲಿ 94, ಬಾಂಬೆ ಕ್ಯಾಂಪ್‌ನಲ್ಲಿ 90, ಹಂಪಿನಕ ಟ್ಟೆಯಲ್ಲಿ 83, ಅಂಬೇಡ್ಕರ್ ನಗರದಲ್ಲಿ 84, ಕಾರಿಗನೂರು 139, ಕೊಟ್ರೇಶ್ವರ ನಗರ ಕ್ಯಾಂಪ್‌ನಲ್ಲಿ 113 ಕುಟುಂಬಗಳು ವಾಸವಾಗಿದ್ದು, ಅರ್ಹ ಫಲಾನುಭವಿಗಳಿಗೆ ಈಗಾಗಲೇ ನಿವೇಶನ ಕಲ್ಪಿಸಲಾಗಿದೆ. ಶಿಕಾರಿ ಕ್ಯಾಂಪ್ ನಲ್ಲಿ 73 ಕುಟುಂಬಗಳ ಪೈಕಿ 60 ಫಲಾನುಭವಿಗಳಿಗೆ ನಿವೇಶನ, ಹಕ್ಕುಪತ್ರ ವಿತರಿಸಲಾಗಿದೆ. ಇನ್ನುಳಿದ 10 ಫಲಾನುಭವಿಗಳಿಗೆ ನಿವೇಶನ ಕೊರತೆಯಿಂದ ಬಾಕಿ ಉಳಿದಿವೆ. ನಿವೇಶನ ಕಲ್ಪಿಸುವುದರ ಜೊತೆಗೆ ರಾಜೀವ್ ಗಾಂಧಿ, ಇನ್ನಿತರೆ ವಸತಿ ಯೋಜನೆಯಡಿ ಇಲ್ಲಿನ ಸುಮಾರು 1,183 ಅರ್ಹ ಫಲಾನುಭವಿಗಳಿಗೆ ನೀರು, ರಸ್ತೆ, ಬೀದಿ ದೀಪ ಅಗತ್ಯ ಮೂಲ ಸೌಕರ್ಯಗಳನ್ನೊಳಗೊಂಡ ವಸತಿ ನಿರ್ಮಿಸಿ ಕೊಡಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

> ಗಣಿಗಾರಿಕೆಯಿಂದ ಬಾಧಿತವಾದ ಕುಟುಂಬಗಳಿಗೆ ನೆಮ್ಮದಿಯ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ಕೆ.ಎಂ.ಇ.ಆರ್.ಸಿ ನಿಧಿಯ ಅಡಿಯಲ್ಲಿ ಕೈಗೊಳ್ಳಲಾಗಿರುವ ಈ ಕ್ರಮವು ಪ್ರಮುಖ ಮೈಲಿಗಲ್ಲಾಗಲಿದೆ.
> ■ ಕವಿತಾ ಎಸ್.ಮನ್ನಿಕೇರಿ, ಡಿಸಿ

ಎಸಿ ವಿವೇಕಾನಂದ, ತಹಶೀಲ್ದಾರ್ ಶೃತಿ.ಎಂ, ನಗರಸಭೆ ಪೌರಾಯುಕ್ತ ಶಿವಕುಮಾರ್ ಎರಗುಡಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಅಧಿಕಾರಿಗಳು ಹಳ್ಳಿಗಳ ಕಡೆಗೆ ಗಮನಹರಿಸಲಿ

ಕೂಡ್ಲಿಗಿ: ಅಗತ್ಯವಾಗಿ ಅಧಿಕಾರಿಗಳು ಹಳ್ಳಿಗಳ ಕಡೆಗೆ ಗಮನಹರಿಸಿ ಕ್ಷೇತ್ರದಲ್ಲಿನ ಶಿಕ್ಷಣ, ಆರೋಗ್ಯ, ಮತ್ತು ಮೂಲ ಸೌಕರ್ಯಗಳ ಮೇಲಿನ ಸಮಸ್ಯೆಗಳು, ಪರಿಹರಿಸಲು ಗಮನ ವಹಿಸಬೇಕು ಎಂದು ಶಾಸಕ ಡಾ.ಶ್ರೀನಿವಾಸ್ ಎನ್.ಟಿ. ಎಂದು ತಿಳಿಸಿದರು.

ತಾಲೂಕು ಮಟ್ಟದ ಕರ್ನಾಟಕ ಅಭಿವೃದ್ಧಿಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಮತ್ತು ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಬೇಗನೆ ಎಚ್ಚೆತ್ತುಕೊಳ್ಳಬೇಕು ಎಂದೂ ಸೂಚಿಸಿದರು.

ಪಟ್ಟಣದಲ್ಲಿ ಸ್ಲಂ ಬೋರ್ಡ್ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ವಸತಿಗೃಹಗಳನ್ನು ವೈಜ್ಞಾನಿಕವಾಗಿ, ಸರ್ಕಾರದ ಮಾನದಂಡದಂತೆ ಹಂಚಲಾಗಿದೆ ಎಂದರು. ವನ್ಯಜೀವಿಗಳನ್ನು ಮನುಷ್ಯರಂತೆ ಜೀವಿಸುವ ಹಕ್ಕು ಇದೆ. ಅವುಗಳಿಗೂ ನೆರವು ನೀಡಿ ಮಾನವೀಯತೆ ತೋರಬೇಕು. ವಿಂಡ್ ಪ್ಯಾನ್ ಕಾರಣ ಮತ್ತು ಪರಿಣಾಮಗಳ ಕುರಿತು ಸುದೀರ್ಘವಾಗಿ ಚರ್ಚಿಸಿದರು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿನ ಸುಧಾರಣೆ ತರಲು ಕ್ರಮವಹಿಸಲು ಚಿಂತನೆ ಮಾಡಿದರು. ಹಳ್ಳಿಗಳಲ್ಲಿ ಸ್ವಚ್ಛತೆಗೆ ಕ್ರಮಕೈಗೊಳ್ಳಲು ಸೂಚನೆ ನೀಡಿದರು.

ತಹಶೀಲ್ದಾರರಾದ ಕೆ.ನೇತ್ರಾವತಿ, ಅಮರೇಶ, ಇಒ ನರಸಪ್ಪ ಹಾಗೂ ಆನಂದ, ಪಿ.ಆರ್.ಇಡಿ, ಮಲ್ಲಿಕಾರ್ಜುನ, ಪಿಡಬ್ಲ್ಯುಡಿ ನಾಗನಗೌಡ, ಅರಣ್ಯ ಉಪ ವಲಯ ಅಧಿಕಾರಿಗಳು ಸಂದೀಪ್ ನಾಯಕ, ಸಿಪಿಐ ಪ್ರಹ್ಲಾದ ಚೆನ್ನಗಿರಿ, ಬಿಇಒ ಮೈಲೇಶ್ ಬೇವೂರು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಜಗದೀಶ್, ಪರಿಶಿಷ್ಟ ವರ್ಗ ಕಲ್ಯಾಣ ಇಲಾಖೆ ಅಧಿಕಾರಿಗಳು ಮೆಹಬೂಬ್, ಸಿಡಿಪಿಒ ಮಾಲುಂಬಿ, ಆರ್‌ಡಬ್ಲ್ಯುಎಸ್ ಪ್ರಸನ್ನ, ಕೆಇಬಿ ಅಧಿಕಾರಿಗಳು ಏಕಾಂತ ರೆಡ್ಡಿ, ಬಿಸಿಯೂಟ ಅಧಿಕಾರಿಗಳು ಆಂಜನೇಯ, ಕೃಷಿ ಸಹಾಯಕ ಅಧಿಕಾರಿಗಳು ತೇಜವರ್ಧನ್, ಟಿಎಚ್ಒ ಪ್ರದೀಪ್ ಎಸ್., ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಮಂಜುನಾಥ, ತೋಟಗಾರಿಕೆ ಇಲಾಖೆಯ ಸಹಾಯಕ ಅಧಿಕಾರಿಗಳು ಕುಬೇರ ಆಚಾರ್ಯ, ಪಶು ಸಂಗೋಪನೆ ಇಲಾಖೆಯ ಅಧಿಕಾರಿ ಲೋಹಿತ್ ಕುಮಾರ್, ಪಿಡಿಒಗಳು, ಕೆಡಿಪಿ ಸದಸ್ಯರು, ತಾಲೂಕು ನೌಕರ ಸಂಘದ ಅಧ್ಯಕ್ಷರಾದ ವೆಂಕಟೇಶ, ಪತ್ರಕರ್ತರು ಉಪಸ್ಥಿತರಿದ್ದರು.



ಕೆ.ಕೆ.ತಾಂಡಾದಲ್ಲಿ ನೂತನ ರೈತ ಪದಾಧಿಕಾರಿಗಳ ಆಯ್ಕೆ

ಹೂವಿನಹಡಗಲಿ: ತಾಲೂಕಿನ ಕಗ್ಗಲಕಟ್ಟಿತಾಂಡ ಗ್ರಾಮದಲ್ಲಿ ರೈತರ ಸಂಘದ ಹೊಸ ಘಟಕವನ್ನು ಬುಧವಾರ ಕರ್ನಾಟಕ ರಾಜ್ಯ ರೈತ ಸಂಘಟನೆ ತಾಲೂಕು ಘಟಕದ ವತಿಯಿಂದ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಮುಖ್ಯ ಅತಿಥಿ ಕ.ರಾ. ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ಉದ್ಘಾಟಿಸಿ ಮಾತನಾಡಿ, ರೈತರ ಸಂಘದ ಅಗತ್ಯತೆ ಮತ್ತು ರೈತರ ಹಕ್ಕುಗಳ ಕುರಿತು ಜಾಗೃತಿ ಮೂಡಿಸಿದರು. ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ, ಸಂಘದ ಮೂಲಕ ಒಗ್ಗಟ್ಟಾಗಿ ಹೋರಾಡುವ ಅಗತ್ಯವನ್ನು ಒತ್ತಿ ನೂತನ ಪದಾಧಿಕಾರಿಗಳಿಗೆ ಹೇಳಿದರು.

ಸಂಘದ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಅವರು ರೈತರ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು. ರೈತರ ಸಮಸ್ಯೆಗಳು, ಸರ್ಕಾರಿ ಯೋಜನೆಗಳು ಹಾಗೂ ಗ್ರಾಮೀಣ ಅಭಿವೃದ್ಧಿ ಕುರಿತು ವಿಚಾರ ಸಂಕಿರಣ ನಡೆಯಿತು. ನೂತನ ಪದಾಧಿಕಾರಿಗಳು: ಗ್ರಾಮ ಘಟಕದ ಗೌರವಾಧ್ಯಕ್ಷ ಎಂ.ದರಗ್ಯನಾಯ್ಕ್ ಅಧ್ಯಕ್ಷರಾಗಿ ಆರ್. ಚಂದ್ರಶೇಖರ ನಾಯ್ಕ್, ಉಪಾಧ್ಯಕ್ಷರಾಗಿ ಎಂ.ಖುಬ್ಯಾನಾಯ್ಕ್ ಖಜಾಂಚಿ ಎಂ.ಚಂದ್ರನಾಯ್ಕ್, ಪ್ರಧಾನಕಾರ್ಯದರ್ಶಿ ಯಂಕಾನಾಯ್ಕ್ ಅಕ್ಕಸಾಲಿ, ಸಂಘಟನಾಕಾರ್ಯದರ್ಶಿ ವಿ.ವಿಷ್ಯನಾಯ್ಕ್ ಜಂಟಿಕಾರ್ಯದರ್ಶಿ ರಾಜುನಾಯ್ಕ್ ಸಹ ಸಂಚಾಲಕರಾಗಿ ಆರ್. ಮಲ್ಲನಾಯ್ಕ್ ಇವರೆಲ್ಲರಿಗೂ ತಾಲೂಕು ಸಮಿತಿಯಿಂದ ಆದೇಶ ಪತ್ರ ಕೊಡಲಾಯಿತು.

ಕ.ರಾ.ರೈತ ಸಂಘದ ಜಿಲ್ಲಾ ಮಹಿಳಾ ಅಧ್ಯಕ್ಷರು ವಿಜಯಲಕ್ಷ್ಮೀ, ಗ್ರಾಮ ಮುಖಂಡರು ಬಾಲಾಜಿನಾಯ್ಕ್ ತಾಲೂಕು ಅಧ್ಯಕ್ಷರು ಸಿದ್ದಪ್ಪ ಹೊಸಮನಿ, ಜಿಲ್ಲಾ ಯುವ ಘಟಕ ಅಧ್ಯಕ್ಷ ರವಿಕುಮಾರ್, ಜಿಲ್ಲಾ ಉಪಾಧ್ಯಕ್ಷ ಗನಿ ಸಾಹೇಬ್ರು ಹಾಗೂ ಕೆ.ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ದುರುಗಪ್ಪ, ತಾಲೂಕು ಗೌರವ ಅಧ್ಯಕ್ಷ ಪಕ್ಕೀರಪ್ಪ ಬಾವಿಹಳ್ಳಿ, ಉಪಾಧ್ಯಕ್ಷ ವಿಠಲ್ ನಾಯ್ಕ್, ಚನ್ನಬಸಪ್ಪ, ಪ್ರಧಾನ ಕಾರ್ಯದರ್ಶಿ ಶಿವರಾಜ ಎಂ., ಕಾರ್ಯಾಧ್ಯಕ್ಷ ಮಂಜುನಾಥ್ ಡಕ್ಯನಾಯ್ಕ್ ಹೊಳಗುಂದಿ, ಸಂಚಾಲಕರು ಬೋಜ್ಯ ನಾಯಕ ಬನ್ನಿಕಲ್, ನಾಗಪ್ಪ ಗ್ರಾಮದ ಹಿರಿಯರು, ರೈತರು, ಯುವಕರು ಹಾಗೂ ಗಣ್ಯರು ಭಾಗವಹಿಸಿದ್ದರು.



ಅಭಿಮಾನೋತ್ಸವ ಸಮಾರಂಭ ಯಶಸ್ವಿಗೊಳಿಸಿ

ಬಳ್ಳಾರಿ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು, ತಮ್ಮ ಸಾರ್ಥಕ ರಾಜಕೀಯ ಜೀವನವನ್ನು 50 ವರ್ಷಗಳನ್ನ ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ಆಯೋಜಿಸಿದ್ದ ಅಭಿಮಾನೋತ್ಸವ ಸಮಾರಂಭವನ್ನು ಪ್ರತಿಯೊಬ್ಬರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಮನವಿ ಮಾಡಿದರು.



ಪಕ್ಷವನ್ನು ತಳಮಟ್ಟದಿಂದ ಗಟ್ಟಿಯಾಗಿ ಕಟ್ಟಿ, ಅಧಿಕಾರಕ್ಕೆ ತರುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದ ಧೀರ, ಯಡಿಯೂರಪ್ಪ ಅವರು, ಹಿರಿಯ ಮುತ್ಸದ್ದಿ ರಾಜಕಾರಣಿಗಳು, ಅವಧಿಯಲ್ಲಿ ದೇಶಕ್ಕೆ ಅನ್ನ ನೀಡುವ ರೈತರಿಗೆ, ಬಡವರಿಗೆ, ಮಹಿಳೆಯರು, ಮಕ್ಕಳು, ವೃದ್ಧರಿಗೆ, ಕಾರ್ಮಿಕರಿಗೆ ಅನೇಕ ಕೊಡುಗೆಗಳನ್ನು ನೀಡುವ ಮೂಲಕ ಮನೆ ಮಾತಾಗಿದ್ದಾರೆ. ಅವಧಿಯಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಸಹಕಾರ ನೀಡುವುದರ ಜೊತೆಗೆ ಅವಧಿಯಲ್ಲಿ ಕೋಟ್ಯಂತರ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಅವರ 50 ವರ್ಷಗಳ ಸಾರ್ಥಕ ರಾಜಕೀಯ ಜೀವನದ ಅವಿಸ್ಮರಣೀಯ ಸಮಾರಂಭದ ಕ್ಷಣಗಣನೆ ಆರಂಭವಾಗಿದೆ. ಪ್ರತಿಯೊಬ್ಬರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಯಡಿಯೂರಪ್ಪ ಅವರು ಅರ್ಧ ಶತಮಾನಗಳ ಕಾಲ ಜನಸೇವೆಯನ್ನೇ ಉಸಿರಾಗಿಸಿಕೊಂಡು ಪಕ್ಷ ಹಾಗೂ ನಾಡಿನ ಸುಭಿಕ್ಷೆಗಾಗಿ ಹಗಲಿರುಳು ಶ್ರಮಿಸುವ ಮೂಲಕ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅವರ ಬದುಕು ಎಲ್ಲರಿಗೂ ಆದರ್ಶಪ್ರಾಯ. ಒಬ್ಬ ಯಶಸ್ವಿ ನಾಯಕನ ಮಹತ್ವ, ಅವರು ಪಡೆದ ಅಧಿಕಾರದಲ್ಲಿ ಅಲ್ಲ, ಎಲ್ಲ ವರ್ಗದ ಜನರಲ್ಲಿ ತಂದ ಬದಲಾವಣೆಯಲ್ಲಿದೆ ಎನ್ನುವುದಕ್ಕೆ ಅಭಿವೃದ್ಧಿಯ ಹರಿಕಾರ, ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಬದುಕು ಉದಾಹರಣೆಯಾಗಿದೆ. ರಾಜ್ಯ ರಾಜಕಾರಣದ ಇತಿಹಾಸದಲ್ಲೇ ಅಚ್ಚಳಿಯದ ಗುರುತು ಮೂಡಿಸಿದ ಬಿ.ಎಸ್.ಯಡಿಯೂರಪ್ಪ ಅವರ ಬದುಕೇ ಒಂದು ತೆರೆದ ಪುಸ್ತಕವಾಗಿದೆ ಎಂದರು.

ಹಂಪಿ ಸಾವಿರಮಠದ ಮುಖ್ಯ ದ್ವಾರಬಾಗಿಲ ಪೂಜೆ

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಹಂಪಿ ಸಾವಿರ ಮಠದ ಮುಖ್ಯ ಕಲ್ಲಿನ ದ್ವಾರಬಾಗಿಲ ಪೂಜೆ, ವಿಧಿವಿಧಾನ ಜರುಗಿತು.

ಹಂಪಿ ಸಾವಿರ ದೇವರ ವಾಮದೇವ ಮಹಾಂತ ಮಠದ ಶಿವವಾಚಾರ್ಯ ಸ್ವಾಮೀಜಿ ನೇತೃವಹಿಸಿದ್ದು, ನಂತರ ಮಾತನಾಡಿ, ವಾಸ್ತು ಶಾಸ್ತ್ರದ ಪ್ರಕಾರ, ಮುಖ್ಯ ದ್ವಾರವು ಪ್ರವೇಶ ಸ್ಥಳವಷ್ಟೇ ಅಲ್ಲ, ಇದು ಶಕ್ತಿ ಸಂಚಯನದ ಸ್ಥಳವೂ ಹೌದು. ಮುಖ್ಯ ದ್ವಾರವನ್ನು ಇಡುವುದಕ್ಕೆ ಸೂಕ್ತ ದಿಕ್ಕು ಎಂದರೆ ವಾಸ್ತುವಿನ ಪ್ರಕಾರ ಉತ್ತರ, ಈಶಾನ್ಯ, ಪೂರ್ವ ಅಥವಾ ಪಶ್ಚಿಮ ದಿಕ್ಕುಗಳಾಗಿವೆ. ಇವನ್ನು ಮಂಗಳಕರ ಮತ್ತು ಭಕ್ತಿ ಧನಾತ್ಮಕ ಶಕ್ತಿ ಹರಿಯಲು ಅನುವು ಮಾಡುತ್ತದೆ ಎಂದು ಭಾವಿಸಲಾಗಿದೆ ಎಂದರು ಹಾಗೂ ಮನುಷ್ಯ ಸಂಪ್ರದಾಯ ಬಿಡಬಾರದು. ಒಳ್ಳೆಯ ಸದಾಶಯ ಹೊಂದಬೇಕು. ಪಂಚಭೂತಗಳ ತತ್ವ ಅರಿತು ತನ್ನ ಪಂಚೇಂದ್ರಿಯಗಳನ್ನು ಸರಿಯಾಗಿಟ್ಟುಕೊಳ್ಳಬೇಕು. ಸಂಸ್ಕಾರವಂತ ವ್ಯಕ್ತಿಯಾಗಿ ಸಮಾಜದಲ್ಲಿ ಬದುಕಬೇಕು. ಪುರಾಣ ಪ್ರವಚನಗಳಲ್ಲಿ ಭಾಗಿಯಾಗಿ ಉತ್ತಮ ವಿಚಾರಗಳನ್ನು ಆಲಿಸಿ, ಮೌಲ್ಯಯುತ ಬದುಕು ಕಟ್ಟಿಕೊಳ್ಳಬೇಕು ಎಂದರು.



ವಿವಿಧ, ಹೂಗಳಿಂದ ಪೂಜೆ, ಮಂತ್ರಕ್ಷ ವಿವಿಧ ಧಾರ್ಮಿಕ ಕಾರ್ಯಜರುಗಿದವು. ಈ ವೇಳೆ ಗ್ರಾಮ ಸೇರಿದಂತ ವಿವಿಧ ಗ್ರಾಮದ ಭಕ್ತರು ಭಾಗಿಯಾಗಿದ್ದರು.


ಭತ್ತ ಖರೀದಿಸಿದ ವ್ಯಕ್ತಿಯಿಂದ 71 ಲಕ್ಷ ರೂ. ಜಪ್ತಿ

ಸುರಪುರ: ಕಳೆದ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ತಾಲೂಕಿನ ಸಾವಿರಾರು ಜನ ರೈತರು ಮುಂಗಾರು ಭತ್ತದ ಬೆಳೆಯನ್ನು ಬೆಳೆದಿದ್ದರು. ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದ ಬೈಚಬಾಳ-ಕೂಡಲಗಿ ಹಾಗೂ ಕರಡಕಲ್ ಗ್ರಾಮದ 43 ಜನ ರೈತರು ಸುಮಾರು 1,49,00,000 ಕೋಟಿ ಮೌಲ್ಯದ ಭತ್ತವನ್ನು ಆಂಧ್ರ ಮೂಲದ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿದ್ದರು.

ಇನ್ನೇನು ನಾಳೆ ಹಣ ಕೊಡ್ತಾರೆ, ನಾಡಿದ್ದು ಹಣ ಕೊಡ್ತಾರೆ ಅನ್ನುವಷ್ಟರಲ್ಲಿ ಆ ವ್ಯಕ್ತಿ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ರೈತರಿಗೆ ಪಂಗನಾಮ ಹಾಕಿ ಪರಾರಿಯಾಗಿದ್ದ. ಇದರಿಂದಾಗಿ ದಾರಿ ತೋಚದ ಸಮಯದಲ್ಲಿ ನೊಂದ ರೈತರೆಲ್ಲರೂ ಸೇರಿ ಪೊಲೀಸ್ ಠಾಣೆ ಸೇರಿದಂತೆ ವಿವಿಧ ಕಛೇರಿಗಳಿಗೆ ಸುತ್ತಾಡಿ ರೋಸಿ ಹೋಗಿದ್ದರು.

ನಂತರ ಸುದ್ದಿ ತಿಳಿದ ಸುರಪುರ ಮಾಜಿ ಶಾಸಕ ನರಸಿಂಹನಾಯಕ (ರಾಜುಗೌಡ)ರು ಎಲ್ಲ ನೊಂದ ರೈತರೊಂದಿಗೆ ಕೆಂಭಾವಿ ಪೊಲೀಸ್ ಠಾಣೆಗೆ ತೆರಳಿ ಅಧಿಕಾರಿಗಳಿಗೆ ಒತ್ತಡ ಹೇರುವ ಮೂಲಕ ಎಫ್‌ಐಆರ್ ದಾಖಲಿಸಿದ್ದರು. ನಂತರ ಕಾರ್ಯಪ್ರವೃತ್ತರಾದ ಕೆಂಭಾವಿ ಪೊಲೀಸ್ ಠಾಣೆಯ ಅಧಿಕಾರಿಗಳು ವ್ಯಕ್ತಿಯನ್ನು ಬಂಧಿಸಿ ಕರೆತಂದರು.

ಸಧ್ಯ ಭತ್ತ ಖರೀದಿಸಿ ರೈತರಿಗೆ ಮೋಸ ಮಾಡಿ 5-6 ತಿಂಗಳುಗಳಿಂದ ತಲೆಮರೆಸಿಕೊಂಡಿದ್ದ ದಲ್ಲಾಳಿಯಿಂದ ಸುಮಾರು 71,00,000 ಲಕ್ಷ ಹಣವನ್ನು 43 ಜನ ನೊಂದ ರೈತರಿಗೆ ತಲುಪಿಸುವಲ್ಲಿ ರಾಜೂಗೌಡರು ಯಶಸ್ವಿಯಾಗಿದ್ದಾರೆ.



ಯಲ್ಲಪ್ಪ ಕುರಕುಂದಿ, ಕೃಷ್ಣಾರೆಡ್ಡಿ ಮುದನೂರ, ಪ್ರವೀಣ್ ನಾಯಕ್ ಡೊಣ್ಣಿಗೆರೆ, ಅಂಬ್ರೆಶ್ ನಾಯಕ ಡೊಣ್ಣೆಗೆರೆ, ಶಂಕರ ಗೌಡ ಸಾದ್ಯಾಪುರ, ನಿಂಗಣ್ಣ ಗೋಡಿಹಾಳ್ಕರ್, ಮಡಿವಾಳಪ್ಪ ಕೊಂಡಗುಳಿ, ಬಸವರಾಜ ನಾಯಕ ಕನ್ನೆಳ್ಳಿ, ಭೀಮನಗೌಡ ಪೊಲೀಸ್ ಪಾಟೀಲ, ಮಲ್ಲು ಚಾನಕೋಟಿ, ವೆಂಕನಗೌಡ ಪೊಲೀಸ್ ಪಾಟೀಲ, ಶರಣಗೌಡ ಪಾಟೀಲ, ಭೀಮಣ್ಣ ಶೆಟ್ಟಿ, ಯಂಕೋಬಗೌಡ ಬಿರಾದರ, ಪರಮಣ್ಣ ಯನಗುಂಟಿ, ಶಾಂತಪ್ಪ ಐಕೂರ್, ಮಲ್ಲನಗೌಡ ಬಿರಾದಾರ, ಯಂಕೋಬ ದೊರೆ, ಭೀಮಣ್ಣ ದೊರೆ, ನಿಂಗಪ್ಪ ಬಿಂಗಿ ಸೇರಿದಂತೆ ಇತರರು ಇದ್ದರು.

ಬಿಜೆಪಿ ಗೆಲುವು: ವಿಜಯೋತ್ಸವ

ಕೊಟ್ಟೂರು: ಪಂಚರಾಜ್ಯಗಳ ಚುನಾವಣೆ ಫಲಿತಾಂಶದಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಬಹುಮತದಿಂದ ಗೆಲುವು ಸಾಧಿಸಿ ಅಧಿಕಾರದ ಗದ್ದುಗೆ ಏರುವಲ್ಲಿ ಯಶಸ್ವಿಯಾದ ಹಿನ್ನೆಲೆ ಮಂಗಳವಾರ ಕೊಟ್ಟೂರು ಪಟ್ಟಣದ ಬಸ್ ನಿಲ್ದಾಣದ ಬಳಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಈ ವೇಳೆ ಬಿಜೆಪಿ ನಗರ ಘಟಕದ ಅಧ್ಯಕ್ಷ ಅಂಗಡಿ ಪಂಪಾಪತಿ ಮಾತನಾಡಿ, ಈ ಗೆಲುವು ಬಿಜೆಪಿ ಕಾರ್ಯಕರ್ತರ ಪರಿಶ್ರಮದ ಫಲವಾಗಿದೆ. 2028ಕ್ಕೆ ಕರ್ನಾಟಕದಲ್ಲಿ ಕಮಲ ಅರಳಿಸಲು ಕಾರ್ಯಕರ್ತರಿಗೆ ಪ್ರೇರಣೆ ನೀಡಿದೆ ಎಂದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಬಿ.ಆರ್.ವಿಕ್ರಮ್, ಬಿಜೆಪಿ ನಗರ ಘಟಕ ಮಾಜಿ ಅಧ್ಯಕ್ಷ ವೀರೇಶಗೌಡ, ಪಪಂ ಮಾಜಿ ಉಪಾಧ್ಯಕ್ಷ ಜಿ.ಸಿದ್ದಯ್ಯ, ಪಪಂ ಮಾಜಿ ಸದಸ್ಯ ಬೋರವೆಲ್ ತಿಪ್ಪೇಸ್ವಾಮಿ ಮಾತನಾಡಿದರು.

ವಿಜಯೋತ್ಸವದಲ್ಲಿ ಕಾರ್ಯಕರ್ತರಾದ ಕೋನಾಪುರ ಬಸವರಾಜ್, ಚಪರದಹಳ್ಳಿ ಬಸವರಾಜ್, ಗಂಗನಹಳ್ಳಿ ಸಿದ್ದಣ್ಣ, ಮಲ್ಲಿಕಾರ್ಜುನಸ್ವಾಮಿ, ವಿಷ್ಣು, ಬಿ.ವಿಕಾಸ್, ನವೀನ್, ರುದ್ರೇಶ ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.




ಕನ್ನಡದ ಅಸ್ಮಿತೆ ಉಳಿಸಿ ಬೆಳೆಸಿ: ಇಂದುಮತಿ

ಹಗರಿಬೊಮ್ಮನಹಳ್ಳಿ: ಕನ್ನಡ ಭಾಷೆ ನಮ್ಮ ಮಾತೃಭಾಷೆ ಮಾತೃಭಾಷೆಯಲ್ಲಿ ಕಲಿತ ಶಿಕ್ಷಣ ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಕನ್ನಡವನ್ನು ಉಳಿಸೋಣ ಕನ್ನಡವನ್ನು ಬೆಳೆಸೋಣ ಎಂದು ಶ್ರೀರೇಣುಕಾ ವಿದ್ಯಾಸಂಸ್ಥೆಯ ಮುಖ್ಯಸ್ಥ ಪಿ.ಇಂದುಮತಿ ತಿಳಿಸಿದರು.

ಮಂಗಳವಾರ ಪಟ್ಟಣದ ಶ್ರೀರೇಣುಕಾ ಪ.ಪೂ.ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಕಸಾಪದ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ತಾಲೂಕಿನ ವಿವಿಧ ಶಾಲಾ ಕಾಲೇಜುಗಳಲ್ಲಿ ಕನ್ನಡ ಕಟ್ಟುವ ಕೆಲಸವನ್ನು ತಾಲೂಕು ಕಸಾಪ ಮಾಡುತ್ತಿರುವುದು ಪ್ರಶಂಸನೀಯವೆಂದರು.

ಮುಖ್ಯ ಭಾಷಣಕಾರ್ತಿ ಸುಧಾ ಎನ್.ಆರ್.ಮಾತನಾಡಿ, ಆ ಕಾಲದಲ್ಲಿ ಸಂಸ್ಕೃತ ಮತ್ತು ಆಂಗ್ಲ ಭಾಷೆಗಳ ಪ್ರಭಾವದಲ್ಲಿ ಕನ್ನಡ ಭಾಷೆ ಕೊಚ್ಚಿ ಹೋಗಬಾರದೆಂದು ಅದರ ಉಳಿವು ಹಾಗೂ ಬೆಳವಣಿಗೆಗಾಗಿ ಶ್ರಮಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ, ಎಚ್.ವಿ.ನಂಜುಂಡಯ್ಯ ಮುಂತಾದ ಮಹನೀಯರನ್ನು ಸ್ಮರಿಸಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಮಹತ್ವ ಸಾರಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜೆ.ಎಂ.ವೀರಸಂಗಯ್ಯ ಮಾತನಾಡಿ, ಭವಿಷ್ಯತ್ತಿನ ಪ್ರಜೆಗಳಾದ ವಿದ್ಯಾರ್ಥಿಗಳು ಕೂಡ ಯಾವುದೇ ಜಾತಿ, ಮತ, ಪಂಥಗಳ ಸುಳಿಗೆ ಸಿಲುಕದೆ ಮಾನವೀಯ ಮತ್ತು ವೈಜ್ಞಾನಿಕ ಚಿಂತನೆಗಳನ್ನು ಮೈಗೂಡಿಸಿಕೊಂಡು ಸಮಾಜದ ಒಳಿತಿಗೆ ಶ್ರಮಿಸಬೇಕೆಂದು ಕಿವಿಮಾತು ಹೇಳಿದರು. ತಾಲೂಕಿನ ವಿವಿಧ ಕ್ಷೇತ್ರಗಳ ಸಾಧಕ ಹಾಗೂ ಸೇವಕರನ್ನು ಗುರುತಿಸಿ ಗೌರವಿಸುವ ಕಸಾಪದ ಕಾರ್ಯವನ್ನು ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು.



ವಿವಿಧ ಕ್ಷೇತ್ರಗಳ ಸಾಧಕ ಮತ್ತು ಸೇವಕರಾದ ಎ.ಎಂ. ವೀರಸಂಗಯ್ಯ, ಗೊಂದಲಿಗರ ರಾಮಣ್ಣ, ಕಿಂಡ್ರಿ ಲಕ್ಷ್ಮಿಪತಿ, ರೆಡ್ಡಿನಾಯ್ಕ್, ಕೃಷ್ಣಮೂರ್ತಿ, ಸಂಚಿ ಶಿವಕುಮಾರ್, ಹುರಕಡ್ಲಿ ಶಿವಕುಮಾರ್, ಕೆ.ಎಸ್.ಓಂಪ್ರಕಾಶ್, ಆನಂದ ಕಡ್ಲಿ, ತಳವಾರ ಕೊಟ್ರೇಶ್, ಪಿ.ಇಂದುಮತಿ, ಎನ್.ಆರ್.ಸುಧಾ, ಜಿ.ಎಂ.ನಾಗಭೂಷಣಯ್ಯರನ್ನು ಸನ್ಮಾನಿಸಲಾಯಿತು.

ವಿ.ಬಿ.ಮಲ್ಲೇಶ್, ಎಚ್.ಬೆಟ್ಟಪ್ಪ, ಎಲ್.ಚಂದ್ರನಾಯ್ಕ್, ಕಡ್ಲಿ ಗುರು ಬಸವರಾಜ್, ಪಿಎಲ್‌ಡಿ ಬ್ಯಾಂಕ್ ಕುಮಾರಸ್ವಾಮಿ, ಮಾಲ್ವಿ ಚಾಂದಪೀರ ಹಾಗೂ ವಿದ್ಯಾರ್ಥಿಗಳಿದ್ದರು. ಕಸಾಪದ ಪದಾಧಿಕಾರಿಗಳಾದ ಬಿ.ಮಾರುತಿ, ಪಿ.ಜಿ.ಪ್ರಹ್ಲಾದ, ಎಚ್. ಗಣೇಶರಾವ್ ನಿರ್ವಹಿಸಿದರು.